ಶುಕ್ರವಾರ, ಫೆಬ್ರುವರಿ 18, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಂಭ್ರಮ

ಕೋವಿಡ್ ಕಾರಣ ಮುಚ್ಚಿದ್ದ ದೆಹಲಿ ವಿಶ್ವವಿದ್ಯಾಲಯದ ಕಾಲೇಜುಗಳು ಗುರುವಾರ ಪುನರಾರಂಭಗೊಂಡಿದ್ದು, ತರಗತಿಗೆ ಬಂದಿದ್ದ ವಿದ್ಯಾರ್ಥಿಗಳು ಸೆಲ್ಫಿ ತೆಗೆದುಕೊಂಡರು

GARI
ಇದೀಗ 20+ EXCHANGES ಗಳಲ್ಲಿ ಲಭ್ಯವಿದೆ
KUCOIN Bitbns FTX OKEX MEXC Global LATOKEN AscendEX LBANK Jubi exchange BitMart
zebpay Huobi gate.io RAYDIUM BKEX HOTBIT CoinW BTCEX CoinEx BingX

DISCLAIMER: GARI Decentralized Tokens are virtual digital assets, and are not legal tender. Law relating to virtual digital assets/crypto technology is evolving; please do your own due diligence before participating. Participants are required to comply with all applicable laws, including taxation laws.
*Most Popular Creator of India refers to the creator who will receive maximum votes for their content on Chingari app's Chingari Star contest.

ಶುಕ್ರವಾರ, ಫೆಬ್ರುವರಿ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 49 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಪತಿ ಚಿರಂಜೀವಿ ಸರ್ಜಾ ಅಗಲಿಕೆ ಬಳಿಕ ಚೇತರಿಸಿಕೊಳ್ಳುತ್ತಿರುವ ನಟಿ ಮೇಘನಾ ರಾಜ್ ಮತ್ತೆ ವೃತ್ತಿ ಬದುಕಿನತ್ತ ಹೆಜ್ಜೆ ಇಟ್ಟಿದ್ದು ಕ್ಯಾಮೆರಾ ಮುಂದೆ ಬಂದಿದ್ದಾರೆ.

ಆಳ-ಅಗಲ 'ಭದ್ರಾ ಮೇಲ್ದಂಡೆ'ಗೆ ರಾಷ್ಟ್ರೀಯ ಮಾನ್ಯತೆ ಗರಿ

ಸಂಸದರ ಬಗ್ಗೆ ಸಿಂಗಪುರ ಪ್ರಧಾನಿ ಹೇಳಿಕೆ: ಭಾರತದ ತೀವ್ರ ಆಕ್ಷೇಪ 15

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲೂ ಹಿಜಾಬ್ ನಿಷೇಧ 6

ಸೆನ್ಸೆಕ್ಸ್	ನಿಫ್ಟಿ	₹/$
57,892	17,305	75.11

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ 7.25% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸಚಿವ ಈಶ್ವರಪ್ಪ ವಜಾಕ್ಕೆ ಪಟ್ಟು • ಎರಡನೇ ದಿನವೂ ನಡೆಯದ ಕಲಾಪ

ಅಹೋರಾತ್ರಿ 'ಕೈ' ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಧ್ವಜದ ಕುರಿತು ಹೇಳಿಕೆ ನೀಡಿದ್ದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಬೇಕೆಂದು ಪಟ್ಟು ಹಿಡಿದು, ಫೆ.16ರಿಂದ ಉಭಯ ಸದನಗಳಲ್ಲಿ ಧರಣಿ ನಡೆಸಿರುವ ಕಾಂಗ್ರೆಸ್ ಸದಸ್ಯರು, ಗುರುವಾರದಿಂದ ಅಹೋರಾತ್ರಿ ಧರಣಿ ಕುಳಿತಿದ್ದಾರೆ.

ಗುರುವಾರ ಬೆಳಿಗ್ಗೆ 11 ಗಂಟೆಯ ಒಳಗೆ ಈಶ್ವರಪ್ಪ ಅವರು ರಾಜೀನಾಮೆ ನೀಡಬೇಕು ಎಂದು ಬುಧವಾರ ಸಂಜೆ ಕಾಂಗ್ರೆಸ್ ನಾಯಕರು ಗಡುವು ವಿಧಿಸಿದ್ದರು. ಆದರೆ, ಕಾಂಗ್ರೆಸ್ ನಾಯಕರ ಬೇಡಿಕೆಗೆ ಬಿಜೆಪಿ ಸೊಪ್ಪು ಹಾಕಲಿಲ್ಲ. ಇದರಿಂದ ಅಸಮಾಧಾನಗೊಂಡ ಕಾಂಗ್ರೆಸ್ ಶಾಸಕರು ಬೆಳಿಗ್ಗೆ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಮತ್ತು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಆರಂಭಿಸಿ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಘೋಷಣೆ ಕೂಗಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕರ ಗದ್ದಲದ ಮಧ್ಯೆಯೂ ಪ್ರಶ್ನೋತ್ತರ ನಡೆಸಲಾಯಿತು. 'ಬೇಕೇ ಬೇಕು ರಾಜೀನಾಮೆ ಬೇಕು. ದೇಶದ್ರೋಹಿ ಬಿಜೆಪಿ, ದೇಶದ್ರೋಹಿ ಈಶ್ವರಪ್ಪ, ಆರ್‌ಎಸ್‌ಎಸ್ ಕೈಗೊಂಬೆ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗಿದರು. ಅದಕ್ಕೆ ತಿರುಗೇಟು ನೀಡಲು ಬಿಜೆಪಿ ಸದಸ್ಯರು ತಮ್ಮ ಸ್ಥಾನ ಬಿಟ್ಟು ಮೊದಲ ಸಾಲಿಗೆ ಬಂದರು. ಆದರೆ, ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಬಿಜೆಪಿ ಶಾಸಕರತ್ತ ಗದರಿದರು. 'ಪ್ರಶ್ನೋತ್ತರ ನಡೆಯುತ್ತಿದೆ. ಆಡಳಿತ ಪಕ್ಷದ ಸದಸ್ಯರು ಹೀಗೆ ಎದ್ದು ಬರುವುದು ಸರಿಯಲ್ಲ' ಎಂದರು.

8ನೇ ಪುಟ ನೋಡಿ

ಅಹೋರಾತ್ರಿ ಧರಣಿ ಕೈಬಿಡುವಂತೆ ಕಾಂಗ್ರೆಸ್ ಸದಸ್ಯರ ಮನವೊಲಿಸಲು ವಿಧಾನಸಭೆ ಸಭಾಂಗಣಕ್ಕೆ ಭೇಟಿ ಕೊಟ್ಟ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಆರ್.ಅಶೋಕ, ಬಿ.ಎಸ್.ಯಡಿಯೂರಪ್ಪ ಅವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಜತೆ ಚರ್ಚಿಸಿದರು. ಕಾಂಗ್ರೆಸ್, ಬಿಜೆಪಿ ಸದಸ್ಯರೂ ಇದ್ದಾರೆ

ಹಿಜಾಬ್: ನಿಲ್ಲದ ಪ್ರತಿಭಟನೆ

ಕೆಲವೆಡೆ ಆನ್‌ಲೈನ್ ತರಗತಿ • 9 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗಲು ಅವಕಾಶಕ್ಕೆ ಒತ್ತಾಯಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಯರಿಂದ ಗುರುವಾರವೂ ಪ್ರತಿಭಟನೆ ನಡೆಯಿತು. ಕೆಲವು ಪದವಿಪೂರ್ವ ಕಾಲೇಜು, ಪ್ರೌಢಶಾಲೆಗಳಲ್ಲಿ ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅನುಮತಿ ನೀಡದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರು ವಾಪಸಾದರು. ಕೆಲವೆಡೆ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗಳಿಗೆ ಹಾಜರಾಗಿದ್ದಾರೆ.

ಬೆಳಗಾವಿಯ ಸದಾಶಿವ ನಗರದ ವಿಜಯಾ ಅರೆವೈದ್ಯಕೀಯ ಸಂಸ್ಥೆಯ ಕಾಲೇಜಿನಲ್ಲಿ ಹಿಜಾಬ್ ಧರಿಸಲು ಅವಕಾಶ ಕೊಡುವಂತೆ ವಿದ್ಯಾರ್ಥಿನಿಯರು ಪಟ್ಟುಹಿಡಿದರು. ಈ ವೇಳೆ ಹೊರಗಿನಿಂದ ಬಂದ ಕೆಲ ಯುವಕರು 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ್ದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಆರು ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಎಫ್‌ಐಆರ್: ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ 9 ಜನರ ವಿರುದ್ಧ ಶಿರಾಳಕೊಪ್ಪ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಿಷೇಧಾಜ್ಞೆ ಉಲ್ಲಂಘಿಸಿ ಪ್ರತಿಭಟನೆ ನಡೆಸಿದ್ದಾರೆ ಎಂಬ ಆರೋಪದ ಮೇಲೆ ಪುರಸಭೆ ಸದಸ್ಯರಾದ ಮುದಾಸೀರ್, ಸಾದಿಕ್, ಶಿರಾಳಕೊಪ್ಪ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಬಿಲಾಲ್ ಸೇರಿ 9 ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಳ್ಳಾರಿ ನಗರದ ಸರಳಾದೇವಿ ಕಾಲೇಜಿನ ಬಳಿ ಹಿಜಾಬ್ ಧರಿಸಿಯೇ ಕಾಲೇಜಿನೊಳಕ್ಕೆ ಪ್ರವೇಶಿಸುವುದಾಗಿ ವಿದ್ಯಾರ್ಥಿನಿಯರು ಪಟ್ಟು ಹಿಡಿದಿದ್ದರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು. ಒಂದು ಹಂತದಲ್ಲಿ, ಪೊಲೀಸರ ವಿರುದ್ಧ ಪ್ರದರ್ಶನಕಾರರು ಆಕ್ರೋಶ ವ್ಯಕ್ತಪಡಿಸಿದರು. ಆ ವೇಳೆ ನೂಕಾಟ ನಡೆಯಿತು. ಪೊಲೀಸರು ಸಂಯಮದಿಂದ ಪರಿಸ್ಥಿತಿ ನಿಭಾಯಿಸಿ, ಆಕ್ರೋಶಗೊಂಡ ವಿದ್ಯಾರ್ಥಿನಿಯರ ಮನವೊಲಿಸಿ ವಾಪಸ್ ಕಳುಹಿಸಿದರು.

ಹಾಸನ ನಗರದ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ 20ಕ್ಕೂ ಹೆಚ್ಚು ಹಾಗೂ ಸರ್ಕಾರಿ ಪದವಿ ಪೂರ್ವ ವಿಭಜಿತ ಕಾಲೇಜಿನ ಹತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರು 'ಹಿಜಾಬ್ ನಮ್ಮ ಹಕ್ಕು, ನ್ಯಾಯ ಬೇಕು' ಎಂದು ಘೋಷಣೆ ಕೂಗಿದರು.

ಶಿರಾಳಕೊಪ್ಪ, ಹೊನ್ನಾಳಿ, ಹೊಸಪೇಟೆ ನಗರದ ಕೆಎಸ್‌ಪಿಎಲ್ ಕಾಲೇಜು, ಉತ್ತರ ಕನ್ನಡ ಜಿಲ್ಲೆ ಶಿರಸಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಂ.ಎಂ.ಕಲಾ ಮತ್ತು ವಿಜ್ಞಾನ ಕಾಲೇಜು, ಬನವಾಸಿ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರು, ಕಾರವಾರದ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಹಾಗೂ ಸರ್ಕಾರಿ ಪಿ.ಯು ಕಾಲೇಜಿನಲ್ಲಿ ಸುಮಾರು 15 ವಿದ್ಯಾರ್ಥಿನಿಯರು ಪ್ರತಿಭಟಿಸಿದರು.

ಮುಳಬಾಗಿಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅವಕಾಶ ನೀಡದ ಕಾರಣ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

6ನೇ ಪುಟ ನೋಡಿ

ಚಿತ್ರದುರ್ಗ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗದಲ್ಲಿ ಗುರುವಾರ ಪ್ರತಿಭಟನನಿರತ ವಿದ್ಯಾರ್ಥಿನಿಯರು ಓದಿನಲ್ಲಿ ತಲ್ಲೀನರಾಗಿದ್ದರು ಪ್ರಜಾವಾಣಿ ಚಿತ್ರ/ವಿ.ಚಂದ್ರಪ್ಪ

ಓದುತ್ತಾ ಪ್ರತಿಭಟನೆ ನಡೆಸಿದ ವಿದ್ಯಾರ್ಥಿನಿಯರು

ಚಿತ್ರದುರ್ಗ: ಹಿಜಾಬ್ ವಿವಾದ ಗುರುವಾರವೂ ಜಿಲ್ಲಾ ಕೇಂದ್ರದಲ್ಲಿ ತಾರಕಕ್ಕೇರಿತು. ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ತರಗತಿಗಳಿಂದ ಹೊರಗುಳಿದರು. ಗೇಟಿನ ಎದುರು ಓದುತ್ತಾ ಕುಳಿತುಕೊಳ್ಳುವ ಮೂಲಕ ಪ್ರತಿಭಟನೆ ನಡೆಸಿದರು. ಅವರಿಗೆ ಪ್ರೌಢಶಾಲೆ ವಿದ್ಯಾರ್ಥಿನಿಯರು ಜತೆಯಾದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'7ನೇ ವೇತನ ಆಯೋಗ: ಚರ್ಚಿಸಿ ತೀರ್ಮಾನ'

ಬೆಂಗಳೂರು: 'ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ ರಚಿಸುವ ಕುರಿತು ಬಜೆಟ್ ಅಧಿವೇಶನಕ್ಕೂ ಮೊದಲು ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಂಗನಾಥ್ ವಿರುದ್ಧ ತನಿಖೆಗೆ ಅನುಮತಿ ಕೋರಿದ್ದ ಪ್ರಸ್ತಾವನೆ ತಿರಸ್ಕಾರ

37 ಎಕರೆ ಗೋಮಾಳ ಪರಭಾರೆ; ಅಧಿಕಾರಿಗೆ ರಕ್ಷಣೆ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಂದಾಜು ₹ 200 ಕೋಟಿ ಮೌಲ್ಯದ 37 ಎಕರೆ ಸರ್ಕಾರಿ ಗೋಮಾಳವನ್ನು ಪರಭಾರೆ ಮಾಡಿರುವ ಕೆಎಎಸ್ ಹಿರಿಯ ಅಧಿಕಾರಿ (ಹಿಂದಿನ ಉಪವಿಭಾಗಾಧಿಕಾರಿ) ಕೆ.ರಂಗನಾಥ್ ವಿರುದ್ಧ ತನಿಖೆ ನಡೆಸಲು ಅನುಮತಿ ಕೋರಿದ್ದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ತಿರಸ್ಕರಿಸಿದೆ.

ಸರ್ಕಾರದ ಈ ನಿಲುವಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಯಲಹಂಕ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಉತ್ತರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರಂಗನಾಥ್ ಅವರು ಅಲ್ಪಾವಧಿಯಲ್ಲೇ 37 ಎಕರೆಯನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ 15 ಪ್ರಕರಣಗಳ ಬಗ್ಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಎನ್.ಮಂಜುನಾಥ ಪ್ರಸಾದ್ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ 2020ರ ಜುಲೈ 25ರಂದು ವರದಿ ಸಲ್ಲಿಸಿದ್ದರು. ರಂಗನಾಥ್ ಅವರನ್ನು ಅಮಾನತು ಮಾಡಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ಶಿಫಾರಸು ಮಾಡಿದ್ದರು.

ಈ ನಡುವೆ, ರಂಗನಾಥ್ ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದಲ್ಲೂ ಪ್ರಕರಣ ದಾಖಲಾಗಿತ್ತು. ತನಿಖೆಗೆ ಅನುಮತಿ ನೀಡಲು ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಕೃಷ್ಣರಾಮಯ್ಯ ಎಂಬುವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ 2021ರ ಜನವರಿ 15ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಎಸಿಬಿ ಸಲ್ಲಿಸಿರುವ ಪ್ರಸ್ತಾವನೆ ಸಂಬಂಧ ಒಂದು ತಿಂಗಳೊಳಗೆ ನಿರ್ಧಾರ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಎಸಿಬಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ತಿರಸ್ಕರಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, 'ರಂಗನಾಥ್ ಅವರು ಮೇಲ್ಮನವಿ ಪ್ರಾಧಿಕಾರಿಯಾಗಿದ್ದು, ಅವರು ಯಾವುದೇ ದುರುದ್ದೇಶದಿಂದ ನಿರ್ಣಯ ಕೈಗೊಂಡಿಲ್ಲ' ಎಂದು ಹೇಳಿದೆ.

8ನೇ ಪುಟ ನೋಡಿ

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್

ಕಲಾವಿದರ ಮಾಸಾಶನ ಹೆಚ್ಚಳ: ಸಿ.ಎಂ ಜತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರಿಗೆ ಮಾಸಾಶನದ ಮೊತ್ತವನ್ನು ಹೆಚ್ಚಿಸುವ ಉದ್ದೇಶವಿದ್ದು, ಈ ಬಗ್ಗೆ ಮುಖ್ಯಮಂತ್ರಿಯವರ ಜತೆಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಅವರ ಪ್ರಶ್ನೆಗೆ ಉತ್ತರಿಸಿ, ರಾಜ್ಯದಲ್ಲಿ 11 ಸಾವಿರ ಕಲಾವಿದರಿಗೆ ಪ್ರತಿ ತಿಂಗಳು

ವಿ. ಸುನೀಲ್ ಕುಮಾರ್

ತಲಾ ₹2,000 ಮಾಸಾಶನ ನೀಡಲಾಗುತ್ತಿದೆ. ಇದರ ಮೊತ್ತವನ್ನು ಹೆಚ್ಚಿಸಬೇಕು ಎಂಬ ಉದ್ದೇಶವಿದೆ. ಇದಕ್ಕೆ ಅನುದಾನದ ಲಭ್ಯತೆಯನ್ನೂ ನೋಡಿಕೊಳ್ಳಬೇಕಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ವಿವಿಧ ಸಾಂಸ್ಕೃತಿಕ ಸಂಘಟನೆಗಳಿಗಾಗಿ ಅನುದಾನ ನೀಡಲು ವಾರ್ಷಿಕ ₹ 6 ಕೋಟಿ ನಿಗದಿ ಆಗಿದೆ. ಅದರ ಪ್ರಮಾಣ ಹೆಚ್ಚಿಸಬೇಕಾಗಿದೆ. ಅಲ್ಲದೆ, ರಂಗ ಶಿಕ್ಷಕರ ನೇಮಕಾತಿಗಾಗಿ ಶಿಕ್ಷಣ ಇಲಾಖೆಯ ಜತೆಗೆ ಮಾತುಕತೆ ನಡೆಸಲಾಗುವುದು ಎಂದೂ ಸುನೀಲ್ ಭರವಸೆ ನೀಡಿದರು.

ಇದಕ್ಕೆ ಧ್ವನಿಗೂಡಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಾಹಿತಿಗಳು ಮತ್ತು ಕಲಾವಿದರು ಈ ನಾಡಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದವರು. ಕಲಾವಿದರು ಈಗ ಸಂಕಷ್ಟದಲ್ಲಿದ್ದಾರೆ. ಅವರ ನೆರವಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಅನುದಾನ ಪಡೆಯಬೇಕು ಎಂದು ಸಲಹೆ ನೀಡಿದರು.

‘ಕೇಸರಿ ಧ್ವಜ ಹಾರಿಸುವುದಾಗಿ ಈಶ್ವರಪ್ಪ ಹೇಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನೇ ಕೆಂಪು ಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇನೆಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿಲ್ಲ. ಕಾಂಗ್ರೆಸ್ ತನ್ನ ಪ್ರತಿಷ್ಠೆಗಾಗಿ ಕಲಾಪ ಹಾಳು ಮಾಡುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಭಾರತವನ್ನು ಹಿಂದೂ ರಾಷ್ಟ್ರ ಮಾಡಬೇಕು ಎಂಬುದು ಬಿಜೆಪಿ, ಆರ್‌ಎಸ್‌ಎಸ್ ಮತ್ತು ಅದರ ಸಹ ಸಂಘಟನೆಗಳ ಕಾರ್ಯಸೂಚಿ.

ಕುಮಾರಸ್ವಾಮಿ

ಆ ಕಾರಣದಿಂದ ಮುಂದೊಂದು ದಿನ ಕೆಂಪುಕೋಟೆಯಲ್ಲಿ ಯಾರಾದರೂ ಕೇಸರಿ ಧ್ವಜ ಹಾರಿಸಬಹುದು ಎಂದು ಈಶ್ವರಪ್ಪ ಹೇಳಿದ್ದರು’ ಎಂದರು.

‘ಹಿಂದೂ ಸಂಸ್ಕೃತಿ, ಪರಂಪರೆಯಲ್ಲಿ ಕೇಸರಿ ಬಣ್ಣ ಹಾಗೂ ಕೇಸರಿ ವಸ್ತ್ರಕ್ಕೆ ಪೂಜ್ಯ ಸ್ಥಾನವಿದೆ. ಧಾರ್ಮಿಕ ಕ್ಷೇತ್ರದಲ್ಲಿರುವವರು ಕೇಸರಿ ವಸ್ತ್ರಗಳನ್ನು ಧರಿಸುತ್ತಾರೆ. ಬಿಜೆಪಿ, ಆರ್‌ಎಸ್‌ಎಸ್ ಮತ್ತದರ ಸಹ ಸಂಘಟನೆಗಳು ಕೇಸರಿ ಬಾವುಟವನ್ನು ಇಟ್ಟುಕೊಂಡೇ ಹೋರಾಟ ಮಾಡುತ್ತಿವೆ. ಹಿಂದೂಗಳ ಪಾಲಿಗೆ ಕೇಸರಿ ಪವಿತ್ರ ವಸ್ತ್ರ. ಅದರ ಘನತೆಯನ್ನು ಯಾರೂ ಹಾಳು ಮಾಡಬಾರದು’ ಎಂದು ಹೇಳಿದರು.

‘ಕರ್ನಾಟಕ ಸೇರಿದಂತೆ ದಕ್ಷಿಣದ ಎಲ್ಲ ರಾಜ್ಯಗಳಲ್ಲಿಯೂ ಧ್ವಜ ಸ್ತಂಭಗಳನ್ನು ನೆಡುವ, ಅವುಗಳಲ್ಲಿ ತಮ್ಮ ಸಂಘಟನೆಗಳ ಬಾವುಟ ಹಾರಿಸುವ ಪದ್ಧತಿ ಇದೆ. ಖಾಲಿ ಇರುವ ಧ್ವಜ ಸ್ತಂಭಗಳಲ್ಲಿ ಕೇಸರಿ ಬಾವುಟ ಹಾರಿಸುವುದನ್ನು ನೋಡಿದ್ದೇವೆ. ಈ ವಿಷಯವನ್ನು ದೊಡ್ಡದು ಮಾಡಿ ಸದನದ ಕಲಾಪವನ್ನು ಹಾಳು ಮಾಡುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

ರಾಗಿ ಬೆಂಬಲ ಬೆಲೆ ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: ಪ್ರತಿ ಕ್ವಿಂಟಲ್ ರಾಗಿಯ ಬೆಂಬಲ ಬೆಲೆಯನ್ನು ಕನಿಷ್ಠ ₹ 4,000ಕ್ಕೆ ಹೆಚ್ಚಳ ಮಾಡಬೇಕು ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಒತ್ತಾಯಿಸಿದರು.



ದೇವೇಗೌಡ

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಳೆದ ವರ್ಷ ಒಂದು ಕ್ವಿಂಟಲ್ ರಾಗಿಗೆ ₹ 3,295 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಲಾಗಿತ್ತು. ಈ ವರ್ಷ ₹ 3,377 ನಿಗದಿ ಮಾಡಲಾಗಿದೆ. ಕೇವಲ ₹ 52 ಹೆಚ್ಚಳ ಮಾಡಲಾಗಿದೆ. ಇದರಿಂದ ರೈತರಿಗೆ ಯಾವ ಅನುಕೂಲವೂ ಆಗುವುದಿಲ್ಲ’ ಎಂದರು.

ರಾಗಿ ಬೆಂಬಲ ಬೆಲೆ ಕಡಿಮೆ ಇರುವ ಕುರಿತು ಪಕ್ಷದ ಮುಖಂಡ ವೈ.ಎಸ್.ವಿ. ದತ್ತ ಈಗಾಗಲೇ ರಾಜ್ಯ ಸರ್ಕಾರದ ಗಮನ ಸೆಳೆದಿದ್ದಾರೆ. ತಕ್ಷಣವೇ ಬೆಂಬಲ ಬೆಲೆ ಹೆಚ್ಚಿಸಬೇಕು. ಬೆಂಬಲ ಬೆಲೆಯಡಿ ಆಹಾರ ಧಾನ್ಯ ಖರೀದಿ ಮಾಡುವಾಗ ಸಣ್ಣ ರೈತರು, ದೊಡ್ಡ ರೈತರು ಎಂಬ ಬೇಧ ಮಾಡಬಾರದು ಎಂದು ಆಗ್ರಹಿಸಿದರು.

‘ಪ್ರತಿ ಕ್ವಿಂಟಲ್ ದರವನ್ನು ₹ 57 ಮಾತ್ರ ಹೆಚ್ಚಿಸಿದರೆ ರೈತರಿಗೆ ಏನು ಲಾಭ ಆಗುತ್ತದೆಯೊ ಗೊತ್ತಿಲ್ಲ. ರಸಗೊಬ್ಬರದ ದರದಲ್ಲಿ ಎಷ್ಟು ಹೆಚ್ಚಳ ಆಗಿದೆ ಎಂಬುದನ್ನು ಸರ್ಕಾರ ನೋಡಬೇಕು. ಇದೇ 20ರಂದು ದೆಹಲಿಗೆ ಹೋಗುತ್ತೇನೆ. ಅವಕಾಶ ಸಿಕ್ಕರೆ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಭೇಟಿಮಾಡಿ ಬೆಂಬಲ ಬೆಲೆ ಹೆಚ್ಚಳಕ್ಕೆ ಒತ್ತಾಯ ಮಾಡುತ್ತೇನೆ’ ಎಂದರು.

ವೈ.ಎಸ್.ವಿ. ದತ್ತ ಇದ್ದರು.

‘ಕಲಾಪ ಕೆಳಮಟ್ಟಕ್ಕೆ ಕುಸಿಯುತ್ತಿದೆ’

‘ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಅಭಿಪ್ರಾಯ ಹೇಳುತ್ತಾ ಇದ್ದೆ. ಯಾವತ್ತೂ ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಲೇ ಇಲ್ಲ. ಈಗ ಕಲಾಪ ಕೆಳಮಟ್ಟಕ್ಕೆ ಕುಸಿಯುತ್ತಿದೆ’ ಎಂದು ಎಚ್‌.ಡಿ. ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಹಿಜಾಬ್ ವಿಚಾರ ದಾರಿ ತಪ್ಪಿ ಹೋಗುತ್ತಿದೆ. ಪ್ರಾರಂಭದಲ್ಲೇ ಅದನ್ನು ಚಿವುಟಿ ಹಾಕಬೇಕಿತ್ತು. ಆಡಳಿತ ಪಕ್ಷ ಆ ಕೆಲಸವನ್ನು ಮಾಡಬೇಕಿತ್ತು. ನ್ಯಾಯಾಲಯದ ಆದೇಶಕ್ಕೂ ಬಗ್ಗುವುದಿಲ್ಲ ಎಂದು ಹೆಣ್ಣು ಮಕ್ಕಳು ಹೇಳುತ್ತಿದ್ದಾರೆ. ಇದನ್ನು ಹೀಗೆಯೇ ಹರಡಲು ಬಿಟ್ಟರೆ ಕಷ್ಟವಾಗುತ್ತದೆ ಎಂದರು.

ಧರಣಿನಿರತ ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್ ಸಭಾಪತಿ ಪೀಠದ ಎದುರಿನ ಸ್ಥಳದಲ್ಲಿ ಗುರುವಾರ ರಾತ್ರಿ ಮಲಗಿರುವುದು

ಧರಣಿನಿರತ ಶಾಸಕರಿಗೆ ಊಟ, ಹಾಸಿಗೆ ವ್ಯವಸ್ಥೆ

ಬೆಂಗಳೂರು: ವಿಧಾನಮಂಡಲದ ಉಭಯ ಸದನಗಳಲ್ಲಿ ಧರಣಿ ನಡೆಸುತ್ತಿರುವ ಕಾಂಗ್ರೆಸ್ ಶಾಸಕರಿಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯದಿಂದ ಊಟ, ಹಾಸಿಗೆ, ದಿಂಬು ಪೂರೈಕೆಗೆ ವ್ಯವಸ್ಥೆ ಮಾಡಲಾಗಿತ್ತು.

ವಿಧಾನಸಭೆಯಲ್ಲಿ ಶಾಸಕರಿಗೆ ಸಸ್ಯಾಹಾರಿ ಊಟ, ಹಾಸಿಗೆ, ದಿಂಬು ಮತ್ತು ಹೊದಿಕೆ ಪೂರೈಕೆಗೆ ವ್ಯವಸ್ಥೆ ಮಾಡಲಾಗಿತ್ತು. ವಿಧಾನ ಪರಿಷತ್‌ನಲ್ಲಿ ಕೂಡ ಊಟ ಪೂರೈಕೆಗೆ ಸಚಿವಾಲಯದ ಅಧಿಕಾರಿಗಳು ಸಿದ್ಧತೆ ನಡೆಸಿದ್ದರು. ಆದರೆ, ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ತಮ್ಮ ಸದಸ್ಯರಿಗೆ ಸಸ್ಯಾಹಾರಿ ಊಟದ ವ್ಯವಸ್ಥೆ ಮಾಡಿದ್ದರು. ಹಾಸಿಗೆ, ದಿಂಬು ಮತ್ತು ಹೊದಿಕೆಗಳನ್ನು ಸಚಿವಾಲಯದಿಂದ ಪೂರೈಸಲಾಗಿತ್ತು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪರಿಷತ್ ಸಭಾಂಗಣಕ್ಕೆ ಗುರುವಾರ ತಡ ರಾತ್ರಿ ಭೇಟಿನೀಡಿ, ಧರಣಿನಿರತ ಕಾಂಗ್ರೆಸ್ ಸದಸ್ಯರಿಗೆ ಒದಗಿಸಿರುವ ಸೌಲಭ್ಯಗಳ ಕುರಿತು ವಿಚಾರಿಸಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಕೂಡ ಪರಿಷತ್ತಿನ ಕಾಂಗ್ರೆಸ್ ಸದಸ್ಯರನ್ನು ಭೇಟಿ ಮಾಡಿದರು. ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಧರಣಿ ನಡೆಸುತ್ತಿರುವ ಶಾಸಕರ ಆರೋಗ್ಯ ತಪಾಸಣೆಯನ್ನು ವಿಧಾನ ಮಂಡಲದ ವೈದ್ಯರು ನಡೆಸಿದರು.

ಉಭಯ ಸದನಗಳಲ್ಲೂ ಪ್ರಮುಖ ನಾಯಕರು ಒಂದೆಡೆ ಕುಳಿತು ಕೆಲಕಾಲ ಚರ್ಚೆ ನಡೆಸಿದರು. ಉಳಿದ ಸದಸ್ಯರು ನಿದ್ದೆಗೆ ಜಾರುವವರೆಗೂ ಸಚಿವ ಕೆ.ಎಸ್. ಈಶ್ವರಪ್ಪ ಮತ್ತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು.

‘ನಾಯಕತ್ವ ಬಿಕ್ಕಟ್ಟು ಮರೆಮಾಚಲು ಸದನದ ದುರುಪಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದೊಳಗಿನ ನಾಯಕತ್ವದ ಬಿಕ್ಕಟ್ಟನ್ನು ಮರೆಮಾಚಿ, ಹುಸಿ ಒಗ್ಗಟ್ಟು ಪ್ರದರ್ಶಿಸಲು ಕಾಂಗ್ರೆಸ್ ನಾಯಕರು ಸದನವನ್ನು ದುರುಪಯೋಗಿಸಿಕೊಂಡಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ದೂರಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಆ ಪಕ್ಷದ ಇಬ್ಬರು ನಾಯಕರು ಪಕ್ಷದ ಮೇಲಿನ ಹಿಡಿತ ಮತ್ತು ನಾಯಕತ್ವದ ಪಾರಮ್ಯ ಸಾಧಿಸಲು ಈಶ್ವರಪ್ಪ ಅವರ ಮಾತುಗಳನ್ನು ಬಳಸಿಕೊಂಡಿದ್ದಾರೆ ಎಂದು ಹೇಳಿದರು.

ಸಚಿವ ಈಶ್ವರಪ್ಪ ಅವರಂತಹ ದೇಶ ಪ್ರೇಮಿ ನಾಯಕರನ್ನು ಗುರಿಯಾಗಿಟ್ಟುಕೊಂಡು, ಕೆಸರೆರಚುವ ವ್ಯರ್ಥ ಪ್ರಯತ್ನ ಬಿಟ್ಟು ಕಾಂಗ್ರೆಸ್ ಶಾಸಕರು ಸುಗಮ ಕಲಾಪಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಪುದುಪಕ್ಕಂ ಗ್ರಾಮದ ಪ್ರಸಕ್ತ ಸರ್ವೆ ನಂ. 243/2ಎ ದಲ್ಲಿ ಸಂಯೋಜಿತ 3 ಎಕರೆ 3 ಸೆಂಟ್ಸ್ ವಿಸ್ತೀರ್ಣವುಳ್ಳ ಜಮೀನನ್ನು ಅದರ ಪ್ರಸ್ತುತ ಮಾಲಿಕರಾದ ನಂ.180, ದೊಡ್ಡಬಳ್ಳಾಪುರ ರಸ್ತೆ, ಮೈಲನಹಳ್ಳಿ, ನೆಲಮಂಗಲ, ಮೈಲನಹಳ್ಳಿ, ಬೆಂಗಳೂರು ಗ್ರಾಮಾಂತರ, ಕರ್ನಾಟಕ-562123 ರಹವಾಸಿ ಶ್ರೀಮತಿ. ಲೀಲಾವತಿ ಕೋಂ. ಶ್ರೀ. ಮಹಾಲಿಂಗ ಭಾಗವತರ್ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಸ್ವತ್ತು ಪ್ರಸ್ತುತ ಉಲ್ಲೇಖಿತ ಮಾಲಿಕರ ಸ್ವಾಧೀನತೆಯಲ್ಲಿ ಇರುತ್ತದೆ ಮತ್ತು ಸದರಿ ಸ್ವತ್ತಿನ ಮೇಲೆ ಯಾವುದೇ ಋಣಭಾರಗಳು ಇರುವುದಿಲ್ಲ ಎಂದು ಹೇಳಲಾಗುತ್ತಿದೆ. ಹೀಗಾಗಿ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಇನ್ನಿತರ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಕ್ಲೇಮ್ ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಸಾರ್ವಜನಿಕ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 7 ದಿನಗಳೊಳಗೆ ತಮ್ಮ ಕ್ಲೇಮ್‌ಗಳನ್ನು ಅಗತ್ಯ ಸಂಬಂಧಿತ ದಾಖಲೆಗಳ ಸಮೇತ ನಮಗೆ ಸಲ್ಲಿಸುವುದು. ನಿಗದಿತ 7 ದಿನಗಳೊಳಗೆ ನಮಗೆ ಯಾವುದೇ ಕ್ಲೇಮ್‌ಗಳು ಸಲ್ಲಿಕೆಯಾಗದಿದ್ದಲ್ಲಿ, ಖರೀದಿಗೆ ಉದ್ದೇಶಿಸಲಾಗಿರುವ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮ್ ಅಥವಾ ಋಣಭಾರಗಳು ಇರುವುದಿಲ್ಲ ಮತ್ತು ಯಾರಿಗೂ ಯಾವುದೇ ಕ್ಲೇಮ್‌ಗಳಿಲ್ಲ ಎಂದು ಪರಿಗಣಿಸಲಾಗುತ್ತದೆ.

ಮಾಲತಿ ಅಸೋಸಿಯೇಟ್ಸ್
ಎಫ್2, 13/7, ಪಾಲತ್ ಶಂಕರಣ ರಸ್ತೆ
ಮಹಾಲಿಂಗಪುರಂ, ಚೆನ್ನೈ-600034
ದೂರವಾಣಿ: 044-28172836
ಇ-ಮೇಲ್:
e-mail:malathiassociates2018@gmail.com

27ರಿಂದ ಮೇಕೆದಾಟು ಪಾದಯಾತ್ರೆ ಮತ್ತೆ ಆರಂಭ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಇದೇ 27ರಿಂದ ಪಾದಯಾತ್ರೆ ಮತ್ತೆ ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಬಜೆಟ್ ಅಧಿವೇಶನದ ಒಳಗೆ ಮೇಕೆದಾಟು ಪಾದಯಾತ್ರೆ ಪೂರ್ಣಗೊಳಿಸಲು ತೀರ್ಮಾನಿಸಿದ್ದೇನೆ. ಅದರಂತೆ, ಫೆ. 27ರಿಂದ ಪಾದಯಾತ್ರೆ ಆರಂಭಿಸುವ ಬಗ್ಗೆ ಚರ್ಚೆ ನಡೆದಿದೆ’ ಎಂದರು.

ರಾಮನಗರ ಜಿಲ್ಲೆಯ ಕಾವೇರಿ-ಅರ್ಕಾವತಿ ನದಿಗಳ ‘ಸಂಗಮ’ದಿಂದ ಜ. 9ರಂದು ಆರಂಭಗೊಂಡಿದ್ದ ಪಾದಯಾತ್ರೆಯನ್ನು ಕೋವಿಡ್ ಮೂರನೇ ಅಲೆ ಹೆಚ್ಚಿದ ಕಾರಣಕ್ಕೆ ಅರ್ಧದಲ್ಲೇ ಮೊಟಕುಗೊಳಿಸಲಾಗಿತ್ತು.

ಕಾಣೆಯಾಗಿದ್ದಾರೆ

ಜೆ. ವಿಜಯಕುಮಾರ್

ವಯಸ್ಸು 24 ವರ್ಷ, 5.8 ಅಡಿ ಎತ್ತರ, ಕನ್ನಡ, ಇಂಗ್ಲೀಷ, ಹಿಂದಿ ಮತ್ತು ತೆಲುಗುನಲ್ಲಿ ಮಾತನಾಡುತ್ತಾರೆ. ಇವರು ದಿನಾಂಕ 17-01-2022 ರಂದು ಅಟ್ಟೂರ ಬಡಾವಣೆ, ಬೆಂಗಳೂರಿನಿಂದ ಕಾಣೆಯಾಗಿರುತ್ತಾರೆ
ಇವರ ತಂದೆ, ತಾಯಿ ತುಂಬಾ ದುಃಖದಲ್ಲಿದ್ದು ಅವರ ಆರೋಗ್ಯ ತುಂಬಾ ಗಂಭೀರವಾಗಿದೆ. ತಕ್ಷಣ ಮರಳಿ ಬಾ.
ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಸಂಪರ್ಕಿಸಿ:
8095265011, 8142424505, 6302377856
ಸೂಕ್ತ ಬಹುಮಾನ ನೀಡಲಾಗುವುದು

IN THE COURT OF THE X ADDL. DISTRICT AND SESSION JUDGE, BANGALORE RURAL, BANGALORE.

Com. O.S. No.1029/2021

BETWEEN: PLAINTIFF: Canara Bank, Dabaspete Branch, Dabasepete, Nelamangala Taluk, Bangalore Rural District **AND DEPENDENTS: Sri Mahesh Kumar Patel and Another**

Summons to the Defendants Under Order V Rule 20(1A) and (1-A) of the Code of Civil Procedure

To : Defendant: (1) Sri. Mahesh Kumar Patel S/o Vijaynand Patel, Aged about 36 Years, Residing at: No. 1867, Teachers Colony, Dabaspet, Bangalore Rural District-562111. **(2) Sri. Vimal K.** S/o Kumaraswamy, Aged about 39 years, Prop. J.V. Groups, at 1st Cross, Maruthi Complex, Dabasepet, Bangalore Rural District - 562111. Residing at: No.142 Nanjappa Building, Near Vasavi Temple, Dabasepet, Bangalore Rural District - 562111.

Whereas, the above plaintiff bank has instituted suit against you for recovery of sum of Rs. **13,49,921.00** (Rupees Thirteen Lakhs Forty Nine thousand and Nine hundred and Twenty one only) together with the court costs, current and future interest at contractual rate of interest of 10% per annum from date of suit till date of payment. You are hereby called upon to appear before this court in person or by advocate on the 07.03.2022 at 11.00 AM in the forenoon to defend yourseſl, in Default of your appearance on the day mentioned above the suit will be heard and determined in your absence. Given under my hand and seal of this court, this the 16th day of January 2022.

By order of the Court, sign/- Sheristedar,

Advocate for Petitioner:
Mohamed Afroze Ahamed
Opp. State Bank of India, M.G. Road, Tumkur.

IN THE COURT OF THE X ADDL. DISTRICT AND SESSION JUDGE, BANGALORE RURAL, BANGALORE.

Com. O.S. No.1034/2021

BETWEEN: PLAINTIFF: State Bank of India (E-State Bank of Hyderabad) Nelamangala Branch, Nelamangala Taluk, Bangalore Rural District. Represented by its Branch Manager Sri. Ruben Chakkravarthy S/o C.Suresh Babu, Aged about 31 years **AND DEPENDENTS: M/s Shree Sai Enterprises and Another**

Summons to the Defendants Under Order V Rule 20(1A) and (1-A) of the Code of Civil Procedure

To : Defendant: (1) M/s Shree Sai Enterprises, By its proprietor, Sri. Tejanithish R., Aged about 25 years, (2) Sri. Dhananjay.C, Aged about 29 years, At # 59/1A, Vishveshwara Grama, Kasaba Hobli, Nelamangala Taluk, Bangalore Rural District - 562123.

Whereas, the above plaintiff bank has instituted suit against you for recovery of sum of Rs. **9,86,907.00** (Rupees Nine Lakhs Eighty Six thousand and Nine hundred and Seven only) together with the court costs, current and future interest at contractual rate of interest of 8.75% per annum from date of suit till date of payment. You are hereby called upon to appear before this court in person or by advocate on the 16.03.2022 at 11.00 AM in the forenoon to defend yourself, in Default of your appearance on the day mentioned above the suit will be heard and determined in your absence. Given under my hand and seal of this court, this the 16th day of January 2022.

By order of the Court, sign/- Sheristedar,

Advocate for Petitioner:
Mohamed Afroze Ahamed
Opp. State Bank of India, M.G. Road, Tumkur.

IN THE COURT OF THE X ADDL. DISTRICT AND SESSION JUDGE, BANGALORE RURAL, BANGALORE.

Com. O.S. No.1033/2021

BETWEEN: PLAINTIFF: State Bank of India (E-State Bank of Hyderabad) Nelamangala Branch, Nelamangala Taluk, Bangalore Rural District. Represented by its Branch Manager Sri. Ruben Chakkravarthy S/o C.Suresh Babu, Aged about 31 years **AND DEPENDENTS: M/s SDN Enterprises**

Summons to the Defendants Under Order V Rule 20(1A) and (1-A) of the Code of Civil Procedure

To : Defendant: M/s SDN Enterprises, Prop. Smt. Nirupala W/o Prakash H.S., Aged about 47 years, At Bethanagere Road, Nelamangala Bangalore Rural-562123. Also at: #7736/1 Hippe Anjaneya Away Layout, Adepet, Nelamangala - 562123.

Whereas, the above plaintiff bank has instituted suit against you for recovery of sum of Rs. **10,08,759.00** (Rupees Ten Lakhs Eight thousand and Seven hundred and Fifty Nine only) together with the court costs, current and future interest at contractual rate of interest of 8.75% per annum from date of suit till date of payment. You are hereby called upon to appear before this court in person or by advocate on the 16.03.2022 at 11.00 AM in the forenoon to defend yoursefl, in Default of your appearance on the day mentioned above the suit will be heard and determined in your absence. Given under my hand and seal of this court, this the 16th day of January 2022.

By order of the Court, sign/- Sheristedar,

Advocate for Petitioner:
Mohamed Afroze Ahamed
Opp. State Bank of India, M.G. Road, Tumkur.

ವರ್ತುಲ ರಸ್ತೆಗೆ ಪುನೀತ್ ರಾಜ್‌ಕುಮಾರ್ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ನಾಯಂಡಹಳ್ಳಿ ಜಂಕ್ಷನ್‌ನಿಂದ ಬನ್ನೇರುಘಟ್ಟ ರಸ್ತೆಯ ವೆಗಾಸಿಟಿ ಮಾಲ್ ಜಂಕ್ಷನ್‌ವರೆಗಿನ 12 ಕಿ.ಮೀ. ಉದ್ದದ ವರ್ತುಲ ರಸ್ತೆಗೆ 'ಪುನೀತ್ ರಾಜ್‌ಕುಮಾರ್ ರಸ್ತೆ' ಎಂದು ನಾಮಕರಣ ಮಾಡುವ ಪ್ರಸ್ತಾವವನ್ನು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅನುಮೋದಿಸಿದ್ದಾರೆ.

ಈ ರಸ್ತೆಗೆ 'ಪುನೀತ್ ರಾಜ್‌ಕುಮಾರ್ ರಸ್ತೆ' ಎಂದು ನಾಮಕರಣ ಮಾಡಲು 2021ರ ಡಿ. 18ರಂದು ನಡೆದ ಬಿಬಿಎಂಪಿ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಈ ಬಗ್ಗೆ 2021ರ ಡಿ.29ರಂದು ಪ್ರಕಟಣೆ ನೀಡಿದ್ದ ಬಿಬಿಎಂಪಿ, ಸಲಹೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಿತ್ತು. 700ಕ್ಕೂ ಹೆಚ್ಚು ಮಂದಿ ಈ ಪ್ರಸ್ತಾವದ ಪರವಾಗಿ ಸಹಿ ಮಾಡಿದ್ದರು. ಈ ರಸ್ತೆಗೆ 'ಅಂಬರೀಷ್ ರಸ್ತೆ' ಎಂದು ಹೆಸರಿಡುವಂತೆ 'ಬೆಂಗಳೂರು ಮಹಾನಗರ ಜಿಲ್ಲಾ ಅಂಬರೀಷ್ ಅಭಿಮಾನಿಗಳ ಸಂಘ ಮತ್ತು ದೇವರ ಮಗ ಅಭಿಷೇಕ್ ಅಂಬರೀಷ್ ಟ್ರಸ್ಟ್'ಗಳು ಮನವಿ ಸಲ್ಲಿಸಿದ್ದವು. ಈ ರಸ್ತೆಗೆ ಪುನೀತ್ ಅವರ ಹೆಸರಿಡಲು ಆಡಳಿತಾಧಿಕಾರಿಯವರು ಬುಧವಾರ ನಡೆದ ಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದಾರೆ.

ವಿವಿಧ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್. ಆರ್. ರಮೇಶ್ ಅವರು ಈ ರಸ್ತೆಗೆ ಪುನೀತ್ ಅವರ ಹೆಸರಿಡುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು.

ಎಲ್‌ಎಲ್‌ಬಿ ಪರೀಕ್ಷೆ ನಡೆಸಲು ನಿರ್ದೇಶನ

ಬೆಂಗಳೂರು: 'ಮೂರು ವರ್ಷದ ಎಲ್‌ಎಲ್‌ಬಿ ಕೋರ್ಸ್‌ನ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಿ' ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ವಿಶ್ವವಿದ್ಯಾಲಯ ಸಲ್ಲಿಸಿದ್ದ ಮೇಲ್ಮನವಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಸ್.ಜಿ ಪಂಡಿತ್ ಹಾಗೂ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತ ತೀರ್ಪು ಪ್ರಕಟಿಸಿದೆ. 'ಪರೀಕ್ಷೆಯನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ವಿಶ್ವವಿದ್ಯಾಲಯ 10 ದಿನಗಳಲ್ಲಿ ನಿರ್ಧರಿಸಿ, 3 ವರ್ಷದ ಎಲ್‌ಎಲ್‌ಬಿಯ 2 ಮತ್ತು 4ನೇ ಸೆಮಿಸ್ಟರ್‌ಗಳಿಗೆ ಪರೀಕ್ಷೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

'ಬೀದರ್‌ಗೆ ಎಂಜಿನಿಯರಿಂಗ್ ಕಾಲೇಜು ಇಲ್ಲ'

ಬೆಂಗಳೂರು: ರಾಜ್ಯದಲ್ಲಿ ಸರ್ಕಾರದ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವವಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರು ವಿಧಾನಸಭೆಯಲ್ಲಿ ಗುರುವಾರ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ರಮೇಶ ಭೂಸನೂರು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ್‌ನಲ್ಲಿ ಈಗಾಗಲೇ ಇರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸಾಕಷ್ಟು ಕೋರ್ಸ್‌ಗಳಲ್ಲಿ ಶೇ 50 ರಿಂದ ಶೇ 70 ರಷ್ಟು ಸೀಟುಗಳು ಭರ್ತಿಯಾಗುತ್ತಿಲ್ಲ. ಆದ್ದರಿಂದ ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸುವ ಪ್ರಶ್ನೆಯೇ ಇಲ್ಲ ಎಂದರು.

ಎಐಸಿಟಿಇ ನಿಯಮಗಳ ಪ್ರಕಾರ ಈಗಾಗಲೇ ರಾಜ್ಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಒತ್ತು ನೀಡಲಾಗುತ್ತಿದೆ. ಈ ಎಂಜಿನಿಯರಿಂಗ್ ಕಾಲೇಜುಗಳನ್ನು ಬಲವರ್ಧಿಸಲು ಉದ್ದೇಶಿಸಲಾಗಿದೆ ಎಂದರು.

ನಗರದಲ್ಲಿ ಇಂದು

ನಿಖಿತಾ ಅಂಬೇರ್ಕರ್ ಅವರ ಭರತನಾಟ್ಯ ರಂಗ ಪ್ರವೇಶ: ಮುಖ್ಯ ಅತಿಥಿಗಳು– ಉಷಾ ದಾತಾರ್, ಎಸ್. ರಾಧಿಕಾ ಡೇನಿಯಲ್, ವೈ.ಕೆ. ಸಂಧ್ಯಾಶರ್ಮಾ, ಸ್ಥಳ– ಜೆ.ಸಿ.ರಸ್ತೆಯ ಎಡಿಎ ರಂಗಮಂದಿರ, ಸಮಯ–ಸಂಜೆ 6



ನಿಖಿತಾ

ಅಲಯನ್ಸ್ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಶಾಖೆ ಉದ್ಘಾಟನೆ: ಆಯೋಜನೆ– ಅಲಯನ್ಸ್ ವಿಶ್ವವಿದ್ಯಾಲಯ, ಉದ್ಘಾಟನೆ– ಸಹಕುಲಪತಿ ಅಭಯ್ ಜಿ. ಚಬ್ಬಿ, ಅತಿಥಿ–ಲೇಖಕ ಚೇತನ್ ಭಗತ್, ಅಧ್ಯಕ್ಷತೆ– ಕುಲಪತಿ ಡಾ.ಹನುಭಾ ಸಿಂಗ್, ಸ್ಥಳ– ಅಲಯನ್ಸ್ ವಿಶ್ವವಿದ್ಯಾಲಯ, ಸಮಯ ಸಂಜೆ –5

ಮೈನಾ ಹಕ್ಕಿಗಳ ಸಾವು

ಶಿಡ್ಲಘಟ್ಟ: ತಾಲ್ಲೂಕಿನ ತಿಮ್ಮನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಪ್ಪನಹಳ್ಳಿಯಲ್ಲಿ ಸುಮಾರು ಮೂರು ನಾಲ್ಕು ಕಡೆ ಏಳೆಂಟು ಮೈನಾ ಹಕ್ಕಿಗಳು ನಿಗೂಢವಾಗಿ ಸಾವನ್ನಪ್ಪಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

HEALTH SPECIAL

ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್



ರಿಚಾರ್ಜೆಬಲ್ ಶ್ರವಣ ಸಾಧನಗಳ ಮೇಲೆ 25% ರಿಯಾಯಿತಿ 28ನೇ ಫೆಬ್ರವರಿವರೆಗೆ

ನಿಮ್ಮ ಮನೆಯಲ್ಲಿ ನಿಮ್ಮ ಅನುಕೂಲಕ್ಕೆ ಅನುಗುಣವಾಗಿ ಶ್ರವಣ ಪರೀಕ್ಷೆ

- ಅಗೋಚರ ಶ್ರವಣ ಸಾಧನಗಳು ಲಭ್ಯ
- ಮೊಬೈಲ್ ಕನೆಕ್ಟಿವಿಟಿ
- ಎಕ್ಸ್‌ಚೇಂಜ್ ಆಫರ್ಸ್ ಉಪಲಬ್ಧ

HHCC HEARING HEALTH CARE CLINIC | OREVA RS CHAIN OF HEARING CLINICS

20+ ವರ್ಷಗಳ ಅತ್ಯುತ್ತಮ ಸಾಧನೆ

"ಅತ್ಯಾಧುನಿಕ ಉಪಕರಣಗಳಿಂದ ಶ್ರವಣ ಪರೀಕ್ಷೆ ಮಾಡಲಾಗುತ್ತದೆ"

ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ. ನಿಮ್ಮ ಸಮೀಪದ ಶಾಖೆ ತಿಳಿಯಲು ಸಂಪರ್ಕಿಸಿ.

99456 11100 www.hearingc.com

REAL ESTATE SELLING

Agricultural Land

Nelamangala

AGRICULTURE FARM Land Sale 2 acres 28 -36 lacs per acre Nelemangala -Marrur 9945080017, 8310414614

Flat

Jayanagar

JAYANAGAR 4TH 'T'Block, 2 BHK Apartment for Sale, 1580 Sft.,Near Cakewala, 10,000/-Sft. Contact- 9886655869.

Vasanth Nagar

2 BHK Flat for Sale at Palace Cross Road, Vasanthnagar, Eastfacing, 1 Covered car park. Gated community, 1262 sqft. 9845493251/ 9449009325

House

Jayanagar

SALE, JAYANAGAR 9th Block,30x40, Semi-commercial South facing, 3 floors building, 60'Road, excellent location, 3,50,00,000/- Genuine buyers Call.,Owner Kumar- 9980056670.

Peenya

SALE, NELAGADARANAHALLI, behind Siddartha School, Site- 1520 sqft, Ground+2, Ground- Factory/godown. 1st and 2nd duplex house. Total- 33 squares. Contact: 9845487263

Sites

Mysore

SALE OFFER Mysore MUDA Site Premier Location Site number 7196 (12X18 m) Vijayanagar IVth Stage IInd Phase East Facing 60 feet Road. Contact Agent Krishnamurthy 8277305783. Brokers Please Excuse

Vishweshwariah Layout

AVAILABLE 50X80 80feet Road 2nd Block Vishveswaraya Layout Rate 6500/- Per Sqft Contact: 9481703468

DH DECCAN HERALD ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

RENTAL PROPERTIES

Accommodation Available

Flats

AVAILABLE FOR Rent Or Lease 2BHK Semi furnished Flat with all Amenities at RMV Second Stage Lottegollahalli Dollars Colony Contact : 9343139393

House

RMV 2ND HIG EXCELLENT Prime Location, 3 BHK Bunglow. Contact Owner: 9341833353, 26713802. Broker Excuse.

BUILDERS ESSENTIAL

Water Proofing Materials

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Vishweshwariah Layout

AVAILABLE/ WANTED, BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

General

OPPORTUNITY FOR Retired Officials, Bankers, NRI, Teachers, Professionals, Homemakers, CAs. Earn salary + Incentives. 8095301555

Marketing & Sales

WALK_IN INTERVIEW Marble & Granite Firm Looking Minimum 3 years Experienced Sales Persons for Dairy Circle & Jigani, SALES EXECUTIVE- 3 Nos. Interview on: 20.02.2022, Between 10 am to 1 pm. Mobile: +919740019005.

IMMEDIATE REQUIREMENT Looking for Hard working Candidates, fluency in English with MBA freshers may send CV to E-mail: hr.gohithahasolutions@gmail.com

AGSAR PAINTS PVT LTD. WANTED 'Sales Executives' Posting For Bangalore EMail: bangalore@agsar.net Contact: 9535910010

Multiple Vacancy

REAL ESTATE Company Required Marketing Executive, Telecaller, Receptionist, Experience in Real Estate field or other Marketing Field/fresher also welcome, Earn 50K Per month, place:Bangalore. Call: 7676343099, 9019800999

REQUIRED, TEAMLEADER, Telecaller, Backend & Field executive For Banking Loan collection (salary upto 20,000- 25,000). Direct recruitment to company Contact: 9620206756, 9620200756.

Part-Time Jobs

A REPUTED MNC Company Will Provide Work From Home 30 to 35K Contact: 7019215243/ 9886641282

Receptionist/ Secretary

WANTED RECEPTIONIST with minimum 2 years experience and computer knowledge for an office at 4th Block Jayanagar. 9844076925.

Teachers/ Professors

SAAMAR INTERNATIONAL SCHOOL Thanisandra Main Road, R.K. Hegdenagar, Bangalore-77, B.Ed TEACHERS in English, Mathematics, Science, Sanskrit, Walk-in Interview dates: 19.02.22 and 26.02.22 (10AM - 2PM) Contact: 9482312675 8050290126

PUBLIC NOTICE

PUBLIC NOTICE

My client entered in sale agreement to purchase the Schedule property from Sri. B.N. RAJKUMAR S/o Late B.R. Narayanaswamy Naidu, Residing at No. J51, 1st Cross, Anjaneya Block, Opp Mahila Vidyalaya School, Sheshadripuram, Bangalore - 560020. This notice is hereby given for the information of General public that any persons or banks or financial institutions or any statutory authorities having any right, title, interest or claim against the schedule property may contact with documentary proof in support of his / her/ their claim if no claim is so lodged with us within the said period of 15 Days from this date of publication, it shall be presumed by my client that no one has any claim against the schedule property.

SCHEDULE PROPERTY

All that piece and parcel of immovable property of agricultural dry land bearing survey No. 25, Presently assigned as new Survey No. 25/2, Situated at Guyalahalli Village, Manchenahalli Hobli, Gowribidanur Taluk, Chikkaballapura District, Measuring 5 Acres 4 Guntas and 4 Guntas of adjacent karab land and 15 feet width of access road to survey No. 25/2 from Southern side in survey No.26,27 & 28.

Bounded on :-**East By :** Survey No. 25/1 and Survey No. 30 **West By :** Survey No. 24 **North By:** Government Naala **South by :** Survey No. 26 & Survey No. 28.

Sd/-
P. Narasimhaiah, Advocate
No.1, 18th Cross,
Malleshwaram,
Bangalore - 560055
Email : p.narasimhaiah@yahoo.co.in
Phone : 08023343461 & 08023343467
Place : Bangalore,
Date : 18-02-2022

PUBLIC NOTICE

This is to notify the public that, my client **Sri. Jayashankara T,** S/o Thimmaiah aged about 51 years, Residing at No.527, 2nd Main Road, Srinagara, Bangalore-560050, has lost the original Sale deed, dated 09.08.2004, executed by K.M.Nagaraju in favour of K.K.Saseendran, registered as Document No. KEN-1-19324-2004-05 of Book – I and stored in CD No. KEND 136 in the office of the Kengeri Sub-Registrar with respect to agricultural land bearing Sy No. 46/p145 measuring 1 Acre 23 guntas out of an extent of 2 Acres situated at Kaggalipura Village, Uttarahalli Hobli, Bangalore South Taluk.

In this regard a Lost Article Report bearing Serial No. 0157391/2022 dated 12.02.2022 has been lodged with Bangalore City Police Unit.

All persons are hereby informed not to deal or carry out any transaction with anyone based on the said lost document. If anyone has already carried out any transaction, kindly inform the undersigned in writing on the below mentioned address within seven days from this present.

If found, kindly return to the above-mentioned address or to his Counsel

G. Vikram, Advocate,
No. 10/1, 2nd floor, 3rd Main Road,
Mountjoy Extension,
Hanumanthanagara,
Bangalore-560019.
Email: vikram@vikilegal.com
Contact No. (+91 9886031212)

BUSINESS

Business Offers

Finance

FINANCE AGAINST Land & Building Properties Industries Schools Hospitals Projects& NRI Funds 7358729820

WANTED BUSINESS Partner Non Veg Hotel 10 Lakhs Investment Monthly Income 2.5 Lakhs: 9606701007/ 8892501007

ಕ್ಲಾಸಿಫೈಡ್ಸ್

ADMISSION CORNER

ಸಾಮರ್ ಇಂಟರ್‌ನ್ಯಾಷನಲ್ ಸ್ಕೂಲ್

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಆಂಗ್ಲ ಮಾಧ್ಯಮ
ರಾಜ್ಯ ಪಠ್ಯಕ್ರಮ

Admissions Open I to VII

9880153545
8050290126

ಒಟ್ಟು ವಾರ್ಷಿಕ ಶುಲ್ಕ Rs.15,500/- ಎಲ್ಲಾ ಒಳಗೊಂಡಂತೆ

ಪಠ್ಯಕ್ರಮ ಮತ್ತು ಸಹ ಪಠ್ಯಕ್ರಮ ನೀಡಲಾದ ವಿಷಯಗಳು

ಇಂಗ್ಲಿಷ್ ಕನ್ನಡ
ಹಿಂದಿ ಸಂಸ್ಕೃತ
ಉರ್ದು ವಿಜ್ಞಾನ
ಕಂಪ್ಯೂಟರ್
ದೈಹಿಕ ಶಿಕ್ಷಣ

ಪ್ರವೇಶ
ಪಠ್ಯಪುಸ್ತಕಗಳು
ನೋಟ್ಸ್ ಪುಸ್ತಕ
ಶಾಲಾ ಸಮವಸ್ತ್ರ
ಅವಧಿ ಶುಲ್ಕ

ನಮ್ಮ ಯಾವುದೇ ಶಾಖೆ ಗಳಿಲ್ಲ

ROUNAQH

ಥಣಿಸಂದ್ರ ಮುಖ್ಯರಸ್ತೆ, ಆರ್ ಕೆ ಹೆಗಡೆ ನಗರ, ಬೆಂಗಳೂರು-560077

ಜಾಮಿಯಾ ಮೋಹಮ್ಮದಿಯ ಎಜುಕೇಶನ್ ಸೊಸೈಟಿ ಮುಂಬೈ

PERSONAL

Lost

LOST

I, Shobha Shiromani W/o. Franklin Suresh, R/a SKV Hanging Garden, No. 414D, Basapura Village, Hosaroad, Bengaluru have lost Link Sale Deed of Plot No.358, Sy.No.74/5 & 73/2, Royal Township, Mathigiri (V), Kelamangalam (Dist.), Krishnagiri, Hosur, Tamilnadu, Reg. in the name of Sunil Gupta. **Finders pls contact: 9972163007 or inform nearby Police Station.**

Document lost

I Shobha Rani residing No.40, T C Palya main road, 3rd main, Anandapura Post, PNT Layout, K R Pura, Bangalore-560036. I have lost gift deed No.BDH-1-2887/18-19 registered Bidarahalli Bangalore. Complaint No.159253/2022 Plz find any one contact 9000213747, 9885651625

Change of Name

PUBLIC ARE hereby notified that, I, PRIYANKA SONI @ SADHVI ATMAPRIYANANDA PURI, R/o. #27, Omkara Ashrama, Omkar hills, Srinivasapura, Uttrahalli- Kengeri Main Road, Bangalore South Taluk, Bangalore- 560060 have changed my name as 'SADHVI ATMAPRIYANANDA PURI' subsequent to obtaining of 'Sanyasa Deekshe' in this regard, I, Further declare that both Names PRIYANKA SONI and SADHVI ATMAPRIYANANDA PURI are one and the same and belonged to me only. I have declared this fact vide affidavit dated 09-02-2022 Sworn before the Notary Public Sri. S.N. MADHU, Bangalore

I, BASAVARAJA, S/o. SADASHIVAPPA Date of Birth: 01-06-1975, residing at No. 34, 2nd Floor, 3rd Cross, New Income Tax Layout, Chandra Layout, Bangalore-560072, have changed my name to BASAVARAJ HOOGAR Vide Affidavit dated 16.02.2022 sworn before Advocate & Notary M.K.Devaki, Bangalore.

I, KRITIKA Dhandhania W/o. Kashyap Dhandhania residing at C-403, Karle Zenith, 100 feet road, Kempapura road, Next to Nagavara Lake, Bengaluru-560045 have changed my name from KRITIKA KASHYAP DHANDHANIA to KRITIKA DHANDHANIA vide affidavit dated 07/02/2022 before notary S.R. Ravi Kumar., Bengaluru

I, SWARNA LATHA SATISH KUMAR Residing at No. 18/1, New No. 35, Asha Nilaya, 16th Cross, 8th Main, Lakkasandra, Bangalore-560030, have changed my name to SWARNA LATHA JEEVARAJAN, vide affidavit dated 16/02/2022, before notary B. Chitra, Bangalore. Henceforth I shall be called SWARNA LATHA JEEVARAJAN, Bangalore.

I POORNIMA SHANKAR, D/o. N.R. Narasimha, aged about 36 years, R/at 'Kumara Nivasa', #1711/10, 3rd Main Road, Devaiah Park, Bengaluru- 560021. I have changed my name from POORNIMA SHANKAR to PURNIMAA ARYA. Vide Affidavit dated 9.2.2022 sworn before Advocate and Notary H.H. Nagaraj, Bangalore.

I, USHADEVI have changed my name to USHA RAMASWAMY vide affidavit dated: 17/2/2022 Before Notary Shreeshail.B. Gobbani Bangalore.

I, AJJAYYA M.B, S/o. M.G. BHOJA RAJ, Aged about 45 years, residing at No. 25, Unnati 1st Main, 3rd Cross, N.M.H, 2nd Phase, Sidedahalli, Bangalore-70, have changed my name to AJAY M.B. Vide Affidavit dated 09.02.2022 sworn before Advocate & Notary A.C. Subbu Swamy, Bangalore.

CHANGE OF NAME

I, Devraj S/o. Nanjegowda R/a No.136,16th Main, 2nd Cross, Near Canara Bank, J.C. Nagar, Kurubarahalli, Bengaluru-560086 have changed my name from **DEVEGOWDA to DEVRAJ** vide affidavit dated 17/02/2022 before Notary Onkarappa N.R., Bangalore. Henceforth, I shall called **DEVRAJ** only.

PROPERTY CORNER

VINAYAKA HOUSING (R) UTSAV CLUB & RESORT(R)

Kengal Village, Honnenahalli Grama Panchayath, Sompura Hobli, Nelamangala Taluk, Dabaspet, Bangalore Rural Dist- 563123.

FARM PLOTS AT MAGADI ROAD and DOBESPET AND BMRDA APPROVED SITES FOR SALE

5.25 GUNTAS ONWARDS FARM PLOTS AVAILABLE (ODD PLOTS AVAILABLE)

CLUB HOUSE FACILITY 24/7 SECURITY

BANK LOAN AVAILABLE

UTSAV | vasuki homes | Aikya SCHOOL

For More Details and for Site visit Contact

SRI. VINAYAKA LAND DEVELOPERS ®
Sri. Anjanadri Nilaya, No. 1, 3rd E Cross, Netaji Nagar, T. Dasarahalli, Bangalore-560 057
99011 58719 / 83109 99969 / 8088421757 / 83103 33728
www.utsavclub@resort.in / slrvinayaka@gmail.com

ಸುಂಕದಕಟ್ಟೆ–ಪೀಣ್ಯ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಪ್ರಯಾಣ ದುಸ್ತರ

ಇಲ್ಲದ ರಸ್ತೆಯಲ್ಲಿ ಮನಸ್ಸೊಲ್ಲದೇ ಸಂಚಾರ

● ವಿಜಯಕುಮಾರ್ ಎಸ್.ಕೆ.

ಹೆಗ್ಗನಹಳ್ಳಿ ಮುಖ್ಯ ರಸ್ತೆಯಲ್ಲಿ ಬಸ್‌ಗಳು ಸಾಲುಗಟ್ಟಿ ಸಂಚರಿಸುತ್ತಿರುವುದು –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

ಬೆಂಗಳೂರು: ಸುಂಕದಕಟ್ಟೆಯಿಂದ ಹೆಗ್ಗನಹಳ್ಳಿ ಮೂಲಕ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಕಾಲುದಾರಿ ರೀತಿಯ ಖಾಸಗಿ ರಸ್ತೆಯಲ್ಲೇ ದಿನಕ್ಕೆ 500ಕ್ಕೂ ಹೆಚ್ಚು ಬಿಎಂಟಿಸಿ ಬಸ್‌ಗಳು ಸಂಚರಿಸಬೇಕಿದ್ದು, ಚಾಲಕರು ಮತ್ತು ಪ್ರಯಾಣಿಕರು ಹೈರಾಣಾಗಿದ್ದಾರೆ.

ಸುಂಕದಕಟ್ಟೆಯಿಂದ ಹೆಗ್ಗನಹಳ್ಳಿ ಕ್ರಾಸ್, ನಾಗರಹೊಳೆ ವೃತ್ತ, ಪೀಣ್ಯ ಎರಡನೇ ಹಂತ, ರಾಜಗೋಪಾಲನಗರದ ಮೂಲಕ ಜಾಲಹಳ್ಳಿ ಕ್ರಾಸ್‌ಗೆ ಸಂಪರ್ಕ ಕಲ್ಪಿಸಲು ಇರುವ ಪ್ರಮುಖ ರಸ್ತೆ ಇದಾಗಿದೆ. ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ ಅದರಲ್ಲೂ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಈ ರಸ್ತೆಯೇ ಸಂಪರ್ಕ ಕೊಂಡಿ. ಈ ರಸ್ತೆ ಅಭಿವೃದ್ಧಿ ವಿಷಯ ಅಕ್ಷರಶಃ ಮರೀಚಿಕೆಯಾಗಿದೆ.

ಹೆಸರಿಗೆ ಇದು ಹೆಗ್ಗನಹಳ್ಳಿ ಮುಖ್ಯ ರಸ್ತೆ. ಆದರೆ, ಮಾಗಡಿ ರಸ್ತೆಯಿಂದ ಹೊರಟರೆ ಮುಖ್ಯ ರಸ್ತೆಯ ಯಾವ ಲಕ್ಷಣವೂ ಕಾಣಿಸುವುದಿಲ್ಲ. ಬೆಟ್ಟಗುಡ್ಡಗಳ ಕಾಡು ಹಾದಿಯಲ್ಲಿ ಸಂಚರಿಸಿದ ಅನುಭವವಾಗುತ್ತದೆ.

ಹೆಗ್ಗನಹಳ್ಳಿ ಮುಖ್ಯರಸ್ತೆಯ ದುಃಸ್ಥಿತಿ

ಮಾಗಡಿರಸ್ತೆಯಿಂದ ಹೆಗ್ಗನಹಳ್ಳಿ ಕ್ರಾಸ್‌ಗೆ ಸಂಪರ್ಕಿಸಲು ಇರುವುದು ಇದೊಂದೇ ರಸ್ತೆ. ಸೊಲ್ಲಾಪುರದಮ್ಮ ದೇವಸ್ಥಾನದ ಬಳಿಯಿಂದ ಹಾದು ಹೋಗುತ್ತಿದ್ದ ರಸ್ತೆಯೂ ಈಗ ಇಲ್ಲ. ದೇವಸ್ಥಾನಕ್ಕೆ ಸೇರಿರುವ ಜಾಗ ಅದಾಗಿದ್ದರಿಂದ ಅಲ್ಲಿ ದೇವಸ್ಥಾನ ತಲೆ ಎತ್ತುತ್ತಿದೆ. ಕಾಂಪೌಂಡ್ ಕೂಡ ನಿರ್ಮಾಣವಾಗಿದೆ. ಬಿಎಂಟಿಸಿ ಬಸ್‌ಗಳು ಸರಾಗವಾಗಿ ಸಂಚರಿಸುತ್ತಿದ್ದ ರಸ್ತೆಯಲ್ಲೀಗ ಆಟೋರಿಕ್ಷಾ ಕೂಡ ಸಂಚರಿಸುವುದು ಕಷ್ಟವಾಗಿದೆ.

ಈಗ ಉಳಿದಿರುವುದು ಈ ಖಾಸಗಿ ರಸ್ತೆಯೊಂದೇ. ಕಿರಿದಾದ ರಸ್ತೆಯಲ್ಲೇ ಎರಡು ಕಡೆಯ ವಾಹನಗಳು ಕಷ್ಟದಲ್ಲಿ ಸಂಚರಿಸಬೇಕಾಗಿದೆ. ಕೆ.ಆರ್. ಮಾರುಕಟ್ಟೆ, ಬನಶಂಕರಿ, ನಾಯಂಡಹಳ್ಳಿ, ಕೆಂಗೇರಿ ಕಡೆಯಿಂದ ಬರುವ ಎಲ್ಲಾ ಬಸ್‌ಗಳು ಇದೇ ಮಾರ್ಗದಲ್ಲಿ ಸಂಚರಿಸಬೇಕು. ಅದರ ಜತೆಗೆ ಕಾರು, ಲಾರಿ ಮತ್ತು ಬೈಕ್‌ಗಳು ಇದೇ ರಸ್ತೆಯಲ್ಲಿ ಸಾಗಬೇಕು. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಇರುವುದರಿಂದ ಖಾಸಗಿ ವಾಹನಗಳ ಸಂಚಾರವೂ ಇಲ್ಲಿ ಹೆಚ್ಚು ಇದೆ.

'ಸಮರ್ಪಕ ಭೂಪರಿಹಾರ ಸಿಗದಿರುವುದರಿಂದ ರಸ್ತೆ ಅಭಿವೃದ್ಧಿಗೆ ಖಾಸಗಿ ರಸ್ತೆಯ ಮಾಲೀಕರು ಅವಕಾಶ ನೀಡುತ್ತಿಲ್ಲ. ಸಂಪೂರ್ಣ ಹಾಳಾಗಿರುವ ರಸ್ತೆಯಲ್ಲೇ ವಾಹನಗಳು ಸರ್ಕಸ್ ಮಾಡುತ್ತಾ ಸಾಗುತ್ತಿವೆ. ಅತೀ ಕಿರಿದಾಗಿರುವ ಈ ರಸ್ತೆಯಲ್ಲಿ ದಟ್ಟಣೆ ಅವಧಿಯಲ್ಲಿ ಒಮ್ಮೊಮ್ಮೆ ಗಂಟೆಗಟ್ಟಲೆ ಬಸ್‌ಗಳು ನಿಂತಲ್ಲೇ ನಿಲ್ಲಬೇಕಾದ ಸ್ಥಿತಿ ಇದೆ. ರಸ್ತೆ ಸ್ಥಿತಿಯನ್ನು ಕಂಡು ರೋಸಿ ಹೋಗಿರುವ ಸಂಚಾರ ಪೊಲೀಸರು ಇತ್ತ ತಲೆ ಹಾಕುವುದೇ ಇಲ್ಲ. ಬಿಎಂಟಿಸಿ ನಿರ್ವಾಹಕ ಮತ್ತು ಚಾಲಕರೇ ಬಸ್ ಇಳಿದು ಸಂಚಾರ ಸಮಸ್ಯೆ ನಿಭಾಯಿಸಿ ಮುಂದೆ ಸಾಗಬೇಕಾದ ಅನಿವಾರ್ಯ ಇದೆ' ಎಂದು ಬಿಎಂಟಿಸಿ ಚಾಲಕ ಮತ್ತು ನಿರ್ವಾಹಕರು ಅಳಲು ತೋಡಿಕೊಳ್ಳುತ್ತಾರೆ.

ಹೆಗ್ಗನಹಳ್ಳಿ ಮುಖ್ಯ ರಸ್ತೆಯ ಸ್ಥಿತಿ ನೋಡಿದರೆ ಭಯವಾಗುತ್ತದೆ. ಬೆಂಗಳೂರು ನಗರದಲ್ಲಿ ಈ ರೀತಿ ರಸ್ತೆ ಇರುವುದು ಬೇಸರದ ಸಂಗತಿ. ಕೂಡಲೇ ಸರಿಪಡಿಸುವ ಕೆಲಸವನ್ನು ಬಿಬಿಎಂಪಿ ಮಾಡಬೇಕು

ಸಿದ್ದೇಶ್ವರಾಚಾರಿ, ಸ್ಥಳೀಯ ನಿವಾಸಿ

'ದಿನಕ್ಕೆ 500ಕ್ಕೂ ಹೆಚ್ಚು ಟ್ರಿಪ್‌ಗಳಲ್ಲಿ ಬಸ್‌ಗಳು ಕಾರ್ಯಾಚರಣೆ ಮಾಡುತ್ತಿವೆ. ಇಲ್ಲದ ರಸ್ತೆಯಲ್ಲಿ ಒಲ್ಲದ ಮನಸಿನಿಂದ ಸಂಚಾರ ಮಾಡಬೇಕಾದ ಸ್ಥಿತಿ ಇದೆ. ಈ ರಸ್ತೆಗೆ ಇಳಿದಿದ್ದ ಮೂರು ಎಲೆಕ್ಟ್ರಿಕ್ ಬಸ್‌ಗಳು ಹಾಳಾಗಿವೆ. ಬಸ್‌ಗಳನ್ನು ಈ ರಸ್ತೆಯಲ್ಲಿ ಓಡಿಸುವಾಗ ಕಣ್ಣೀರು ಬರುತ್ತದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಭೂವ್ಯಾಜ್ಯ ಇದ್ದರೆ ಸರಿಪಡಿಸಲು ಬಿಬಿಎಂಪಿ ಕೂಡಲೇ ಕ್ರಮ ಕೈಗೊಳ್ಳಬೇಕು. ವ್ಯಾಜ್ಯ ಏನೇ ಇರಲಿ ಸಾರ್ವಜನಿಕರಿಗೆ ಅದು ಬೇಕಿಲ್ಲ, ಬೇಕಿರುವುದು ರಸ್ತೆ ಅಷ್ಟೇ. ಅದನ್ನು ಕಲ್ಪಿಸಿಕೊಡುವ ಕೆಲಸವನ್ನು ಬಿಬಿಎಂಪಿ ಮಾಡಬೇಕು' ಎಂಬುದು ವಾಹನ ಸವಾರರ ಆಗ್ರಹ.

ಹೆಗ್ಗನಹಳ್ಳಿ ಮುಖ್ಯ ರಸ್ತೆಯ ಸ್ಥಿತಿ ಬಗ್ಗೆ ಪ್ರಶ್ನಿಸಿದರೆ ಬಿಬಿಎಂಪಿ ಅಧಿಕಾರಿಗಳ ಬಳಿ ಉತ್ತರವೇ ಇಲ್ಲ. 'ಸಮಸ್ಯೆ ಬಗ್ಗೆ ಅರಿವಿದೆ, ಸರಿಪಡಿಸಲು ದಾರಿಗಳು ಕಾಣಿಸುತ್ತಿಲ್ಲ' ಎಂದು ಪಾಲಿಕೆ ಎಂಜಿನಿಯರ್‌ಗಳು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

'ಸಂಚಾರ ಯೋಗ್ಯ ರಸ್ತೆಯಾಗಿಸಲು ಪ್ರಯತ್ನ'

ರಸ್ತೆಗೆ ಜಾಗವೇ ಇರಲಿಲ್ಲ. 15–20 ವರ್ಷಗಳಿಂದ ಇರುವ ಸಮಸ್ಯೆಯನ್ನು ಸರಿಪಡಿಸುವ ಪ್ರಯತ್ನ ಮಾಡಿದ್ದೇನೆ. ಜಾಗದ ಮಾಲೀಕರ ಜತೆ ಮಾತನಾಡಿ ವಾಹನ ಸಂಚಾರಕ್ಕೆ ಅನುವು ಮಾಡಿಸಿದ್ದೇನೆ. ಸೂಕ್ತ ಪರಿಹಾರ ಕೊಟ್ಟರೆ ಜಮೀನು ಬಿಟ್ಟುಕೊಡಲು ಅವರು ಸಿದ್ಧರಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಪರಿಹಾರ ಕೊಡಿಸಲು ಸಿದ್ಧತೆ ನಡೆಸಿದ್ದೆವು. ಸರ್ಕಾರ ಬದಲಾದ ಬಳಿಕ ಸಾಧ್ಯವಾಗಿಲ್ಲ. ಇರುವಷ್ಟೇ ರಸ್ತೆಯನ್ನು ವಾಹನ ಸಂಚಾರ ಯೋಗ್ಯ ಮಾಡುವ ಪ್ರಯತ್ನ ನಡೆಸಿದ್ದೇವೆ. ಸರ್ಕಾರದ ಹಣದಲ್ಲಿ ರಸ್ತೆ ಅಭಿವೃದ್ಧಿಯಾದರೆ ಪರಿಹಾರ ಪಡೆಯುವುದು ಕಷ್ಟ ಎಂಬ ಕಾರಣಕ್ಕೆ ಮಾಲೀಕರು ಒಪ್ಪುತ್ತಿಲ್ಲ. ನನ್ನ ಸ್ವಂತ ಹಣದಲ್ಲಿ ವೆಟ್‌ಮಿಕ್ಸ್ ಹಾಕಿ ಸ್ವಲ್ಪ ದುರಸ್ತಿ ಪಡಿಸಲು ಅವಕಾಶ ಕೊಡಿ ಎಂದು ಜಮೀನಿನ ಮಾಲೀಕರನ್ನು ಒಪ್ಪಿಸಿದ್ದೇನೆ. ಶೀಘ್ರವೇ ವಾಹನ ಸಂಚಾರ ಯೋಗ್ಯ ರಸ್ತೆಯನ್ನಾಗಿ ಮಾಡಲಾಗುವುದು.

ಆರ್.ಮಂಜುನಾಥ್, ದಾಸರಹಳ್ಳಿ ಶಾಸಕ

ಸುದ್ದಿ 2 ನಿಮಿಷ

ಲಂಚ: ಬೆಸ್ಕಾಂ ಎಇಇ ಬಂಧನ

ಬೆಂಗಳೂರು: ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ಅಪಾರ್ಟ್‌ಮೆಂಟ್‌ಗೆ ನೀಡಿದ್ದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದೇ ಇರಲು ₹ 5 ಲಕ್ಷ ಲಂಚ ಪಡೆಯುತ್ತಿದ್ದ ಬೆಸ್ಕಾಂ ಇ–9 ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್(ಎಇಇ) ಸುಂದರೇಶ್ ನಾಯ್ಕ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಗುರುವಾರ ಬಂಧಿಸಿದೆ.

ನಗರದ ಚೆಲ್ಲಿಕೆರೆ ನಿವಾಸಿಯೊಬ್ಬರು ಟೆಲಿಕಾಂ ಬಡಾವಣೆಯಲ್ಲಿ ಅಪಾರ್ಟ್‌ಮೆಂಟ್ ಒಂದನ್ನು ನಿರ್ಮಿಸಿದ್ದರು. ಕಟ್ಟಡ ನಿರ್ಮಾಣದಲ್ಲಿ ನಿಯಮ ಉಲ್ಲಂಘಿಸಿರುವುದು ಪರಿಶೀಲನೆಯಲ್ಲಿ ಪತ್ತೆಯಾಗಿತ್ತು. ಈ ಕಟ್ಟಡಕ್ಕೆ ಈಗಾಗಲೇ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ವಿದ್ಯುತ್ ಸಂಪರ್ಕ ಕಡಿತಗೊಳಿಸದೇ ಇರಲು ₹ 9 ಲಕ್ಷ ಲಂಚ ನೀಡುವಂತೆ ಎಇಇ ಬೇಡಿಕೆ ಇಟ್ಟಿದ್ದರು. ನಂತರ ಇಬ್ಬರ ನಡುವೆ ಮಾತುಕತೆ ನಡೆದಿತ್ತು. ₹ 5 ಲಕ್ಷ ನೀಡಿದರೆ ವಿದ್ಯುತ್ ಸಂಪರ್ಕ ಮುಂದುವರಿಸಲು ಎಇಇ ಒಪ್ಪಿಕೊಂಡಿದ್ದರು. ಈ ಕುರಿತು ಕಟ್ಟಡದ ಮಾಲೀಕರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಗುರುವಾರ ₹ 5 ಲಕ್ಷ ಲಂಚ ಪಡೆಯುವಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳ ತಂಡ ಸುಂದರೇಶ್ ನಾಯ್ಕ್ ಅವರನ್ನು ಬಂಧಿಸಿದೆ.

ಬೆಂಕಿ ಅವಘಡ: ಮಹಿಳೆ ಸಾವು

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಅವಘಡ ಸಂಭವಿಸಿದ್ದು, ಪರಮೇಶ್ವರಿ (42) ಎಂಬುವವರು ಮೃತಪಟ್ಟಿದ್ದಾರೆ.

'ಬುಧವಾರ ಸಂಜೆ ಬೆಂಕಿ ಅವಘಡ ಸಂಭವಿಸಿದೆ. ಸೌಭಾಗ್ಯ, ಶರವಣ, ಪರಮಶಿವ, ಭುವನೇಶ್ವರಿ, ಮಾಲಾ ಎಂಬುವವರು ಗಾಯಗೊಂಡಿದ್ದಾರೆ. ಅವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬುಧವಾರ ಪರಮೇಶ್ವರಿ ಅವರ ತಂದೆ ಕಾಶಿನಾಥ್ ಅವರ 6ನೇ ವರ್ಷದ ತಿಥಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅದಕ್ಕೆ ಬೇಕಾದ ಅಡುಗೆ ಸಿದ್ಧಪಡಿಸುವ ಕೆಲಸದಲ್ಲಿ ಪರಮೇಶ್ವರಿ ಹಾಗೂ ಇತರರು ನಿರತರಾಗಿದ್ದರು. ಚಿಕ್ಕದಾಗಿದ್ದ ಅಡುಗೆ ಕೋಣೆಯಲ್ಲಿ ಸಂಜೆ ವೇಳೆ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿತ್ತು. ಅದರ ಕೆನ್ನಾಲಗೆ ಕ್ರಮೇಣ ಹೆಚ್ಚಾಗಿ, ಕೋಣೆಯಲ್ಲಿದ್ದ ವಸ್ತುಗಳಿಗೆಲ್ಲ ವ್ಯಾಪಿಸಿತ್ತು' ಎಂದರು.

'ಬೆಂಕಿಯ ತೀವ್ರತೆ ಹೆಚ್ಚಿತ್ತು. ಸ್ಥಳೀಯರು ಸಹಾಯಕ್ಕೆ ಬಂದಿದ್ದರು. ತೀವ್ರ ಗಾಯಗೊಂಡಿದ್ದ ಪರಮೇಶ್ವರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಾಳುಗಳನ್ನು ಸ್ಥಳೀಯರು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದ್ದರು. ಅವಘಡದ ಬಗ್ಗೆ ಗಾಯಾಳುಗಳಿಂದ ಹೇಳಿಕೆ ಪಡೆಯಲಾಗಿದೆ. ಅವರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದೂ ಹೇಳಿದರು.

ಆಂಧ್ರದಲ್ಲಿ ಪತ್ತೆಯಾಗಿದ್ದ ಮೃತದೇಹ

ಸಂಬಂಧಿ ಹತ್ಯೆ: ಏಳು ವರ್ಷಗಳ ಬಳಿಕ ಸಿಕ್ಕಿಬಿದ್ದ ದಂಪತಿ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಗೌಸ್

ಹೀನಾ ಕೌಸರ್

ಬೆಂಗಳೂರು: ತಮ್ಮ ಸಾಲ ತೀರಿಸಲು ಆರ್ಥಿಕ ಸಹಾಯ ಮಾಡಿದ್ದ ಸಂಬಂಧಿಯನ್ನೇ ಹತ್ಯೆ ಮಾಡಿ ಪರಾರಿಯಾಗಿದ್ದ ದಂಪತಿ, ಏಳು ವರ್ಷಗಳ ಬಳಿಕ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ 2015ರಲ್ಲಿ ವಜೀರ್ ಪಾಷಾ ಎಂಬುವರ ಕೊಲೆ ಆಗಿತ್ತು. ಈ ಸಂಬಂಧ ಆರೋಪಿಗಳಾದ ಮೊಹಮ್ಮದ್ ಗೌಸ್ ಹಾಗೂ ಆತನ ಪತ್ನಿ ಹೀನಾ ಕೌಸರ್ ಅವರನ್ನು ಇತ್ತೀಚೆಗೆ ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಂಧ್ರಪ್ರದೇಶದ ದಂಪತಿ, ಕೆಲಸ ಹುಡುಕಿಕೊಂಡು 2012ರಲ್ಲಿ ಬೆಂಗಳೂರಿಗೆ ಬಂದಿದ್ದರು. ಹೆಗ್ಗನಹಳ್ಳಿಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಆರೋಪಿ ಗೌಸ್, ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಆದರೆ, ದುಡಿಮೆ ಕಡಿಮೆ ಇತ್ತು. ಜೀವನ ನಿರ್ವಹಣೆ ಕಷ್ಟವಾಗಿತ್ತು. ಹೀಗಾಗಿ, ದಂಪತಿ ಹಲವರ ಬಳಿ ಸಾಲ ಮಾಡಿಕೊಂಡಿದ್ದರು.'

'ಗಡುವಿನೊಳಗೆ ಸಾಲ ಮರುಪಾವತಿ ಮಾಡಿರಲಿಲ್ಲ. ಹೀಗಾಗಿ, ಸಾಲಗಾರರ ಮನೆ ಬಳಿ ಬಂದು ಗಲಾಟೆ ಮಾಡಲಾರಂಭಿಸಿದ್ದರು. ಇದೇ ವೇಳೆ ಸಂಬಂಧಿಯೂ ಆದ ಸ್ಥಳೀಯ ನಿವಾಸಿ ವಜೀರ್ ಪಾಷಾ, ದಂಪತಿಗೆ ಆರ್ಥಿಕ ಸಹಾಯ ಮಾಡಿದ್ದರು. ಇದರಿಂದಾಗಿ ದಂಪತಿ, ಸಾಲಮುಕ್ತರಾಗಿದ್ದರು' ಎಂದೂ ಅಧಿಕಾರಿ ತಿಳಿಸಿದರು.

ಹೀನಾ ಕೌಸರ್ ಜೊತೆ ಸಲುಗೆ: 'ಆರ್ಥಿಕ ಸಹಾಯ ಮಾಡಿದ ಕಾರಣಕ್ಕೆ ವಜೀರ್ ಪಾಷಾ, ದಂಪತಿಯ ಮನೆಗೆ ಆಗಾಗ ಬಂದು ಹೋಗಲಾರಂಭಿಸಿದ್ದ. ಇದೇ ವೇಳೆಯೇ ಹೀನಾ ಕೌಸರ್ ಜೊತೆ ಸಲುಗೆ ಇಟ್ಟುಕೊಂಡಿದ್ದ. ಅವರಿಬ್ಬರು ಆಗಾಗ ಖಾಸಗಿ ಕ್ಷಣಗಳನ್ನು ಕಳೆಯುತ್ತಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ವಜೀರ್ ಪಾಷಾ ಹಾಗೂ ಕೌಸರ್ ನಡುವಿನ ಸಲುಗೆ ವಿಷಯ ಮೊಹಮ್ಮದ್ ಗೌಸ್‌ಗೆ ಗೊತ್ತಾಗಿತ್ತು. ಆತ ಇಬ್ಬರಿಗೂ ಎಚ್ಚರಿಕೆ ನೀಡಿದ್ದ. ಅಂದಿನಿಂದ ವಜೀರ್ ಪಾಷಾ ಹಾಗೂ ಗೌಸ್ ನಡುವೆ ವೈಷಮ್ಯ ಬೆಳೆದಿತ್ತು. 'ಸಾಲ ತೀರಿಸಿದ್ದೇನೆಂದು ಹೇಳಿಕೊಂಡು ವಜೀರ್ ನನಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ' ಎಂಬುದಾಗಿ ಪತಿಗೆ ಹೀನಾ ಕೌಸರ್ ತಿಳಿಸಿದ್ದಳು.'

'ತನ್ನ ಮನೆಗೆ ಬಾರದಂತೆ ವಜೀರ್‌ಗೆ ಗೌಸ್ ತಾಕೀತು ಮಾಡಿದ್ದ. ಹಣವನ್ನು ವಾಪಸು ಕೊಡುವಂತೆ ವಜೀರ್ ಪಟ್ಟು ಹಿಡಿದಿದ್ದರು. ಇದೇ ಕಾರಣಕ್ಕೆ ದಂಪತಿ, ವಜೀರ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು' ಎಂದರು.

ಬೆತ್ತಲೆ ಆಗಿದ್ದಾಗ ಕೊಲೆ: 'ವಜೀರ್‌ಗೆ ಕರೆ ಮಾಡಿದ್ದ ಹೀನಾ, ಸಲುಗೆಯಿಂದ ಮಾತನಾಡಿ ಮನೆಗೆ ಕರೆಸಿಕೊಂಡಿದ್ದಳು. ಮನೆಯ ಕೊಠಡಿಯಲ್ಲಿ ಬೆತ್ತಲೆಯಾಗಿದ್ದ ವಜೀರ್, ಕೌಸರ್ ಜೊತೆ ಖಾಸಗಿ ಕ್ಷಣ ಕಳೆಯುತ್ತಿದ್ದರು' ಎಂದು ಹೇಳಿದರು.

'ಕೊಠಡಿಗೆ ನುಗ್ಗಿದ್ದ ಗೌಸ್, ಪತ್ನಿ ಜೊತೆ ಸೇರಿ ವಜೀರ್ ಕುತ್ತಿಗೆಗೆ ಸೀರೆ ಸುತ್ತಿ ಉಸಿರುಗಟ್ಟಿಸಿ ಕೊಂದಿದ್ದ. ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿದ್ದ ದಂಪತಿ, ವಾಹನವೊಂದರಲ್ಲಿ ಆಂಧ್ರಪ್ರದೇಶಕ್ಕೆ ಹೋಗಿದ್ದರು. ಅಲ್ಲಿಯೇ ಕಾಲುವೆಯಲ್ಲಿ ಮೃತದೇಹ ಎಸೆದಿದ್ದರು. ನಂತರ, ಅನಂತಪುರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದರು. ಕೆಲದಿನಗಳ ನಂತರ ಕೊಳೆತ ಸ್ಥಿತಿಯಲ್ಲಿ ಮೃತದೇಹ ಸಿಕ್ಕಿತ್ತು. ಗುರುತು ಸಿಗದ ಮೃತದೇಹವೆಂದು ಆಂಧ್ರ ಪೊಲೀಸರು, ನ್ಯಾಯಾಲಯಕ್ಕೆ ವರದಿ ಸಹ ಸಲ್ಲಿಸಿದ್ದರು' ಎಂದೂ ಪೊಲೀಸ್ ಅಧಿಕಾರಿ ವಿವರಿಸಿದರು.

ಕೊಲೆ ಯತ್ನ: ವಜಾಗೊಂಡಿದ್ದ ಕಾನ್‌ಸ್ಟೆಬಲ್‌ಗೆ ಶಿಕ್ಷೆ

ಬೆಂಗಳೂರು: ಯುವತಿಯೊಬ್ಬರ ಕೊಲೆಗೆ ಯತ್ನಿಸಿದ ಪ್ರಕರಣದ ಅಪರಾಧಿ ಅನಿಲ್‌ಕುಮಾರ್ ಅಲಿಯಾಸ್ ರಾಹುಲ್ ಎಂಬಾತನಿಗೆ 5 ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

'ಕುಶಾಲನಗರದ ಅನಿಲ್ ಕುಮಾರ್, ಪೊಲೀಸ್ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದ. ಕರ್ತವ್ಯಲೋಪ ಎಸಗಿದ್ದಕ್ಕಾಗಿ ಆತನನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ನಂತರ, ಆತ ಕ್ಯಾಬ್ ಚಲಾಯಿಸಲಾರಂಭಿಸಿದ್ದ' ಎಂದು ಪೊಲೀಸರು ಹೇಳಿದರು.

'ವಿವಾಹಿತನಾದ ಆತ, 2008ರಲ್ಲಿ ಯುವತಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ. ಮದುವೆಯಾಗುವಂತೆ ಪೀಡಿಸುತ್ತಿದ್ದ. ಅದಕ್ಕೆ ಯುವತಿ ಒಪ್ಪಿರಲಿಲ್ಲ. ಅದರಿಂದ ಸಿಟ್ಟಾದ ಅನಿಲ್‌ಕುಮಾರ್, 2011ರ ನವೆಂಬರ್ 20ರಂದು ಯುವತಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದ. ತಡೆಯಲು ಬಂದ ವ್ಯಕ್ತಿಯೊಬ್ಬರ ಮೇಲೂ ಹಲ್ಲೆ ಮಾಡಿದ್ದ. ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದೂ ತಿಳಿಸಿದರು.

ಡ್ರಗ್ಸ್ ಮಾರಾಟ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಶಾಮೀರ್ ಹಾಗೂ ಸಾಹೀರ್ ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ 52 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಆರೋಪಿ ಶಾಮೀರ್, ಡ್ರಗ್ಸ್ ಪ್ರಕರಣವೊಂದರಲ್ಲಿ 2019ರಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಒಂದು ವರ್ಷ ಜೈಲಿನಲ್ಲಿದ್ದ ಆತ, ಹೊರಗೆ ಬಂದು ಪುನಃ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಆತನಿಗೆ ಸಾಹೀರ್ ಸಹಾಯ ಮಾಡುತ್ತಿದ್ದ.'

'ಎಚ್‌ಎಎಲ್ ಬಳಿ ವಾಸವಿದ್ದ ಆರೋಪಿಗಳು, ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು. ಕೇರಳ ಹಾಗೂ ಬೆಂಗಳೂರಿನಲ್ಲಿ ಡ್ರಗ್ಸ್ ಮಾರುತ್ತಿದ್ದರು' ಎಂದೂ ತಿಳಿಸಿವೆ.

ಗಾಂಜಾ ಸೇವನೆಗೆ ಪ್ರಚೋದನೆ: ದೂರು

ಬೆಂಗಳೂರು: 'ಗಾಂಜಾ ಸೇದುವಂತೆ ರಾಷ್ಟ್ರ ರಕ್ಷಣಾ ಪಡೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಪ್ರಚೋದನೆ ನೀಡಿದ್ದಾರೆ' ಎಂದು ಆರೋಪಿಸಿ ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್ ಅವರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಗುರುವಾರ ದೂರು ನೀಡಿದ್ದಾರೆ.

ವಿಡಿಯೊ ಸಮೇತ ದೂರು ನೀಡಿರುವ ರಮೇಶ್, 'ಆರೋಗ್ಯಕ್ಕೆ ಮಾರಕವಾಗಿರುವ ಡ್ರಗ್ಸ್ ವಿರುದ್ಧ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇದರ ನಡುವೆಯೇ ಪುನೀತ್ ಕೆರೆಹಳ್ಳಿ ಯುವಕರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹರಿಬಿಟ್ಟಿರುವ ಪುನೀತ್, 'ಭಂಗಿ ಸೇದುವುದು, ಗಾಂಜಾ ಸೇವಿಸುವುದು, ರಾಮನಾಮ ಜಪಿಸುವುದು, ಓಂ ನಮಃ ಶಿವಾಯ ಪಠಿಸುವುದು, ಭಜನೆ ಮಾಡುವುದು ಈ ದೇಶದ ಧಾರ್ಮಿಕ ನಂಬಿಕೆ ಹಾಗೂ ಆಚರಣೆ. ಹಿಂದೂಗಳು ಇಂಥ ನಂಬಿಕೆ ಹಾಗೂ ಆಚರಣೆಗಳನ್ನೂ ಎಂದಿಗೂ ಬಿಟ್ಟು ಕೊಡಬೇಡಿ. ಸಂವಿಧಾನವೇ ನಮಗೆ ಧಾರ್ಮಿಕ ಹಕ್ಕು ನೀಡಿದೆ. ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂದಿದ್ದಾರೆ. ಈ ವಿಡಿಯೊ ಹಲವೆಡೆ ಹರಿದಾಡುತ್ತಿದೆ' ಎಂದೂ ರಮೇಶ್ ಹೇಳಿದ್ದಾರೆ.

ಪೊಲೀಸ್ ಕಮಿಷನರ್ ಕಚೇರಿ ಮೂಲಗಳು, 'ಪಿ.ಆರ್. ರಮೇಶ್ ನೀಡಿರುವ ದೂರನ್ನು ಸಂಬಂಧಪಟ್ಟ ವಿಭಾಗದ ಅಧಿಕಾರಿಗಳಿಗೆ ವರ್ಗಾಯಿಸಲಾಗಿದೆ. ಅವರೇ ಕ್ರಮ ಜರುಗಿಸಲಿದ್ದಾರೆ' ಎಂದೂ ತಿಳಿಸಿದ್ದಾರೆ.

ದರೋಡೆಗೆ ಸಂಚು; ರೌಡಿ ಸಹಚರರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ದರೋಡೆ ಮಾಡಲು ಸಂಚು ರೂಪಿಸಿದ್ದ ರೌಡಿಗಳ ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ಗುಂಪು ಸೇರಿದ್ದ ಆರೋಪಿಗಳು, ಸಾರ್ವಜನಿಕರನ್ನು ದರೋಡೆ ಮಾಡಲು ಸಜ್ಜಾಗಿದ್ದರು. ಮಾಹಿತಿ ಸಿಗುತ್ತಿದ್ದಂತೆ ದಾಳಿ ಮಾಡಿ, ನಾಲ್ವರು ಆರೋಪಿಗಳನ್ನು ಬಂಧಿಸಲಾಯಿತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳು, ರೌಡಿಗಳಾದ ಕೆಂಬತ್ತಹಳ್ಳಿ ಪರಮೇಶ್ ಹಾಗೂ ಬೊಂಡ ಮಂಜನ ಸಹಚರರು. ಅವರೆಲ್ಲರೂ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು' ಎಂದೂ ತಿಳಿಸಿದರು.

1. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 'ರಾಜ್ಯ ಅತಿಥಿ ಉಪನ್ಯಾಸಕರ ಒಕ್ಕೂಟ' ಹಮ್ಮಿಕೊಂಡಿರುವ ಧರಣಿ ಗುರುವಾರ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ. 2. ನಗರದ ಆನಂದರಾವ್ ವೃತ್ತ ಬಳಿಯ ಗಾಂಧಿ ಪ್ರತಿಮೆ ಎದುರು ಆಪ್ ನೇತೃತ್ವದಲ್ಲಿ ಆಟೊ ಚಾಲಕರು ಗುರುವಾರ ಪ್ರತಿಭಟನೆ ನಡೆಸಿದರು.3. ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬಹುಜನ ಸಮಾಜ ಪಾರ್ಟಿ ಸದಸ್ಯರು ಗುರುವಾರ ಪ್ರತಿಭಟನೆ ನಡೆಸಿದರು–ಪ್ರಜಾವಾಣಿ ಚಿತ್ರಗಳು

ಅಧಿವೇಶನ: ನಗರದಲ್ಲಿ ಸಾಲು ಸಾಲು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲ ಅಧಿವೇಶನ ಆರಂಭವಾದ ದಿನದಿಂದ ನಗರದಲ್ಲಿ ಪ್ರತಿಭಟನೆಗಳು ಹಾಗೂ ಉಪವಾಸ ಸತ್ಯಾಗ್ರಹಗಳು ನಡೆಯುತ್ತಿವೆ. ಸ್ವಾತಂತ್ರ್ಯ ಉದ್ಯಾನ, ಗಾಂಧಿ ಪ್ರತಿಮೆ ವೃತ್ತ ಹಾಗೂ ಸುತ್ತಮುತ್ತ ಸೇರುತ್ತಿರುವ ವಿವಿಧ ಸಂಘಟನೆ ಸದಸ್ಯರು, ತಮ್ಮ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟಿಸುತ್ತಿದ್ದಾರೆ.

ಅತಿಥಿ ಉಪನ್ಯಾಸಕರ ಒಕ್ಕೂಟ: 'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಿ, ಸೇವಾ ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸಿ 'ರಾಜ್ಯ ಅತಿಥಿ ಉಪನ್ಯಾಸಕರ ಒಕ್ಕೂಟ' ನೇತೃತ್ವದಲ್ಲಿ ಉಪನ್ಯಾಸಕರು ಪ್ರತಿಭಟನೆ ನಡೆಸುತ್ತಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆ.14ರಿಂದ ಆರಂಭವಾಗಿರುವ ಪ್ರತಿಭಟನೆ ಗುರುವಾರ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ. ಬೆಂಗಳೂರು, ಮೈಸೂರು, ವಿಜಯನಗರ, ಹಾವೇರಿ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ರಾಮನಗರ ಸೇರಿದಂತೆ ವಿವಿಧ ಜಿಲ್ಲೆಗಳ ಅತಿಥಿ ಉಪನ್ಯಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

'2021–22ರ ಅಧಿಸೂಚನೆ ಪ್ರಕಾರ ಆಯ್ಕೆಯಾಗಿದ್ದ 3 ಸಾವಿರ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡಿದ್ದು, ಅವರನ್ನು ಮುಂದುವರಿಸಬೇಕು. ಬೇರೆ ರಾಜ್ಯಗಳ ರೀತಿಯಲ್ಲಿ ನಿಯಮಾವಳಿ ರೂಪಿಸಿ ಅತಿಥಿ ಉಪನ್ಯಸಕರಿಗೆ ಸೇವಾ ಭದ್ರತೆ ಒದಗಿಸಬೇಕು. ಒಂದು ಗಂಟೆ ಬೋಧನೆಗೆ ಕನಿಷ್ಠ ₹1,500 ಗೌರವ ಧನ ನಿಗದಿ ಮಾಡಬೇಕು. ಕೃಪಾಂಕ ಹಾಗೂ ಸೇವಾ ಹಿರಿತನದ ಆಧಾರದಲ್ಲಿ ಮೀಸಲಾತಿ ನೀಡಬೇಕು' ಎಂದು ಅತಿಥಿ ಉಪನ್ಯಾಸಕರು ಆಗ್ರಹಿಸುತ್ತಿದ್ದಾರೆ.

ಕನ್ನಡ ಶಾಲೆ ಉಳಿಸಿ ಅಭಿಯಾನ: '1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲಾ–ಕಾಲೇಜುಗಳನ್ನೂ ವೇತನಾನುದಾನಕ್ಕೆ ಒಳಪಡಿಸಬೇಕು' ಎಂದು ಒತ್ತಾಯಿಸಿ 'ರಾಜ್ಯ ಅನುದಾನರಹಿತ ಶಾಲಾ–ಕಾಲೇಜು ಆಡಳಿತ ಮಂಡಳಿ ಮತ್ತು ನೌಕರರ ಒಕ್ಕೂಟ' ಪದಾಧಿಕಾರಿಗಳು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

'ನಮ್ಮ ಕನ್ನಡ ಶಾಲೆ ಉಳಿಸಿ' ಅಭಿಯಾನದಡಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಮುಂದುವರಿಸಿದ್ದಾರೆ.

'ಪ್ರತಿಯೊಬ್ಬ ಮಗುವಿಗೂ ಮಾತೃಭಾಷೆಯಲ್ಲಿ ಶಿಕ್ಷಣ ಸಿಗಬೇಕು. ಈ ನಿಟ್ಟಿನಲ್ಲಿ ರಾಜ್ಯದಾದ್ಯಂತ ಕನ್ನಡ ಮಾಧ್ಯಮ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಇಂಥ ಶಾಲೆಗಳ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದ್ದು, ಇದರ ವಿರುದ್ಧ ಹಲವು ದಿನಗಳಿಂದ ಹೋರಾಟ ನಡೆಸಲಾಗುತ್ತಿದೆ' ಎಂದು ಒಕ್ಕೂಟದ ಪದಾಧಿಕಾರಿಗಳು ಹೇಳಿದರು.

'1995ರ ನಂತರ ರಾಜ್ಯದಲ್ಲಿ ನೂರಾರು ಕನ್ನಡ ಮಾಧ್ಯಮ ಶಾಲಾ–ಕಾಲೇಜುಗಳು ಆರಂಭವಾಗಿವೆ. ಮಠಗಳು ಹಾಗೂ ಖಾಸಗಿ ಸಂಸ್ಥೆಗಳು ಶಾಲೆಗಳನ್ನು ನಡೆಸಿ, ಕನ್ನಡವನ್ನು ಉಳಿಸುತ್ತಿವೆ. ಇಂಥ ಶಾಲಾ–ಕಾಲೇಜುಗಳನ್ನು ಸರ್ಕಾರ ವೇತನಾನುದಾನಕ್ಕೆ ಒಳಪಡಿಸಬೇಕು' ಎಂದೂ ಅವರು ಒತ್ತಾಯಿಸಿದರು.

ವಾಲ್ಮೀಕಿ ಶ್ರೀ ಧರಣಿ ಎಂಟನೇ ದಿನಕ್ಕೆ: 'ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸಬೇಕು. ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಗುರುವಾರ ಎಂಟನೇ ದಿನ ಪೂರೈಸಿದೆ.

ಬಿಎಸ್‌ಪಿ ಪ್ರತಿಭಟನೆ: 'ರಾಜ್ಯದ ವಿವಿಧೆಡೆ ಸರ್ಕಾರಿ ಜಮೀನಿನಲ್ಲಿ ಸುಮಾರು 50 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಕುಟುಂಬಗಳಿಗೆ, ಸಾಗುವಳಿ ಚೀಟಿ ನೀಡಬೇಕು' ಎಂದು ಒತ್ತಾಯಿಸಿ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಸದಸ್ಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಆಪ್ ನೇತೃತ್ವದಲ್ಲಿ ಚಾಲಕರ ಪ್ರತಿಭಟನೆ: 'ರಾಜ್ಯದಲ್ಲಿ ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿರುವ 'ರ್‍ಯಾಪಿಡೊ' ಹಾಗೂ 'ಪೋರ್ಟರ್' ಆ್ಯಪ್‌ಗಳನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿ ಆಮ್ ಆದ್ಮಿ ಪಾರ್ಟಿ (ಆಪ್) ನೇತೃತ್ವದಲ್ಲಿ ಆಟೊ ಚಾಲಕರು ನಗರದ ಗಾಂಧಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ನಾಯಕ ಸಮುದಾಯದ ಸಮಾನ ಮನಸ್ಕರು ನಗರದಲ್ಲಿ ಗುರುವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರತಿಭಟನಾ ಮೆರವಣಿಗೆ

ಬೆಂಗಳೂರು: 'ಪರಿಶಿಷ್ಟ ಪಂಗಡಕ್ಕೆ ಶೇ 7.5ರಷ್ಟು ಮೀಸಲಾತಿ ಜಾರಿಗೊಳಿಸಬೇಕು' ಎಂದು ಆಗ್ರಹಿಸಿ ನಾಯಕ ಸಮುದಾಯದ ಸಮಾನ ಮನಸ್ಕರು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ಸಾಗಿತು. ವಿಧಾನಸೌಧದತ್ತ ತೆರಳಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಉದ್ಯಾನದಲ್ಲಿ ಪ್ರತಿಭಟನಕಾರರು ಬಹಿರಂಗ ಸಭೆ ನಡೆಸಿದರು.

'ನ್ಯಾ.ನಾಗಮೋಹನದಾಸ್ ವರದಿ ಜಾರಿಗೊಳಿಸುವುದಾಗಿ ಹೇಳಿದ್ದ ರಾಜ್ಯ ಸರ್ಕಾರ, ಕೊಟ್ಟ ಮಾತು ತಪ್ಪಿದೆ' ಎಂದು ಆಕ್ರೋಶ ಹೊರಹಾಕಿದರು.

'ಆದಿ ಕವಿ ವಾಲ್ಮೀಕಿ ಪರಿಶಿಷ್ಟ ಪಂಗಡಕ್ಕ ಸೇರಿದವರು. ವಾಲ್ಮೀಕಿ ರಾಮಾಯಣದಲ್ಲಿ ಸೃಷ್ಟಿಸಿದ ರಾಮನನ್ನು ಇಡೀ ಜಗತ್ತು ಪೂಜಿಸುತ್ತಿದೆ. ಆದರೆ, ರಾಮನನ್ನು ಜಗತ್ತಿಗೆ ಪರಿಚಯಿಸಿದ ಮಹರ್ಷಿ ವಾಲ್ಮೀಕಿಯನ್ನೇ ಕಡೆಗಣಿಸಲಾಗುತ್ತಿದೆ. ಅಯೋಧ್ಯೆ ರಾಮಮಂದಿರದ ಎದುರು ವಾಲ್ಮೀಕಿ ಬೃಹತ್ ಪ್ರತಿಮೆ ನಿರ್ಮಿಸಬೇಕು' ಎಂದೂ ಪ್ರತಿಭಟನಕಾರರು ಒತ್ತಾಯಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ ಅವರು ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಿದರು. ಕಾಂಗ್ರೆಸ್ ಮುಖಂಡರಾದ ಆರ್.ಎಂ. ಶ್ರೀನಿವಾಸ್, ಸಾಂಬಶಿವರೆಡ್ಡಿ, ಬಿ.ಎಸ್.ಗೋಪಾಲಕೃಷ್ಣ, ಮಲ್ಯಾದ್ರಿ, ವಿಜಯಕುಮಾರಿ, ಬೇಬಿರಾಣಿ, ಅಶ್ವಥನಾರಾಯಣ, ಪಟೇಲ್ ಪಿಳ್ಳೇಗೌಡ, ಸುರೇಶ್ ಇದ್ದರು.

400 ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ರಾಮಚಂದ್ರಪುರ ಮತ್ತು ದೊಡ್ಡಬೊಮ್ಮಸಂದ್ರ ಸರ್ಕಾರಿ ಶಾಲೆಗಳ 400 ಮಕ್ಕಳಿಗೆ ಸ್ಥಳೀಯ ಕಾಂಗ್ರೆಸ್ ಮುಖಂಡರ ವತಿಯಿಂದ ಉಚಿತವಾಗಿ ನೋಟ್ ಪುಸ್ತಕ ಮತ್ತು ಲೇಖನಿ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, 'ಸರ್ಕಾರಿ ಶಾಲೆಗಳಲ್ಲಿ ಬಡಮಕ್ಕಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಾರೆ. ಉಚಿತವಾಗಿ ನೋಟ್ ಪುಸ್ತಕ ನೀಡುವ ಮೂಲಕ ಇಂತಹ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಕಾರ್ಯ' ಎಂದರು.

ರಾಮಚಂದ್ರಪುರ ಸರ್ಕಾರಿ ಶಾಲೆಯ 250 ಮಕ್ಕಳಿಗೆ ಮ್ಯಾಟ್ ವಿತರಿಸಲಾಯಿತು. ಕಾಂಗ್ರೆಸ್ ಮುಖಂಡರಾದ ಆರ್.ಎಂ.ಶ್ರೀನಿವಾಸ್, ಸಾಂಬಶಿವರೆಡ್ಡಿ, ಬಿ.ಎಸ್.ಗೋಪಾಲಕೃಷ್ಣ, ಮಲ್ಯಾದ್ರಿ, ವಿಜಯಕುಮಾರಿ, ಬೇಬಿರಾಣಿ, ಅಶ್ವತ್ಥನಾರಾಯಣ, ಪಟೇಲ್ ಪಿಳ್ಳೇಗೌಡ, ಸುರೇಶ್ ಇದ್ದರು.

ಸಂಕ್ಷಿಪ್ತ ಸುದ್ದಿ

ಮಾದಕವಸ್ತು: ಎನ್‌ಸಿಬಿಗೆ 25ಕ್ಕೂ ಹೆಚ್ಚು ಪ್ರಕರಣ ತನಿಖೆ ಹೊಣೆ

ನವದೆಹಲಿ (ಪಿಟಿಐ): ಮಾದಕವಸ್ತು ಮಾರಾಟ ಕುರಿತ 25ಕ್ಕೂ ಹೆಚ್ಚು 'ದೊಡ್ಡ' ಪ್ರಕರಣಗಳ ತನಿಖೆಯ ಹೊಣೆಯನ್ನು ವಿವಿಧ ರಾಜ್ಯ ಸರ್ಕಾರಗಳು ಎನ್‌ಸಿಬಿಗೆ ವಹಿಸಿವೆ. ಮಾದಕವಸ್ತು ಜಾಲವನ್ನು ಬಯಲಿಗೆಳೆಯಲು ಸಮಗ್ರ ತನಿಖೆ ನಡೆಸಬೇಕು ಎಂದು ಕೋರಿವೆ.

ಅಂತರರಾಜ್ಯ, ಅಂತರರಾಷ್ಟ್ರೀಯ ಸಂಪರ್ಕಗಳನ್ನು ಗುರುತಿಸಿ, ಆರೋಪಿಗಳ ಪತ್ತೆಗೆ ಈಗಾಗಲೇ ಪರಿಣತ ಅಧಿಕಾರಿಗಳನ್ನು ತನಿಖೆಗೆ ನಿಯೋಜಿಸಲಾಗಿದೆ ಎಂದು ಕೇಂದ್ರ ತನಿಖಾ ಸಂಸ್ಥೆಯಾದ ಎನ್‌ಸಿಬಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತಾಂತ್ರಿಕ ಕೋರ್ಸ್‌ಗಳಿಗೆ ಭಾಗಶಃ ಅನುಮೋದನೆ ನೀಡಲಾಗದು'

ನವದೆಹಲಿ (ಪಿಟಿಐ): ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳಿಗೆ ಇನ್ನು ಮುಂದೆ ಭಾಗಶಃ ಅನುಮೋದನೆಯನ್ನು ನೀಡದಿರಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ತೀರ್ಮಾನಿಸಿದೆ.

'ಕೆಲ ಕೇಂದ್ರೀಯ, ರಾಜ್ಯ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಕೆಲವು ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಭಾಗಶಃ ಅನುಮೋದನೆ ಪಡೆಯುತ್ತಿವೆ. ಇದು ಭಾಗಿದಾರರಲ್ಲಿ ಗೊಂದಲ ಮೂಡಿಸುತ್ತಿದೆ. ಇದನ್ನು ತಪ್ಪಿಸುವುದು ಇದರ ಉದ್ದೇಶ' ಎಂದು ಎಐಸಿಟಿಇ ತಿಳಿಸಿದೆ.

ಟಿಟಿಡಿ: ಕೂದಲಿನಿಂದ ₹126 ಕೋಟಿ ಆದಾಯ ನಿರೀಕ್ಷೆ

ತಿರುಪತಿ (ಪಿಟಿಐ): ಇಲ್ಲಿನ ತಿರುಮಲದಲ್ಲಿರುವ ವೆಂಕಟೇಶ್ವರ ದೇವಸ್ಥಾನದ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಆಡಳಿತ ಮಂಡಳಿ 2022-23ರ ಹಣಕಾಸು ವರ್ಷಕ್ಕೆ ₹3,096.40 ಕೋಟಿ ಮೊತ್ತದ ಬಜೆಟ್ ಅನ್ನು ಗುರುವಾರ ಪ್ರಕಟಿಸಿದೆ.

ಆದಾಯದ ಮುನ್ಸೂಚನೆಯೊಂದಿಗೆ ಬಜೆಟ್ ಸಭೆಯಲ್ಲಿ ಮುಂದಿನ 12 ತಿಂಗಳ ಹಣಕಾಸು ಯೋಜನೆಯನ್ನು ಪರಿಶೀಲಿಸಿದ ನಂತರ ವಾರ್ಷಿಕ ಬಜೆಟ್‌ಗೆ ಅನುಮೋದನೆ ನೀಡಲಾಯಿತು ಎಂದು ಟಿಟಿಡಿ ಮಂಡಳಿ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್. ಜವಾಹರ ರೆಡ್ಡಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ತಿರುಪತಿ ವೆಂಕಟೇಶ್ವರ ದೇಗುಲಕ್ಕೆ ₹9.2 ಕೋಟಿ ಆಸ್ತಿ ದಾನ



ತಿರುಪತಿ (ಪಿಟಿಐ): ಮಹಿಳೆಯೊಬ್ಬರು ತಿರುಪತಿ ವೆಂಕಟೇಶ್ವರ ದೇವಸ್ಥಾನಕ್ಕೆ ₹9.2 ಕೋಟಿ ಮೌಲ್ಯದ ಆಸ್ತಿ ಮತ್ತು ನಗದು ದಾನ ಮಾಡಿದ್ದಾರೆ.

ಚೆನ್ನೈನ 76 ವರ್ಷದ ಮಹಿಳೆಯೊಬ್ಬರು ಇತ್ತೀಚೆಗೆ ನಿಧನರಾದ ತಮ್ಮ ಸಹೋದರಿ, ಅವಿವಾಹಿತೆ ಪಾರ್ವತಮ್ಮ ಅವರ ಪರವಾಗಿ, ಗುರುವಾರ ಬೆಳಿಗ್ಗೆ ಬೆಟ್ಟದ ದೇವಸ್ಥಾನದಲ್ಲಿ ಟಿಟಿಡಿ ಮಂಡಳಿಯ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ಅವರಿಗೆ ₹3.2 ಕೋಟಿಯ ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ₹6 ಕೋಟಿ ಮೌಲ್ಯದ ಸ್ಥಿರಾಸ್ತಿಯ ದಾಖಲೆಗಳನ್ನು ಹಸ್ತಾಂತರಿಸಿದರು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದಿಂದ ಬಿಡುಗಡೆಯಾಗದ ಹಣ

‘ಅರಿವು’ ಸಾಲ ಸಿಗದೆ ವಿದ್ಯಾರ್ಥಿಗಳಿಗೆ ಸಂಕಷ್ಟ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡುವ ‘ಅರಿವು’ ಶೈಕ್ಷಣಿಕ ಸಾಲ ಯೋಜನೆಗೆ ಗ್ರಹಣ ಹಿಡಿದಿದ್ದು, ವಿದ್ಯಾರ್ಥಿಗಳು ದಿಕ್ಕುತೋಚದ ಸ್ಥಿತಿಗೆ ತಲುಪಿದ್ದಾರೆ.

ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಲು ‘ಅರಿವು’ ಹೆಸರಿನಲ್ಲಿ ಶೈಕ್ಷಣಿಕ ಸಾಲ ಯೋಜನೆಯನ್ನು ಸರ್ಕಾರ ರೂಪಿಸಿದೆ. ಈ ಯೋಜನೆ ಅಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ನಾಲ್ಕೈದು ಕಂತುಗಳಲ್ಲಿ ಸಾಲ ನೀಡಲಾಗುತ್ತಿದೆ. ಕೋರ್ಸ್‌ಗಳ ಅವಧಿಯ ಮೇಲೆ ಈ ಕಂತುಗಳನ್ನು ನಿರ್ಧರಿಸಲಾಗುತ್ತದೆ. ‘ಸುವಿಧಾ’ ಸಾಫ್ಟ್‌ವೇರ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಕಾಲೇಜಿಗೆ ದಾಖಲಾತಿಯಾಗಿರುವ ಬಗ್ಗೆ ಪ್ರವೇಶ ಪತ್ರ ಮತ್ತು ಅಂಕಪಟ್ಟಿಗಳನ್ನು ಪರಿಶೀಲಿಸಿದ ಬಳಿಕ ಸಾಲ ಮಂಜೂರಾತಿ ಮಾಡಲಾಗುತ್ತದೆ. ಪ್ರವೇಶ ಪತ್ರದ ಪ್ರತಿ ಪಡೆದ 15 ದಿನಗಳ ನಂತರ ಸಾಲ ಬಿಡುಗಡೆ ಮಾಡಲಾಗುತ್ತಿದೆ. ನಂತರ, ಸೆಮಿಸ್ಟರ್‌ಗಳ ಅನುಗುಣವಾಗಿ ಸಾಲವನ್ನು ಹಂತ ಹಂತವಾಗಿ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

ಆದರೆ, 2021–22ನೇ ಸಾಲಿಗೆ ಅರ್ಜಿ ಮತ್ತು ಇತರ ಎಲ್ಲ ದಾಖಲೆಗಳನ್ನು ಸಲ್ಲಿಸಿ ಮೂರು ತಿಂಗಳಾದರೂ ಇದುವರೆಗೆ ಸಾಲ ದೊರೆತಿಲ್ಲ. ಇದರಿಂದ, ಹಲವು ವೃತ್ತಿಪರ ಕಾಲೇಜುಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ನೀಡಲು ಸತಾಯಿಸುತ್ತಿವೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಒಟ್ಟು ಮೂರು ಸಾವಿರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ₹20 ಕೋಟಿ ಸಾಲ ಮಂಜೂರು ಮಾಡಬೇಕಾಗಿದೆ. ಇವರಲ್ಲಿ 8 ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಬಡ್ಡಿ ರಹಿತ ಸಾಲ ನೀಡುವುದು ಸಹ ಸೇರಿದೆ. ಈ ವಿದ್ಯಾರ್ಥಿಗಳಿಗೆ ₹28 ಲಕ್ಷ ಮಂಜೂರು ಮಾಡಬೇಕಾಗಿದೆ.

‘ಸುವಿಧಾ ಪೋರ್ಟಲ್‌ನಲ್ಲಿ ನವೆಂಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರೂ ಹಣ ಬಿಡುಗಡೆಯಾಗಿಲ್ಲ. ಶುಲ್ಕ ಪಾವತಿಸಿದರೆ ಮಾತ್ರ ಪರೀಕ್ಷೆ ಬರೆಯಲು ಪ್ರವೇಶ ಪತ್ರ ನೀಡುವುದಾಗಿ ಕಾಲೇಜುಗಳ ಆಡಳಿತ ಮಂಡಳಿ ತಿಳಿಸಿವೆ. ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್ ಅಧ್ಯಯನಕ್ಕೆ ಹೆಚ್ಚು ಖರ್ಚು ಬರುತ್ತದೆ. ಜತೆಗೆ, ಪ್ರಾಜೆಕ್ಟ್‌ಗಳನ್ನೂ ತಯಾರಿಸಬೇಕು. ಅದಕ್ಕೂ ಖರ್ಚಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಾಲ ಮಂಜೂರಾಗದ ಕಾರಣ ಕಷ್ಟವಾಗುತ್ತಿದೆ. ನಾವು ಕಣ್ಣೀರು ಹಾಕುವ ಪರಿಸ್ಥಿತಿ ಎದುರಾಗಿದೆ’ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಕೆಲವರು ಖಾಸಗಿಯಾಗಿ ಮತ್ತು ವಿವಿಧ ಬ್ಯಾಂಕ್‌ಗಳಲ್ಲಿ ದುಬಾರಿ ಬಡ್ಡಿಗೆ ಸಾಲ ಪಡೆದು ಕಾಲೇಜುಗಳಿಗೆ ಶುಲ್ಕ ಪಾವತಿಸುತ್ತಿದ್ದಾರೆ.

‘ನನ್ನ ಮಗ ಎಂಜಿನಿಯರಿಂಗ್ ನಾಲ್ಕನೇ ಸೆಮಿಸ್ಟರ್ ಓದುತ್ತಿದ್ದಾನೆ. ಶುಲ್ಕ ಪಾವತಿಸುವಂತೆ ಕಾಲೇಜಿನಿಂದ ಒತ್ತಡವಿತ್ತು. ಕೊನೆಗೆ ಖಾಸಗಿ ವ್ಯಕ್ತಿಗಳ ಬಳಿ ಬಡ್ಡಿಗೆ ಸಾಲ ಪಡೆದು ಶುಲ್ಕ ಪಾವತಿಸಬೇಕಾಯಿತು. ನನ್ನ ಮಗನಿಗೆ ನಾಲ್ಕನೇ ಕಂತಿನ ಸಾಲ ಮಂಜೂರಾಗಬೇಕಾಗಿದೆ. ನಾಲ್ಕು ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಿದ್ದೇವೆ. ಆದರೆ, ನಿಗಮದ ಕಚೇರಿಯಲ್ಲಿ ಕೇಳಿದರೆ ಅನುದಾನ ಮಂಜೂರಾಗಿಲ್ಲ ಎಂದು ಹೇಳುತ್ತಾರೆ. ಇದು ಕೇವಲ ನಮ್ಮ ಒಬ್ಬರ ಸಮಸ್ಯೆ ಅಲ್ಲ. ನೂರಾರು ವಿದ್ಯಾರ್ಥಿಗಳ ಸಮಸ್ಯೆಯಾಗಿದೆ’ ಎಂದು ವೆಂಕಟೇಶ್ ದೂರಿದರು.

‘ತಾಂತ್ರಿಕ ಸಮಸ್ಯೆಯಿಂದ ವಿಳಂಬ’

‘ಅರಿವು ಶೈಕ್ಷಣಿಕ ಸಾಲ ಮಂಜೂರು ಮಾಡಲು ಅನುದಾನದ ಕೊರತೆ ಇಲ್ಲ. ಸಾಫ್ಟ್‌ವೇರ್‌ನಲ್ಲಿನ ತಾಂತ್ರಿಕ ಸಮಸ್ಯೆಯಿಂದ ವಿಳಂಬವಾಗಿದೆ. ಶೀಘ್ರ ಅಧಿಕಾರಿಗಳ ಸಭೆ ಕರೆದು ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುವುದು. ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ತ್ವರಿತಗತಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುವುದು’

ಕೋಟ ಶ್ರೀನಿವಾಸ ಪೂಜಾರಿ, ಸಮಾಜ ಕಲ್ಯಾಣ ಸಚಿವ

ವಿಭಾಗ	ವಿದ್ಯಾರ್ಥಿಗಳು	ಸಾಲದ ಮೊತ್ತ (₹ ಕೋಟಿಗಳಲ್ಲಿ)
ಬೆಂಗಳೂರು	902	5.95
ಮೈಸೂರು	841	5.55
ಬೆಳಗಾವಿ	837	5.50
ಕಲಬುರಗಿ	412	2.71

ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರನ್ನು ತಡೆಯುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಪಕ್ಷದ ಮುಸ್ಲಿಂ ಶಾಸಕರ ನಿಯೋಗವು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಗುರುವಾರ ಮನವಿ ಸಲ್ಲಿಸಿತು. ರಹೀಂ ಖಾನ್, ಯು.ಟಿ. ಖಾದರ್, ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್, ನಸೀರ್ ಅಹ್ಮದ್, ಎನ್.ಎ. ಹ್ಯಾರಿಸ್, ಜಮೀರ್ ಅಹ್ಮದ್ ಖಾನ್ ಇದ್ದರು.

ಮಿಲಿಟರಿ ಎಂಜಿಯರ್‌ಗೆ ರಸ್ತೆ ನಿರ್ವಹಣೆ ಹೊಣೆ: ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಗುಣಮಟ್ಟ ಕಾಪಾಡುವಲ್ಲಿ ಅವುಗಳ ನಿರ್ವಹಣಾ ಹೊಣೆಯನ್ನು ಮಿಲಿಟರಿ ಎಂಜಿನಿಯರ್‌ಗಳಿಗೆ ವಹಿಸಬೇಕಾಗುತ್ತದೆ’ ಎಂದು ಹೈಕೋರ್ಟ್, ಬಿಬಿಎಂಪಿ ಪ್ರಧಾನ ಎಂಜಿನಿಯರ್‌ಗೆ ಮೌಖಿಕ ಎಚ್ಚರಿಕೆ ನೀಡಿದೆ.

‘ನಗರದ ರಸ್ತೆ ಗುಂಡಿಗಳಿಂದ ಸಾರ್ವಜನಿಕರು ಸಾವು ನೋವುಗಳಿಗೆ ಈಡಾಗುತ್ತಿದ್ದಾರೆ’ ಎಂದು ಆಕ್ಷೇಪಿಸಿ ಕೋರಮಂಗಲದ ವಿಜಯನ್ ಮೆನನ್ ಸೇರಿದಂತೆ ನಾಲ್ವರು 2015ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕಳೆದ ವಿಚಾರಣೆ ವೇಳೆ ನ್ಯಾಯಾಲಯ, ಪ್ರಧಾನ ಎಂಜಿನಿಯರ್ ಗೈರು ಹಾಜರಿಗಾಗಿ ಕೋರ್ಟ್ ವಾರಂಟ್ ಜಾರಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಪ್ರಧಾನ ಎಂಜಿನಿಯರ್ ಎಸ್. ಪ್ರಭಾಕರ್ ವಿಚಾರಣೆಗೆ ಖುದ್ದು ಹಾಜರಿದ್ದರು. ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಪ್ರಭಾಕರ್ ನ್ಯಾಯಪೀಠಕ್ಕೆ ಕೈಮುಗಿದು ಬೇಷರತ್ ಕ್ಷಮೆ ಯಾಚಿಸಿದರು.

ಬಿಬಿಎಂಪಿ ಕಾರ್ಯವೈಖರಿಯನ್ನು ಕಟುವಾಗಿ ಖಂಡಿಸಿದ ನ್ಯಾಯಪೀಠ, ‘ರಸ್ತೆಗಳ ಗುಣಮಟ್ಟ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಂಡಿದ್ದೀರಿ. ಲೋಪ ಎಸಗಿರುವ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಿದರೆ ಕರುಣೆ ತೋರಬೇಡಿ. ನ್ಯಾಯಾಲಯದ ನಿರ್ದೇಶನಗಳನ್ನು ಹಗುರವಾಗಿ ಪರಿಗಣಿಸಬೇಡಿ’ ಎಂದು ಚಾಟಿ ಬೀಸಿತು.

ಪ್ರಮಾಣಪತ್ರ ಸಲ್ಲಿಕೆ: ಬಿಬಿಎಂಪಿ ಪರ ವಕೀಲ ವಿ. ಶ್ರೀನಿಧಿ ಪ್ರಮಾಣಪತ್ರ ಸಲ್ಲಿಸಿ, ‘ಪಾಲಿಕೆಯ 182.38 ಕಿ.ಮೀ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚಲು ಕಾರ್ಯಾದೇಶ ನೀಡಲಾಗಿದೆ. ಇದೇ 14ರಂದು ರಸ್ತೆ ಗುಂಡಿ ಮುಚ್ಚುವ ಕೆಲಸ ಆರಂಭಿಸಲಾಗಿದೆ. ಪ್ರಧಾನ ಯಂತ್ರ ಬಳಸಲು ಟೆಂಡರ್ ಕರೆದಿದ್ದೇವೆ. 20 ವರ್ಷ ಬಾಳಿಕೆ ಬರುವಂತೆ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಹಾಗೆಯೇ, ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲೂ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ’ ಎಂದರು.

‘ಮುಂದಿನ ವಿಚಾರಣೆ ವೇಳೆ ಕ್ರಿಯಾ ಯೋಜನೆ ಮತ್ತು ಅಲ್ಪಾವಧಿ ಟೆಂಡರ್‌ಗೆ ಸಂಬಂಧಿಸಿದ ಬೆಳವಣಿಗೆ ಬಗ್ಗೆ ತಿಳಿಸಿ’ ಎಂದು ಬಿಬಿಎಂಪಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತು. ಪ್ರಭಾಕರ್ ಅವರು ಅಂದೂ ವಿಚಾರಣೆಗೆ ಖುದ್ದು ಹಾಜರಾಗುವಂತೆ ನ್ಯಾಯಪೀಠ ಸೂಚಿಸಿದೆ.

ಮುಖ್ಯಾಂಶಗಳು

- ಬೇಷರತ್ ಕ್ಷಮೆ ಯಾಚಿಸಿದ ಎಸ್.ಪ್ರಭಾಕರ್
- ಕೋರ್ಟ್ ಆದೇಶ ಹಗುರವಾಗಿ ಪರಿಗಣಿಸಬೇಡಿ

‘ದೀರ್ಘಕಾಲ ಬಾಳಿಕೆ ಬರಬೇಕು’

‘ಸದ್ಯ ರಸ್ತೆ ಗುಂಡಿ ಮುಚ್ಚಲು ನೀವು ಅನುಸರಿಸುತ್ತಿರುವ ತಂತ್ರಜ್ಞಾನ ಸೂಕ್ತವಾಗಿಲ್ಲ. ಗುಂಡಿ ಮುಚ್ಚಿದ ನಂತರ ಮಳೆ ಬಂದ ಕೂಡಲೇ ರಸ್ತೆಗಳಲ್ಲಿ ಗುಂಡಿಗಳು ಮತ್ತೆ ಕಾಣಿಸಿಕೊಳ್ಳುತ್ತಿವೆ. ಈ ವಿಚಾರದಲ್ಲಿ ನಾವು ತಜ್ಞರಲ್ಲ. ನಮಗೆ ಸಮಸ್ಯೆ ಬಗೆಹರಿಯಬೇಕಷ್ಟೆ. ದುರಸ್ತಿ ಆದ ರಸ್ತೆಗಳು ದೀರ್ಘ ಕಾಲದವರೆಗೆ ಬಾಳಿಕೆ ಬರಬೇಕೆಂಬುದೇ ನಮ್ಮ ಕಾಳಜಿ’ ಎಂದು ನ್ಯಾಯಪೀಠ ಹೇಳಿತು.

ನಿಮ್ಮ ಅಧೀನ ಸಿಬ್ಬಂದಿಯ ಮಾತು ಕೇಳಬೇಡಿ. ಅವರು ಸಮಸ್ಯೆಯನ್ನು ಸೃಷ್ಟಿಸುತ್ತಾರೆಯೇ ವಿನಾ ಬಗೆಹರಿಸುವುದಿಲ್ಲ. ನಿಮ್ಮ ವಿವೇಚನೆಯನ್ನು ಬಳಸಿ ಸಮಸ್ಯೆ ಪರಿಹರಿಸಿ. (ಎಸ್.ಪ್ರಭಾಕರ್‌ಗೆ ಕಿವಿಮಾತು)

ಋತುರಾಜ್ ಅವಸ್ಥಿ, ಮುಖ್ಯ ನ್ಯಾಯಮೂರ್ತಿ

‘ಪ್ರಯಾಣಿಕರಿಗೆ ನೆಗೆಟಿವ್ ವರದಿ ಬೇಡ’

ಬೆಂಗಳೂರು: ಗೋವಾ ಮತ್ತು ಕೇರಳದಿಂದ ಕರ್ನಾಟಕಕ್ಕೆ ಬರುವ ಪ್ರಯಾಣಿಕರಿಗೆ ಇನ್ನು ಮುಂದೆ ನೆಗೆಟಿವ್ ಆರ್‌ಟಿ-ಪಿಸಿಆರ್ ಪರೀಕ್ಷಾ ವರದಿ ಸಲ್ಲಿಸುವ ಅಗತ್ಯ ಇಲ್ಲ.

ಆದರೆ, ಎರಡು ಡೋಸ್ ಲಸಿಕೆ ಪಡೆದಿರುವ ಬಗ್ಗೆ ಪ್ರಮಾಣಪತ್ರ ಹೊಂದುವುದು ಕಡ್ಡಾಯ ಎಂದು ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

‘ಕೋವಿಡ್–19 ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿ ಕೇರಳ ಮತ್ತು ಗೋವಾದಿಂದ ರೈಲ್ವೆ, ವಿಮಾನ ಹಾಗೂ ರಸ್ತೆ ಸಾರಿಗೆ ಮತ್ತು ವೈಯಕ್ತಿಕ ವಾಹನದ ಮೂಲಕ ಕರ್ನಾಟಕಕ್ಕೆ ಬರುವ ಪ್ರಯಾಣಿಕರು ಕಡ್ಡಾಯವಾಗಿ ಆರ್‌ಟಿ–ಪಿಸಿಆರ್ ನೆಗೆಟಿವ್ ಪರೀಕ್ಷಾ ವರದಿಯನ್ನು ಸಲ್ಲಿಸುವುದನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ.

ಸಂಸ್ಥೆ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಆದೇಶ

ಬೆಂಗಳೂರು: ಕೋರಮಂಗಲದ ಕೇಂದ್ರೀಯ ಸದನ ಮತ್ತು ಈಜಿಪುರ ನಡುವಿನ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ವಿಳಂಬಗೊಳಿಸಿ, ಸಾರ್ವಜನಿಕ ಹಣ ದುರುಪಯೋಗ ಪಡಿಸಿಕೊಂಡ ಆರೋಪದಲ್ಲಿ, ಯೋಜನೆಯ ಗುತ್ತಿಗೆ ಪಡೆದಿದ್ದ ‘ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್’ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಮೇಲ್ಸೇತುವೆ ಕಾಮಗಾರಿ ವಿಳಂಬ ಪ್ರಶ್ನಿಸಿ ಕೋರಮಂಗಲದ ಆದಿನಾರಾಯಣ ಶೆಟ್ಟಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಯೋಜನೆ ವಿಳಂಬವಾಗಲು ಗುತ್ತಿಗೆದಾರ ಸಂಸ್ಥೆಯೇ ಕಾರಣ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಯೋಜನೆಯಲ್ಲಿ ಸಾರ್ವಜನಿಕ ಹಣ ವಿನಿಯೋಗಿಸಲಾಗಿದ್ದು, ಕಾಮಗಾರಿ ವಿಳಂಬದಿಂದ ಹೆಚ್ಚಿನ ಜನರಿಗೆ ಅನನುಕೂಲ ಉಂಟಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಹಣ ದುರುಪಯೋಗದ ಆರೋಪದಲ್ಲಿ ಗುತ್ತಿಗೆದಾರ ಸಂಸ್ಥೆ ವಿರುದ್ಧ ಬಿಬಿಎಂಪಿ ಎಫ್‌ಐಆರ್ ದಾಖಲಿಸಬೇಕು ಹಾಗೂ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ರದ್ದುಪಡಿಸಿ, ಅದರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ಆದೇಶಿಸಿದೆ. ಅರ್ಜಿದಾರರ ಪರ ವಕೀಲ ಎಚ್. ಸುನೀಲ್ ಕುಮಾರ್ ವಾದ ಮಂಡಿಸಿದರು.

ಕೋವಿಡ್: ಸಕ್ರಿಯ ಪ್ರಕರಣ ಮತ್ತಷ್ಟು ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, ಸದ್ಯ 19,761 ಸೋಂಕಿತರು ಇದ್ದಾರೆ.

ಸೋಂಕು ದೃಢ ಪ್ರಮಾಣ ಸಹ ಶೇ 1.74ಕ್ಕೆ ಇಳಿಕೆಯಾಗಿದ್ದು, 1,579 ಮಂದಿ ಕೋವಿಡ್ ಪೀಡಿತರಾಗಿರುವುದು ಗುರುವಾರ ದೃಢಪಟ್ಟಿದೆ.

ಬೆಂಗಳೂರಿನಲ್ಲಿ 769 ಮಂದಿ ಸೋಂಕಿತರಾಗಿದ್ದಾರೆ. ತುಮಕೂರಿನಲ್ಲಿ 84, ಮೈಸೂರಿನಲ್ಲಿ 83, ಬೆಳಗಾವಿಯಲ್ಲಿ 73, ಬಳ್ಳಾರಿಯಲ್ಲಿ 55 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಮನಗರದಲ್ಲಿ ಒಂದು ಪ್ರಕರಣ ಮಾತ್ರ ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.33 ಲಕ್ಷಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 23 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲೇ ಏಳು ಮಂದಿ ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.45 ರಷ್ಟು ವರದಿಯಾಗಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,738ಕ್ಕೆ ತಲುಪಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 1,889 ಮಂದಿ ಸೇರಿದಂತೆ ರಾಜ್ಯದಲ್ಲಿ 5,079 ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,73,991 ಒಟ್ಟು ಸೋಂಕಿತರು (17,73,222 ನಿನ್ನೆಯ ವಿವರ)

8,828 ಸಕ್ರಿಯ ಪ್ರಕರಣ	17,48,371 ಗುಣಮುಖ ಆದವರು	16,791 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	769
ಗುಣಮುಖ	1,889
ಸಾವು	07

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಬಿಬಿಎಂಪಿ ಚುನಾವಣೆ: ಪರಿಶೀಲನೆಗೆ ಸುಪ್ರೀಂ ಕೋರ್ಟ್ ಸಮ್ಮತಿ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಚುನಾವಣೆ ನಡೆಸುವಂತೆ ಕೋರಲಾದ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ಕುರಿತು ಪರಿಶೀಲನೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಅರ್ಜಿ ಸಲ್ಲಿಸಿರುವ ಚುನಾವಣಾ ಆಕಾಂಕ್ಷಿಗಳ ಪರ ವಾದ ಮಂಡಿಸಿದ ಹಿರಿಯ ವಕೀಲೆ ಮೀನಾಕ್ಷಿ ಅರೋರಾ, 2020ರ ಸೆಪ್ಟೆಂಬರ್‌ನಲ್ಲೇ ಬಿಬಿಎಂಪಿಯ ಅಧಿಕಾರದ ಅವಧಿ ಕೊನೆಗೊಂಡಿದ್ದು, ಚುನಾವಣೆ ನಡೆದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠಕ್ಕೆ ತಿಳಿಸಿದರು.

ಬಿಬಿಎಂಪಿಯ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿ, ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಕೂಡಲೇ ಸ್ಥಳೀಯ ಸಂಸ್ಥೆಗೆ ಚುನಾವಣೆ ನಡೆಸುವ ಅಗತ್ಯವಿದೆ ಎಂದರು.

‘ನೀವು ಈ ಕುರಿತು ಪ್ರಸ್ತಾಪಿಸಿದ್ದೀರಿ. ಮಿಕ್ಕಿದ್ದನ್ನು ನಮಗೆ ಬಿಡಿ. ದೇಶದ ವಿವಿಧೆಡೆ ಚುನಾವಣೆಗಳು ನಡೆಯುತ್ತಿವೆ. ಈ ಅರ್ಜಿಗಳ ವಿಚಾರಣೆ ಕುರಿತು ಪರಿಶೀಲಿಸಲಾಗುವುದು’ ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠ ತಿಳಿಸಿತು. 6 ವಾರಗಳೊಳಗೆ ಚುನಾವಣೆ ನಡೆಸುವಂತೆ ಸೂಚಿಸಿ 2020ರ ಡಿಸೆಂಬರ್ 4ರಂದು ಕರ್ನಾಟಕ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

ಬಿಡಿಎ ಬಡಾವಣೆ: 38 ಎಕರೆ ಜಾಗ, 9 ನಿವೇಶನ ಒತ್ತುವರಿ ತೆರವು– ಸಿಎಂ

ಬೆಂಗಳೂರು: ‘ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ನಿರ್ಮಿಸಿರುವ 64 ಬಡಾವಣೆಗಳ ಪೈಕಿ ನಾಡಪ್ರಭು ಕೆಂಪೇಗೌಡ ಹಾಗೂ ಎಚ್‌ಎಸ್‌ಆರ್ ಲೇಔಟ್‌ನ ಎರಡನೇ ಹಂತ ಹೊರತುಪಡಿಸಿ ಉಳಿದ 62 ಬಡಾವಣೆಗಳಲ್ಲಿ ಭೂ ಲೆಕ್ಕಶೋಧನೆ (ಲ್ಯಾಂಡ್ ಆಡಿಟ್) ನಡೆಸಲಾಗಿದ್ದು, ಒತ್ತುವರಿಯಾಗಿದ್ದ 38.02 ಎಕರೆ ಜಾಗ ಮತ್ತು ವಿವಿಧ ಅಳತೆಯ ಒಂಬತ್ತು ನಿವೇಶನಗಳನ್ನು ತೆರವುಗೊಳಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಭೂ ಲೆಕ್ಕಶೋಧನೆಯನ್ನು ಇಐ ಟೆಕ್ನಾಲಜಿಸ್ ಸಂಸ್ಥೆಗೆ ವಹಿಸಲಾಗಿದೆ. 62 ಬಡಾವಣೆಗಳಲ್ಲಿ ನಿರ್ಮಿಸಲಾದ ನಿವೇಶನ, ಉದ್ಯಾನವನ, ರಸ್ತೆ, ನಾಗರಿಕ ಸೌಲಭ್ಯ (ಸಿಎ) ನಿವೇಶನ ವಿಸ್ತಾರಗಳನ್ನು ನಮೂದಿಸಿ ಭೂ ಪ್ರದೇಶ ಬಳಸಿಕೊಂಡಿರುವ ಬಗ್ಗೆ ಸಂಸ್ಥೆ ವರದಿ ನೀಡಿದೆ’ ಎಂದರು.

‘ಐತೀಪೂರ್ ಹೊರಡಿಸಿರುವ ಪ್ರದೇಶದಲ್ಲಿ ಖಾಲಿ ಜಾಗ, ಅನಧಿಕೃತ ಕಟ್ಟಡ ಪ್ರದೇಶಗಳು ಮತ್ತು ಐತೀಪೂರ್ ಹೊರಡಿಸದ ಪ್ರದೇಶದಲ್ಲಿ ಭೂ ಪ್ರದೇಶದ ಲೆಕ್ಕಾಚಾರ ಮಾಡಿ ಒಟ್ಟಾರೆ ಖಾಲಿ ಹಾಗೂ ಅನಧಿಕೃತ ಕಟ್ಟಡ ಪ್ರದೇಶಗಳನ್ನು ಗುರುತಿಸಲಾಗಿದೆ. ಈ ವರದಿ ಅನ್ವಯ ಜಮೀನು ಮತ್ತು ನಿವೇಶನಗಳನ್ನು ಪ್ರಾಧಿಕಾರ ವಶಕ್ಕೆ ಪಡೆದಿದೆ’ ಎಂದು ಅವರು ಹೇಳಿದರು.

RV EDUCATIONAL INSTITUTIONS™
RV COLLEGE OF ENGINEERING®
Mysuru Road, Bengaluru-560 059. www.rvce.edu.in
TENDER NOTICE
No.RVE/CM/391/21-22 dt: 18/1/2022
RVCE invites tender application from experienced and reputed service providers for providing the below mentioned contract services at our Mysuru Road Campus and Hostels for the year 2022-23.
1. House Keeping Services, 2. Security Services,
3. Garden Maintenance Services 4. Pest Control Services
Ph.: +91 80 68188101, Facilities@rvce.edu.in
For more details, please visit our website: www.rvce.edu.in

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ ವಾಣಿಜ್ಯ ಶಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–27.
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/3861/2021–22 ದಿನಾಂಕ:14.02.2022
ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ–25/2021–22 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿವಿಧ ಬಸ್ ನಿಲ್ದಾಣಗಳಲ್ಲಿನ ಸಾಮಾನ್ಯ ಮಳಿಗೆ/ ಉಪಹಾರ ಗೃಹ/ ಪಾರ್ಕಿಂಗ್ ಕ್ಷೇತ್ರ/ ವಾಣಿಜ್ಯ/ಕಛೇರಿ ಕ್ಷೇತ್ರಗಳ ನಿರ್ವಹಣೆಗೆ ಆಸಕ್ತ ಪರವಾನಗಿದಾರರ ಆಯ್ಕೆಗಾಗಿ, ವಿವಿಧ ಬಸ್ ನಿಲ್ದಾಣಗಳ ಹಾಗೂ Pay & Use ಶೌಚಾಲಯ ಸಂಕೀರ್ಣದ ಸ್ವಚ್ಛತಾ ನಿರ್ವಹಣೆಗೆ ಗುತ್ತಿಗೆದಾರ/ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ ಹಾಗೂ ವಿವಿಧ ಘಟಕ/ಕಾರ್ಯಾಗಾರಗಳಲ್ಲಿನ ಕಾರ್ಮಿಕರ ಕ್ಯಾಂಟೀನ್‌ನನ್ನು 02 (ಎರಡು) ವರ್ಷಗಳ ಅವಧಿಗೆ ಪರವಾನಗಿ ಶುಲ್ಕ ರಹಿತ ಆಧಾರದ ಮೇಲೆ ಪರವಾನಗಿ ನೀಡಲು ಆಸಕ್ತ ವ್ಯಕ್ತಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **03.03.2022 ರಂದು 12:00** ಗಂಟೆಯವರೆಗೆ. ಆರ್ಥಿಕ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.03.2022 ರಂದು 12:30** ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **11.03.2022 ರಂದು 12:30** ಗಂಟೆಗೆ. ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ ಹಾಗೂ ವಿಸ್ತೀರ್ಣಗಳ ಮಾಹಿತಿಗಾಗಿ **www.eproc.karnataka.gov.in** ಗೆ ಲಾಗಾನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–23010900; 23010901; 22371090; 22340060; 22340948 ಅಥವಾ 7760991222 & 7760991026. ಇ–ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.
ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಬೆಂಗಳೂರು ಕೇಂದ್ರೀಯ ವಿಭಾಗ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027,
ಸಂಖ್ಯೆ:ಕರಾಸಾ/ಬೆಂಕೇವಿ/ಸಿಬ್ಬಂದಿ/ಶಿಶಿಕ್ಷು/2793/21–22 ದಿನಾಂಕ: 11–01–2022
ಶಿಶಿಕ್ಷು ಜಾಹೀರಾತು ಸಂಖ್ಯೆ: 1/2022
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದಲ್ಲಿ ಶಿಶಿಕ್ಷು ಅಧಿನಿಯಮ 1961 ರನ್ವಯ ಈ ಕೆಳಕಂಡ ತಾಂತ್ರಿಕ ಹಾಗೂ ಗಣಕ ವೃತ್ತಿಗಳಲ್ಲಿ ತರಬೇತಿ ಪಡೆಯಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿತ್ತು. ಆಯಾ ವೃತ್ತಿಗಳಿಗೆ ನಿಗದಿಪಡಿಸಿರುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ, ಈ ಕೆಳಕಂಡ ವೃತ್ತಿಗಳಿಗೆ ಭರ್ತಿ ಮಾಡಿದ ನಿಗಧಿತ ಅರ್ಜಿ ಮತ್ತು ಮೂಲ ದಾಖಲಾತಿ ಹಾಗೂ ದಾಖಲಾತಿಗಳ ಒಂದು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ದಿನಾಂಕ: **12–01–2022 ರಿಂದ 25–01–2022 ರವರೆಗೆ ಕಛೇರಿ ವೇಳೆಯಲ್ಲಿ ಬೆಳಿಗ್ಗೆ 11.00 ರಿಂದ ಸಾಯಂಕಾಲ 5.00 ಗಂಟೆಯವರೆಗೆ ಹಾಗೂ ಶನಿವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ (ಭಾನುವಾರ ಮತ್ತು ಸಾರ್ವತ್ರಿಕ ರಜೆಗಳನ್ನು ಹೊರತುಪಡಿಸಿ) ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ,** ಇಲ್ಲಿ ಹಾಜರಾಗಿ ಮೂಲ ದಾಖಲಾತಿಗಳನ್ನು ಸಲ್ಲಿಸುವುದು ಹಾಗೂ ದಿನಾಂಕ: **28–01–2022 ರಂದು ನೇರ ಸಂದರ್ಶನಕ್ಕೆ** ಹಾಜರಾಗಲು ಉಲ್ಲೇಖಿತ ಜಾಹೀರಾತಿನಲ್ಲಿ ತಿಳಿಸಲಾಗಿತ್ತು. ಮುಂದುವರೆದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸುವ **ಅವಧಿಯನ್ನು ದಿನಾಂಕ: 18–03–2022 ರವರೆಗೆ** ವಿಸ್ತರಿಸಲಾಗಿದೆ. ಉಳಿದಂತೆ ಉಲ್ಲೇಖಿತ ಜಾಹೀರಾತಿನಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಶಿಶಿಕ್ಷು ಹುದ್ದೆವಾರು ವಿವರ

ಕ್ರ.ಸಂ.	ಶಿಶಿಕ್ಷು ವೃತ್ತಿಯ ಹೆಸರು	ಐ.ಟಿ.ಐ	ತರಬೇತಿ ಅವಧಿ
1	ಫಿಟ್ಟರ್	25	01 ವರ್ಷ
2	ಟರ್ನರ್	15	01 ವರ್ಷ
3	ವೆಲ್ಡರ್ (ಗ್ಯಾಸ್ & ಎಲೆಕ್ಟ್ರಿಕ್)	10	03 ತಿಂಗಳು
4	ಎಲೆಕ್ಟ್ರಿಷಿಯನ್	20	01 ವರ್ಷ
5	ಮೆಕ್ಯಾನಿಕ್ ಡೀಸೆಲ್	80	01 ವರ್ಷ
6	ಪೈಂಟರ್	05	01 ವರ್ಷ
7	ಪಾಸಾ	30	01 ವರ್ಷ

ಸೂಚನೆ:–
1) **ವಯೋಮಿತಿ:** ದಿನಾಂಕ: 18–03–2022 ಕ್ಕೆ 18 ವರ್ಷ ಪೂರ್ಣಗೊಂಡಿರಬೇಕು.
2) **ತರಬೇತಿ ಭತ್ಯೆ:** (ಎಲ್ಲಾ ವೃತ್ತಿಯ ಶಿಶಿಕ್ಷುಗಳಿಗೆ ಅನ್ವಯಿಸುವಂತೆ).
3) **ಮೀಸಲಾತಿ:** ಪರಿಶಿಷ್ಟ ಜಾತಿ = 1:8, ಪರಿಶಿಷ್ಟ ಪಂಗಡ = 1:20.

ವಲಯ–1	ವಲಯ–2	ವಲಯ–3	ವಲಯ–4
8922/–	8498/–	8093/–	7708/–

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಬೆಂಗಳೂರು ಕೇಂದ್ರೀಯ ವಿಭಾಗ
ವಾಸಾಸಂಇ/ಬೆಂ.ನ/ಅಡ್ವರ್ಟೋ/3422/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

3M ಇಂಡಿಯಾ ಲಿಮಿಟೆಡ್
CIN: L31300KA1987PLC013543
ನೋಂದಾಯಿತ ಕಚೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ: 080–22231414, ಫ್ಯಾಕ್ಸ್: 080–2223 1450
ಇ–ಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in
ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಬಗ್ಗೆ ಮಾಹಿತಿ

‘ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ’ಯ ಶಿಫಾರಸಿನ ಮೇರೆಗೆ 3M ಇಂಡಿಯಾ ಲಿಮಿಟೆಡ್‌ನ (“ಕಂಪನಿ”ಯ) ನಿರ್ದೇಶಕರ ಮಂಡಳಿಯು ಶ್ರೀ ರಮೇಶ್ ರಾಮದುರ್ಗ್ (DIN: 07109252) ಇವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಎಂದರೆ ಫೆಬ್ರವರಿ 13, 2022 ರಿಂದ ಫೆಬ್ರವರಿ 12, 2024 ರವರೆಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಮರು–ನೇಮಕ ಮಾಡಿದೆ ಮತ್ತು ಕಂಪನಿಯ ಷೇರುದಾರರ ಅನುಮೋದನೆಗೆ ಒಳಪಟ್ಟಂತೆ ಮಿಸ್. ಯುನ್ ಜಿನ್ (DIN: 09474323) ಇವರನ್ನು ಕಂಪನಿಯ ನಿರ್ದೇಶಕರನ್ನಾಗಿ ನೇಮಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. ಅಂಚೆ ಮತದಾನ ಪ್ರಕ್ರಿಯೆಯ ಮೂಲಕ ಷೇರುದಾರರ ಅನುಮೋದನೆಯನ್ನು ಕೋರುತ್ತಿದೆ.

ಕಂಪನಿಗಳ ಅಧಿನಿಯಮ, 2013ರ (“ಅಧಿನಿಯಮ”) ಕಲಮು 110, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 (‘ನಿಯಮಾವಳಿ’) ನಿಯಮಗಳು 20 ಮತ್ತು 22, ಮತ್ತು ಅಧಿನಿಯಮ ಮತ್ತು ನಿಯಮಾವಳಿಯಲ್ಲಿರುವ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳು, ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಸಂ. 14/2020 ದಿನಾಂಕ ಏಪ್ರಿಲ್ 08, 2020, ಸಂ. 17/2020 ದಿನಾಂಕ ಏಪ್ರಿಲ್ 13, 2020, ಸಾಮಾನ್ಯ ಸುತ್ತೋಲೆಗಳನ್ನು, ಸಾಮಾನ್ಯ ಸುತ್ತೋಲೆಗಳಾದ 10/2021 ದಿನಾಂಕ ಜೂನ್ 23, 2021 ಮತ್ತು 20/2021 ದಿನಾಂಕ ಡಿಸೆಂಬರ್ 8, 2021 ಸುತ್ತೋಲೆಗಳೂ ಸೇರಿದಂತೆ ಇತರ ಸಂಬಂಧಿತ ಸುತ್ತೋಲೆಗಳ (“ಎಮ್‌ಸಿಎ ಸುತ್ತೋಲೆಗಳು”) ಜೊತೆ ಓದಿಕೊಂಡಂತೆ, ಭಾರತೀಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 (‘ಲಿಸ್ಟಿಂಗ್ ನಿಬಂಧನೆಗಳು’) ನಿಬಂಧನೆ 44, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯು ಸಾಮಾನ್ಯ ಸಭೆಗಳ ಕುರಿತಂತೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ (“SS-2”) ಮತ್ತು ಅನ್ವಯವಾಗುವಂತಹ ಇತರೆ ಕಾನೂನುಗಳು, ನಿಯಮಾವಳಿ ಮತ್ತು ವಿಧಾಯಕಗಳು (ಸದ್ಯದಲ್ಲಿ ಚಾಲ್ತಿಯಲ್ಲಿರುವ ಮತ್ತು ಕಾಲ–ಕಾಲಕ್ಕೆ ಮಾರ್ಪಾಡಾಗಿರುವಂತಹ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಇತರ ಮರು–ಅಧಿನಿಯಮನಗಳೂ ಸೇರುತ್ತವೆ) ಜೊತೆಗೆ ಓದಿಕೊಂಡ ಪ್ರಕಾರ, ಕಂಪನಿಯು ಫೆಬ್ರವರಿ 03, 2022 ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ನಿರ್ಣಯಗಳ ಮೇಲೆ, ಅಂಚೆ ಮತದಾನದ (ಇ–ವೋಟಿಂಗ್) ಮೂಲಕ, ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂಬುದಾಗಿ ಈ ಮೂಲಕ ಸೂಚನೆಯನ್ನು ಕೊಡಲಾಗುತ್ತಿದೆ.

ಎಲ್ಲ ಸದಸ್ಯರಿಗೂ ಈ ಮೂಲಕ ತಿಳಿಸುವುದೇನೆಂದರೆ:

1. ಯಾವೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟರು ಅಥವಾ ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಕೆಫಿನ್) ನೊಂದಿಗೆ ನೋಂದಾಯಿಸಿಕೊಂಡಿರುವರೋ ಮತ್ತು ಷೇರುಗಳ ಪಾವತಿಸಿದ ಮೌಲ್ಯವನ್ನು ಮತ್ತು ಸದಸ್ಯರ ಮತದಾನದ ಹಕ್ಕುಗಳನ್ನು ನಿರ್ಧರಿಸಲು ಅಂತಿಮ ದಿನವೂ ಆದ **ಶುಕ್ರವಾರ, ಫೆಬ್ರವರಿ 11, 2022**ರಂದು ಯಾವ ಸದಸ್ಯರ ಹೆಸರುಗಳು ಸದಸ್ಯರ /ಫಲಾನುಭವಿ ಯಜಮಾನರ ರಿಜಿಸ್ಟರಿನಲ್ಲಿ ಅಥವಾ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ದಾಖಲೆಗಳಲ್ಲಿ ಇರುವುದೋ ಅಂತಹವರಿಗೆ ಕಂಪನಿಯು ಅಂಚೆ ಮತದಾನ ಸೂಚನೆಯನ್ನು ಜೊತೆಗೆ ಇ–ವೋಟಿಂಗ್ ಕುರಿತಂತೆ ಸೂಚನೆಗಳನ್ನು ಫೆಬ್ರವರಿ 17, 2022 ರಂದು ಇ–ಮೇಲ್ ಮೂಲಕ ಮಾತ್ರವೇ ಕಳುಹಿಸಿದೆ. ಮೇಲೆ ಉಲ್ಲೇಖಿಸಿರುವ ಎಮ್.ಸಿ.ಎ. ಸುತ್ತೋಲೆಗಳ ಪ್ರಕಾರ ಅಂಚೆ ಮತದಾನದ ಸೂಚನೆಯ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯತೆ ಇರುವುದಿಲ್ಲ.
2. ಮೇಲೆ ಹೇಳಿರುವಂತಹ ದಾಖಲೆಗಳು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/, ಕೆಫಿನ್ ವೆಬ್‌ಸೈಟ್ https://evoting.kfintech.com/ ಮತ್ತು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಗಳಲ್ಲಿಯೂ ಲಭ್ಯವಿವೆ. ಯಾರು ಅಂತಿಮ ದಿನಾಂಕದಂದು ಸದಸ್ಯರಾಗಿಲ್ಲವೋ ಅಂತಹವರು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರವೇ ಎಂದು ತಿಳಿಯಬೇಕು. ಮತ್ತೂ, ಎಮ್‌ಸಿಎ ಸುತ್ತೋಲೆಗಳ ಪ್ರಕಾರ ಈ ಅಂಚೆ ಮತದಾನಕ್ಕೆ, ಸದಸ್ಯರಿಗೆ ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಗಳ ಭೌತಿಕ ಪ್ರತಿ ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆ ಗಳನ್ನು ಕಳುಹಿಸಿಲ್ಲ.
3. ಯಾವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿಲ್ಲವೋ ಮತ್ತು ಆದಕಾರಣ ಅಂಚೆ ಮತದಾನದ ಸೂಚನೆ ಮತ್ತು ಇ–ಮತದಾನದ ಸೂಚನೆಗಳನ್ನು ಅವರಿಗೆ ಕಳುಹಿಸಲಾಗಿಲ್ಲವೋ ಅಂತಹವರು ಅದಕ್ಕಾಗಿ ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇದಕ್ಕಾಗಿ ಅವರು https://ris.kfintech.com/clientservices/postalballot ಮೇಲೆ ಕ್ಲಿಕ್ಕಿಸಿದರೆ ಸಾಕು. ಸದಸ್ಯರು ದಯವಿಟ್ಟು ಮಾರ್ಗದರ್ಶನಗಳನ್ನು ಅನುಸರಿಸುತ್ತ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ದಾಖಲಿಸಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ಇ–ಮತದಾನದ ಬಗೆಗಿನ ಸೂಚನೆಗಳು ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಏನಾದರೂ ಪ್ರಶ್ನೆಗಳಿದ್ದರೆ ಈ ವಿಳಾಸಕ್ಕೆ ಬರೆಯಬಹುದು: einward.ris@kfintech.com.
4. ಕಂಪನಿಗಳ ಅಧಿನಿಯಮ, 2013ರ ಕಲಮು 108 ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ನಿಬಂಧನೆ 44 ಅನ್ವಯ ತನ್ನ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಹರ್ಷಿಸುತ್ತಿದೆ. ಇ–ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಕಂಪನಿಯನ್ನು ನೇಮಕಮಾಡಿಕೊಂಡಿದೆ ಮತ್ತು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಲುವಾಗಿ ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿಕೊಂಡಿದೆ.
5. ಸದಸ್ಯರು ಇ–ವೋಟಿಂಗ್ ಸೌಲಭ್ಯದ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸಬಹುದು. ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಅಂಚೆ ಮತದಾನದ ಸೂಚನೆಯಲ್ಲಿ ನೀಡಲಾಗಿದೆ. ಮತದಾನವು ಇ–ಮತದಾನದ ಮೂಲಕ **ಬುಧವಾರ, ಫೆಬ್ರವರಿ 23, 2022 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಗುರುವಾರ, ಮಾರ್ಚ್ 24ರಂದು ಸಂಜೆ 05.00ಕ್ಕೆ (ಭಾ.ಕಾ.)** ಮುಕ್ತಾಯಗೊಳ್ಳುತ್ತದೆ. ಸದಸ್ಯರು ಈ ಅವಧಿಯಲ್ಲೇ ತಮ್ಮ ಮತಗಳನ್ನು ಚಲಾಯಿಸಬೇಕೆಂದು ಕೋರುತ್ತೇವೆ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಕೆಫಿನ್ ಇ–ಮತದಾನ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ. ಬಳಿಕ ಸದಸ್ಯರು ಮತ ಚಲಾಯಿಸಲು ಸಾಧ್ಯವಿಲ್ಲ. ಸದಸ್ಯರು ಒಮ್ಮೆ ಮತವನ್ನು ದೃಢಪಡಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
6. ಅಂಚೆ ಮತದಾನದ ಫಲಿತಾಂಶಗಳನ್ನು ಶನಿವಾರ, ಮಾರ್ಚ್ 26, 2022ರಂದು ಅಥವಾ ಅದಕ್ಕೆ ಮೊದಲೇ ಪ್ರಕಟಿಸಲಾಗುವುದು. ಅಗತ್ಯವಿರುವ ಬಹುಮತದೊಂದಿಗೆ ನಿರ್ಣಯವು ಅಂಗೀಕಾರವಾದರೆ ಅದು, ಕಂಪನಿಯು ಇ–ವೋಟಿಂಗ್‌ಗಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಎಂದರೆ ಗುರುವಾರ, ಮಾರ್ಚ್ 24, 2022ರಂದು ಅಂಗೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಗಳನ್ನು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com/ ಗಳಲ್ಲಿ ಹಾಕಲಾಗುವುದು. ಫಲಿತಾಂಶಗಳನ್ನು ಕಂಪನಿಯ ಇಕ್ವಿಟಿ ಷೇರುಗಳು ಲಿಸ್ಟ್ ಆಗಿರುವ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗಳಿಗೂ ತಿಳಿಸಲಾಗುವುದು.
7. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಸಂಪರ್ಕ ವಿವರಗಳನ್ನು ನವೀಕರಿಸಿರದಂತಹ ಷೇರುದಾರರು https://ris.kfintech.com/clientservices/mobilereg/mobileemailreg.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಥವಾ ಬ್ಯಾಂಕಿನ ವಿವರಗಳನ್ನು ನವೀಕರಿಸುವುದೂ ಸೇರಿದಂತೆ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಿಗೆ ಮನವಿಯನ್ನು ಸಲ್ಲಿಸುವ ಮೂಲಕ ಅವುಗಳನ್ನು ದಾಖಲಿಸಬಹುದು/ನವೀಕರಿಸಬಹುದು. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ ‘ಷೇರುದಾರರ ಸಾಮಾನ್ಯ ಪ್ರಶ್ನೆಗಳು’ (FAQs) ಮತ್ತು ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿಗಳನ್ನು ನೋಡಬಹುದು ಅಥವಾ ಕೆಳಗೆ ಹೆಸರಿಸಿರುವ ಕಂಪನಿಯ/ಅದರ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರ ಅಧಿಕಾರಿಯನ್ನು ಸಂಪರ್ಕಿಸಬಹುದು:

ವಿವರಗಳು	ಕೆಫಿನ್ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್	3M ಇಂಡಿಯಾ ಲಿಮಿಟೆಡ್
ವಿಳಾಸ	ಸೆಲೆನಿಯಮ್ ಟವರ್, ಬಿ, ಪ್ಲಾಟ್ 31–32, ಗಾಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಬಾದ್ - 500 032	ವೀವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560001.
ಹೆಸರು ಮತ್ತು ಹುದ್ದೆ	ಶ್ರೀ ರಾಜೀವ್ ಕುಮಾರ್ ಡೆಪ್ಯೂಟಿ ಮ್ಯಾನೇಜರ್–ಕಾರ್ಪೊರೇಟ್ ರಿಜಿಸ್ಟ್ರಿ	ಶ್ರೀ ವಿ. ಶ್ರೀನಿವಾಸನ್ ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ದೂರವಾಣಿ	040-6716 1524	080-22231414
ಇ–ಮೇಲ್	rajeev.kr@kfintech.com	investorhelpdesk.in@mmm.com

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
3M ಇಂಡಿಯಾ ಲಿಮಿಟೆಡ್‌ನ ಪರವಾಗಿ
ವಿ. ಶ್ರೀನಿವಾಸನ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 17, 2021

ಸ್ಥಾಪನೆ : 1907
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
ಕಛೇರಿ : 26678572 : 26600512 : 26609066.
ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ
ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್ಸ್‌ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ–ಹರಾಜು).
ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **“ಎಲ್ಲಿ ಹೇಗಿದೆಯೋ ಹಾಗೆ”, “ಎಲ್ಲಿ ಏನಿದೆಯೋ ಹಾಗೆ”, ಮತ್ತು “ಅಲ್ಲಿ ಏನೇ ಇರಲಿ ಹಾಗೆ”** ಆಧಾರದ ಮೇಲೆ ದಿನಾಂಕ : **29.03.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.
ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **28.03.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀ. ರವೀಂದ್ರ. ಎನ್. ನಂ. 224, 2ನೇ ಕ್ರಾಸ್ ರಾಮಯ್ಯ ಲೇಔಟ್, ಕಲ್ಯಾಣ್ ನಗರ, ಹೊರಮಾವು ಅಗರ ಬೆಂಗಳೂರು–43. ಶಾಖೆ:– ಹೆಚ್,ಆರ್. ಬಿ.ಆರ್. ಲೇಔಟ್,	ಖಾನೇಶುಮಾರಿ ನಂ. 132, ಹೌಸ್ ಲಿಸ್ಟ್ ಖಾತಾ ನಂ. 244/132, ಸರ್ವೆ ನಂ. 151/1, ಬಿ.ಬಿ.ಎಂ.ಪಿ. ಹಳೇ ಖಾತಾ ನಂ. 132/1, ಹಾಲಿ ಖಾತಾ ನಂ. 244, ಬಿ.ಬಿ.ಎಂ.ಪಿ. ವಾರ್ಡ್ ನಂ. 25 ಹೊರಮಾವು, ಹೊರಮಾವು ಅಗರ ವಿಲೇಜ್, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು. ಪೂರ್ವ–ಪಶ್ಚಿಮ : $\frac{83.6+88.4}{2}$ ಅಡಿಗಳು ಮತ್ತು ಉತ್ತರ – ದಕ್ಷಿಣ : $\frac{32.11+30.10}{2}$ ಅಡಿಗಳು ಪೂರ್ವಕ್ಕೆ : ಆರ್. ವೆಂಕಟೇಶ್ ರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ : ಶ್ರೀನಿವಾಸರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ : ಆರ್. ವೆಂಕಟೇಶ್ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ : ರಸ್ತೆ.	ರೂ. 1,45,00,000/– (ಒಂದು ಕೋಟಿ ನಲವತ್ತೈದು ಲಕ್ಷ ಮಾತ್ರ)	ರೂ. 14,50,000/– (ಹದಿನಾಲ್ಕು ಲಕ್ಷ ಐವತ್ತು ಸಾವಿರ ಮಾತ್ರ)	14.02.2022 ಕ್ಕೆ ರೂ. 1,32,87,857/–	29.03.2022 ಬೆಳಿಗ್ಗೆ : 11:00 ರಿಂದ 12:00 ರ ವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 28.03.2022 ಸಂಜೆ : 5 : 00 ರ ವರೆಗೆ	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್. ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061. IFSC ಕೋಡ್ : INDB0BCCB02
ತಪಾಸಣೆಯ ದಿನಾಂಕ ಮತ್ತು ಸಮಯ: 21.03.2022 ಸಮಯ ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ	
ಬಿಡ್ ಗುಣಾಂಕ: ರೂ. 50,000/–	

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, “ಅಡಮಾನ ಸ್ವತ್ತುಗಳ ಮಾರಾಟ” ಶೀರ್ಷಿಕೆಯ ಅಡಿಯಲ್ಲಿ **www.bccbl.co.in,** ಅನ್ನು ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 29.03.2022 ರಂದು ಬೆಳಿಗ್ಗೆ : 10.00 ರಿಂದ 12.00 ರವರಗೆ **https://bankauctions.in** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://bankauctions.in** ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಉಚಿತವಾಗಿ ಪಡೆಯಬಹುದು ಮತ್ತು **E-auction (tentatively on 28.03.2022) from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/9515160062, E-mail: prakash@bankauctions.in & bhaskar@bankauctions.in**. ಹೆಚ್ಚಿನ ಮಾಹಿತಿಗಾಗಿ : bccbrec2021@gmail.com Mobile Number : 080-26600512, 26609066 & 9342781425.
ದಿನಾಂಕ : 16.02.2022
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2
5ನೇ ಮಹಡಿ, (ಪೂರ್ವದ್ವಾರ), ವಿವಿಧ ಭವನ, #49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001 ದೂ: 080–22254222

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸರ್ಕಾರವು ರಾಜ್ಯದ ಆಡಳಿತ ಮತ್ತು ಆಡಳಿತ ವ್ಯವಸ್ಥೆಯ ಸುಧಾರಣೆಯನ್ನು ಪರಿಶೀಲಿಸಲು ಮತ್ತು ಶಿಫಾರಸುಗಳನ್ನು ಮಾಡಲು ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ನ್ನು ಸ್ಥಾಪಿಸಿದೆ. ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2 ವಿವಿಧ ಇಲಾಖೆಗಳಲ್ಲಿನ ನಾಗರಿಕ ಸೇವಾ ವಿತರಣೆ, ಸರ್ಕಾರಿ ಪ್ರಕ್ರಿಯೆಗಳು, ಸಿಬ್ಬಂದಿ ಉತ್ಪಾದಕತೆ ಮತ್ತು ಕೆಲಸದ ಪರಿಸ್ಥಿತಿಗಳಲ್ಲಿನ ಸುಧಾರಣೆಗಳ ವಿಶ್ಲೇಷಣೆಯನ್ನು ನಡೆಸುತ್ತಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಕರ್ನಾಟಕದಲ್ಲಿ ಆಡಳಿತ ಮತ್ತು ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ರಾಜ್ಯದ ನಾಗರಿಕರಿಂದ ಸಲಹೆಗಳನ್ನು ಆಹ್ವಾನಿಸುತ್ತದೆ. ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೆಳಗೆ ನೀಡಲಾದ ಲಿಂಕ್ ಮೂಲಕ ಆನ್‌ಲೈನ್ ನಲ್ಲಿ ಅಥವಾ ಅಂಚೆ ಮುಖಾಂತರ ಮೇಲೆ ನೀಡಲಾದ ವಿಳಾಸಕ್ಕೆ ಕಳುಹಿಸಬಹುದು. https://karc2.karnataka.gov.in/add_suggestion_kn.php

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ: 19/2021–22 ದಿನಾಂಕ: 16.02.2022

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಡಬ್ಲ್ಯೂ–4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ WWW.eproc.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.442.00 ಲಕ್ಷಗಳು, ಕನಿಷ್ಠ ಮೊತ್ತ ರೂ.176.50 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 05.03.2022 ಸಮಯ 17.00 ಗಂಟೆಯವರೆಗೆ, ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂ/ಹಾಸನ/ಎಂಸಿಎ/755/2021–22

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂ: ಕೆಆರ್‌ಐಡಿಎಲ್/ಡಬ್ಲ್ಯೂ.ಕ್ಯು/ಜಿಎಲ್/2021-22 ದಿನಾಂಕ: 17.02.2022

ಗ್ರೂಪ್ ಲೀಡರ್ ಹೆಸರು ದಾಖಲಿಸಲು ಅರ್ಜಿ ಆಹ್ವಾನ

ಕೆಆರ್‌ಐಡಿಎಲ್ ಇವರು, ತಮಗೆ ವಹಿಸಿರುವ ಕಾಮಗಾರಿಗಳನ್ನು (ಭಾಗಶಃವಾಗಿ / ಪೂರ್ಣವಾಗಿ) ಕಾರ್ಯಗತಗೊಳಿಸಲು ಕೆಆರ್‌ಐಡಿಎಲ್‌ನಲ್ಲಿ ಗ್ರೂಪ್ ಲೀಡರ್ ಹೆಸರು ದಾಖಲಿಸಲು ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತಿಯುಳ್ಳ ವ್ಯಕ್ತಿಗಳು/ಸಂಸ್ಥೆಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ವಿವರಗಳಿಗಾಗಿ ದಿನಾಂಕ 21.02.2022 ರಂದು ಕೆಆರ್‌ಐಡಿಎಲ್‌ನ ವೆಬ್‌ಸೈಟ್: www.kridl.org ನೋಡಬಹುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಮುಖ್ಯ ಅಭಿಯಂತರರು (ಬಿಬಿಎಂಪಿ), ಕೆಆರ್‌ಐಡಿಎಲ್, ಬೆಂಗಳೂರು–09. ದೂರವಾಣಿ: 080–28015604
ಕಾರ್ಯಪಾಲಕ ಅಭಿಯಂತರರು (ಪಿ.ಸಿ.), ಕೇಂದ್ರ ಕಚೇರಿ, ಕೆಆರ್‌ಐಡಿಎಲ್, ಬೆಂಗಳೂರು–09, ದೂರವಾಣಿ: 9449832300/9480828260
ವಾಸಾಸಂ/ಎಂ.ಸ/3429/ಎಂಸಿಎ/2021-22 ಸಹಿ/–ಮುಖ್ಯ ಅಭಿಯಂತರರು (ಬಿಬಿಎಂಪಿ)

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ
ದರ್ಬಾರ ಹಾಲ್, ವಿಜಯಪುರ–586101. ಫೋನ್:08352–251289,250479
ಫ್ಯಾಕ್ಸ್:08352–251289,256666, ಇ–ಮೇಲ್:deo.bijapur@gmail.com
ನಂ:ಆರ್‌ಬಿ/ಸಿಆರ್/2021–22 ದಿನಾಂಕ:17.02.2022

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕಾರ್ಯಾಲಯದ ಸಿಬ್ಬಂದಿಗಳ ಉಪಯೋಗಕ್ಕಾಗಿ ಅವಶ್ಯಕ ಯಂತ್ರೋಪಕರಣ ಸಾಮಗ್ರಿಗಳನ್ನು ಖರೀದಿಸಲು ಜಿಲ್ಲಾಧಿಕಾರಿಗಳು ವಿಜಯಪುರ ರವರಿಂದ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ನಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಟೆಂಡರ್ ಇಂಡೆಂಟ್ ನಂ:RB/Office/Stationery/CR-11/2021-22
ಟೆಂಡರ್ ದಾಖಲಿಸಲು ಕೊನೆಯ ದಿನಾಂಕ: 01.03.2022 ಸಾಯಂಕಾಲ 05.00 ಗಂಟೆಯೊಳಗೆ.
ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿ ಕಛೇರಿಗೆ ಹಾಗೂ ಸಂಬಂಧಪಟ್ಟ ಸಂಕಲನದ ಶಿರಸ್ತೇದಾರ ಮೋ. ನಂ: 9980239303 ಅಥವಾ ದೂರವಾಣಿ ನಂ: 08352–251289, 250479 ಗೆ ಸಂಪರ್ಕಿಸಬಹುದಾಗಿದೆ.
ವಾಸಾಸಂ/ವಿಜಯಪುರ/535/ಎಂಸಿಎ/2021–22 ಸಹಿ/– ಜಿಲ್ಲಾಧಿಕಾರಿಗಳು, ವಿಜಯಪುರ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕೃಷ್ಣರಾಜ ಸಾಗರ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನಾ ವಿಭಾಗ, ಮಳವಳ್ಳಿ, ಜಿಲ್ಲೆ: ಮಂಡ್ಯ ಪಿನ್‌ಕೋಡ್–571430
ಫೋನ್ ನಂ: 08231 – 200217

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 07/2021–22 ದಿನಾಂಕ:15.02.2022

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 07/2021–22 ದಿನಾಂಕ 15.02.2022 ರಲ್ಲಿ ಒಟ್ಟು 15 ಕಾಮಗಾರಿ (ಅಂದಾಜಿನ ಕನಿಷ್ಠ ಮೊತ್ತ 7.93 & ಗರಿಷ್ಠ ಮೊತ್ತ 88.35 ಲಕ್ಷ) ಗಳಿಗೆ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2 & ಕೆ.ಡಬ್ಲ್ಯೂ–3 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ www.eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕೆಆರ್‌ಎಸ್ ಎಂ ಅಂಡ್ ಎಂಐಪಿ ವಿಭಾಗ, ಮಳವಳ್ಳಿ
ವಾಸಾಸಂ/ಸಮ–ಮಂಡ್ಯ/ಎಂಸಿಎ/633/2021–22

KMF
ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ
ಲಕ್ಕಮನಹಳ್ಳಿ, ಕೈಗಾರಿಕಾ ಪ್ರದೇಶ, ಧಾರವಾಡ – 580 004
ದೂ.ಸಂಖ್ಯೆ: 2467603/2468380 E-mail-dharwarnin@gmail.com ಫ್ಯಾಕ್ಸ್: 2468268
ಟೆಂಡರ್ ಸಂಖ್ಯೆ:–KMF/2021-22/PM/WORK_INDENT1507/CALL-2 ದಿನಾಂಕ:–16–02–2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, (ಧಾಮುಲ್) ಧಾರವಾಡವು ತಾಂತ್ರಿಕ ಮತ್ತು ವಾಣಿಜ್ಯ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ವಸ್ತುಗಳು/ಕೆಲಸಗಳನ್ನು ನಿರ್ವಹಿಸಲು ಅರ್ಹ ಮಾರಾಟಗಾರರು / ಪೂರೈಕೆದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

Sl. No.	Description	Qty	Emd Amount
1	Design, Supply, Installation, Testing and Commissioning of the following items/works at Ron and Gadag Chilling Centers of Dharwad Milk Union Ltd on turnkey basis as per technical specification mentioned in tender documents a) 10kL Capacity Milk silos (MOC: SS304) with standard accessories and necessary civil/electrical works on turnkey basis – 01 no for each site (Total 02 nos) b) Supply of Can Drip Saver Units (MOC: SS304) – 01 no for each site (Total 02 nos)	1 Job	54000/-

ಇ–ಟೆಂಡರ್ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ (ಠೇವಣಿ) ಮೊತ್ತವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ್ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸತಕ್ಕದ್ದು. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಆನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸಹಾಯವಾಣಿ ಸಂಖ್ಯೆ: 080–46010000/68948777, ಇ–ಮೇಲ್:-support@ihelpdsk.com ರ ಮೂಲಕ ಸಂಪರ್ಕಿಸಬಹುದು.

1	ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ	ದಿ:–03.03.2022, ರಂದು ಸಂಜೆ 4.00 ರ ವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–04.03.2022, ರಂದು ಸಂಜೆ 4.30 ರ ನಂತರ
3	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–08.03.2022, ರಂದು ಬೆಳಿಗ್ಗೆ 10 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.
ಸಂಖ್ಯೆ: ಮನಪಾಬ/ತಾಂ/15ನೇ ಹಕಾ/ಮ.ಟೆಂ.ಪ್ರ/2021–22
ದಿನಾಂಕ: 15.02.2022

ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2021–22 ನೇ ಸಾಲಿನ 15ನೇ ಹಣಕಾಸು ಯೋಜನೆಯ ನಿರ್ಬಂಧಿತ ಮತ್ತು ಮುಕ್ತ ಹಾಗೂ ಸಾಮಾನ್ಯ ನಿಧಿ ಅನುದಾನದಡಿಯಲ್ಲಿ ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 10.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 98.00 ಲಕ್ಷಗಳು ಇರುತ್ತದೆ. ಇಂಡೆಂಟ್ ಸಂಖ್ಯೆ: 123689(Others)/Call-2, 123692(Others)/Call-2, 123693(Others)/Call-2, 123695(Others)/Call-2, 123697(Others)/Call-2, CC/ENG/BUS-SHELTER/O&M/2021-22/Call-3, 125819/Call-2, CCB/ENG/ ROPLANT/2021-22/ PACKAGE-1/Call-2, CCB/ENG/ ROPLANT/2021-22/ PACKAGE-2/Call-2 & CCB/ENG/ROPLANT/ 2021-22/PACKAGE-3/Call-2 ಟೆಂಡರ್ ಸಲ್ಲಿಸಲು ದಿನಾಂಕ:18.02.2022 ರಿಂದ 04.03.2022 ರ ಸಂಜೆ 4.00 ಗಂಟೆ ಒಳಗಾಗಿ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ:04.03.2022 ರಂದು ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ಮತ್ತು ಟೆಂಡರ್ ತೆರೆಯುವ ದಿನಾಂಕ:07.03.2022 ಬೆಳಗ್ಗೆ 11.00 ಗಂಟೆ. ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ, ಮೀಸಲಾತಿ ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್:http://eproc.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/755/ಎಂಸಿಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ತಿದ್ದುಪಡಿ ಟೆಂಡರ್ ಪ್ರಕಟಣೆ
(ಅಲ್ಪಾವಧಿ ಟೆಂಡರ್ ಪ್ರಕಟಣೆ)
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ಎತ್ತಿನಹೊಳೆ ಯೋಜನೆ ನಾಲಾ ಪಂಕ್ತೀಕರಣದಲ್ಲಿ ಬರುವ ವಿದ್ಯುತ್ ಲೈನ್ ಸ್ಥಳಾಂತರಿಸುವ 04 ಕಾಮಗಾರಿಗಳು ಮತ್ತು ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ನಾಲಾ ಪಂಕ್ತೀಕರಣದಲ್ಲಿ ಬರುವ Delivery Chambers ಸ್ಥಳಾಂತರಿಸಿ ಮರು ನಿರ್ಮಾಣದ 01 ಕಾಮಗಾರಿ ಸೇರಿದಂತೆ ಟೆಂಡರ್ ಗಿಟ್ಟ ಮೊತ್ತ ರೂ.4.00 ಲಕ್ಷಗಳಿಂದ ರೂ.75.00 ಲಕ್ಷಗಳ ವರೆಗಿನ ಒಟ್ಟು 05 ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ"** ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, **ದಿ: 17–02–2022 ರಿಂದ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯು "ಅಲ್ಪಾವಧಿ ಟೆಂಡರ್ ಪ್ರಕಟಣೆ" ಎಂದು ತಿಳಿಯುವುದು.** ಹಾಗೂ ಸದರಿ **ಟೆಂಡರ್ ಗೆ ದಿ:25.02.2022 ರ ಘಂಟೆ 17.00 ರ ಒಳಗೆ ಬಿಡ್‌ನ್ನು ಸಲ್ಲಿಸಬಹುದು,** ಉಳಿದಂತೆ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರವರ ಕಛೇರಿ,
ಎನ್.ಆರ್. ಚೌಕ, ಬೆಂಗಳೂರು – 560 002.
ಸಂಖ್ಯೆ: ಬಿ12(3ಎ)ಎಲ್.ಪಿ.ಆರ್/310/2021–22 ದಿನಾಂಕ: 16.02.2022

ನೇಮಕಾತಿ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕಾನೂನು ಕೋಶದ **ಮುಖ್ಯಸ್ಥರ (ಹೆಡ್ ಆಫ್ ದಿ ಲೀಗಲ್ ಸೆಲ್) ಹುದ್ದೆಗಾಗಿ,** ಸೇವಾ ವಿಷಯಗಳಲ್ಲಿ, ಕಾರ್ಮಿಕರ ಕಾನೂನು, ಭೂ ಕಾನೂನು ಇತ್ಯಾದಿ ವಿಷಯಗಳಲ್ಲಿ ಉತ್ತಮ ಪರಿಣಿತಿ ಹೊಂದಿರುವ ಮತ್ತು ಕರ್ನಾಟಕದಲ್ಲಿ ಕನಿಷ್ಟ 10 ವರ್ಷಗಳ ವಕೀಲ ವೃತ್ತಿಯ ಅನುಭವ ಹೊಂದಿರುವ ಅಥವಾ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವವರು 65 ವರ್ಷಗಳಿಗೆ ಮೀರದ ವಯೋಮಿತಿ ಹೊಂದಿರತಕ್ಕದ್ದು.

(1) ಹುದ್ದೆಯ ಅವಧಿ ಪ್ರಾರಂಭದಲ್ಲಿ 01 ವರ್ಷದವರೆಗಿರುತ್ತದೆ. ಕಾರ್ಯಕ್ಷಮತೆಯನ್ನು ಆಧರಿಸಿ 01 ರಿಂದ 03 ವರ್ಷಗಳವರೆಗೆ ವೃತ್ತಿಯಲ್ಲಿ ಮುಂದುವರೆಸಲಾಗುವುದು.
(2) ಕೆಸಿಎಸ್‌ಆರ್ ನಿಯಮಗಳ ಪ್ರಕಾರ ವೇತನ ನಿಗಧಿಪಡಿಸಲಾಗುವುದು. ಬಿಬಿಎಂಪಿ ಉದ್ಯೋಗಿಗಳಿಗಿರುವಂತೆ ರಜೆ ಮತ್ತು ವೈದ್ಯಕೀಯ ಸೌಲಭ್ಯಗಳಿರುವುದು.
(3) ಸಂದರ್ಶನದ ಮೂಲಕ ನೇಮಕ ಮಾಡಲಾಗುವುದು.

ಸಂಪೂರ್ಣ ವ್ಯಕ್ತಿ ಚಿತ್ರಣ (ಬಯೋಡೇಟ)ವಿರುವ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿರುವ ಅರ್ಜಿಗಳನ್ನು **'ಮುಖ್ಯ ಆಯುಕ್ತರು' ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್. ಚೌಕ, ಬೆಂಗಳೂರು – 560 002'** ಇವರ ವಿಳಾಸಕ್ಕೆ ಲಕೋಟೆಯ ಮೇಲೆ **'ಕಾನೂನು ಕೋಶದ ಮುಖ್ಯಸ್ಥರ ಹುದ್ದೆಗಾಗಿ ಅರ್ಜಿ'** ಎಂಬ ಮೇಲ್ಬರಹ ಮಾಡಿ ದಿನಾಂಕ: **28.02.2022**ರೊಳಗೆ ಸಲ್ಲಿಸಿರಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದಾಗಿರುತ್ತದೆ.

ಸಹಿ/– ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19-ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಬೆಂ.ಘ.ತ್ಯಾ.ನಿ.ನಿ),
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ,
ಬೆಂಗಳೂರು – 560 056.
ಸಂಖ್ಯೆ: ಕಾಪಾಅ/ಬೆಂ.ಘ.ತ್ಯಾ.ನಿ.ನಿ/ಟೆಂಡರ್/03/2021–22 ದಿನಾಂಕ: 17.02.2022

ಅಲ್ಪಾವಧಿ ಪೂರ್ವಾರ್ಹತೆ ಟೆಂಡರ್ ಪ್ರಕಟಣೆ ಆಹ್ವಾನ

ಕಾರ್ಯಪಾಲಕ ಅಭಿಯಂತರರು–4, ಬೆಂ.ಘ.ತ್ಯಾ.ನಿ.ನಿ ಇವರು ಮಹದೇವಪುರ ಕ್ಷೇತ್ರದ ಕಣ್ಣೂರು ಸರ್ವೆ ಸಂ.50ರಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್ ಸ್ಥಾಪಿಸಲು ಮತ್ತು ಅದರ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ಒಂದು ಬಾರಿಯ ಅಭಿವೃದ್ಧಿ ಹಾಗೂ ಸುತ್ತಮುತ್ತಲ ಗ್ರಾಮಗಳನ್ನು ಅಭಿವೃದ್ಧಿ ಮಾಡಲು ಗುತ್ತಿಗೆದಾರರು ಮತ್ತು/ಅಥವಾ ಸಂಸ್ಥೆಗಳ ಪೂರ್ವಾರ್ಹತೆ ನಿಗದಿಪಡಿಸಲು ಉದ್ದೇಶಿಸಿದೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)
ಮಹದೇವಪುರ ಕ್ಷೇತ್ರದ ಕಣ್ಣೂರು ಸರ್ವೆ ಸಂ.50ರಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್ ಸ್ಥಾಪನೆ ಮತ್ತು ಅದರ ಕಾರ್ಯಾಚರಣೆ ಹಾಗೂ ನಿರ್ವಹಣೆ ಒಳಗೊಂಡಂತೆ ಒಂದು ಬಾರಿಯ ಅಭಿವೃದ್ಧಿ ಹಾಗೂ ಸುತ್ತಮುತ್ತಲ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಕಾಮಗಾರಿ.	8870.00

(1) ಆಸಕ್ತ ಅರ್ಹ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಹಾಗೂ ಪೂರ್ವಾರ್ಹತೆ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ದಿನಾಂಕ **18.02.2022** ರಿಂದ **05.03.2022**ರ ಸಂಜೆ **4:00** ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಪೂರ್ವಾರ್ಹತೆ ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಇತರೆ ಯಾವುದೇ ವಿಧಾನಗಳ ಮೂಲಕ ಪೂರ್ವಾರ್ಹತೆ ಟೆಂಡರ್ ಸಲ್ಲಿಸಿದ್ದಲ್ಲಿ ಪುರಸ್ಕರಿಸುವುದಿಲ್ಲ. ಟೆಂಡರ್‌ದಾರರು 3ನೇ ಹಂತದ ಡಿಜಿಟಲ್ ಸಹಿಯನ್ನು ನಿಯೋಜಿತ ಸಂಸ್ಥೆಗಳಿಂದ ಹೊಂದಿರತಕ್ಕದ್ದು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುತ್ತದೆ) ನಂತರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೋಂದಾಯಿಸಿಕೊಳ್ಳುವುದು ಮತ್ತು ಟೆಂಡರ್‌ಗಳನ್ನು ಅವರವರ ಬಳಕೆದಾರರ ಐಡಿ ಮತ್ತು ಡಿಜಿಟಲ್ ಸಹಿ ಬಳಸಿಕೊಂಡು ಟೆಂಡರ್‌ಗಳನ್ನು ಸಲ್ಲಿಸುವುದು.
(2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **25.02.2022**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಬೆಂ.ಘ.ತ್ಯಾ.ನಿ.ನಿ, 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560056 ಇಲ್ಲಿ ನಡೆಸಲಾಗುವುದು.
(3) ಪೂರ್ವಾರ್ಹತೆ ದಾಖಲೆಗಳನ್ನು ಅವಶ್ಯಕ ಮಾಹಿತಿ/ದಾಖಲೆಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಟೆಂಡರ್ ದಾಖಲೆಗಳಂತೆ ದಿನಾಂಕ: **05.03.2022**ರ ಸಂಜೆ **4:30** ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸುವುದು ಹಾಗೂ ಮೊದಲ ಫೋಲ್ಡರ್‌ನಲ್ಲಿರುವ ತಾಂತ್ರಿಕ–ವಾಣಿಜ್ಯ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **07.03.2022**ರ ಸಂಜೆ **4:00** ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ಇಚ್ಛಿಸುವ ಟೆಂಡರ್‌ದಾರರು ಅಥವಾ ಹಾಜರಿರುವ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕದಂದು ಕಚೇರಿ ರಜೆಯಿದ್ದಲ್ಲಿ ಮುಂದಿನ ದಿನಾಂಕದಂದು ಈಗಾಗಲೇ ನಿಗದಿಪಡಿಸಿರುವ ಸ್ಥಳ ಮತ್ತು ಸಮಯದಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಬೆಂ.ಘ.ತ್ಯಾ.ನಿ.ನಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ
ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(39ಇ)2021-22:ಎಇ-1 ದಿನಾಂಕ: 17.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ / 3ನೇ ಕರೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕಶೀರ್ಷಿಕೆ :-5054-04-377-0-01-154 ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆಗಳು ರಡಿ ಇಂಡೆಂಟ್ ನಂ 141849 (ಅಂ.ಮೊತ್ತ ರೂ.150.00 ಲಕ್ಷ)ರ ಕಾಮಗಾರಿಗೆ 3ನೇ ಕರೆಯಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಈ ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ:25.02.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
DIPR / MNG / 1018/ MPL / 21-22 ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ಕೊಠಡಿ ಸಂ. 126, ಮೊದಲನೇ ಮಹಡಿ, ವಿಕಾಸ ಸೌಧ, ಬೆಂಗಳೂರು–560001
ದೂರವಾಣಿ ಸಂ: 080–22254465, 080–22034899
ಸಂಖ್ಯೆ. KSA-15030/26/2016-KSA_ADM ದಿನಾಂಕ : 08–02–2022

ನೇಮಕಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು ಇಲ್ಲಿ ಖಾಲಿ ಇರುವ ಗ್ರೂಪ್–ಸಿ ವೃಂದಕ್ಕೆ ಸೇರಿದ ಹೈದರಾಬಾದ್ ಕರ್ನಾಟಕ ವೃಂದದ ಪರಿಶಿಷ್ಟ ಜಾತಿಗೆ ಸೇರಿದ ಒಂದು (1) ಬ್ಯಾಕ್ ಲಾಗ್ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಗದಿ ಪಡಿಸಿರುವ ಅರ್ಜಿ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ದ್ವಿಪ್ರತಿಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.
ಹುದ್ದೆಯ ವಿವರ: ತಾಂತ್ರಿಕ ಸಹಾಯಕರು (ರೆಪ್ರೊಗ್ರಫಿ).
ವೇತನ ಶ್ರೇಣಿ: ರೂ.33450–62600.
ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ದಿನಾಂಕ: **19/02/2022 ರಿಂದ 21/03/2022ರ ಸಂಜೆ : 05.30**
ವಯೋಮಿತಿ: ಕನಿಷ್ಠ: 18 ವರ್ಷಗಳು, ಗರಿಷ್ಠ: 40 ವರ್ಷಗಳು.
ಅರ್ಜಿಯನ್ನು ಇಲಾಖೆಯಿಂದ ಅಥವಾ ಇಲಾಖಾ ವೆಬ್ ಸೈಟಿನ ವಿಳಾಸ https://statearchives.karnataka.gov.in/ ಇಲ್ಲಿ ಪಡೆಯಬಹುದು.

ಸಹಿ/–
ನಿರ್ದೇಶಕರು
ವಾ.ಸಂ.ಇ/ಬೆಂ.ನ/ಶ್ರೇಷ್ಠ/3402/2021–22 ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಎಲೆಕ್ಟ್ರಾನಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು **ವಿಚಾರಣೆ ಸಂಖ್ಯೆ:** ಬೆವಿಕಂ/ಬಿಸಿ–53/ಉಪ್ರವ್ಯ(ಎಸ್‌ಜಿ&ಇವಿ)/2021–22/ENQ–22 ದಿನಾಂಕ: 17.02.2022ರಂತೆ "ಬೆಂಗಳೂರು ಮಹಾನಗರ ದಕ್ಷಿಣ ವೃತ್ತದ ಅಸ್ತಿತ್ವದಲ್ಲಿರುವ ಎಲೆಕ್ಟ್ರೋ–ಮೆಕಾನಿಕಲ್ ಮೀಟರ್/DC/MNR ಬದಲಿಗೆ LT AC ಸಿಂಗಲ್ ಫೇಸ್ 2 ವೈರ್ 5–30 A DLMS ಕಂಪ್ಲೈಂಟ್ ಮತ್ತು LT AC 3 ಫೇಸ್ 4 ವೈರ್ 5–30 A DLMS ಕಂಪ್ಲೈಂಟ್ ಕ್ಲಾಸ್–1 ನಿಖರತೆಯ ಎಲೆಕ್ಟ್ರೋ ಸ್ಟ್ಯಾಟಿಕ್ ಮೀಟರ್ ಪೂರೈಕೆ, ಫಿಕ್ಸಿಂಗ್ ಹಾಗೂ ವೈರಿಂಗ್ ಮತ್ತು ಅಸ್ತಿತ್ವದಲ್ಲಿರುವ 3 ಫೇಸ್ ಎಲೆಕ್ಟ್ರೋ–ಮೆಕಾನಿಕಲ್ ಮೀಟರ್ ರೇಟಿಂಗ್"ಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.
ಬಿಡ್ ದಾಖಲೆಗಳ ಲಭ್ಯತೆ: **21.02.2022**ರಂದು **17:00 ಗಂಟೆಯ** ನಂತರದಿಂದ. ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **02.03.2022**ರಂದು **17:00 ಗಂಟೆಯವರೆಗೆ.** ಬಿಡ್ ದಾಖಲೆಗಳನ್ನು ತೆರೆಯುವುದು: **04.03.2022**ರಂದು **17:00** ಗಂಟೆಗೆ. **e-portal**ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.02.2022**ರಂದು **17:00** ಗಂಟೆಯವರೆಗೆ. ಬಿಡ್ ಪೂರ್ವ ಸಭೆ: **25.02.2022 @ 11:00 ಗಂಟೆಗೆ ಬೋರ್ಡ್ ರೂಮ್, ಕಾರ್ಪೋರೇಟ್ ಕಛೇರಿ, ಬೆವಿಕಂ.** ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬೆವಿಕಂ ಆಹ್ವಾನಿಸಿದೆ. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ನೇರವಾಗಿ ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ವಿ.), (ಎಸ್‌ಜಿ&ಇವಿ), ಬ್ಲಾಕ್–2, 1ನೇ ಮಹಡಿ, ಕೆ.ಆರ್. ವೃತ್ತ, ಬೆಂಗಳೂರು–560001, ದೂ. ಸಂಖ್ಯೆ: 080–22204344

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ನ್ಯಾಯ ವಿಜ್ಞಾನ ಪ್ರಯೋಗಾಲಯ
ಮಡಿವಾಳ, ಬೆಂಗಳೂರು–560068

ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರ, ಸಹಾಯಕ ನಿರ್ದೇಶಕರ, ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸುವ ಕುರಿತು

ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಖಾಲಿ ಇರುವ 1 ಉಪ ನಿರ್ದೇಶಕರ ಹುದ್ದೆ, 6 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮತ್ತು 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಅಹ್ವಾನಿಸಲಾಗಿದ್ದು, ಈ ಕೆಳಕಂಡ ವಿದ್ಯಾರ್ಹತೆಗಳನ್ನು/ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

1) ಉಪ ನಿರ್ದೇಶಕರು
1. ವಯೋಮಿತಿ :– ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :– ಡಾಕ್ಟರೇಟ್ ಪದವಿಯನ್ನು ಭೌತಶಾಸ್ತ್ರ/ರಸಾಯನಶಾಸ್ತ್ರ/ಜೈವಿಕ ತಂತ್ರಜ್ಞಾನ/ಫಾರೆನ್ಸಿಕ್ ಸೈನ್ಸ್/ಜೀವರಸಾಯನಶಾಸ್ತ್ರ/ಫಾರ್ಮಕಾಲಜಿ/ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ಸೂಕ್ಷ್ಮಜೀವವಿಜ್ಞಾನ/ಜೀವ ವಿಜ್ಞಾನ ವಿಷಯದಲ್ಲಿ ಪಡೆದಿರಬೇಕು.
3. ಕೆಲಸ ಅನುಭವ:–
ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋದನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

2) ಸಹಾಯಕ ನಿರ್ದೇಶಕರು
1. ವಯೋಮಿತಿ :– ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :– ಡಾಕ್ಟರೇಟ್ ಪದವಿಯನ್ನು ರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಸಮಾನಾಂತರ ವಿದ್ಯಾರ್ಹತೆಯನ್ನು ಪಡೆದಿರಬೇಕು.
3. ಕೆಲಸ ಅನುಭವ:– ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಹಿರಿಯ ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

3) ಹಿರಿಯ ವೈಜ್ಞಾನಿಕ ಅಧಿಕಾರಿ
1. ವಯೋಮಿತಿ :– ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ
2. ವಿದ್ಯಾರ್ಹತೆ :– ಸ್ನಾತಕೋತ್ತರ ಪದವಿಯನ್ನು ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ಜೀವರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ಜೀವ ವಿಜ್ಞಾನ/ರಸಾಯನಶಾಸ್ತ್ರ/ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಕಂಪ್ಯೂಟರ್ ವಿಜ್ಞಾನ/ಎಲೆಕ್ಟ್ರಾನಿಕ್/ಮಾಹಿತಿ ವಿಜ್ಞಾನ/ವಿದ್ಯಾರ್ಹತೆಯನ್ನು ಶೇಕಡ 55 ಅಂಕಗಳನ್ನು ಪಡೆದಿರಬೇಕು.
3. ಕೆಲಸ ಅನುಭವ:–ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು

ಈ ಗುತ್ತಿಗೆ ನೇಮಕಾತಿಯು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಯದಾಗಿದ್ದು, ಒಂದು ವರ್ಷದ ವಿಸ್ತರಣೆಗೆ ಅವಕಾಶವಿರುತ್ತದೆ. ಸದರಿ ಹುದ್ದೆಯಲ್ಲಿ ಗುತ್ತಿಗೆ ಮೇರೆಗೆ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟಗೊಂಡ 20 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿ ಮತ್ತು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಹಿರಿಯ ವೈಜ್ಞಾನಿಕ ಅಧಿಕಾರಿ ಗುತ್ತಿಗೆ ಹುದ್ದೆಗಳ ನೇಮಕಾತಿ ಸಮಿತಿ, ಮಡಿವಾಳ, ಬೆಂಗಳೂರು–560068 ಇಲ್ಲಿಗೆ ತಮ್ಮ ಸೇವಾ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಸಹಿ/–
ನಿರ್ದೇಶಕರು
ನ್ಯಾಯ ವಿಜ್ಞಾನ ಪ್ರಯೋಗಾಲಯ
ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/3415/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲೂ ಹಿಜಾಬ್ ನಿಷೇಧಿಸಿ ಆದೇಶ

ಬೆಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಸತಿ ಶಾಲೆ ಮತ್ತು ಕಾಲೇಜುಗಳು, ಮೌಲಾನಾ ಆಜಾದ್ ಮಾದರಿ ಶಾಲೆಗಳ ತರಗತಿ ಕೊಠಡಿಗಳಲ್ಲಿ ಕೇಸರಿ ಶಾಲು, ಸ್ಕಾರ್ಫ್, ಹಿಜಾಬ್ ಮತ್ತು ಇತರ ಧಾರ್ಮಿಕ ವಸ್ತ್ರ ಹಾಗೂ ಬಾವುಟಗಳನ್ನು ಧರಿಸುವುದನ್ನು ನಿಷೇಧಿಸಿ ಬುಧವಾರ ಸುತ್ತೋಲೆ ಹೊರಡಿಸಲಾಗಿದೆ.

ಹಿಜಾಬ್ ಪ್ರಕರಣದ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ ತ್ರಿಸದಸ್ಯ ಪೀಠವು ಫೆಬ್ರುವರಿ 10ರಂದು ಹೊರಡಿಸಿರುವ ಮಧ್ಯಂತರ ಆದೇಶವನ್ನು ಆಧರಿಸಿ ಈ ಸುತ್ತೋಲೆ ಹೊರಡಿಸಲಾಗಿದೆ.

'ಹೈಕೋರ್ಟ್ ಮಧ್ಯಂತರ ಆದೇಶವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆ ಮತ್ತು ಕಾಲೇಜುಗಳು ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೂ ಅನ್ವಯವಾಗುತ್ತದೆ' ಎಂದು ಇಲಾಖೆಯ ಕಾರ್ಯದರ್ಶಿ ಪಿ. ಮಣಿವಣ್ಣನ್ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಹಿಜಾಬ್‌ಗೆ ಅವಕಾಶ ನೀಡುವಂತೆ ಆಗ್ರಹಿಸಿ ಶಿವಮೊಗ್ಗದ ಜಿಲ್ಲಾಧಿಕಾರಿ ಕಚೇರಿ ಎದುರು ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು

ಹಿಜಾಬ್: ನಿಲ್ಲದ ಪ್ರತಿಭಟನೆ

ಒಂದನೇ ಪುಟದಿಂದ

ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ಆಕ್ಷೇಪ ವ್ಯಕ್ತಪಡಿಸಿದರು. ದೂರವಾಣಿ ಕರೆ ಮಾಡಿ ಪೋಷಕರಿಗೆ ವಿಷಯ ತಿಳಿಸಿದರು. ಪೋಷಕರು ಕಾಲೇಜು ಬಳಿ ಜಮಾಯಿಸಿದ್ದರು. ಪ್ರಾಂಶುಪಾಲ ಡಾ.ಜಿ.ಮುನಿವೆಂಕಟಪ್ಪ ಅವರು ಪೋಷಕರಿಗೆ ನ್ಯಾಯಾಲಯ ಆದೇಶ ಮನವರಿಕೆ ಮಾಡಿದರು. ತಹಶೀಲ್ದಾರ್ ಶೋಭಿತಾ, ಡಿವೈಎಸ್‌ಪಿ ಕೆ.ವಿ. ರೆಡ್ಡಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಹುಣಸೂರು ನಗರದ ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿ 15, ಮೈಸೂರು ತಾಲ್ಲೂಕಿನ ಕೆ.ಆರ್. ಮಿಲ್ ಸರ್ಕಾರಿ ಪ್ರೌಢಶಾಲೆಯ ಇಬ್ಬರು ಹಾಗೂ ನಂಜನಗೂಡು ತಾಲ್ಲೂಕಿನ ಕವಲಂದೆಯ 31, ಅರಸೀಕೆರೆಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ 12 ಹಾಗೂ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ಗೌತಮ್ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರು ವಾಪಸಾದರು.

ಹೊಸದುರ್ಗದ ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ 7, ದಾವಣಗೆರೆ ನಗರದ ಎವಿಕೆ ಮಹಿಳಾ ಕಾಲೇಜಿಗೆ ಹಿಜಾಬ್ ಹಾಕಿಕೊಂಡು ಬಂದಿದ್ದ 50ಕ್ಕೂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅವಕಾಶವಿಲ್ಲದ ಕಾರಣ ಮನೆಗೆ ಮರಳಿದರು.

ಗದಗ ಜಿಲ್ಲೆ ನರಗುಂದ ಪಟ್ಟಣದ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಮುಂಡಗೋಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 20 ವಿದ್ಯಾರ್ಥಿನಿಯರು ವಾಪಸ್ ತೆರಳಿದರು.

ಹಿಜಾಬ್ ತೆಗೆದು ತರಗತಿಗೆ ಹಾಜರು: ಮದ್ದೂರಿನ ಕಮಲಾ ನೆಹರೂ ಬಾಲಿಕಾ ಪ್ರಾಥಶಾಲೆ ಎದುರು ವಾಗ್ವಾದ ನಡೆಸಿದ ಪೋಷಕರು, ನಂತರ ಹಿಜಾಬ್ ತೆಗೆಸಿ ಮಕ್ಕಳನ್ನು ಶಾಲೆಯೊಳಕ್ಕೆ ಕಳಿಸಿದರು. ಲಕ್ಷ್ಮೇಶ್ವರ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲೂ ಇದೇ ಘಟನೆ ನಡೆಯಿತು. ಕೆಲವು ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ತೆರಳಿದರು.

ಆನ್‌ಲೈನ್ ತರಗತಿ: ಬೀದರ್ ಜಿಲ್ಲೆಯ ಹುಮನಾಬಾದ್, ಬಸವಕಲ್ಯಾಣ ಕೆಲ ಕಾಲೇಜ್‌ಗಳಲ್ಲಿ ಆನ್‌ಲೈನ್ ತರಗತಿಗೆ ಚಾಲನೆ ನೀಡಲಾಗಿದೆ. ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಫೆ. 19ರ ವರೆಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಕೆ.ರಾಕೇಶ್ ಕುಮಾರ್ ಆದೇಶಿಸಿದ್ದಾರೆ. ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನಡೆಸುವಂತೆಯೂ ಸೂಚಿಸಿದ್ದಾರೆ. ಹಿರಿಯೂರಿನಲ್ಲಿ ತೇರು ಮಲ್ಲೇಶ್ವರ ಸ್ವಾಮಿ ಜಾತ್ರೆ ಅಂಗವಾಗಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಮೈಸೂರು ನಗರದ ರಾಜೀವ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ 14 ವಿದ್ಯಾರ್ಥಿನಿಯರಿಗೆ ಆನ್‌ಲೈನ್ ತರಗತಿಯನ್ನು ಆರಂಭಿಸಲಾಗಿದೆ.

ಹಿಜಾಬ್‌ಗೆ ಆಗ್ರಹಿಸಿ ಪ್ರತಿಭಟನೆ: ಶಿವಮೊಗ್ಗ ಜಿಲ್ಲೆಯ ವಿವಿಧ ಶಾಲೆಯ ವಿದ್ಯಾರ್ಥಿನಿಯರು ಗುರುವಾರವೂ ಪ್ರತಿಭಟನೆ ಮುಂದುವರಿಸಿದರು. ಕರ್ನಾಟಕ ಪಬ್ಲಿಕ್ ಶಾಲೆಯ ಪಿಯು, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಶಿಕ್ಷಕರು ವಿದ್ಯಾರ್ಥಿನಿಯರ ಮನವೊಲಿಸಿ ತರಗತಿಗೆ ಕರೆದುಕೊಂಡು ಹೋದರು.

ಡಿ.ಸಿ ಕಚೇರಿ ಆವರಣಕ್ಕೆ ಹಿಜಾಬ್ ವಿವಾದ

ಶಿವಮೊಗ್ಗ: ನಗರದಲ್ಲಿ ಹಿಜಾಬ್ ವಿವಾದ ಹೊಸ ಸ್ವರೂಪ ಪಡೆದುಕೊಂಡಿದೆ. ಕಾಲೇಜು ಬದಲು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ತಲುಪಿದೆ.

ನ್ಯಾಯಾಲಯದ ತೀರ್ಪು ಬರುವವರೆಗೂ ಹಿಜಾಬ್‌ಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಕೆಲ ಕಾಲೇಜುಗಳಲ್ಲಿ ಹಿಜಾಬ್ ನಿರಾಕರಿಸಿದ್ದಕ್ಕೆ ಕಾಲೇಜು ಗೇಟಿನಿಂದ ಹೊರಗೆ ಬಂದ ವಿದ್ಯಾರ್ಥಿನಿಯರು ಪ್ರಾಂಶುಪಾಲರ ವಿರುದ್ಧ ಹರಿಹಾಯ್ದರು.

> **ಬೆಳಗಾವಿ ಜಿಲ್ಲೆಯಲ್ಲಿ ಪರಿಸ್ಥಿತಿ ಶಾಂತವಾಗಿದೆ. ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರನ್ನು ಕಾಲೇಜಿನ ಗೇಟ್ ಅಥವಾ ಆವರಣದಲ್ಲೇ ತಡೆಯುವಂತಿಲ್ಲ.**
> **ಎಂ.ಜಿ.ಹಿರೇಮಠ,**
> ಬೆಳಗಾವಿ ಜಿಲ್ಲಾಧಿಕಾರಿ

ತಡಗಣಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕರ್ನಾಟಕ ಪಬ್ಲಿಕ್ ಶಾಲೆಯ ಪಿಯು ವಿದ್ಯಾರ್ಥಿನಿಯರು ಮಧ್ಯಾಹ್ನದವರೆಗೂ ಪ್ರತಿಭಟನೆ ಮುಂದುವರಿಸಿದರು.

ಹಿಜಾಬ್ ಹಾಕಿದವರಿಗೆ ಕಾಲೇಜಿನ ಒಳಗೆ ಪ್ರವೇಶ ನೀಡದ ಕಾರಣ ಶಿವಮೊಗ್ಗ ನಗರದ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಬಂದು, ನ್ಯಾಯಾಲಯದ ತೀರ್ಪು ಬರುವವರೆಗೂ ಹಿಜಾಬ್‌ಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಗಂಗಾವತಿಯ ಕೊಟ್ಟೂರು ವಿದ್ಯಾವರ್ಧಕ ಸಂಘದ ಜಿ.ಎಚ್. ಎನ್ ವಾಣಿಜ್ಯ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಕಳಚಲು ನಿರಾಕರಿಸಿ ಆಂತರಿಕ ಪರೀಕ್ಷೆ ಬರೆಯದೆ ವಾಪಸ್ ತೆರಳಿದರು.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದು, ಪರಿಸ್ಥಿತಿ ತಿಳಿಗೊಳಿಸಲು ಪೊಲೀಸರು ಮಧ್ಯೆ ಪ್ರವೇಶಿಸಬೇಕಾಯಿತು. ಉಡುಪಿಯ ಅಜ್ಜರಕಾಡಿನ ಜಿ. ಶಂಕರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರವೂ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರ್ಬಂಧಿಸಲಾಯಿತು.

ಸಿಪಿಐ ಎಚ್ಚರಿಕೆ: ಗುರುಮಠಕಲ್‌ನ ಸರ್ಕಾರಿ ಕಿರಿಯ ಮಹಾವಿದ್ಯಾಲಯದ ಮುಂದೆ, 'ಹಿಜಾಬ್ ಧರಿಸಿಯೇ ತರಗತಿಗೆ ಹೋಗುತ್ತೇವೆ. ನಮ್ಮ ಜೊತೆ ಅಲ್ಲಾಹ್ ಇದ್ದಾನೆ' ಎಂದು ವಿದ್ಯಾರ್ಥಿನಿಯರು ಘೋಷಣೆ ಕೂಗಿದರು. ಸಿಪಿಐ ಖಾಜಾ ಹುಸೇನ್ ವಿರುದ್ಧ ಆಕ್ರೋಶಗೊಂಡ ಪೋಷಕರು, 'ನಮ್ಮವರೇ ನಮಗೆ ಬೆಂಬಲ ಕೊಡುತ್ತಿಲ್ಲ' ಎಂದು ಆರೋಪಿಸಿದರು. 'ನಾನು ಒಬ್ಬ ಸರ್ಕಾರಿ ನೌಕರನಾಗಿದ್ದೇನೆ. ವೈಯಕ್ತಿಕವಾಗಿ ನಿಂದನೆ ಮಾಡಿದರೆ ನಿಮ್ಮ ಮೇಲೆ ಕೇಸ್ ಹಾಕುತ್ತೇನೆ' ಎಂದು ಸಿಪಿಐ ಎಚ್ಚರಿಸಿದರು.

ಮಾಜಿ ಶಾಸಕ ಜಿ.ವಿ.ಮಂಟೂರ ನಿಧನ



ಬಾಗಲಕೋಟೆ: ಮಾಜಿ ಶಾಸಕ ಗೂಳಪ್ಪ ವೆಂಕಪ್ಪ ಮಂಟೂರ (ಜಿ.ವಿ.ಮಂಟೂರ) (92) ಗುರುವಾರ ಬೆಳಿಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಅವರಿಗೆ ಪುತ್ರಿ, ಮೂವರು ಪುತ್ರರು ಇದ್ದಾರೆ.

1968ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ರಾಜಕೀಯ ಬದುಕು ಆರಂಭಿಸಿದ ಮಂಟೂರ, ಆರಂಭದಿಂದಲೂ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. 1983ರಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ದೊರೆಯದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ರಾಮಕೃಷ್ಣ ಹೆಗಡೆ ಅವರ ಸರ್ಕಾರಕ್ಕೆ ಬೆಂಬಲ ನೀಡಿದ್ದರು.

1985ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯಗಳಿಸಿದ್ದ ಅವರು, ಹೆಗಡೆ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಮುಂದೆ ಹೆಗಡೆ ಅವರನ್ನು ಬಾಗಲಕೋಟೆಗೆ ಕರೆತಂದು ಲೋಕಸಭಾ ಚುನಾವಣೆಗೆ (1991) ನಿಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಾಲಿ ಶಾಸಕರಿದ್ದಾಗಲೇ ರಾಜಕೀಯದಿಂದ ನಿವೃತ್ತಿ ಪಡೆದ ಮಂಟೂರ ಸರಳತೆಗೆ ಹೆಸರಾಗಿದ್ದರು. ಇತ್ತೀಚಿನವರೆಗೂ ಸರ್ಕಾರಿ ಬಸ್‌ನಲ್ಲಿಯೇ ಅವರು ಓಡಾಡುತ್ತಿದ್ದರು.

ಖಜ್ಜಿಡೋಣಿಯಲ್ಲಿ ರೂರಲ್ ಎಜ್ಯುಕೇಶನ್ ಸೊಸೈಟಿ ಸ್ಥಾಪಿಸಿ ಶಿಕ್ಷಣಕ್ಕೆ ಒತ್ತು ನೀಡಿದ್ದ ಮಂಟೂರ, 1985ರಲ್ಲಿ ಕೆಲ ಕಾಲ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅಂತ್ಯಕ್ರಿಯೆ ಸ್ವಗ್ರಾಮ ಬಾಗಲಕೋಟೆ ತಾಲ್ಲೂಕಿನ ಖಜ್ಜಿಡೋಣಿಯಲ್ಲಿ ನಡೆಯಿತು.

ಅರಣ್ಯ ವಾಸಿಗಳ ಸಮಾವೇಶದಲ್ಲಿ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ನಿರ್ಣಯ

ಅರಣ್ಯ ವಾಸಿಗಳಿಗೆ ಹಕ್ಕು ಪತ್ರ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಮತ್ತು ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ತಕ್ಷಣದಿಂದ ಸ್ಥಗಿತಗೊಳಿಸಬೇಕೆಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಸರ್ಕಾರಕ್ಕೆ ಒತ್ತಾಯಿಸಿದೆ.

ನಗರದಲ್ಲಿ ಗುರುವಾರ ನಡೆದ ವೇದಿಕೆಯ 30 ವರ್ಷಗಳ ಅರಣ್ಯ ಭೂಮಿ ಹಕ್ಕು ಹೋರಾಟದ ಕುರಿತಾದ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮ ಮತ್ತು ಅರಣ್ಯ ವಾಸಿಗಳ ಸಮಾವೇಶದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಶಿರಸಿ, ಶಿವಮೊಗ್ಗ, ಗದಗ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಜನರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಸುಮಾರು ಐದು ಲಕ್ಷ ಕುಟುಂಬಗಳು ವಾಸಿಸಲು ಹಾಗೂ ಸಾಗುವಳಿಗಾಗಿ ಅರಣ್ಯ ಪ್ರದೇಶವನ್ನು ಅವಲಂಬಿಸಿದ್ದಾರೆ. ಅರಣ್ಯ ವಾಸಿಗಳಿಗೆ ಸಾಗುವಳಿ ಹಕ್ಕುಪತ್ರ ಕೊಡುವ ದಿಸೆಯಲ್ಲಿ 2006ರಲ್ಲಿ ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಲಾಯಿತು. ಆದರೆ, ಇಂದಿನವರೆಗೂ ಅರಣ್ಯವಾಸಿಗಳಿಗೆ ಹಕ್ಕು ಪತ್ರಗಳು ದೊರೆಯುವುದು ಮರೀಚಿಕೆಯಾಗಿದೆ. ಹೀಗಾಗಿ, ಈ ಕಾಯ್ದೆಯ ಅನುಷ್ಠಾನದಲ್ಲಿನ ದೋಷಗಳನ್ನು ಸರಿಪಡಿಸಿ ಕಾಲಮಿತಿ ನಿಗದಿಪಡಿಸಬೇಕು ಎಂದು ವೇದಿಕೆಯ ಅಧ್ಯಕ್ಷ ಎ. ರವೀಂದ್ರ ನಾಯ್ಕ್ ತಿಳಿಸಿದರು.

ಬೆಂಗಳೂರಿನಲ್ಲಿ ಗುರುವಾರ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮವನ್ನು ಮುನ್ನ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಮತ್ತು ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಡೊಳ್ಳು ಬಡಿಯುವ ಕಲಾವಿದರೊಂದಿಗೆ ಚರ್ಚಿಸಿದರು –ಪ್ರಜಾವಾಣಿ ಚಿತ್ರ

ಅರಣ್ಯ ವಾಸಿಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸುತ್ತಿರುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಮತ್ತು ಶರಾವತಿ ಅಭಯಾರಣ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶ ಸೇರಿಸುವುದನ್ನು ಕೈಬಿಡಬೇಕು. ಈ ಅಭಯಾರಣ್ಯಕ್ಕೆ 20 ಸಾವಿರ ಹೆಕ್ಟೇರ್ ಹೆಚ್ಚುವರಿ ಅರಣ್ಯ ಪ್ರದೇಶ ಸೇರಿ 2019ರ ಜುಲೈ 7ರಂದು ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

> ಸರ್ಕಾರ ಬಡ ಅರಣ್ಯ ವಾಸಿಗಳನ್ನು ಶತ್ರುಗಳ ರೀತಿ ಕಾಣುತ್ತಿದೆ. ಆದರೆ, ಇದೇ ಸರ್ಕಾರಕ್ಕೆ ಅರಣ್ಯ ಲೂಟಿ ಮಾಡುವ ಗಣಿ ಧಣಿಗಳು ಕಾಣುತ್ತಿಲ್ಲ.
>
> **ಎಚ್.ಎನ್. ನಾಗಮೋಹನ್‌ದಾಸ್**, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂದಾಜು ಒಂದು ಲಕ್ಷ ಕುಟುಂಬಗಳು ಅರಣ್ಯ ಭೂಮಿಯ ಮೇಲೆ ಅವಲಂಬಿತವಾಗಿವೆ. ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಸಾಗುವಳಿಗಾಗಿ 81,625 ಅರ್ಜಿಗಳನ್ನು ಸಲ್ಲಿಸಲಾಗಿತ್ತು, ಆದರೆ, ಇವುಗಳಲ್ಲಿ 65,220 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಶೇಕಡ 3.25ರಷ್ಟು ಅರ್ಜಿಗಳಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ ಎಂದು ವಿವರಿಸಿದರು.

ಒಂದು ಲಕ್ಷ ಮರಗಳ ನಾಶ: ಅರಣ್ಯ ಇಲಾಖೆಯು ವಿವಿಧ ಕಾಮಗಾರಿಗಳ ನೆಪದಲ್ಲಿ ಕಳೆದ ಐದು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಹಸಿರು ಮರಗಳನ್ನು ಕಡಿದಿದೆ. ಈ ಬಗ್ಗೆ ವಿಶೇಷ ತನಿಖೆ ನಡೆಸಬೇಕು ಎಂದು ರವೀಂದ್ರ ನಾಯ್ಕ ಒತ್ತಾಯಿಸಿದರು.

ರಾಜ್ಯದಾದ್ಯಂತ ಅರಣ್ಯ ವಾಸಿಗಳ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸುತ್ತಿದ್ದಾರೆ. ಈ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

'ಹೋರಾಟದ ಕಿಚ್ಚು ಕಳೆದುಕೊಳ್ಳಬೇಡಿ'

'ಅರಣ್ಯ ಭೂಮಿ ಹಕ್ಕಿಗಾಗಿ ಕಳೆದ 30 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಈ ಹೋರಾಟದ ಕಿಚ್ಚು ಕಳೆದುಕೊಳ್ಳಬೇಡಿ' ಎಂದು ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಅತಿಕ್ರಮಣದಾರರಿಂದ ಅರಣ್ಯ ಸಂಪತ್ತು ಲೂಟಿಯಾಗಿಲ್ಲ, ಲೂಟಿಕೋರರಿಂದ ಅರಣ್ಯ ಸಂಪತ್ತು ಲೂಟಿಯಾಗುತ್ತಿದೆ. ಹೀಗಾಗಿ, ಅರಣ್ಯ ಕುರಿತು ನೀಡುವುದನ್ನು ನಿಲ್ಲಿಸಬೇಕಾಗಿದೆ. ನಮ್ಮ ಜೀವನಕ್ಕಾಗಿ ಅತಿಕ್ರಮಣ ಮಾಡಿಕೊಂಡಿದ್ದೇವೆಯೇ ಹೊರತು ಐಷಾರಾಮಿ ಜೀವನಕ್ಕಾಗಿ ಅಲ್ಲ' ಎಂದು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಮಾತನಾಡಿ, 'ಗಣಿಗಾರಿಕೆ, ಅಣೆಕಟ್ಟುಗಳು, ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ, ಕಾಳ್ಗಿಚ್ಚು ಮತ್ತು ಕಾಡುಗಳ್ಳರಿಂದ ದೇಶದಲ್ಲಿನ ಅರಣ್ಯ ಪ್ರದೇಶವು ಶೇ30ರಿಂದ 23ಕ್ಕೆ ಇಳಿದಿದೆ. ಆದರೆ, ಅರಣ್ಯವಾಸಿಗಳು ಯಾವುದೇ ರೀತಿ ಹಾನಿ ಮಾಡಿಲ್ಲ' ಎಂದು ಅವರು ಹೇಳಿದರು.

'ಸಾಗುವಳಿದಾರರ ವಿರುದ್ಧ ಭೂಕಬಳಿಕೆ ಪ್ರಕರಣ'

'ಬಯಲುಸೀಮೆ ಜಿಲ್ಲೆಯ ಸಾಗುವಳಿದಾರರ ಮೇಲೆ ಭೂಕಬಳಿಕೆ ಮೊಕದ್ದಮೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಈಗಾಗಲೇ 1500ಕ್ಕಿಂತ ಹೆಚ್ಚು ಪ್ರಕರಣಗಳು ಭೂಕಬಳಿಕೆ ನ್ಯಾಯಾಲಯದಲ್ಲಿವೆ' ಎಂದು ಕಾಂಗ್ರೆಸ್ ಶಾಸಕ ಎಚ್.ಕೆ. ಪಾಟೀಲ ವಿವರಿಸಿದರು.

'ಸಾಗುವಳಿ ಹಕ್ಕು ಪತ್ರ ನೀಡಲು ಕಾನೂನು ರೂಪಿಸಲಾಗಿದೆ. ಸುಪ್ರೀಂ ಕೋರ್ಟ್ ಸಹ ತೀರ್ಪು ನೀಡಿದೆ. ಆದರೆ, ಬಾಗಲಕೋಟೆ, ಗದಗ, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶದಲ್ಲಿನ ಸಾಗುವಳಿದಾರರಿಗೆ ತೊಂದರೆ ನೀಡಲಾಗುತ್ತಿದೆ ಮತ್ತು ಹೆಚ್ಚಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಅರಣ್ಯ ಕಾಯ್ದೆ 2006ರಲ್ಲಿ ಜಾರಿಯಾದರೂ ಕಾನೂನು ಪ್ರಕ್ರಿಯೆಗಳಿಗೆ ಅಧಿಕಾರಿಗಳೇ ಅಡ್ಡಿಯಾಗುತ್ತಿದ್ದಾರೆ. ಇವರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ನಾಲ್ಕು ವರ್ಷದ ಒಳಗಿನ ಮಕ್ಕಳಿಗೂ ಹೆಲ್ಮೆಟ್, ಸುರಕ್ಷತಾ ಕವಚ ಕಡ್ಡಾಯ'

ನವದೆಹಲಿ (ಪಿಟಿಐ): ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವ 4 ವರ್ಷದ ಒಳಗಿನ ಮಕ್ಕಳೂ ಹೆಲ್ಮೆಟ್ ಮತ್ತು ಸುರಕ್ಷತಾ ಕವಚ ಧರಿಸುವುದು ಕಡ್ಡಾಯವಾಗಲಿದೆ. ಭೂಸಾರಿಗೆ ಸಚಿವಾಲಯವು ಈ ಕುರಿತ ನೂತನ ನಿಯಮಗಳನ್ನು ಪ್ರಕಟಿಸಿದೆ.

ಸಚಿವಾಲಯ ಬುಧವಾರ ಹೊರಡಿಸಿರುವ ಅಧಿಸೂಚನೆ ಪ್ರಕಾರ, ನಾಲ್ಕು ವರ್ಷದೊಳಗಿನ ಮಕ್ಕಳನ್ನು ಕರೆದೊಯ್ಯುವಾಗ ದ್ವಿಚಕ್ರವಾಹನದ ವೇಗವು ಗಂಟೆಗೆ 40 ಕಿ.ಮೀ ಮೀರಬಾರದು.

ಈ ನಿಬಂಧನೆಗಳನ್ನೂ ಒಳಗೊಂಡ 'ಕೇಂದ್ರೀಯ ಮೋಟಾರ್ ವಾಹನ (ಎರಡನೇ ತಿದ್ದುಪಡಿ) ನಿಯಮಗಳು 2022' ಪ್ರಕಟವಾದ ದಿನಾಂಕದಿಂದ ಒಂದು ವರ್ಷದ ನಂತರದ ದಿನದಿಂದ ಜಾರಿಗೆ ಬರಲಿವೆ.

ಭೂ ಸಾರಿಗೆ ಸಚಿವಾಲಯವು ಫೆಬ್ರುವರಿ 15, 2022ರಂದು ಮೋಟಾರ್ ವಾಹನ ಕಾಯಿದೆ 1989ರ ನಿಯಮ 138ಕ್ಕೆ ತಿದ್ದುಪಡಿ ಕುರಿತ ಅಧಿಸೂಚನೆಯನ್ನು ಪ್ರಕಟಿಸಿದ್ದು, ನಾಲ್ಕು ವರ್ಷದೊಳಗಿನ ಮಕ್ಕಳ ಸುರಕ್ಷತೆ ಕುರಿತು ಉಲ್ಲೇಖಿಸಿದೆ.

ಕಾಯ್ದೆಯ ಸೆಕ್ಷನ್ 129ರಡಿ ಈ ಅಧಿಸೂಚನೆ ಪ್ರಕಟಿಸಲಾಗಿದೆ. ಹೆಲ್ಮೆಟ್ ಧರಿಸುವುದು, ಮಕ್ಕಳನ್ನು ಕರೆದೊಯ್ಯುವಾಗ ಇರಬೇಕಾದ ವಾಹನದ ವೇಗದ ಮಿತಿ ಕುರಿತು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

ಸುರಕ್ಷತಾ ಕವಚದ ಪಟ್ಟಿಯನ್ನು ಮಗುವಿನೊಂದಿಗೆ ಕಟ್ಟಬೇಕು. 'ಇದು ಹೊಂದಾಣಿಕೆಯಾಗಿ ಇರಬೇಕು. ಇನ್ನೊಂದು ಜೋಡಿ ಪಟ್ಟಿಯನ್ನು ಸವಾರರಿಗೆ ಕಟ್ಟಬೇಕು. ಇದರ ಪ್ರಕಾರ, ಮಗುವಿನ ಸುರಕ್ಷತೆಯನ್ನು ಸವಾರ ಗಮನಿಸಬೇಕು ಎಂದು ಹೇಳಿದೆ.

ಐಆರ್‌ಎಫ್ ಸ್ವಾಗತ: ಮಕ್ಕಳ ಸುರಕ್ಷತೆಗಾಗಿ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸುವ ಹೊಸ ನಿಯಮಗಳನ್ನು ಜಾಗತಿಕ ರಸ್ತೆ ಸುರಕ್ಷತಾ ಸಂಸ್ಥೆಯಾಗಿರುವ ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (ಐಆರ್‌ಎಫ್) ಸ್ವಾಗತಿಸಿದೆ. 'ಹೆಲ್ಮೆಟ್ ಕಡ್ಡಾಯಗೊಳಿಸಲು ಮಕ್ಕಳ ವಯಸ್ಸಿಗೆ ಬದಲಾಗಿ ಎತ್ತರವನ್ನು ಮಾನದಂಡವಾಗಿಸಬೇಕು. ಇದರಿಂದ ವಾಹನದ ಫುಟ್‌ರೆಸ್ಟ್‌ನಲ್ಲಿ ಪಾದ ಇಡಲು ಆಗದ ಮಕ್ಕಳಿಗೆ ಗಂಭೀರ ಪೆಟ್ಟಾಗುವ ಸಾಧ್ಯತೆಯು ಕಡಿಮೆ ಆಗಲಿದೆ' ಎಂದು ಐಆರ್‌ಎಫ್ ಅಧ್ಯಕ್ಷ ಕೆ.ಕೆ.ಕಪಿಲಾ ಹೇಳಿದ್ದಾರೆ.

ಪಾಳು ಬಾವಿಗೆ ಬಿದ್ದು 13 ಮಂದಿ ಸಾವು

ಕುಶಿನಗರ (ಪಿಟಿಐ): ಮದುವೆ ಸಮಾರಂಭಕ್ಕೆ ಬಂದವರಲ್ಲಿ ಹೆಣ್ಣು ಮಕ್ಕಳು, ಮಹಿಳೆಯರು ಸೇರಿ 13 ಮಂದಿ ಪಾಳು ಬಾವಿಗೆ ಆಕಸ್ಮಿಕವಾಗಿ ಬಿದ್ದು ಮೃತಪಟ್ಟ ದುರಂತ ಉತ್ತರ ಪ್ರದೇಶದ ಕುಶಿನಗರ ಜಿಲ್ಲೆಯ ನೌರಂಗಿಯಾ ಟೋಲಾ ಗ್ರಾಮದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಮದುವೆ ದಿಬ್ಬಣದ ಖುಷಿಯಲ್ಲಿ ಮಿಂದೇಳುತ್ತಿದ್ದ ಗ್ರಾಮದ ಜನರಲ್ಲಿ ಸೂತಕದ ಛಾಯೆ ಆವರಿಸಿದೆ. ಕುಟುಂಬದ ಸದಸ್ಯರನ್ನು ಕಳೆದುಕೊಂಡವರ ಆಕ್ರಂದನ ಮುಗಿಲು ಮುಟ್ಟಿದೆ.

ಪರಮೇಶ್ವರ್ ಕುಶ್ವಾ ಎಂಬುವವರ ಪುತ್ರ ಅಮಿತ್ ಕುಶ್ವಾ ಅವರ ವಿವಾಹದ ಪೂರ್ವಭಾವಿಯಾಗಿ ಬುಧವಾರ ರಾತ್ರಿ ಬಾವಿಯ ಬಳಿ ನಡೆಯುತ್ತಿದ್ದ 'ಹಲ್ದಿ' ಕಾರ್ಯಕ್ರಮ ನೋಡಲು ಗ್ರಾಮದ ಮತ್ತು ಸಂಬಂಧಿಕರ ಮಹಿಳೆಯರು, ಹೆಣ್ಣುಮಕ್ಕಳು ಪಾಲ್ಗೊಂಡಿದ್ದರು. ಇದರಲ್ಲಿ ಕೆಲವು ಮಹಿಳೆಯರು ಮತ್ತು ಮಕ್ಕಳು ಪಾಳು ಬಾವಿಗೆ ಮುಚ್ಚಿದ್ದ ಕಬ್ಬಿಣದ ಗ್ರಿಲ್ ಮೇಲೆ ಕುಳಿತಿದ್ದರು. ಕುಳಿತಿದ್ದವರ ಭಾರಕ್ಕೆ ಗ್ರಿಲ್ ಇದ್ದಕ್ಕಿದ್ದಂತೆ ಮುರಿದು, ಸುಮಾರು 25ಕ್ಕೂ ಹೆಚ್ಚು ಮಂದಿ ಬಾವಿಯೊಳಗೆ ಬಿದ್ದಿದ್ದಾರೆ. ಅರ್ಧ ತುಂಬಿದ್ದ ಆಳ ಬಾವಿಗೆ ಬಿದ್ದವರಲ್ಲಿ 12ಕ್ಕೂ ಹೆಚ್ಚು ಮಂದಿಯನ್ನು ಗ್ರಾಮಸ್ಥರು ಮತ್ತು ಪೊಲೀಸರು ರಕ್ಷಿಸಿದ್ದಾರೆ.

ಗಾಯಾಳುಗಳ ಪೈಕಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ. ತಕ್ಷಣ ಸ್ಥಳಕ್ಕೆ ಆಂಬುಲೆನ್ಸ್ ಆಗಮಿಸಿದ್ದರೆ ಇನ್ನಷ್ಟು ಮಂದಿಯ ಜೀವ ಉಳಿಸಬಹುದಿತ್ತು ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.



ಕುಶಿನಗರ ಜಿಲ್ಲೆಯ ನೆಬುವಾ ನೌರಂಗಿಯಾ ಗ್ರಾಮದಲ್ಲಿ ಬುಧವಾರ ರಾತ್ರಿ ಪಾಳು ಬಾವಿಗೆ ಬಿದ್ದು 13 ಮಂದಿ ಮೃತಪಟ್ಟ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದರು –ಪಿಟಿಐ ಚಿತ್ರ

'ನಾವು ಹಾಡುತ್ತಾ, ನೃತ್ಯ ಮಾಡುತ್ತಿದ್ದೆವು. ಇದ್ದಕ್ಕಿದ್ದಂತೆ ಚಪ್ಪಡಿ ಒಡೆದು ನಾವೆಲ್ಲರೂ ಬಾವಿಯೊಳಗೆ ಬಿದ್ದೆವು. ನಾನು ನೀರಿನಲ್ಲಿ ಮುಳುಗುತ್ತಿದ್ದಾಗ ನನ್ನನ್ನು ಜನ ರಕ್ಷಿಸಿದರು' ಎಂದು ಈ ದುರಂತದಲ್ಲಿ ಬದುಕುಳಿದ ಗ್ರಾಮದ ಮಹಿಳೆಯೊಬ್ಬರು ಹೇಳಿದರು.

'ಇದು ಹೃದಯ ವಿದ್ರಾವಕ ಘಟನೆ. ನನ್ನ ಪುತ್ರ ಅಮಿತ್ ಕುಶ್ವಾ ಮದುವೆಯ ದಿಬ್ಬಣ ಹೋಗದಿರಲು ನಿರ್ಧರಿಸಲಾಗಿದೆ. ನಾವ್ಯಾರೂ ಮದುವೆ ಸಂಭ್ರಮದಲ್ಲಿ ಪಾಲ್ಗೊಳ್ಳುವ ಸ್ಥಿತಿಯಲ್ಲಿ ಇಲ್ಲ. ವಧು-ವರ ಮಾತ್ರ ಹೋಗಿ ಸರಳವಾಗಿ ಮದುವೆ ಆಗಿ ಬರಲಿದ್ದಾರೆ' ಎಂದು ವರನ ತಂದೆ ಪರಮೇಶ್ವರ್ ಕುಶ್ವಾ ತಿಳಿಸಿದ್ದಾರೆ.

ಘಟನೆಯಲ್ಲಿ ಮದುವೆ ಮನೆಯವರ ಪೈಕಿ ಯಾರೂ ಸಹ ಮೃತಪಟ್ಟಿಲ್ಲ. ಬಾವಿಗೆ ಬಿದ್ದ ಪರಮೇಶ್ವರ್ ಕುಶ್ವಾ ಅವರ ಮೊಮ್ಮಗಳನ್ನು ರಕ್ಷಿಸಲಾಗಿದೆ.

ಈ ದುರಂತದಲ್ಲಿ ತನ್ನ ಪತ್ನಿ ಮತ್ತು ಎರಡು ವರ್ಷದ ಮಗಳು ಹಾಗೂ ತನ್ನ ಅಣ್ಣನ ಪತ್ನಿಯನ್ನು ಕಳೆದುಕೊಂಡಿರುವ ರಮೇಶ್ ಚೌರಾಸಿಯಾ, 'ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ. ನನ್ನ ಕುಟುಂಬದ ಮೂವರನ್ನು ಕಳೆದುಕೊಂಡಿದ್ದೇನೆ. ನನ್ನ ಪತ್ನಿ ಸಹ ಮೃತಪಟ್ಟಿದ್ದಾಳೆ. ನಾನು ಹೇಗೆ ಜೀವಿಸಲಿ ಎನ್ನುವುದು ಗೊತ್ತಾಗುತ್ತಿಲ್ಲ' ಎಂದು ದುಃಖ ತೋಡಿಕೊಂಡಿದ್ದಾರೆ.

ಅಂತ್ಯಕ್ರಿಯೆ ಗುರುವಾರ ಗ್ರಾಮದಲ್ಲಿ ನಡೆಯಿತು.

ಘಟನೆ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿ ಎಸ್. ರಾಜಲಿಂಗಂ ತಿಳಿಸಿದ್ದಾರೆ. ಪ್ರಧಾನಿ ಮತ್ತು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರಿಗೆ ತಲಾ ₹4 ಲಕ್ಷ ಪರಿಹಾರ ಘೋಷಿಸಲಾಗಿದೆ.

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣ

ಮಿಶ್ರಾಗೆ ಜಾಮೀನು: 'ಸುಪ್ರೀಂ'ನಲ್ಲಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ, ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರಿಗೆ ನೀಡಿರುವ ಜಾಮೀನನ್ನು ರದ್ದುಪಡಿಸುವಂತೆ ಕೋರಿ ಗುರುವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದೆ.

ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ)ವು ಜಾಮೀನು ಕೋರಿ ಆಶಿಶ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಪರಿಣಾಮಕಾರಿ ವಾದ ಮಂಡಿಸಿಲ್ಲ ಎಂದು ವಕೀಲರಾದ ಸಿ.ಎಸ್. ಪಾಂಡಾ ಹಾಗೂ ಶಿವಕುಮಾರ ತ್ರಿಪಾಠಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ದೂರಲಾಗಿದೆ.

ಜಾಮೀನು ವಿರೋಧಿಸಿ ಎಸ್‌ಐಟಿ ಪರ ವಕೀಲರು ಪರಿಣಾಮಕಾರಿ ವಾದ ಮಂಡಿಸಲಿಲ್ಲ ಎಂದೂ ಅರ್ಜಿದಾರರು ಪ್ರತಿಪಾದಿಸಿದ್ದಾರೆ. ಪ್ರಕರಣದ ತನಿಖೆಗಾಗಿ ಎಸ್‌ಐಟಿ ರಚಿಸುವಂತೆ ಕೋರಿ ಇದೇ ವಕೀಲರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಲಖನೌ ಹೈಕೋರ್ಟ್‌ನ ಅಲಹಾಬಾದ್ ಪೀಠವು ಫೆಬ್ರುವರಿ 10ರಂದು ಆರೋಪಿ ಆಶಿಶ್‌ಗೆ ಜಾಮೀನು ಮಂಜೂರು ಮಾಡಿತ್ತು. ಬುಧವಾರ ಅವರನ್ನು ಬಿಡುಗಡೆ ಮಾಡಲಾಗಿದೆ.

ಸರ್ಕಾರಿ ಶಾಲೆಗೆ 2.5 ಎಕರೆ ಭೂಮಿ ನೀಡಿದ ಮಹಮ್ಮದ್ ರಾಖೀಬ್

ಮೈಸೂರು: ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಹೋಬಳಿಯ ಬಾಚೇಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಸಮೀಪದ ಮಾದಾಪಟ್ಟಣದ ಮಹಮ್ಮದ್ ರಾಖೀಬ್ ಅವರು ಸುಮಾರು ₹ 60 ಲಕ್ಷ ಮೌಲ್ಯದ ಎರಡೂವರೆ ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದಾರೆ.

ಸಣ್ಣ ವ್ಯಾಪಾರಿಯಾದ ಅವರು ಶ್ರೀಮಂತರೇನೂ ಅಲ್ಲ. 'ತಂದೆ ಮಹಮ್ಮದ್ ಜಾಫರ್ ಬದುಕಿದ್ದಾಗ ಶಾಲೆಯ ಸಮೀಪ 10 ಎಕರೆ ಜಾಗವನ್ನು ಖರೀದಿಸಿದ್ದರು. ಅದರಲ್ಲಿ ಸ್ವಲ್ಪ ಭಾಗವನ್ನು ಶಾಲೆಗೆ ನೀಡಲು ಅವರು ಇಚ್ಛಿಸಿದ್ದರು. ಅದರಂತೆ ದಾನ ಮಾಡಿದ್ದೇನೆ' ಎಂದು ಮಹಮ್ಮದ್ ರಾಖೀಬ್ 'ಪ್ರಜಾವಾಣಿ'ಗೆ ತಿಳಿಸಿದರು.

'ಫೆ.15ರಂದು ಜಮೀನನ್ನು ಶಾಲೆ ಹೆಸರಿಗೆ ನೋಂದಣಿ ಮಾಡಿಸಿ, ದಾನಪತ್ರವನ್ನು ನೀಡಿದ್ದಾರೆ. ಇಂದು ಜಾಗವನ್ನು ಹೊಡೆದಾಡಿಕೊಳ್ಳುವ ಕಾಲದಲ್ಲಿ ಭೂಮಿ ನೀಡಿರುವುದು ಶ್ಲಾಘನೀಯ. ಈ ಶಾಲೆಯಲ್ಲಿ 8 ಗ್ರಾಮದ 205 ಮಕ್ಕಳು ಓದುತ್ತಿದ್ದಾರೆ' ಎಂದು ಎಚ್.ಡಿ.ಕೋಟೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಕಾಂತ ಹೇಳಿದರು.

ಹಿಜಾಬ್: ಪಿಐಎಲ್ ವಜಾ

ಬೆಂಗಳೂರು: 'ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 133 (2)ರ ಅನುಸಾರ ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ನಿಗದಿಪಡಿಸಲಾದ ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸತಕ್ಕದ್ದು ಮತ್ತು ಖಾಸಗಿ ಶಾಲೆಗಳು ತಮ್ಮ ಆಡಳಿತ ಮಂಡಳಿ ನಿರ್ಧರಿಸುವಂತಹ ಸಮವಸ್ತ್ರನ್ನೇ ಧರಿಸತಕ್ಕದ್ದು' ಎಂದು ಹಿಜಾಬ್ ನಿಷೇಧಿಸಿರುವ ಆದೇಶ ಪ್ರಶ್ನಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನೀಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಗುರುವಾರ ಮುಂದುವರಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ರಹಮತ್ ಉಲ್ಲಾ ಕೊತ್ವಾಲ್, 'ಸರ್ಕಾರದ ಈ ಕ್ರಮವು ಅಂತರಾಷ್ಟ್ರೀಯ ಒಪ್ಪಂದಗಳು ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿಲ್ಲ. ಧಾರ್ಮಿಕವಾದ ಅಗತ್ಯ ಆಚರಣೆಗಳಿಗೆ ಸರ್ಕಾರ ಅಡ್ಡಿಯುಂಟು ಮಾಡುವಂತಿಲ್ಲ ಮತ್ತು ಈ ಕುರಿತಂತೆ ಅಂತರರಾಷ್ಟ್ರೀಯ ಒಡಂಬಡಿಕೆಗಳನ್ನು ವಿಚಾರಣೆ ವೇಳೆ ನ್ಯಾಯಪೀಠ ಮನಗಾಣುವ ಅವಶ್ಯಕತೆ ಇದೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಯಾಗಿ ನ್ಯಾಯಪೀಠ, 'ಈ ಪ್ರಕರಣದಲ್ಲಿ ಅರ್ಜಿದಾರರು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ದೋಷವಿದೆ. ಆದ್ದರಿಂದ, ನಿಮ್ಮ ಅರ್ಜಿ ವಜಾ ಮಾಡಲಾಗುವುದು' ಎಂದು ಹೇಳಿತು. ಇದಕ್ಕೆ ಕೊತ್ವಾಲ್, 'ಇದು ನ್ಯಾಯ ಸಮ್ಮತವಲ್ಲ. ಅರ್ಜಿ ಆಲಿಸಲು ನ್ಯಾಯಪೀಠ ಅವಕಾಶ ನೀಡಬೇಕು. ಅರ್ಜಿದಾರರು ಸಾಮಾಜಿಕ ಹಾಗೂ ಆರ್‌ಟಿಐ ಕಾರ್ಯಕರ್ತ. ಕೋವಿಡ್ ಸೇರಿದಂತೆ ಹಲವು ವಿಚಾರಗಳಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಈ ಪ್ರಕರಣದಲ್ಲಿಯೂ ಸಾರ್ವಜನಿಕ ಹಿತಾಸಕ್ತಿ ಇದೆ. ಆದ್ದರಿಂದ, ನಮ್ಮ ವಾದವನ್ನು ಆಲಿಸಬೇಕು' ಎಂದು ಕೋರಿದರು. ಆದರೆ, ಇದನ್ನು ಮಾನ್ಯ ಮಾಡದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು.

ಮುಖ್ಯಾಂಶಗಳು

- ಹಿಜಾಬ್ ಮತ್ತು ಉದ್ದನೆಯ ಗಡ್ಡದ ಕುರಿತು ಈಗಾಗಲೇ ಪ್ರಕರಣ ನಡೆದಿವೆ
- ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದಲೂ ಅರ್ಜಿ

'ಆರೋಗ್ಯ– ಹಿಜಾಬ್'

'ಹಿಜಾಬ್ ನಿರ್ಬಂಧದಿಂದ ವಿದ್ಯಾರ್ಥಿನಿಯರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ, ಪ್ರತಿ ಶುಕ್ರವಾರದಂದು ಹಿಜಾಬ್ ಧರಿಸಲು ಅವಕಾಶ ನೀಡಿ ಮಧ್ಯಂತರ ಆದೇಶ ಹೊರಡಿಸಬೇಕು' ಎಂದು ಮತ್ತೊಬ್ಬ ಅರ್ಜಿದಾರ ಡಾ. ವಿನೋದ್ ಕುಲಕರ್ಣಿ ಕೋರಿದರು. 'ಕೆಲವನ್ನು ಪಡೆದುಕೊಂಡು ಕಳೆದುಕೊಳ್ಳಬೇಕಾಗುತ್ತದೆ, ಕೆಲವನ್ನು ಕಳೆದುಕೊಂಡು ಪಡೆಯಬೇಕಾಗುತ್ತದೆ' ಎಂದು ಹಿಂದಿ ಚಿತ್ರಗೀತೆಯೊಂದರ ಸಾಲುಗಳನ್ನೂ ಅವರು ಉದ್ಧರಿಸಿದರು.

ವಿಚಾರಣೆ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಮುಂದೂಡಲಾಗಿದ್ದು, ಸರ್ಕಾರದ ಪರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಲಿದ್ದಾರೆ.

ಮತ್ತೊಂದು ಅರ್ಜಿ: 'ರಾಜ್ಯ ಸರ್ಕಾರ ಇದೇ 5ರಂದು ಹೊರಡಿಸಿರುವ ಆದೇಶವನ್ನು ರಾಜ್ಯದ ಅನುದಾನರಹಿತ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸದಂತೆ ತಡೆ ನೀಡಬೇಕು' ಎಂದು ವಕೀಲ ಜಿ.ಆರ್. ಮೋಹನ್ ಮನವಿ ಮಾಡಿದರು. 'ಒಕ್ಕೂಟದಲ್ಲಿ ರಾಜ್ಯ ಪಠ್ಯಕ್ರಮ, ಐಸಿಎಸ್‌ಸಿ, ಸಿಬಿಎಸ್‌ಸಿ ಪಠ್ಯಕ್ರಮಗಳಿಗೆ ಸೇರಿದ ಸಂಸ್ಥೆಗಳೂ ಸದಸ್ಯತ್ವ ಪಡೆದಿವೆ' ಎಂದು ತಿಳಿಸಿದರು.

ಈ ಕುರಿತಂತೆ 'ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಒಕ್ಕೂಟ'ದ (ರಿ) ಅಧ್ಯಕ್ಷ ಸಿ.ಆರ್.ಮೊಹಮದ್ ಇಮ್ತಿಯಾಜ್ ಪರ ಹಾಜರಾಗಿದ್ದ ಮೋಹನ್, 'ಇವತ್ತಷ್ಟೇ ಅರ್ಜಿ ಸಲ್ಲಿಸಲಾಗಿದೆ' ಎಂದು ಪೀಠಕ್ಕೆ ತಿಳಿಸಿದರು. ಈ ಅರ್ಜಿ ಶುಕ್ರವಾರ ವಿಚಾರಣೆಗೆ ಬರುವ ನಿರೀಕ್ಷೆ ಇದೆ.

IN THE COURT OF THE XCI ADDITIONAL CITY CIVIL AND SESSIONS JUDGE AT BENGALURU (CCH 92)
MISC NO.1109/2019

BETWEEN
....Petitioner

The State of Karnataka
Represented by Competent Authority
Assistant Commissioner,
Bengaluru North Sub Division, 2nd Floor
Kandaya Bhavana, K.G.Road,
Bengaluru - 560009

AND

M/S Morgenall Co-operative Societies Ltd
And others
....Respondents

Notice to Respondents No. 1 to 5

1. M/S Morgenall Co-operative Societies Ltd:
Sy No. 112, Site No. 25,
Central Revenue Layout, Rachenahalli
K.R.Pura Hobli, Bengaluru East Taluk,
Bengaluru - 560001

2. Morgenall Management Consultants Pvt Ltd,
Sy No. 112, Site No. 25,
Central Revenue Layout, Rachenahalli
K.R.Pura Hobli, Bengaluru East Taluk,
Bengaluru - 560001

3. Morgenall Holding LLP.
Sy No. 112, Site No. 25,
Central Revenue Layout, Rachenahalli
K.R.Pura Hobli, Bengaluru East Taluk,
Bengaluru - 560001

4. Irfan Pasha
Sy No. 112, Site No. 25,
Central Revenue Layout, Rachenahalli
K.R.Pura Hobli, Bengaluru East Taluk,
Bengaluru - 560001

5. Magdumma Fathima
Sy No. 112, Site No. 25,
Central Revenue Layout, Rachenahalli
K.R.Pura Hobli, Bengaluru East Taluk,
Bengaluru - 560001

Whereas, the Petitioner has filed the above petition under section 5(2) of the KPIDFE Act 2004 against the above Respondents.

The Respondent No. 1 to 5 are hereby issued show cause notice u/s 12 (1) of KPIDEF Act 2004, to appear in court of the XCI Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petition on 04-03-2022 at 11.00 'O' Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the court this day on 14-02-2022.

By order of the Court
Assistant Registrar
City Civil Court
Bengaluru

Shantha B Mullur
Special Public Prosecutor,
City Civil Court Bengaluru.
DIPR/DDU/Sreshta/3404/2021-22

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/21-22 **NOTICE FOR PRIVATE SALE OF GOLD** 17/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br.Arsikere: Near LIC Office, B H Road, Arsikere, Hassan- 573 103, Ph NO.08174230125:- 20306100019071,20306100019089,20306400013980,20306100021887,20306400013741,20306400010945,20306400014160,20306400012941,20306400013782,20306400007420,20306400012750,20306400005796,20306400011976,20306400013915,20306400008766,20306400011257,20306400013246,20306400010633, 20306400010713,20306400010820,20306400010705,20306400012149,20306400012180,20306400012164,20306400012156,20306400008311.

Br.Bangalore/St Marks Road: No. 9, Halcyon Complex, St. Marks Road, Bangalore- 560001, Ph NO. 080-32994454 :- 11046100103597,11046100107721,11046100107879,11046100107911,11046100107978,11046100108398,11046100107945,11046400006235,11046400006243,11046100106269,11046700000045,11046700000029,11046700000011,11046100108422,11046100107929,11046100108745,11046100108703,11046100108737,11046400006623,11046100107119,11046100108752,11046100108711,11046100108729,11046400006904,11046100109255,11046100109115,11046100109123,11046400006797,11046400006771,11046400006789,11046400006763.

Br.Bangalore/Gandhi Nagar : P B No. 9981, No. 24, 2Nd Cross, Gandhi Nagar, Bangalore- 560 009, Ph No. 080-22385208 :- 11896400017669,11896100127412,11896100128147,11896400019343,11896400014906,11896100127420,11896400016802,11896400019350,11896100127438,11896100128139,11896400016505,11896400019368,11896400015994,11896100128204,11896100127453,11896400019384,11896100127248,11896100128170,11896400016901,11896400019715,11896100127305,11896100128154,11896400018261,11896400020531,11896400017719,11896100128188,11896400020671,11896400017362,11896100128162,11896100128238,11896400020689,11896100132321,11896100127297,11896400015002,11896400015978,11896400018113,11896100130515,11896100128196,11896400015986,11896100129806,11896400018063,11896100129798,11896400017123.

Br.Bangalore/Rajaji Nagar : No. 60/60, Raj Chambers, Dr. Rajkumar Road, 2Nd Block,Rajaji Nagar, Bangalore- 560 010, Ph NO.-0 80-23522007 :- 13346100595406,13346100627134,13346100629569,13346100634650,13346100635566,13346100638503,13346100638743,13346100639089,13346100639469,13346100639758,13346100639980,13346100640962,13346100641119,13346100641929,13346100642190,13346100642208,13346100642307,13346100643149,13346100643321,13346100643388,13346100643412,13346100643669,13346100643776,13346100643784,13346100644097,13346100646191,13346100646407,13346100647454,13346100647702,13346100647710,13346100647728,13346100648031,13346100648429,13346100648973,13346100649146,13346100649229,13346100650953,13346400076701,13346400088664,13346400088672,13346400137453,13346400137628,13346400137982,13346400138006,13346400138162,13346400138212,13346400138659,13346400138808,13346400139731,13346400139749,13346400140127,13346400140135,13346400140143,13346400140150,13346400140168,13346400140382,13346400140424,13346400140630,13346400140655,13346400140812,13346400141810,13346400141851,13346400142602,13346400143006,13346400143063,13346400143519,13346400143667,13346400143675,13346400144103,13346400144178,13346400144277,13346400144814,13346400144822,13346400144863,13346400144905,13346400144913,13346400144970,13346400145191,13346400145258,13346400145423,13346400145431,13346400145449,13346400145506,13346400145555,13346400145563,13346400145605,13346400145647,13346400145712,13346400145761,13346400145860,13346400145878,13346400145902,13346400145910,13346400145936,13346400146033,13346400146124,13346400146389,13346400147270,13346400147494,13346400148096,13346400148518,13346400148773,13346400148880,13346400148898,13346400148971,13346400149011,13346400149029,13346400149037,13346400149094,13346400149193,13346400150175,13346400151264,13346400152122,13346400152254,13346400152262,13346400152270,13346400152288,13346400152296,13346400152965,13346400153401,13346400153658,13346400154854,13346400154912,13346400154920,13346400154938,13346400155067,13346400155125,13346400155281,13346400155299,13346400156065,13346400156610,13346400156917,13346400157154,13346400157782,13346400157832,13346400157840,13346400158475,13346400158731,13346400158954,13346400159309,13346400160828,13346400160844,13346400161396,13346400162568,13346400162576,13346400162790,13346400162832,13346400163368,13346400164226,13346400164283,13346400164291,13346400164499,13346400164523,13346400164788,13346400165694,13346400165702,13346400165819,13346400165850,13346400166031,13346400166064,13346400166163,13346400166700,13346400167005,13346400167021,13346400167369,13346400167575,13346400167583,13346400167781,13346400167799,13346400167823,13346400167831,13346400167849,13346400167880,13346400168318,13346400168524,13346400168706,13346400168847,13346400168854,13346400168862,13346400169027,13346400169217,13346400169621,13346400169795,13346400169803,13346400169902,13346400170462,13346400170488,13346400170850,13346400170876,13346400171064,13346400171130,13346400171221,13346400172765,13346400173565,13346400173581,13346400173706,13346400174530,13346400174555,13346400174563,13346400174829,13346400174969,13346400174977,13346400175347,13346400176006,13346400176360,13346400176568,13346400176584,13346400176683,13346400176758,13346400176816,13346400176832,13346400177418,13346400177590,13346400177756,13346400177764,13346400177897,13346400178895,13346400179042,13346400179323,13346400179331,13346400179489,13346400179505,13346400179539,13346400179554,13346400179570,13346400179588,13346400179729,13346400179737,13346400179752,13346400180305,13346400180313,13346400180347,13346400179752,13346400180305,13346400180313,13346400180347,13346400180990,13346400181006,13346400181014,13346400181311,13346400181329,13346400181345,13346400181360,13346400181378,13346400181410,13346400181428,13346400181436,13346400181444,13346400181451,13346400181469,13346400181477,13346400181485,13346400181493,13346400181501,13346400181618,13346400181634,13346400181642,13346400181683,13346400181709,13346400181717,13346400181725,13346400181733,13346400181931,13346400182020,13346400182038,13346400182046,13346400182137,13346400182145,13346400182178,13346400182186,13346400182194,13346400182368,13346400182376,13346400182392,13346400182400,13346400182533,13346400182566,13346400182731,13346400182764,13346400182871,13346400183051,13346400183218,13346400183325,13346400183564,13346400184034,13346400184091,13346400184976,13346400185650,13346400185866,13346400186005,13346400186369,13346400186880,13346400186898,13346400187052,13346400187268,13346400187698,13346400187730,13346400187748,13346400187771,13346400188076,13346400188696,13346400188803,13346400188886,13346400188928,13346400188944,13346400189025,13346400189306,13346400189314,13346400189868,13346400190098,13346400190122,13346400190155,13346400190700,13346400191039.

Br.Bangalore/R T Nagar : No.20, Ist Main Road, 108 'B' Bus Station, Ganga Nagar, R T Nagar P O, Bangalore- 560 032 Ph no.0 80-23434258:- 14726100168222,14726100168370,14726100169063,14726100169949,14726100171366,14726100171564,14726100171572,14726100172380,14726100172398,14726100172406,14726100172414,14726100172422,14726100172430,14726100172448,14726100172695,14726100174014,14726100174329,14726100178585,14726100178593,14726100180201,14726100183643,14726100183692,14726100185176,14726100186232,14726100187255,14726100187834,14726100187842,14726100188022,14726100188105,14726100188147,14726100188758,14726100188949,14726100189053,14726100189434,14726100189541,14726100190093,14726100190267,14726100193790,14726400036335,14726400036491,14726400036780,14726400036970,14726400037002,14726400037275,14726400037424,14726400037614,14726400040105,14726400040113,14726400040527,14726400042184,14726400042473,14726400042481,14726400042903,14726400043026,14726400043802,14726400043950,14726400043968,14726400044396,14726400047704.

Br.Bangalore/Indiranagar: 315/1, 100 Feet Road, Opp Post Office, Indiranagar, Bangalore-560 038 Ph No.0 80-25212341:- 15356100067452,15356100059392,15356100074540,15356100074516,15356100064319,15356100075356,15356100064251,15356100075877,15356100063253,15356100074508,15356400027792,15356400027826,15356400009824,15356400022868,15356400022876,15356400023023,15356400023049,15356400023031,15356400023114,15356400024807,15356400029244,15356400023536,15356400029384,15356400016019,15356400023635,15356400029574,15356400018411,15356400016274,15356400029731,15356400023726,15356400023759,15356400029913,15356400029996,15356400030028,15356400030044,15356400030002,15356400030036,15356400023908,15356400030051,15356400030119,15356400024047,15356400030374,15356400020946,15356400018072,15356400011945,15356400024203,15356400027552,15356100074466,15356100079614,15356100080208,15356100079994,15356100080323,15356100080398,15356100080414,15356400027545,15356400022546,15356100076339.

Br.Bangalore/Banaswadi: No 13, Banaswadi Main Road, Bangalore, Bangalore Urban, Karnataka, 560 043 Ph NO.0 80-25420700:- 14716400014309,14716100219679,14716100224943,14716100212088,14716100239677,14716400012873,14716100234827,14716200064041,14716100247373,14716100218325,14716100249585,14716200064025,14716100210876,14716100231617,14716100246672,14716400012774,14716100211510,14716400014010,14716100246680,14716400014325,14716100205348,14716100248025,14716100240287,14716400014317,14716100212344,14716400014069,14716400013970,14716100226823,14716100219042,14716100211288,14716400014259,14716100229058,14716400014036,14716100231377,14715600002817,14716100239784,14716400014176,14716100211684,14716100264766,14716100258255,14716400014192,14716100211668,14716100231070,14716100248785,14716100236350,14716100211692,14716100231062,14715600002767,14716100236376,14716100219794,14716100262612,14716100226377,14716100236368,14716100252761,14716100229793,14716400014234,14716100216311,14716100232730,14716100211353,14716100250567,14716100217970,14716100213722,14716400014424,14716100257588,14716100218044,14716100250617,14716100249932,14716100247126,14716100236806,14716100211874,14716100236830,14716100239396,14716100238430,14716100264675,14716100254049,14716100237853,14716100235121,14716100240865,14716100232821,14716100257182,14716100242044,14716100237325,14716100233860,14716100246938,14716100229025,14716100233225,14716100232276,14716100219638,14716100219653,14716100223267,14716200063886,14716400013988,14716200063944.

Br. Bangalore/Krishnarajapuram: VSR Complex, Old Madras Road, Krishnarajapuram, Bangalore- 560 036 Ph No. 080-25619070:- 15616100149380,15616100149307,15616400006082,15616400006090,15616100148390,15616400005068,15616400005480,15616400006058,15616100149109,15616100148432,15616100148440,15616100148457,15616400006009,15616400006074,15616100156203,15616400006181,15616400006157,15616200016828,15616100149281,15616400006140,15616100148143,15616400005910,15616100149257,15616400006165,15616400006199,15616400006108,15616400006116,15616400006124,15616400006132,15616400004822,15616100151840,15616100153374,15616100155767,15616100156690,15616100151543,15616100157763,15616400006223,15616400004863,15616100155130,15616100150834,15616400005266,15616400007023,15616100158266,15616100154984,15616100155528,15616100154422,15616100157847.

Br.Bangalore/Jalahalli: 17/1, Savithri, S M Road, Jalahalli West, Bangalore- 560 015, Ph no.-080-28372201:- 15826400114626,15826400071347,16436100326105,15826400107240,15826100540401,15826100460295,16436100316478,15826400100914,13346400155406,15826100509356,16436100340718,15826400113727,13346400157154,15826100532721,21986100030993,15826100511816,15826100540583,15826100522540,15826100535187,15826100536987,15826100562173,15826100532259,15826100535179,15826400113735,15826100520155,15826400110715,16436100317252,15826100500033,15826400114311,15826100523100,15826100535641,15826100545392,15826400069796,15826100517466,15826400114360,15826100532291,15826400069697,15826100516153,15826100540013,15826100534958,15826400069903,15826100516146,15826100535328,15826400113834,15826100530980,15826100516161,15826400115292,15826400113818,15826100559138,15826400114253,15826100533745,15826100532788,15826100534321,15826100507400,15826100535344,15826400096989,15826100563767,15826100543660,15826100534982,15826200075456,15826400113768,15826400074481,15826100535112,15826100554477,15826400087673,15826100554121,15826100549105,15826100543314,15826100517680,15826100533380,15826100557777,15826100543306,15826100460246,15826400114634,15826100534909,15826400113701,15826100537332,15826100475442,16436100316817,15826400070059,15826400113750,15826400100062,15826100527911,15826400068541,15826100506402,15826100512103,15826100533067,15826400092384,15826100536490,15826400114428,15826100542795,15826100515783,15826100563676,15826400114436,15826100560268,15826400101961,15826100508556,15826400107471,15826100533893,14376400027833,15826100472209,15826100545277,15826100556449,15826400111077,15826400051943,15826100474551,15826100527598,14376400027825,15826400051901,15826400106531,15826100529990,15826100509984,15826400075827,15826400107547,15826100531491,15826100500165,15826400114790,15826100545590,15826100527804,15826100500025,15826400114808,15826100506071,15826100530188,15826100549915,15826100550079,15826100510800,15826100532523,15826100546556,15826400114824,15826400105632,15826100555110,15826100526475,15826400055365,15826400107331,15826400114832,15826100524595,15826100510917,15826100521799,15826100534305,15826100546754,15826400101672,15826400097698,15826100529594,15826100526244,15826100531814,15826400081957,15826100567859,15826400113552,15826100465260,15826100505537,15826100527515,15826400113560,15826100458315,15826400113651,15826100528430,15826100524173,15826100523720,15826100511980,15826100528778,15826100525337,15826100528836,15826100543223,15826100543389,15826100525386,15826100553537,15826100518126,15826100528802,15826100525972,15826400093689,15826100558155,15826100529792,15826100526806,15826100473595,15826400114667,15826100534297,15826100531038,15825200004128,15826100548040,15826100536078,15826100531517,15826400081114,15826400114717,15826100540625,15826100532929,15826400070802,15826100534149,15826100544007,15826100535021,15826100516369,15826100476077,15826100520007,15826400113867,15826400091766,15826400109311,15826100538215,15826400113909,15826400104726,15826400109220,15826100463653,15826400113891,15826400108594,15826100557801,15826400113594,15826400113958,15826400089893,15826100505131,15826400113966,15826400114477,15826400084936,15826100527747,15826100539478,15826400114485,15826400095510,15826100549030,15826400113974,15826400114493,15826400047008,15826400114584,15826100519462,15826400114402,15826100459016,15826100556639,15826100460188,15826400113883,16436100335874,15826100531855,15826400090057,15826400113826,15826100460238,15826100532796,15826400077047,15826400113933,15826400099488,16436100339595,15826100460220,15826400113925,15826400044526,16436100319712,15826400103298,15826400113917,15826400114675,16436100319803,15826400114691.

Br.Bangalore/Vignana Nagar: No 124, S R Plaza, Vignana Nagara, Main Road, Bangalore- 560 037 Ph No. 080-25348901:- 16296400031395,16296400019093,16296400027120,16296400030413,16296400028755,16296400027336,16296400025876,21656400005454,16296400028748,16296400026742,16296400025884,21636400035800,16296400031775,16296400031825,16296400025900,16296400018970,16296400031189,16296400030827,16296400025892,16296400031171,16296400031197,16296400034936,16296400029795,16296400017592,16296400026353,16296400018996,16296400029803,16296400025850,16296400026346,16296400032799,16296100185756,16296100181722,16296400026007,16296400019267,21996100030646,16296400027203,16296400025835,16296400026270,16296400018228,16296100186036,16296400029480,16296400031031,16296100182092,16296100184247,16296400034118,16296400018152,16296400030934,16296400018269,16296400031486,16296400019655,16296400025389,16296400033136,16296400026999,16296100184932,16296400025363,16296100187687,16296100185293,15796400015125,16296400024523,16296400017568,16296100186887,16296100182167,16296400031536,16296400031981,16296400030132,16296400018640,16296400029274,16296400021685,16296400030124,16296100183009,16296100150172,16296400021040,16296100184759,16296400025504,16296400028284,16296100188834,16296400035552,16296400025926,16296400026015,17696100238316,16296400031916,16296400025157,16296400024663,21996100025695,16296400026106,16296400025165,16296100167309.

Br. Bangalore/Vijayanagar: Ground Floor of TRS Arcade,#3,1st main road, Income Tax Layout,opposite to AM Hospital,Chandra, Vijayanagar, Bangalore- 560 040 Ph No. 080-23159121 :- 16436400050827,16436400048771,16436400049639,16436400053748,16436400043582,16436400049464,16436400050645,16436400053912,16436400042444,16436100294212,16436100308541,16436400044499,16436400049266,16436100294238,16436400051304,16436400046882,16436400051346,16436400043822,16436400051098,16436400054936,16436400043640,16436400051510,16436400051197,16436400050777,16436400043657,16436400042832,16436100254554,16436400050785,16436400046007,16436400051247,16436100255080,16436400052633,16436400050439,16436400051254,16436400050264,16436400052641,16436400050454,16436400025431,16436400050801,16436400053193,16436400050470,16436400049910,16436400051213,16436400053201,16436400050488,16436400051809,16436400051239,16436400054340,16436400050496,16436400044051,16436400051320,16436400054829,16436400050504,16436400050751,16436400051338,16436100273125,16436400050769,16436400040745,16436400050132,16436400054506,16436400045348,16436400051379,16436400048359,16436400046726,16436400045363,16436400050546,16436400045165,16436400048425,16436400045371,16436400050975,16436400045728,16436400043798,16436400049076,16436400040711,16436400048219,16436400046148,16436400045587,16436400025639,16436400050553,16436400046916,16436400046866,16436400025654,16436400050363,16436400047013,16436400048995,16436400045173,16436400051478,16436400047468,16436400049001,16436400045181,16436400049860,16436400048151,16436400043806,16436400043988,16436400044861,16436400051965,16436400050355,16436400044317,16436400054191,16436100315785,16436400041651,16436400047419,16436400055180,16436100310182,16436400043269,16436400029938,16436400036867,16436100315363,16436400044192,16436400044788,16436400044895,16436100316882,16436400044846,16436400044796,16436100315777,16436100308996,16436400044291,16436400044804,16436100319407,16436100314341,16436400044309,16436400044812,16436100313236,16436100308855,16436100315645,16436400044853,16436100313947,16436100321650,16436100313772,16436100313525,16436100312048,16436100315181,16436100316916,16436100309648,16436100311826,16436100321676,16436100308418,16436100316445,16436100310836,16436100313251,16436100327905,16436100315348,16436100334166,16436100320876,16436100316007,16436100327913,16436100324159,16436100316080,16436100312873,16436100315397,16436100313723,16436100311750,16436100315306,16436100318755,16436100317450,16436100320223,16436100311768,16436100315470,16436100317609,16436100312303,16436100317195,16436400043772,16436400043780.

Bangalore 17-02-2022 **Vice President & Zonal Head**

ಈಶ್ವರಪ್ಪ ರಾಜೀನಾಮೆಗೆ ಪಟ್ಟು: ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪು ಕೋಟೆಯಲ್ಲೂ ಕೇಸರಿ ಧ್ವಜ ಹಾರಿಸುವುದಾಗಿ ಹೇಳಿಕೆ ನೀಡಿರುವ ಆರೋಪದ ಮೇಲೆ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಂಪುಟದಿಂದ ಕೈಬಿಡುವಂತೆ ಪಟ್ಟುಹಿಡಿದು ಕಾಂಗ್ರೆಸ್ ಸದಸ್ಯರು ಗುರುವಾರವೂ ವಿಧಾನ ಪರಿಷತ್‌ನಲ್ಲಿ ಧರಣಿ ಮುಂದುವರಿಸಿದ್ದು, ಇಡೀ ದಿನ ಕಾಂಗ್ರೆಸ್– ಬಿಜೆಪಿ ಸದಸ್ಯರ ವಾಕ್ಸಮರಕ್ಕೆ ಸದನ ವೇದಿಕೆಯಾಯಿತು.

ಬೆಳಿಗ್ಗೆ ಧರಣಿ ನಡುವೆಯೇ ಪ್ರಶ್ನೋತ್ತರ ಮುಗಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಮಧ್ಯಾಹ್ನ 3ಕ್ಕೆ ಕಲಾಪ ಮುಂದೂಡಿದರು. ಮಧ್ಯಾಹ್ನ ಮತ್ತೆ ಕಲಾಪ ಆರಂಭವಾದಾಗ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರೂ ಪಕ್ಷಗಳ ಹಲವು ಸದಸ್ಯರಿಗೆ ಸುದೀರ್ಘ ಅವಧಿಯವರೆಗೆ ಚರ್ಚೆಗೆ ಅವಕಾಶ ನೀಡಿ, ಪರಿಸ್ಥಿತಿ ತಿಳಿಗೊಳಿಸಲು ಯತ್ನಿಸಿದರು. ಆದರೆ, ಪಟ್ಟು ಸಡಿಲಿಸದ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಅಹೋರಾತ್ರಿ ಧರಣಿ ನಡೆಸಿದರು.

ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆ ಹೇಳಿಕೆ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಹಿಜಾಬ್ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದವರು ಹೈರಾಣಾಗಿದ್ದಾರೆ. ಅದರಿಂದ ಜನರ ಗಮನ ಬೇರೆಡೆ ಸೆಳೆಯಲು ಈಶ್ವರಪ್ಪ ಹೇಳಿಕೆಯನ್ನು ಬಳಸಿಕೊಳ್ಳುತ್ತಿದೆ. 125 ವರ್ಷಗಳ ಇತಿಹಾಸವಿರುವ ಪಕ್ಷದ ಸದಸ್ಯರು ಹೀಗೆಲ್ಲ ಮಾಡಬಾರದು' ಎಂದರು.

ವಿಪಕ್ಷ ಸದಸ್ಯರ ತಿರುಗೇಟು: ಗೃಹ ಸಚಿವರ ಹೇಳಿಕೆಗೆ ಪ್ರತಿಕ್ರಿಯಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ರಾಷ್ಟ್ರದ್ರೋಹದ ಪ್ರಕರಣದಲ್ಲಿ ಗೃಹ ಸಚಿವರೇ ಆರೋಪಿಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದು ರಾಜ್ಯದ ದುರಂತ' ಎಂದರು. ಕಾಂಗ್ರೆಸ್‌ನ ಸಲೀಂ ಅಹ್ಮದ್, ಯು.ಬಿ. ವೆಂಕಟೇಶ್, ನಜೀರ್ ಅಹ್ಮದ್ ಮತ್ತಿತರರು ದನಿಗೂಡಿಸಿದರು. ಗೃಹ ಸಚಿವರು ಹಿಜಾಬ್ ವಿಚಾರ ಪ್ರಸ್ತಾಪಿಸಿದ್ದನ್ನು ಕಾಂಗ್ರೆಸ್‌ನ ಅಲ್ಲಂ ವೀರಭದ್ರಪ್ಪ ಆಕ್ಷೇಪಿಸಿದರು.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನ ಹಲವು ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಧರಣಿ ಕೊನೆಗೊಳಿಸಲು ಕ್ರಮ ಕೈಗೊಳ್ಳುವಂತೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಲಹೆಗಳನ್ನು ನೀಡಿದರು. ಈಶ್ವರಪ್ಪ ರಾಜೀನಾಮೆ ಪಡೆದು ಸುಗಮ ಕಲಾಪಕ್ಕೆ ಅವಕಾಶ ಕಲ್ಪಿಸುವಂತೆ ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು.

ಚರ್ಚೆಯ ಕೊನೆಯಲ್ಲಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಹರಿಪ್ರಸಾದ್, 'ಆರ್‌ಎಸ್‌ಎಸ್‌ಗೆ ರಾಷ್ಟ್ರಧ್ವಜದ ಮೇಲೆ ಗೌರವ ಇಲ್ಲ. ಅದನ್ನೇ ಇವರೂ ಮುಂದುವರಿಸಿದ್ದಾರೆ. ಇವರೆಲ್ಲ ಢೋಂಗಿ ದೇಶಪ್ರೇಮಿಗಳು' ಎಂದರು.

ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ವಿಧಾನಪರಿಷತ್‌ನಲ್ಲಿ ಗುರುವಾರ ಸಭಾಪತಿ ಪೀಠದ ಮುಂದೆ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಹರಿಪ್ರಸಾದ್– ಆಯನೂರು ವಾಕ್ಸಮರ

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಬುಧವಾರ ಚರ್ಚೆಯ ನಡುವೆ ನಾಗಪುರವನ್ನು 'ಹಾವಿನಪುರ' ಎಂದು ಕರೆದಿದ್ದಕ್ಕೆ ಗುರುವಾರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಆಯನೂರು ಮಂಜುನಾಥ್, 'ನಾವು ಕೊತ್ವಾಲ್‌ಪುರದ ಪ್ರಜೆಗಳು ಎಂದು ಕರೆದುಕೊಳ್ಳುತ್ತೇವೆ' ಎಂದು ಕೆಣಕಿದರು.

ಇಬ್ಬರ ನಡುವೆ ತೀವ್ರ ವಾಕ್ಸಮರ ನಡೆಯಿತು. 'ನಾಯಕರನ್ನು ಮೆಚ್ಚಿಸಲು ಮಾತನಾಡುತ್ತಿದ್ದೀರಿ. ಭಾಷೆ ಸರಿಪಡಿಸಿಕೊಳ್ಳಿ. ಇಲ್ಲವಾದರೆ ನಮಗೂ ಮಾತನಾಡಲು ಗೊತ್ತು' ಎಂದು ಆಯನೂರು ಸವಾಲು ಹಾಕಿದರು.

'ಕೊತ್ವಾಲ್‌ಪುರದವರನ್ನು ಶಿವಮೊಗ್ಗದಿಂದ ಬೆಳೆಸಿ ಬೆಂಗಳೂರಿಗೆ ಕಳುಹಿಸಿದ್ದು ಯಾರು ಹೇಳಿಬಿಡಿ. ಆ ಭಾಗದ ಸದಸ್ಯರೊಬ್ಬರು ನಮ್ಮ ಪಕ್ಷಕ್ಕೂ ಬಂದಿದ್ದರು. ನಮ್ಮ ಪಕ್ಷದಲ್ಲಿ ಟಿಕೆಟ್ ಪಡೆಯಲು ಏನು ಮಾಡಿದ್ದರು ಎಂದು ಹೇಳಿದರೆ ನನ್ನ ಬಾಯಿ ಹೊಲಸಾಗುತ್ತದೆ' ಎಂದು ಆಯನೂರು ಹಿಂದೆ ಕಾಂಗ್ರೆಸ್ ಟಿಕೆಟ್ ಪಡೆದ ಸಂದರ್ಭವನ್ನು ಹರಿಪ್ರಸಾದ್ ಪರೋಕ್ಷವಾಗಿ ಉಲ್ಲೇಖಿಸಿದರು.

ಸದನದಲ್ಲಿ ಸದಸ್ಯರ ಮಾತು

ಒಬ್ಬ ಸಚಿವರು ಮುಖ್ಯವೋ? ರಾಷ್ಟ್ರಧ್ವಜ ಮುಖ್ಯವೋ ಯೋಚಿಸಬೇಕು. ತಪ್ಪು ಮಾಡಿದ್ದರೆ ಸಚಿವರು ಕ್ಷಮೆ ಯಾಚಿಸಬೇಕು. ಸಂವಿಧಾನಕ್ಕೆ ವಿರುದ್ಧವಾದ ನಡವಳಿಕೆಯನ್ನು ಸಮರ್ಥಿಸಿಕೊಂಡರೆ ಯಾರಿಗೆ ಒಳಿತಾಗುತ್ತದೆ. ರಾಜೀನಾಮೆ ಕೊಟ್ಟರೆ ತಿಂಗಳೊಳಗೆ ಮಂತ್ರಿ ಆಗಲೂ ಸಾಧ್ಯ.

ಮರಿತಿಬ್ಬೇಗೌಡ, ಜೆಡಿಎಸ್ ಸದಸ್ಯ

ಮಕ್ಕಳನ್ನು ಬೀದಿಗೆ ಬಿಟ್ಟು ಜಾತಿ, ಧರ್ಮ ತಂದು ಆಗಿದೆ. ಈಗ ರಾಜ್ಯದ ಜನತೆ ನಮ್ಮನ್ನು ನೋಡುತ್ತಿದ್ದಾರೆ. ಮುಖ್ಯಮಂತ್ರಿಯವರೇ ಮಧ್ಯ ಪ್ರವೇಶಿಸಿ ಇದಕ್ಕೆ ಕೊನೆ ಹಾಡಬೇಕು. ಪಕ್ಷದ ಕಾರಣ ಇಟ್ಟುಕೊಂಡು ಯಾರೂ ಪ್ರತಿಷ್ಠೆ ಪ್ರದರ್ಶಿಸುವುದು ಸರಿಯಲ್ಲ.

ಎಚ್. ವಿಶ್ವನಾಥ್, ಬಿಜೆಪಿ ಸದಸ್ಯ

ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಆಪಾದನೆ ಇದೆ. ಅವರಿಂದ ಸದನದಲ್ಲಿ ಹೇಳಿಕೆ ಕೊಡಿಸಬೇಕು. ಅದಕ್ಕೆ ಸಮಾಧಾನ ಆಗದಿದ್ದರೆ ವಿಧಾನಮಂಡಲದ ಎರಡೂ ಸದನಗಳ ಜಂಟಿ ಕಲಾಪ ಸಲಹಾ ಸಮಿತಿ ಸಭೆ ನಡೆಸಿ ಪ್ರಕರಣ ಇತ್ಯರ್ಥ ಮಾಡಬೇಕು.

ಕೆ.ಟಿ. ಶ್ರೀಕಂಠೇಗೌಡ, ಜೆಡಿಎಸ್ ಸದಸ್ಯ

ಆರೋಪ ಬಂದಾಗ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದವರಿದ್ದಾರೆ. ಈಗ ಈಶ್ವರಪ್ಪ ಸ್ವಯಂಪ್ರೇರಿತರಾಗಿ ರಾಜೀನಾಮೆ ಕೊಡಬೇಕು. ಇಲ್ಲವಾದರೆ ಮುಖ್ಯಮಂತ್ರಿಯವರು ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಬೇಕು.

ಆರ್.ಬಿ.ತಿಮ್ಮಾಪೂರ, ಕಾಂಗ್ರೆಸ್ ಸದಸ್ಯ

ರಾಷ್ಟ್ರಧ್ವಜದಲ್ಲಿರುವ ಕೇಸರಿ, ಬಿಳಿ, ಹಸಿರು ಮೂರು ಬಣ್ಣಗಳಿಗೂ ಸಮಾನ ಗೌರವವಿದೆ. ಕೇಸರಿ ಬಗ್ಗೆ ಮಾತನಾಡಿದರೆ ತಪ್ಪೇನಿದೆ? ಎಲ್ಲದಕ್ಕೂ ರಾಜೀನಾಮೆ ಕೊಡಿ ಎಂದರೆ ಹೇಗೆ?

ತೇಜಸ್ವಿನಿಗೌಡ, ಬಿಜೆಪಿ ಸದಸ್ಯೆ

ಈಶ್ವರಪ್ಪ ಅವರ ಜತೆ 37 ವರ್ಷದಿಂದ ಕೆಲಸ ಮಾಡಿದ್ದೇನೆ. 1992ರಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ನಡೆಸಲು ಅವರೇ ಪ್ರೇರಣೆ. ಅವರು ರಾಷ್ಟ್ರಧ್ವಜದ ವಿಚಾರದಲ್ಲಿ ತಪ್ಪು ಮಾತನಾಡಲು ಸಾಧ್ಯವಿಲ್ಲ.

ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ

ಸುದ್ದಿ 2 ನಿಮಿಷ

7ನೇ ವೇತನ ಆಯೋಗ ರಚನೆ: ಚರ್ಚಿಸಿ ತೀರ್ಮಾನ– ಬೊಮ್ಮಾಯಿ

ಬೆಂಗಳೂರು: 'ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ ರಚಿಸುವ ಕುರಿತು ಬಜೆಟ್ ಅಧಿವೇಶನಕ್ಕೂ ಮೊದಲು ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, ಅರುಣ್ ಶಹಾಪುರ ಮತ್ತು ಅ. ದೇವೇಗೌಡ ಅವರ ಪ್ರಶ್ನೆಗೆ ಗುರುವಾರ ಉತ್ತರಿಸಿದ ಮುಖ್ಯಮಂತ್ರಿ, 'ರಾಜ್ಯದಲ್ಲಿ 2017-18ರಲ್ಲಿ ವೇತನ ಪರಿಷ್ಕರಣೆ ಆಗಿತ್ತು' ಎಂದರು.



'ರಾಜ್ಯದಲ್ಲಿ 6ನೇ ವೇತನ ಆಯೋಗದ ವರದಿಯನ್ನು ಜಾರಿಗೆ ತಂದಿದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ವೇತನದಲ್ಲಿ ತಾರತಮ್ಯವಿದೆ. 25 ರಾಜ್ಯಗಳು ಅಲ್ಲಿನ ನೌಕರರಿಗೆ ಕೇಂದ್ರ ಸರ್ಕಾರದ ನೌಕರರಿಗೆ ಸಮಾನವಾಗಿ ವೇತನ ನೀಡುತ್ತಿದೆ. ಅದೇ ರೀತಿ ರಾಜ್ಯದಲ್ಲೂ ವೇತನ ನೀಡಬೇಕು' ಎಂದು ಶ್ರೀಕಂಠೇಗೌಡ ಆಗ್ರಹಿಸಿದರು.

ರಾಜ್ಯದಲ್ಲಿ 2 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇರುವ ಬಗ್ಗೆ ಶ್ರೀಕಂಠೇಗೌಡ ಗಮನಸೆಳೆದಾಗ, 'ಈಗಾಗಲೇ 15 ಸಾವಿರ ಶಿಕ್ಷಕರು, 16 ಸಾವಿರ ಪೊಲೀಸರ ನೇಮಕಾತಿ ಮತ್ತು ಕಲ್ಯಾಣ ಕರ್ನಾಟಕಕ್ಕೆ 14 ಸಾವಿರ ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಹಂತ, ಹಂತವಾಗಿ ಹುದ್ದೆ ತುಂಬಲಾಗುವುದು' ಎಂದರು.

ಪಡಿತರ ಚೀಟಿ ವಿತರಣೆಗೆ ಚಾಲನೆ

ಬೆಂಗಳೂರು: ಈಗಾಗಲೇ ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುವವರಲ್ಲಿ ಅರ್ಹ ಅರ್ಜಿದಾರರಿಗೆ ಹೊಸ ಪಡಿತರ ಚೀಟಿ ವಿತರಣೆ ಕಾರ್ಯ ಆರಂಭಿಸಿದ್ದು, ಅರ್ಜಿಗಳ ಹಿರಿತನದ ಆಧಾರದ ಮೇಲೆ ಆದ್ಯತಾ ಪಡಿತರ ಚೀಟಿಯನ್ನು ವಿತರಿಸಲಾಗುತ್ತಿದೆ ಎಂದು ಆಹಾರ ಸಚಿವ ಉಮೇಶ ಕತ್ತಿ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಎಲ್.ನಾಗೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರ ಸ್ಥಳ ಪರಿಶೀಲನೆ ಕಾರ್ಯ ತಡವಾಗಿತ್ತು. ಬಯೋಮೆಟ್ರಿಕ್ ಬಳಕೆ ಹಿಂದಕ್ಕೆ ಪಡೆದ ಕಾರಣ ಪಡಿತರ ಚೀಟಿ ವಿತರಣೆ ಕಾರ್ಯ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು ಎಂದರು.

ಅಹೋರಾತ್ರಿ 'ಕೈ' ಧರಣಿ

ಒಂದನೇ ಪುಟದಿಂದ

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ತಮ್ಮ ಪಕ್ಷದ ಶಾಸಕರನ್ನು ಹಿಂದಕ್ಕೆ ಕಳುಹಿಸಿದರು. ಪ್ರಶ್ನೋತ್ತರ ಬಳಿಕ ಕಲಾಪವನ್ನು ಮುಂದುವರಿಸಲು ಸಾಧ್ಯವಾಗದ ಕಾರಣಕ್ಕೆ ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು. ಭೋಜನ ವಿರಾಮದ ಬಳಿಕವೂ ಕಾಂಗ್ರೆಸ್ ಶಾಸಕರು ಧರಣಿ ಸ್ಥಳ ಬಿಟ್ಟು ಕದಲಲಿಲ್ಲ. ಆಗ ಸಭಾಧ್ಯಕ್ಷರು ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು.

ವಿಧಾನಪರಿಷತ್ತಿನಲ್ಲಿ ಭೋಜನ ವಿರಾಮದ ಬಳಿಕ ಸಭಾಪತಿ ಹೊರಟ್ಟಿ ಇತ್ತೀಚೆಗೆ ಈಶ್ವರಪ್ಪ ಅವರು ಆಡಿದ ಮಾತಿನ ಕುರಿತು ಎರಡು ಗಂಟೆಗೂ ಹೆಚ್ಚು ಕಾಲ ಚರ್ಚೆಗೆ ಅವಕಾಶ ನೀಡಿ ಪರಿಸ್ಥಿತಿ ತಿಳಿಗೊಳಿಸಲು ನಡೆಸಿದ ಪ್ರಯತ್ನ ಫಲ ನೀಡಲಿಲ್ಲ. ಸದನ ನಿಯಂತ್ರಣಕ್ಕೆ ತರಲು ಸಾಧ್ಯವಾಗದ ಕಾರಣ ಶುಕ್ರವಾರಕ್ಕೆ ಮುಂದೂಡಿದರು.

ಆ ಬಳಿಕ ಕಾಂಗ್ರೆಸ್ ಸದಸ್ಯರು ಸಭೆ ಸೇರಿ ಎರಡೂ ಸದನಗಳಲ್ಲಿ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನಿಸಿದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರ ಜತೆ ಮಾತನಾಡಿ, 'ನಾವು ರಾತ್ರಿ ಧರಣಿ ನಡೆಸುವುದರಿಂದ ಸೂಕ್ತ ವ್ಯವಸ್ಥೆ ಮಾಡಬೇಕು' ಎಂದು ಮನವಿ ಮಾಡಿದರು. ಧರಣಿನಿರತ ಶಾಸಕರಿಗೆ ರಾತ್ರಿ ಸಸ್ಯಾಹಾರಿ ಊಟ, ಟಿ–ಕಾಫಿ, ಹಾಸಿಗೆ, ದಿಂಬು, ಹೊದಿಕೆ ವ್ಯವಸ್ಥೆ ಮಾಡಲಾಯಿತು.

ರಾತ್ರಿ 8 ಗಂಟೆ ಸುಮಾರಿಗೆ ಧರಣಿನಿರತರನ್ನು ಭೇಟಿಯಾದ ಸಭಾಧ್ಯಕ್ಷ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಿ.ಎಸ್. ಯಡಿಯೂರಪ್ಪ, ಕಂದಾಯ ಸಚಿವ ಆರ್.ಅಶೋಕ ಮತ್ತಿತರರು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಡಿ.ಕೆ.ಶಿವಕುಮಾರ್ ಅವರ ಜತೆ ಸಮಾಲೋಚಿಸಿ ಮನವೊಲಿಸುವ ಪ್ರಯತ್ನ ನಡೆಸಿದರು. ಮನವಿಯನ್ನು ಕಾಂಗ್ರೆಸ್ ನಾಯಕರು ನಯವಾಗಿಯೇ ತಿರಸ್ಕರಿಸಿದರು.

'ಈಗ ನೀವು ಅಹೋರಾತ್ರಿ ಧರಣಿ ಕೈಬಿಡಿ, ನಾಳೆ ಬೆಳಿಗ್ಗೆ ಕಲಾಪ ಆರಂಭವಾದಾಗ ಮುಂದುವರೆಸಿ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಮನವಿ ಮಾಡಿದರು. 'ಧರಣಿ ಕೈಬಿಡುವಂತೆ ನಾವು ಎರಡು ಗಂಟೆಗಳ ಕಾಲ ಪ್ರಯತ್ನ ನಡೆಸಿದೆವು. ಆದರೂ ಅವರು ಅದಕ್ಕೆ ಬಗ್ಗಲಿಲ್ಲ' ಎಂದು ಯಡಿಯೂರಪ್ಪ ಸುದ್ದಿಗಾರರಿಗೆ ತಿಳಿಸಿದರು.

> **ಕಲಾಪ ಹಾಳುಮಾಡುತ್ತಿರುವವರನ್ನು ಕೂಡಲೆ ಸದನದಿಂದ ಹೊರಹಾಕಬೇಕು. ಕಲಾಪವನ್ನು ನಡೆಸುವ ಶಕ್ತಿ ಸರ್ಕಾರಕ್ಕೆ ಇಲ್ಲದಿದ್ದರೆ ಅಧಿವೇಶನವನ್ನು ಅನಿರ್ದಿಷ್ಟಾವಧಿವರೆಗೆ ಮುಂದೂಡಬೇಕು**
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

> **ಸಚಿವ ಕೆ.ಎಸ್. ಈಶ್ವರಪ್ಪ ರಾಷ್ಟ್ರದ್ರೋಹದ ಕೆಲಸ ಮಾಡಿದ್ದಾರೆ. ತಕ್ಷಣ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಅವರ ರಾಜೀನಾಮೆ ಪಡೆಯಬೇಕು**
> **ಬಿ.ಕೆ. ಹರಿಪ್ರಸಾದ್**
> ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಕಾಂಗ್ರೆಸ್‌ನ ರಾಜಕೀಯ ಹಿತಾಸಕ್ತಿಗೆ ರಾಜ್ಯದ ಹಿತ ಬಲಿ: ಸಿ.ಎಂ ತರಾಟೆ

'ಜನ ಹಿತವಿಲ್ಲದ ಅಹೋರಾತ್ರಿ ಧರಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆಯಲ್ಲಿ ಈ ಹಿಂದೆ ಅಹೋರಾತ್ರಿ ಧರಣಿಗಳು ರೈತರ ಮತ್ತು ಜನಪರ ವಿಚಾರಗಳಿಗಾಗಿ ನಡೆದಿವೆ. ಆದರೆ ಕಾಂಗ್ರೆಸ್‌ನವರು ಈಗ ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿ ರಾಜ್ಯದ ಹಿತಾಸಕ್ತಿ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ಅವರ ಹೇಳಿಕೆಯನ್ನು ಕಾಂಗ್ರೆಸ್‌ನವರು ತಪ್ಪಾಗಿ ಅರ್ಥೈಸಿಕೊಂಡು, ತಪ್ಪು ಅಭಿಪ್ರಾಯವನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಇದು ಜನ ವಿರೋಧಿ ಧೋರಣೆ ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

ವಿರೋಧ ಪಕ್ಷದವರು ತಮ್ಮ ಜವಾಬ್ದಾರಿಯನ್ನು ಮರೆತಿದ್ದಾರೆ. ಇದರಲ್ಲಿ ರಾಜಕೀಯ ಲಾಭ ಸಿಗುತ್ತದೆ ಎಂದು ಭಾವಿಸಿದ್ದಾರೆ. ಆದರೆ ಖಂಡಿತವಾಗಿ ರಾಜಕೀಯವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಅವರಿಗೆ ಲಾಭವಾಗುವುದಿಲ್ಲ ಎಂದು ಬೊಮ್ಮಾಯಿ ಹೇಳಿದರು.

'ಕಾನೂನು ಉಲ್ಲಂಘನೆ ಆಗುವ ಯಾವುದೇ ಹೇಳಿಕೆಯನ್ನು ಈಶ್ವರಪ್ಪ ನೀಡಿಲ್ಲ. ಮಾಡದ ತಪ್ಪಿಗೆ ಧರಣಿ ಮಾಡಲು ಹೊರಟಿರುವುದನ್ನು ನೋಡಿದರೆ ಕಾಂಗ್ರೆಸ್‌ನವರು ಎಷ್ಟು ತಳಮಟ್ಟಕ್ಕೆ ಹೋಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ವಿಚಾರವಾಗಿ ಕಾಂಗ್ರೆಸ್ ನಾಯಕರು ಆಂತರಿಕವಾಗಿ ಚಿಂತನೆ ನಡೆಸಬೇಕು. ಇವರ ಧರಣಿಯನ್ನು ಸಾರ್ವಜನಿಕರೂ ಒಪ್ಪುವುದಿಲ್ಲ. ನಮ್ಮ ಸಮಸ್ಯೆಗಳನ್ನು ಚರ್ಚೆ ಮಾಡುತ್ತಾರೆ ಎಂದು ಸಾರ್ವಜನಿಕರು ಕಾದು ನೋಡುತ್ತಿದ್ದಾರೆ. ಕಾಂಗ್ರೆಸ್ ರಾಜಕೀಯ ಹಿತಾಸಕ್ತಿಗಾಗಿ ಜನರ ಹಿತವನ್ನು ಬಲಿಕೊಡುತ್ತಿದೆ' ಎಂದು ಹೇಳಿದರು.

ತಾರ್ಕಿಕ ಅಂತ್ಯವೆಂಬುದಿಲ್ಲ: 'ಈ ವಿಚಾರವಾಗಿ ಸಭಾಧ್ಯಕ್ಷರ ಜತೆ ಎರಡು ಸಭೆಗಳನ್ನು ನಡೆಸಿ, ಇದನ್ನು ಹೆಚ್ಚು ಬೆಳೆಸುವುದು ಬೇಡ ಎಂದು ತಿಳಿಸಿದೆವು. ಆದರೆ, ಅವರು ಇದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಾಗಿ ತಿಳಿಸಿದ್ದಾರೆ. ಇದಕ್ಕೆ ಯಾವುದೇ ತಾರ್ಕಿಕ ಅಂತ್ಯವೆಂಬುದಿಲ್ಲ ಎಂದು ಕಾಂಗ್ರೆಸ್ ನಾಯಕರಿಗೆ ತಿಳಿಸಿದ್ದೇನೆ' ಎಂದು ಬೊಮ್ಮಾಯಿ ಹೇಳಿದರು.

'ಎಲ್ಲರ ಮಕ್ಕಳು ಕೂಡಿ ವಿದ್ಯಾರ್ಜನೆ ಮಾಡಬೇಕು. ಇದಕ್ಕಾಗಿ ರಾಜ್ಯದ ಜನತೆ, ಸಮಾಜ, ಸರ್ಕಾರ ಅವರವರ ಜವಾಬ್ದಾರಿಯನ್ನು ಅರಿತು ಕೆಲಸ ಮಾಡುತ್ತಿದ್ದೇವೆ. ಶಾಲಾ–ಕಾಲೇಜುಗಳಲ್ಲಿ ಶಾಂತಿ ಮೂಡಬೇಕು. ಮೊದಲಿನಂತೆಯೇ ವಿದ್ಯಾರ್ಜನೆಯಾಗಬೇಕು. ಮಾರ್ಚ್‌ನಲ್ಲಿ ಪರೀಕ್ಷೆಗಳು ನಡೆಯಲಿದ್ದು, ಅದಕ್ಕೆ ಯಾವುದೇ ರೀತಿಯ ತೊಂದರೆ ಆಗಬಾರದು. ಮಕ್ಕಳಲ್ಲಿ ಗೊಂದಲ ಸೃಷ್ಟಿಯಾಗಬಾರದು ಎಂದು ನಾವೆಲ್ಲರೂ ಸೇರಿ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ವಿರೋಧಪಕ್ಷಗಳು ಸಹಕರಿಸಬೇಕು' ಎಂದು ತಿಳಿಸಿದರು.

'ಕೂಡು ಕಲಿಕೆಗೆ ಸಹಮತ ಸಂದೇಶ ಬೇಕಿದೆ'

ಎಲ್ಲರ ಮಕ್ಕಳು ಕೂಡಿ ವಿದ್ಯಾರ್ಜನೆ ಮಾಡುವ ಕುರಿತು ನಾವೆಲ್ಲರೂ ಸೇರಿ ವಿಧಾನಸಭೆಯ ಮೂಲಕ ರಾಜ್ಯಕ್ಕೆ ಒಂದು ಸಂದೇಶವನ್ನು ಕಳುಹಿಸಬಹುದಾಗಿತ್ತು. ಈಗಾಗಲೇ ಪ್ರಕರಣ ನ್ಯಾಯಾಲಯದಲ್ಲಿದ್ದು, ಅದರ ಆದೇಶವನ್ನು ಪಾಲಿಸಬೇಕಾಗಿದೆ. ಸಂವಿಧಾನದಲ್ಲಿ ನ್ಯಾಯಾಂಗಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ನಮ್ಮ ಜವಾಬ್ದಾರಿ ಶಾಂತಿ ನೆಲೆಸುವ ರೀತಿಯಲ್ಲಿ, ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಸದನದಲ್ಲಿ ಒಟ್ಟಾಗಿ ಆ ಸಂದೇಶವನ್ನು ಕಳುಹಿಸುವ ಕೆಲಸ ನಾವು ಮಾಡಬೇಕಾಗಿದೆ' ಎಂದು ಬೊಮ್ಮಾಯಿ ಹೇಳಿದರು.

37 ಎಕರೆ ಗೋಮಾಳ ಪರಭಾರೆ; ಅಧಿಕಾರಿಗೆ ರಕ್ಷಣೆ

ಒಂದನೇ ಪುಟದಿಂದ

ಈ 15 ಪ್ರಕರಣಗಳನ್ನೂ ಭೂ ಕಂದಾಯ ಕಾಯ್ದೆ 1964ರ ಕಲಂ 136 (2) ಅಡಿ ವಿಚಾರಣೆ ನಡೆಸಬೇಕು ಎಂದು ಕಂದಾಯ ಇಲಾಖೆಯು ನಗರ ಜಿಲ್ಲಾಡಳಿತಕ್ಕೆ ಸೂಚಿಸಿತ್ತು. ಎರಡು ಪ್ರಕರಣಗಳ ವಿಚಾರಣೆ ನಡೆಸಿದ್ದ ಈ ಹಿಂದಿನ ವಿಶೇಷ ಜಿಲ್ಲಾಧಿಕಾರಿ ಎಂ.ಕೆ.ಜಗದೀಶ್, ಈ ಜಮೀನುಗಳು ಸರ್ಕಾರಕ್ಕೆ ಸೇರಿದ್ದು ಎಂದು ವರದಿ ಸಲ್ಲಿಸಿದ್ದರು. ಏಳು ಪ್ರಕರಣಗಳ ವಿಚಾರಣೆ ಪೂರ್ಣಗೊಂಡಿಲ್ಲ ಎಂದು ನಗರ ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಮಂಜುನಾಥ ಪ್ರಸಾದ್ ವರದಿಯ ನಂತರ ರಂಗನಾಥ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ಆ ಬಳಿಕ ಬೆಂಗಳೂರು ಉತ್ತರದ ಉಪವಿಭಾಗಾಧಿಕಾರಿಯಾಗಿ ನೇಮಿಸಿತ್ತು. ಕಳೆದ ತಿಂಗಳು ಅವರನ್ನು ಮತ್ತೆ ವರ್ಗಾವಣೆ ಮಾಡಲಾಗಿದೆ. ಇದನ್ನು ಪ್ರಶ್ನಿಸಿ ಅವರು ಕೆಎಟಿ ಮೊರೆ ಹೋಗಿದ್ದಾರೆ.

ಮಂಜುನಾಥ ಪ್ರಸಾದ್ ವರದಿಯಲ್ಲಿ ಏನಿತ್ತು:

'ರಂಗನಾಥ್ ಅವರು 2020ರ ಮಾರ್ಚ್ 26ರಿಂದ ಜೂನ್ 26ರವರೆಗೆ ಬೆಂಗಳೂರು ಉತ್ತರ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಏಪ್ರಿಲ್ 3ರವರೆಗೆ ಲಾಕ್‌ಡೌನ್ ಇದ್ದ ಕಾರಣ ಆ ನಂತರ 116 ಆದೇಶಗಳನ್ನು ಅವರು ಹೊರಡಿಸಿದ್ದು, ಅವುಗಳಲ್ಲಿ ಸರ್ಕಾರಿ ಗೋಮಾಳಕ್ಕೆ ಸಂಬಂಧಿಸಿದ 15 ಪ್ರಕರಣಗಳು ಒಳಗೊಂಡಿವೆ. ಉತ್ತರ ತಾಲ್ಲೂಕಿನ ಕನ್ನಲ್ಲಿ, ಲಕ್ಷ್ಮೀಪುರ, ಕೊಡಿಗೇಹಳ್ಳಿ, ಗೌಡಹಳ್ಳಿ, ಪೂರ್ವ ತಾಲ್ಲೂಕಿನ ಬಿದರಹಳ್ಳಿ, ಕ್ಯಾಲಸನಹಳ್ಳಿ, ಭೋಗನಹಳ್ಳಿ, ಯಲಹಂಕ ತಾಲ್ಲೂಕಿನ ಬೆಟ್ಟಹಲಸೂರು ಮತ್ತು ಸಾತನೂರು ಗ್ರಾಮಗಳ ವ್ಯಾಪ್ತಿಯ 37 ಎಕರೆ 10 ಗುಂಟೆ ಜಾಗವನ್ನು ಮಂಜೂರು ಮಾಡಿದ್ದಾರೆ' ಎಂದು ಮಂಜುನಾಥ ಪ್ರಸಾದ್ ವರದಿಯಲ್ಲಿ ವಿವರಿಸಿದ್ದರು.

> **ಗೋಮಾಳ ಪರಭಾರೆ ಪ್ರಕರಣದ ಮಾಹಿತಿ ಸಮಿತಿಗೆ ಬಂದಿದೆ. ಈ ಸಂಬಂಧ ಎಲ್ಲ ದಾಖಲೆಗಳನ್ನೂ ಒಳಗೊಂಡ ಸಮಗ್ರ ವರದಿ ಸಲ್ಲಿಸುವಂತೆ ಕಂದಾಯ ಇಲಾಖೆಗೆ ಸೂಚಿಸಲಾಗಿದೆ**
> **ಕೃಷ್ಣ ಬೈರೇಗೌಡ**
> ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ

> **ಅಧಿಕಾರಿಯು ಭೂಮಾಫಿಯಾದ ಜತೆಗೆ ಕೈಜೋಡಿಸಿದ ಬಗ್ಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯೇ ವರದಿ ಸಲ್ಲಿಸಿದರೂ ಸರ್ಕಾರ ಕ್ರಮ ಕೈಗೊಂಡಿಲ್ಲ**
> **ಎ.ಟಿ.ರಾಮಸ್ವಾಮಿ**
> ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯ

41 ದಿನಗಳಲ್ಲಿ 1,592 ಪ್ರಕರಣ ವಿಚಾರಣೆ!

ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿಯಾಗಿದ್ದ ವೇಳೆ ಕೆ.ರಂಗನಾಥ ಅವರು 2020ರ ಮೇ 15ರಿಂದ ಜೂನ್ 26ರ ನಡುವೆ ಭೂವ್ಯಾಜ್ಯಕ್ಕೆ ಸಂಬಂಧಿಸಿದ ಒಟ್ಟು 1,592 ಮೇಲ್ಮನವಿ (ಆರ್.ಎ) ಪ್ರಕರಣಗಳ ವಿಚಾರಣೆ ನಡೆಸಿದ್ದರು.

ರಂಗನಾಥ್ ಅವರು ಮೇ 15ರಿಂದ ಜೂನ್ 26ರ ನಡುವೆ ನಿತ್ಯ ಸರಾಸರಿ 39 ಪ್ರಕರಣಗಳ ವಿಚಾರಣೆ ನಡೆಸಿದ್ದರು. ಈ ಅವಧಿಯಲ್ಲಿ 188 ಪ್ರಕರಣಗಳನ್ನು ಆದೇಶಕ್ಕೆ ಕಾಯ್ದಿರಿಸಿದ್ದರು. ಏಳೇ ದಿನಗಳಲ್ಲಿ 100ಕ್ಕೂ ಅಧಿಕ ಪ್ರಕರಣಗಳ ವಿಚಾರಣೆಗಳನ್ನು ನಡೆಸಿದ್ದರು. ಈ ವೇಳೆ ಅನೇಕ ಅಕ್ರಮಗಳು ನಡೆದಿರುವ ಬಗ್ಗೆ ದೂರುಗಳು ಬಂದಿದ್ದರಿಂದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಡತಗಳನ್ನು ಪರಿಶೀಲಿಸಿದ್ದರು.

'ಐಎಂಎ ಪ್ರಕರಣ: ಐಪಿಎಸ್ ಅಧಿಕಾರಿಗಳ ವಿರುದ್ಧವೂ ಕ್ರಮ'

ಬೆಂಗಳೂರು: 'ಬಹುಕೋಟಿ ಐಎಂಎ ಹಗರಣದಲ್ಲಿ ಆರೋಪಿಗಳಾಗಿರುವ ಐಪಿಎಸ್ ಅಧಿಕಾರಿಗಳ ವಿರುದ್ಧವೂ ಯಾವುದೇ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ವಿಷಯ ಪ್ರಸ್ತಾಪಿಸಿ, 'ಐಎಂಎ ಹಗರಣದಲ್ಲಿ ಕೆಳಹಂತದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆ. ಆದರೆ, ಹಿರಿಯ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅದಕ್ಕೆ ಉತ್ತರಿಸಿದ ಮುಖ್ಯಮಂತ್ರಿ, 'ಈ ಹಗರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಐಪಿಎಸ್ ಅಧಿಕಾರಿಗಳಾದ ಹೇಮಂತ್ ನಿಂಬಾಳ್ಕರ್ ಮತ್ತು ಅಜಯ್ ಹಿಲೋರಿ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅಭಿಯೋಜನೆಗೆ ಸಿಬಿಐ 2019ರ ಡಿ. 18ರಂದು ಅನುಮತಿ ಕೇಳಿತ್ತು. 2020ರ ಸೆ. 9ರಂದು ಸರ್ಕಾರ ಅಭಿಯೋಜನೆಗೆ ಅನುಮತಿ ನೀಡಿದೆ' ಎಂದರು.

'ಈ ಅಧಿಕಾರಿಗಳ ವಿರುದ್ಧ ಇಲಾಖೆಯಿಂದ ಶಿಸ್ತು ಕ್ರಮ ಕೈಗೊಳ್ಳಲು ಕೂಡಾ ಶಿಫಾರಸು ಮಾಡಲಾಗಿದೆ. ಅದರಂತೆ, ದೋಷಾರೋಪ ಪಟ್ಟಿ ಜಾರಿ ಮಾಡಲಾಗಿದೆ. ಅಭಿಯೋಜನೆಗೆ ಸರ್ಕಾರ ನೀಡಿದ ಅನುಮತಿಯನ್ನು ಹೇಮಂತ್ ನಿಂಬಾಳ್ಕರ್ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅಲ್ಲಿ ಅನುಮತಿ ವಜಾಗೊಂಡಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ ಸುಪ್ರೀಂ ಕೋರ್ಟ್‌ನಲ್ಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಕಸಾಪ ಸದಸ್ಯತ್ವ: ಕಲಾವಿದರಿಗೆ ವಿನಾಯಿತಿ ನೀಡಲು ಸಲಹೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಸದಸ್ಯತ್ವಕ್ಕೆ ನಿಗದಿಪಡಿಸಿರುವ ಶೈಕ್ಷಣಿಕ ಮಾನದಂಡಗಳಿಗೆ ಸಂಬಂಧಿಸಿದಂತೆ ಜನಪದ, ರಂಗಭೂಮಿ, ಚಿತ್ರಕಲಾ, ಕರಕುಶಲ ಕಲಾವಿದರಿಗೆ ವಿನಾಯಿತಿ ನೀಡಬೇಕು ಎಂದು ಸಾಹಿತಿಗಳು, ಚಿಂತಕರು, ಕಲಾವಿದರು ಅಭಿಪ್ರಾಯಪಟ್ಟರು.

ಬೈ–ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಗುರುವಾರ ಕನ್ನಡ ಸಾಹಿತ್ಯ ಪರಿಷತ್ ಸಾಹಿತಿಗಳು, ಸಂಸ್ಕೃತಿ ಚಿಂತಕರು, ಜಾನಪದ ವಿದ್ವಾಂಸರು, ಕಲಾವಿದರು, ಕನ್ನಡ ಪರ ಹೋರಾಗಾರರೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಶೈಕ್ಷಣಿಕ ಮಾನದಂಡಗಳನ್ನು 45 ವರ್ಷದ ಒಳಗಿನವರಿಗೆ ಮಾತ್ರ ಜಾರಿಗೊಳಿಸಬೇಕು ಎಂದು ಸಲಹೆ ನೀಡಿದರು.

ಜತೆಗೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಜಾನಪದ, ರಂಗಭೂಮಿ ಕಲಾವಿದರುಗಳನ್ನು ಸದಸ್ಯತ್ವ ನೋಂದಾಯಿಸಿಕೊಳ್ಳಲು ಆಹ್ವಾನಿಸಬೇಕು ಎಂದು ತಿಳಿಸಿದರು.

ಪರಿವರ್ತನೆ ತರುವ ಸಂದರ್ಭದಲ್ಲಿ ಕೆಲವರು ವಿರೋಧ ಮಾಡುವುದು ಸಹಜ. ಆದರೆ, ಪರಿಷತ್ತಿನ ಮೂಲ ಉದ್ದೇಶಗಳಿಗೆ ಯಾವುದೇ ರೀತಿಯ ಧಕ್ಕೆ ಬಾರದಂತೆ ರೂಪಿಸಿರುವ ಈ ತಿದ್ದುಪಡಿಗಳನ್ನು ಕಾರ್ಯಗತಗೊಳಿಸಬೇಕು. ಪರಿಷತ್ತಿನಲ್ಲಿ ಹೊಸ ಹೊಸ ಕಾರ್ಯಯೋಜನೆಗಳನ್ನು ಜಾರಿಗೊಳಿಸಬೇಕು. ಸದಸ್ಯತ್ವ ಶುಲ್ಕ ₹250ಕ್ಕೆ ಕಡಿತಗೊಳಿಸುವುದು ಮತ್ತು ತಂತ್ರಜ್ಞಾನ ಅಳವಡಿಸಲು ಆ್ಯಪ್ ರೂಪಿಸುವುದು ಸ್ವಾಗತಾರ್ಹವಾಗಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಗುರುವಾರ ನಡೆದ ಸಭೆಯಲ್ಲಿ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಮಾತನಾಡಿದರು. ಬಸವಲಿಂಗ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಬೇಲಿಮಠದ ಶಿವರುದ್ರ ಸ್ವಾಮೀಜಿ ಇದ್ದರು.

ಸಭೆಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡ ಸಾಹಿತ್ಯ ಪರಿಷತ್ ಅನ್ನು ಜನಸಾಮಾನ್ಯರ ಸಂಸ್ಥೆಯನ್ನಾಗಿಸುವ ನಿಟ್ಟಿನಲ್ಲಿ ಒಂದು ಕೋಟಿ ಸದಸ್ಯತ್ವ ಹೊಂದುವ ಗುರಿ ಹೊಂದಲಾಗಿದೆ. ಹೀಗಾಗಿ, ಈಗ ಇರುವ ಸದಸ್ಯತ್ವದ ಅರ್ಜಿಯನ್ನು ಆಧುನಿಕ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಲು ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದರು.

'ಪ್ರಸ್ತುತ ಬೈ–ಲಾದಲ್ಲಿ ಸೂಚಿಸಿರುವಂತೆ ಕನ್ನಡ ಓದು ಬರಹ ಬಲ್ಲ ವ್ಯಕ್ತಿಗಳಿಗೆ ಸದಸ್ಯತ್ವ ನೀಡುವ ಸಂಬಂಧ ನಿಗದಿಪಡಿಸಬಹುದಾದ ಶೈಕ್ಷಣಿಕ ಮಾನದಂಡಗಳ ಕುರಿತು ತಿದ್ದುಪಡಿ ತರುವುದು ಅಗತ್ಯವಾಗಿದೆ' ಎಂದರು.

'ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಈ ಹಂತದಲ್ಲಿ ತಿದ್ದುಪಡಿ ಮಾಡುವುದಿಲ್ಲ. 2026ರಲ್ಲಿ ಚುನಾವಣೆ ನಡೆಯಲಿದೆ. ಈ ನಾಲ್ಕು ವರ್ಷಗಳಲ್ಲಿ ಅನೇಕ ತಂತ್ರಜ್ಞಾನಗಳು ಬದಲಾವಣೆಯಾಗುವ ಸಾಧ್ಯತೆಗಳಿವೆ. ಜತೆಗೆ, ಕಾನೂನಾತ್ಮಕ ಬದಲಾವಣೆಗಳು ಆಗಬಹುದು ಮತ್ತು ಚುನಾವಣಾ ಆಯೋಗ ಹೊಸ ಆವಿಷ್ಕಾರ, ಪ್ರಯೋಗಗಳನ್ನು ನಡೆಸಬಹುದಾಗಿರುವುದರಿಂದ ಪರಿಷತ್ತಿನ ಚುನಾವಣೆಗೆ ಸಂಬಂಧಿಸಿದ ತಿದ್ದುಪಡಿ ಕಾರ್ಯವನ್ನು 2025ರಲ್ಲಿ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ಉದ್ದೇಶಿತ ತಿದ್ದುಪಡಿಗಳನ್ನು ಫೆ.24 ರಂದು ನಡೆಯುವ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲಾಗುವುದು' ಎಂದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ ಹಾಗೂ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಅವರು ಪರಿಷತ್ತಿನ ಮಹಾಪೋಷಕರಾಗಲು ₹1 ಲಕ್ಷ ನೀಡುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಸೊಲ್ಲಾಪುರ ಜಿಲ್ಲೆಯ ವಿರಕ್ತಮಠದ ಬಸವಲಿಂಗ ಸ್ವಾಮೀಜಿ, ಸಾಹಿತಿಗಳಾದ ಡಾ. ಪ್ರಧಾನ ಗುರುದತ್ತ, ಡಾ. ಕಮಲಾ ಹಂಪನಾ, ಡಾ. ದೊಡ್ಡರಂಗೇಗೌಡ, ಡಾ. ಹೀ.ಚಿ. ಬೋರಲಿಂಗಯ್ಯ, ಡಾ. ಬಸವರಾಜ ಸಬರದ, ಡಾ. ಬೈರಮಂಗಲ ರಾಮೇಗೌಡ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಮಹಾಬಲಮೂರ್ತಿ ಕೊಡ್ಲೆಕೆರೆ, ಡಾ.ಕಾ.ವೆಂ. ಶ್ರೀನಿವಾಸಮೂರ್ತಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲ ಸಂಪನ್ನಕುಮಾರ್, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಬಿ. ನಾಯ್ಕ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಅಜಕ್ಕಳ ಗಿರೀಶ್ ಭಟ್, ಪ್ರಕಾಶಕರ ಸಂಘದ ಪ್ರಕಾಶ ಕಂಬತ್ತಳ್ಳಿ ಹಾಗೂ ಬೈಲಾ ತಿದ್ದುಪಡಿ ಸಮಿತಿ ಅಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ಇದ್ದರು.

ಬಸವ ಪರ ಸಂಘಟನೆಗಳು ಒಂದೇ ವೇದಿಕೆಗೆ

ಬೀದರ್: ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಡಾ. ಗಂಗಾದೇವಿ ಅವರು ಬಸವಣ್ಣನವರ ವಚನಗಳಿಗೆ ಕೂಡಲಸಂಗಮದೇವ ಅಂಕಿತನಾಮ ಬಳಕೆಗೆ ನಿರ್ಧಾರ ಕೈಗೊಂಡ ನಂತರ ಬಸವ ಪರ ಸಂಘಟನೆಗಳು ಮತ್ತೆ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿವೆ.

ಇಲ್ಲಿಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ರಾಷ್ಟ್ರೀಯ ಬಸವ ದಳ ಹಾಗೂ ಜಿಲ್ಲಾ ಲಿಂಗಾಯತ ಸಮಾಜ ಆಯೋಜಿಸಿದ್ದ ಚನ್ನಬಸವಣ್ಣನವರ ಸ್ಮರಣೋತ್ಸವ ಹಾಗೂ ಬೆಳದಿಂಗಳೂಟ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬಸವ ದಳ, ಬಸವ ಕೇಂದ್ರ, ಭಾರತೀಯ ಬಸವ ಬಳಗ, ಬಸವ ಸೇವಾ ಪ್ರತಿಷ್ಠಾನದ ಪ್ರಮುಖರು ಭಾಗವಹಿಸಿದ್ದರು.

'ಈಗ ಎಲ್ಲರೂ ಒಗ್ಗೂಡಿದ್ದೇವೆ. ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ಹೋರಾಟಕ್ಕೆ ದೃಢ ಸಂಕಲ್ಪ ಮಾಡೋಣ' ಎಂದು ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಹೇಳಿದರು.

ಬಸವ ಪರ ಸಂಘಟನೆಗಳು ಒಂದೇ ವೇದಿಕೆಗೆ ಬಂದ ಕಾರ್ಯಕ್ರಮದ ಮಧ್ಯೆಯೇ, ರಾಷ್ಟ್ರೀಯ ಬಸವ ದಳದ ಗುಂಪೊಂದು ಬಸವ ಮಂಟಪದಲ್ಲಿ ಪ್ರತ್ಯೇಕವಾಗಿ ಚನ್ನಹುಣ್ಣಿಮೆ ಹಾಗೂ ಬೆಳದಿಂಗಳೂಟ ಕಾರ್ಯಕ್ರಮ ನಡೆಸಿದ ಬೆಳವಣಿಗೆಯೂ ನಡೆಯಿತು.

ಮುತ್ತಿನ ರಾಶಿ ದುಂಡಗ ಆತಲೇ ಪರಾಕ...

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ ಜಿಲ್ಲೆ): ಇಲ್ಲಿಗೆ ಸಮಿಪದ ಹಾವನೂರ ಗ್ರಾಮದಲ್ಲಿ ಗುರುವಾರ ನಡೆದ ಮೈಲಾರಲಿಂಗೇಶ್ವರನ ಕಾರ್ಣಿಕೋತ್ಸವದಲ್ಲಿ 'ಮುತ್ತಿನ ರಾಶಿ ದುಂಡಗ ಆತಲೇ ಪರಾಕ...' ಎಂದು ಹೊನ್ನಪ್ಪ ಬಿಲ್ಲರ ಗೋರವಯ್ಯ ದೈವವಾಣಿ ನುಡಿದರು.

ದೈವವಾಣಿಯನ್ನು ಆಲಿಸಲು ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಜನ ಭಾಗವಹಿಸಿದ್ದರು. 'ಈ ಬಾರಿ ಗೋರವಯ್ಯ ನುಡಿದ ಕಾರ್ಣಿಕ ಉತ್ತಮವಾಗಿದೆ. ದೇಶದಲ್ಲಿ ಎಲ್ಲವೂ ಒಗ್ಗಟ್ಟಿನಿಂದ ಮುನ್ನಡೆಯುತ್ತವೆ' ಎಂದು ಕಾರ್ಣಿಕ ಕೇಳಲಿಕ್ಕೆ ಬಂದವರು ಅರ್ಥೈಸಿದ್ದಾರೆ.

ಹಾವನೂರ ಗ್ರಾಮದ ಮೈಲಾರಲಿಂಗೇಶ್ವರ ಕಾರ್ಣಿಕ ನುಡಿಯುತ್ತಿರುವ ಗೊರವಯ್ಯ

ಎಬಿವಿಪಿ ರಾಜ್ಯ ಅಧ್ಯಕ್ಷರಾಗಿ ರೋಹಿಣಾಕ್ಷ ಶಿರ್ಲಾಲು ಆಯ್ಕೆ

ಚಾಮರಾಜನಗರ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ರಾಜ್ಯ ಅಧ್ಯಕ್ಷರಾಗಿ ಡಾ.ರೋಹಿಣಾಕ್ಷ ಶಿರ್ಲಾಲು, ಕಾರ್ಯದರ್ಶಿಯಾಗಿ ಮಣಿಕಂಠ ಕಳಸ ಆಯ್ಕೆಯಾಗಿದ್ದಾರೆ.

ಚಾಮರಾಜನಗರದಲ್ಲಿ ನಡೆದ ಎಬಿವಿಪಿಯ 41ನೇ ರಾಜ್ಯ ಸಮ್ಮೇಳನದಲ್ಲಿ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆದಿದೆ. ಸಮ್ಮೇಳನದಲ್ಲಿ ಮೂರು ಕರಡು ನಿರ್ಣಯ ಅಂಗೀಕರಿಸಲಾಯಿತು. ರೋಹಿಣಾಕ್ಷ ಶಿರ್ಲಾಲು ಕಲಬುರ್ಗಿಯ ಕೇಂದ್ರೀಯ ವಿ.ವಿ.ಯಲ್ಲಿ ಸಹಾಯಕ ಪ್ರಾಧ್ಯಾಪಕರು. ಮಣಿಕಂಠ ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿ.

ರೋಹಿಣಾಕ್ಷ

ಮಣಿಕಂಠ ಕಳಸ

ನಗರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದ ಮಣಿಕಂಠ ಕಳಸ, 'ಕೋವಿಡ್ ನಂತರದ ಕಾಲಘಟ್ಟದಲ್ಲಿ ಶಿಕ್ಷಣ ವ್ಯವಸ್ಥೆ, ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ, ರಾಜ್ಯದ ವರ್ತಮಾನ ಪರಿಸ್ಥಿತಿ ವಿಷಯಗಳ ಕುರಿತು ನಿರ್ಣಯ ಅಂಗೀಕರಿಸಲಾಗಿದೆ' ಎಂದರು.

ಪ್ರಕಾಶಕರ ಸಮ್ಮೇಳನದ ಅಧ್ಯಕ್ಷರಾಗಿ ಟಿ.ಎಸ್. ಛಾಯಾಪತಿ ಆಯ್ಕೆ

ಬೆಂಗಳೂರು: 'ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಮೈಸೂರಿನಲ್ಲಿ ಪ್ರಕಾಶಕರ ಸಮ್ಮೇಳನವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಮ್ಮೇಳನಕ್ಕೆ ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆಯ ಟಿ.ಎಸ್. ಛಾಯಾಪತಿ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಡಾ. ಎಂ.ಎನ್. ನಂದೀಶ್ ಹಂಚೆ ತಿಳಿಸಿದ್ದಾರೆ.

'ಮಾರ್ಚ್ ಎರಡನೇ ವಾರದಲ್ಲಿ ಪ್ರಕಾಶಕರ ಸಮ್ಮೇಳನ ನಡೆಯಲಿದೆ. ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಆರು ದಿನಗಳ ಕಾಲ ಕನ್ನಡ ಪುಸ್ತಕಗಳ ಮಾರಾಟ ಮೇಳವೂ ನಡೆಯಲಿದೆ. ಮೇಳದಲ್ಲಿ ಕನ್ನಡ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಟಿ.ಎಸ್. ಛಾಯಾಪತಿ

ಮೈಸೂರಿನಲ್ಲಿ 1944ರಲ್ಲಿ ಹುಟ್ಟಿದ ಟಿ.ಎಸ್. ಛಾಯಾಪತಿ ಅವರು ಸಾಹಿತಿ ತ.ಸು.ಶಾಮರಾಯ ಅವರ ಮಗ.ಶಾಮರಾಯರು 1950ರಲ್ಲಿ ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿದರು. ಅದನ್ನು ಛಾಯಾಪತಿ ಅವರು ಮುನ್ನಡೆಸಿದರು. ಕನ್ನಡ ಪುಸ್ತಕ ಲೋಕ ಕಂಡ ಅಪರೂಪದ ಪ್ರಕಾಶಕರಲ್ಲಿ ಒಬ್ಬರಾದ ಅವರು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 23ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಪ್ರಕಾಶನ ಸಂಸ್ಥೆಗೆ 1999ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಅತ್ಯುತ್ತಮ ಪ್ರಕಾಶನ ಪ್ರಶಸ್ತಿ ಲಭಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದಲೂ ಅತ್ಯುತ್ತಮ ಪ್ರಕಾಶನ ಸಂಸ್ಥೆ ಎಂಬ ಪ್ರಶಸ್ತಿಗೆ ಈ ಸಂಸ್ಥೆ ಪಾತ್ರವಾಗಿದೆ.

ಪಂಜಾಬ್ ವಿಧಾನಸಭಾ ಚುನಾವಣೆ: ಪ್ರಧಾನಿ ವಿರುದ್ಧ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ವಾಗ್ದಾಳಿ

'ತಪ್ಪನ್ನೆಲ್ಲ ನೆಹರೂ ಮೇಲೆ ಹೊರಿಸುವ ಮೋದಿ'

ನವದೆಹಲಿ/ಚಂಡೀಗಡ: 'ಕೇಂದ್ರದ ಬಿಜೆಪಿ ಸರ್ಕಾರದ ತಪ್ಪುಗಳನ್ನು ತಿದ್ದಿಕೊಳ್ಳುವ ಬದಲು ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರನ್ನು ದೂಷಿಸುತ್ತಾರೆ' ಎಂದು ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ಟೀಕಿಸಿದ್ದಾರೆ.

ಪಂಜಾಬ್ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಮತದಾರರನ್ನು ಉದ್ದೇಶಿಸಿ ಅವರು ಮಾಡಿರುವ ವಿಡಿಯೊ ಭಾಷಣದಲ್ಲಿ ಈ ಮಾತು ಹೇಳಿದ್ದಾರೆ. ವಿಡಿಯೊ ಸಂದೇಶವನ್ನು ಕಾಂಗ್ರೆಸ್ ಗುರುವಾರ ಪ್ರಸಾರ ಮಾಡಿದೆ.

'ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಇದೆ. ಕೋವಿಡ್ ಸಮಸ್ಯೆ ಇದೆ. ವಿದೇಶಾಂಗ ನೀತಿಗೆ ಸಂಬಂಧಿಸಿದ ಹದಗೆಟ್ಟಿದೆ. ದೇಶದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಬಿಜೆಪಿ ಏಳೂವರೆ ವರ್ಷಗಳಿಂದ ಅಧಿಕಾರದಲ್ಲಿ ಸರ್ಕಾರ ನಡೆಸುತ್ತಿದೆ. ಬಿಜೆಪಿ ಸರ್ಕಾರವು ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವುದು ಮತ್ತು ತಪ್ಪುಗಳನ್ನು ಸರಿಪಡಿಸುವುದು ಬಿಟ್ಟು, ಎಲ್ಲಾ ಸಮಸ್ಯೆಗಳಿಗೆ

ಮುಖ್ಯಾಂಶಗಳು
- ಪಂಜಾಬ್ ಮತದಾರರನ್ನು ಉದ್ದೇಶಿಸಿ ಮನಮೋಹನ್ ಭಾಷಣ
- ಮಾಜಿ ಪ್ರಧಾನಿ ವಿಡಿಯೊ ಭಾಷಣ ಪ್ರಸಾರ ಮಾಡಿದ ಕಾಂಗ್ರೆಸ್
- ಕೇಂದ್ರ ಸರ್ಕಾರದ ಆರ್ಥಿಕ, ವಿದೇಶಾಂಗ ನೀತಿಗಳನ್ನು ಟೀಕಿಸಿದ ಸಿಂಗ್

ದೇಶದ ಮೊದಲ ಪ್ರಧಾನಿಯನ್ನು ಹೊಣೆ ಮಾಡುತ್ತಿದ್ದಾರೆ' ಎಂದು ಮನಮೋಹನ್ ಸಿಂಗ್ ಹೇಳಿದ್ದಾರೆ.

'ಪ್ರಧಾನಿ ಹುದ್ದೆಗೆ ಒಂದು ಘನತೆ ಇದೆ. ಸರ್ಕಾರವು ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಇತಿಹಾಸವನ್ನು ದೂಷಿಸಬಾರದು. ನಾನು ಪ್ರಧಾನಿಯಾಗಿದ್ದಾಗ ಜಗತ್ತಿನ ಎದುರು ದೇಶದ ಘನತೆ ಮುಕ್ಕಾಗದಂತೆ ನೋಡಿಕೊಂಡಿದ್ದೆ. ದೇಶದ ಘನತೆಗೆ ಧಕ್ಕೆ ತರುವ ಕೆಲಸವನ್ನು ಎಂದೂ ಮಾಡಿರಲಿಲ್ಲ. ನಾನು ಮೌನಿ,

ನಾನು ಪ್ರಧಾನಿಯಾಗಿ 10 ವರ್ಷ ಆಳ್ವಿಕೆ ನಡೆಸಿದ್ದೇನೆ. ನಾನು ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ ನನ್ನ ಕೆಲಸಗಳು ಮಾತನಾಡುತ್ತಿದ್ದವು

ಮನಮೋಹನ್ ಸಿಂಗ್, ಮಾಜಿ ಪ್ರಧಾನಿ

ದುರ್ಬಲ ಮತ್ತು ಭ್ರಷ್ಟ ಎಂದು ನನ್ನ ವಿರುದ್ಧ ಆರೋಪ ಮಾಡಲಾಗಿತ್ತು. ಈ ಆರೋಪ ಮಾಡಿದ್ದ ಬಿಜೆಪಿ ಮತ್ತು ಅದರ ಬಿ-ಟೀಂ ಮತ್ತು ಸಿ-ಟೀಂಗಳು ಇಂದು ದೇಶದ ಎದುರು ಬೆತ್ತಲಾಗುತ್ತಿವೆ' ಎಂದು ಅವರು ಹೇಳಿದ್ದಾರೆ.

'ಬಿಜೆಪಿಗೆ ದೇಶದ ಆರ್ಥಿಕತೆಯ ಅರ್ಥವಾಗಿಲ್ಲ. ವಿದೇಶಾಂಗ ನೀತಿಯಲ್ಲಿಯೂ ಬಿಜೆಪಿ ಸರ್ಕಾರ

'ಬಿಜೆಪಿಯದ್ದು ಬ್ರಿಟಿಷರ ನೀತಿ'

'ಬಿಜೆಪಿಗೆ ಸಂವಿಧಾನದಲ್ಲಿ ನಂಬಿಕೆ ಇಲ್ಲ. ಅದು ಪ್ರತಿದಿನ ಒಂದಲ್ಲಾ ಒಂದು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ. ಬ್ರಿಟಿಷರು ಅನುಸರಿಸುತ್ತಿದ್ದ ಒಡೆದು ಆಳುವ ನೀತಿಯನ್ನು ಬಿಜೆಪಿ ಅನುಸರಿಸುತ್ತಿದೆ' ಎಂದು ಮನಮೋಹನ್ ಸಿಂಗ್ ಅವರು ಆರೋಪಿಸಿದ್ದಾರೆ.

'ನಾವು ರಾಜಕೀಯ ಲಾಭಕ್ಕಾಗಿ ಎಂದೂ ದೇಶದ ಜನರನ್ನು ಒಡೆದಿಲ್ಲ. ಸತ್ಯವನ್ನು ಮರೆಮಾಚಲು ಎಂದೂ ಪ್ರಯತ್ನಿಸಲಿಲ್ಲ. ಆದರೆ ಇಂದು ದೇಶದ ಜನರನ್ನು ವಿಭಜಿಸಲಾಗುತ್ತಿದೆ. ಈ ಸರ್ಕಾರದ ನಕಲಿ ರಾಷ್ಟ್ರೀಯತೆಯು ಎಷ್ಟು ಟೊಳ್ಳಾಗಿದೆಯೋ ಅಷ್ಟೇ ಅಪಾಯಕಾರಿಯೂ ಹೌದು' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ವಿಫಲವಾಗಿದೆ. ಚೀನಾ ನಮ್ಮ ನೆಲವನ್ನು ಅತಿಕ್ರಮಿಸಿಕೊಂಡಿದೆ ಮತ್ತು ನಮ್ಮ ಗಡಿಯಲ್ಲಿ ಬಂದು ಕುಳಿತಿದೆ. ಆದರೆ ಸರ್ಕಾರವು ಈ ಅತಿಕ್ರಮಣವನ್ನು ಮುಚ್ಚಿಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

'ವಿದೇಶಿ ನಾಯಕರನ್ನು ಒತ್ತಾಯಪೂರ್ವಕವಾಗಿ ಅಪ್ಪಿಕೊಳ್ಳುವ, ಉಯ್ಯಾಲೆಯಲ್ಲಿ ತೂಗುವ ಅಥವಾ ಆಹ್ವಾನವಿರದಿದ್ದರೂ ಬಿರಿಯಾನಿ ತಿನ್ನಲು ಹೋಗುವುದರಿಂದ ವಿದೇಶಾಂಗ ನೀತಿ ರೂಪಿಸಲು ಸಾಧ್ಯವಿಲ್ಲ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅರ್ಥ ಮಾಡಿಕೊಳ್ಳುತ್ತಾರೆ ಎಂದುಕೊಂಡಿದ್ದೇನೆ' ಎಂದು ಮನಮೋಹನ್ ಸಿಂಗ್ ಹೇಳಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಈಚೆಗೆ ಭೇಟಿ ನೀಡಿದ್ದಾಗ ಭದ್ರತಾ ಲೋಪವಾಯಿತು

ಚೀನಾದ ವಿಚಾರದಲ್ಲಿ ಎಲ್ಲವೂ ಸ್ಪಷ್ಟವಾಗಿದೆ. ಚೀನಾ ಜತೆಗೆ ಈ ಸಂಬಂಧ ಮಾತುಕತೆ ನಡೆಯುತ್ತಲೇ ಇದೆ. ಮನಮೋಹನ್ ಅವರದ್ದು ಸಂಪೂರ್ಣ ರಾಜಕೀಯ ಭಾಷಣ

ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಎಂದು ಆರೋಪಿಸಲಾಗಿತ್ತು. ಅಲ್ಲಿ ಮುಖ್ಯಮಂತ್ರಿ ಚರಣ್‌ಜೀತ್ ಸಿಂಗ್ ಚನ್ನಿ ಅವರನ್ನು ಗುರಿ ಮಾಡಲಾಯಿತು. ರೈತರ ಹೋರಾಟದ ವಿಚಾರದಲ್ಲೂ ಪಂಜಾಬಿಗಳನ್ನು ಅವಮಾನಿಸಲಾಯಿತು. ಬಿಜೆಪಿ ಪಂಜಾಬಿಗಳನ್ನು ಪದೇ ಪದೇ ಅವಮಾನಿಸಿದೆ' ಎಂದು ಅವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

'ಇಡೀ ಜಗತ್ತಿನಲ್ಲಿ ಪಂಜಾಬಿಗಳನ್ನು ಧೈರ್ಯ, ಶೌರ್ಯ ಮತ್ತು ಪ್ರಾಮಾಣಿಕತೆಗಾಗಿ ಗೌರವಿಸಲಾಗುತ್ತದೆ. ಆದರೆ ಕೇಂದ್ರ ಸರ್ಕಾರವು ಅವಮಾನ ಮಾಡುತ್ತಿದೆ. ಒಬ್ಬ ಧೀರ ಪಂಜಾಬಿಯಾಗಿ ನನಗೆ ಇದರಿಂದ ತೀವ್ರ ನೋವಾಗಿದೆ' ಎಂದು ಅವರು ಹೇಳಿದ್ದಾರೆ.

'ಮೋದಿ ಆಡಳಿತ ಜಾಹೀರಾತಿನಲ್ಲಿ ಮಾತ್ರ'

ಪ್ರಿಯಾಂಕಾ ಗಾಂಧಿ ವಾದ್ರಾ ಲೇವಡಿ

ಚಂಡೀಗಡ (ಪಿಟಿಐ): 'ಮೋದಿಜೀ ಅವರ ಆಡಳಿತ ಕಾಣುತ್ತಿರುವುದು ಜಾಹೀರಾತುಗಳಲ್ಲಿ ಮಾತ್ರ, ವಾಸ್ತವದಲ್ಲಿ ಆಡಳಿತವೇ ಇಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಲೇವಡಿ ಮಾಡಿದ್ದಾರೆ.

ಪ್ರಿಯಾಂಕಾ

ಇಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಹರಿಹಾಯ್ದಿದ್ದಾರೆ.

'ಮೋದಿಜೀ ಅವರ ಆಡಳಿತ ಜಾಹೀರಾತುಗಳಲ್ಲಿ ಮಾತ್ರ ಗೋಚರಿಸುತ್ತದೆ. ದೇಶದಲ್ಲಿ ಆಡಳಿತವೇ ಇಲ್ಲ. ಆಡಳಿತ ಇದ್ದಿದ್ದರೆ, ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಇರುತ್ತಿರಲಿಲ್ಲ ಮತ್ತು ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗುತ್ತಿರಲಿಲ್ಲ. ಆಡಳಿತ ಇರುತ್ತಿದ್ದರೆ ಉದ್ಯೋಗ ಸೃಷ್ಟಿಸುವ ಸಾರ್ವಜನಿಕ ವಲಯದ ಕಂಪನಿಗಳನ್ನು ಮೋದಿ ಅವರು ತಮ್ಮ ಗೆಳೆಯರಿಗೆ ಮಾರಾಟ ಮಾಡುತ್ತಿರಲಿಲ್ಲ' ಎಂದು ಪ್ರಿಯಾಂಕಾ ಅವರು ಲೇವಡಿ ಮಾಡಿದ್ದಾರೆ.

'ದೇಶದ ಬಡವರು, ಸಣ್ಣ ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಿಗಳು ತೀರಾ ಸಂಕಷ್ಟದಲ್ಲಿ ಇದ್ದಾರೆ. ಅವರ ಬಗ್ಗೆ ಮೋದಿ ಸರ್ಕಾರ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಆದರೆ, ಅದೇ ಮೋದಿ ಸರ್ಕಾರವು ಜಾಹೀರಾತಿಗಾಗಿ ₹2,000 ಕೋಟಿ ವೆಚ್ಚ ಮಾಡುತ್ತಿದೆ' ಎಂದು ಅವರು ಟೀಕಿಸಿದ್ದಾರೆ.

'ಬಿಜೆಪಿ ಮತ್ತು ಎಎಪಿ ನಾಯಕರು ಪಂಜಾಬಿತನದ ಬಗ್ಗೆ ಮಾತನಾಡುತ್ತಾರೆ. ಅವರು ಪಂಜಾಬಿತನದ ಬಗ್ಗೆ ಮಾತನಾಡುವುದನ್ನು ಕೇಳಿದರೆ, ನನಗೆ ನಗು ಬರುತ್ತದೆ. ಅವರಿಗೆ ಪಂಜಾಬಿತನ ಅರ್ಥವಾಗುವುದಾದರೂ ಹೇಗೆ? ಅದು ಅರ್ಥವಾಗಬೇಕೆಂದರೆ ಅವರು ಇಲ್ಲಿ ಜೀವನ ನಡೆಸಬೇಕು. ಅದೊಂದು ಭಾವನಾತ್ಮಕ ವಿಚಾರ' ಎಂದು ಅವರು ಹೇಳಿದ್ದಾರೆ.

ಪ್ರಧಾನಿ ಮೋದಿ, ಮುಖ್ಯಮಂತ್ರಿಗಳಾದ ಕೇಜ್ರಿವಾಲ್, ನಿತೀಶ್ ಕುಮಾರ್ ಟೀಕಾ ಪ್ರಹಾರ

'ಭಯ್ಯಾ' ಮಾತು: ಸಿ.ಎಂ ಚನ್ನಿಗೆ ತರಾಟೆ

ಅಬೊಹರ್/ಪಟ್ನಾ/ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜೀತ್ ಸಿಂಗ್ ಚನ್ನಿ ಅವರ 'ಭಯ್ಯಾ' ಹೇಳಿಕೆ ಟೀಕೆಗಳಿಗೆ ಕಾರಣವಾಗಿದೆ.

'ಉತ್ತರ ಪ್ರದೇಶ, ಬಿಹಾರ ಹಾಗೂ ದೆಹಲಿಯ ಭಯ್ಯಾಗಳನ್ನು ರಾಜ್ಯ ಪ್ರವೇಶಿಸಲು ಬಿಡಬೇಡಿ' ಎಂದು ಚನ್ನಿ ಅವರು ಬುಧವಾರ ನಡೆದ ಚುನಾವಣಾ ಪ್ರಚಾರದ ವೇಳೆ ಹೇಳಿದ್ದರು. ಪಂಜಾಬ್‌ನಲ್ಲಿ ಚನ್ನಿ ಸರ್ಕಾರಕ್ಕೆ ಪ್ರಬಲ ಪ್ರತಿಸ್ಪರ್ಧೆ ಒಡ್ಡುತ್ತಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರನ್ನು ಉದ್ದೇಶಿಸಿ ಈ ಹೇಳಿಕೆ ನೀಡಲಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ಪಂಜಾಬ್‌ನ ಅಬೊಹರ್‌ನಲ್ಲಿ ಗುರುವಾರ ಬಿಜೆಪಿ ಚುನಾವಣಾ ಸಭೆ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಇಂತಹ ವಿಭಜಕ ಚಿಂತನೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ ರಾಜ್ಯದಲ್ಲಿ ಆಡಳಿತ ನಡೆಸಲು ಯಾವುದೇ ಅಧಿಕಾರವಿಲ್ಲ' ಎಂದು ಚನ್ನಿ ಅವರನ್ನು ತರಾಟೆಗೆ ತೆಗೆದುಕೊಂಡರು.

ಚನ್ನಿ ಅವರು ನೀಡಿದ ಭಯ್ಯಾ ಹೇಳಿಕೆ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರೂಪ್‌ನಗರದಲ್ಲಿ ಚನ್ನಿ ಅವರು ಈ ಮಾತು ಹೇಳಿದಾಗ, ಅವರ ಪಕ್ಕದಲ್ಲಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಚಪ್ಪಾಳೆ ತಟ್ಟಿದ ದೃಶ್ಯ ಈ ವಿಡಿಯೊದಲ್ಲಿದೆ.

ಸಾಮಾನ್ಯವಾಗಿ ಬಿಹಾರ ಹಾಗೂ ಉತ್ತರ ಪ್ರದೇಶದ ವಲಸೆ ಕಾರ್ಮಿಕರನ್ನು ಕರೆಯಲು ಪಂಜಾಬ್‌ನಲ್ಲಿ ಭಯ್ಯಾ ಎಂಬ ಪದವನ್ನು ಬಳಸಲಾಗುತ್ತದೆ.

ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಕಾಂಗ್ರೆಸ್ ತನ್ನ ಲಾಭಕ್ಕೋಸ್ಕರ ಯಾವಾಗಲೂ ಒಂದು ಭಾಗದ ಜನರನ್ನು ಮತ್ತೊಂದು ಪ್ರದೇಶದ ಜನರ ವಿರುದ್ಧ ಎತ್ತಿಕಟ್ಟುತ್ತದೆ' ಎಂದು ಹೇಳಿದ್ದಾರೆ. 'ಚನ್ನಿ ಹೇಳಿದ ಮಾತುಗಳು ಹಾಗೂ ಆ ಸಮಯದಲ್ಲಿ

ಪಂಜಾಬ್ ಮುಖ್ಯಮಂತ್ರಿ ಚರಣ್‌ಜೀತ್ ಸಿಂಗ್ ಚನ್ನಿ ಹಾಗೂ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಅಮೃತಸರದಲ್ಲಿ ಒಟ್ಟಾಗಿ ರೋಡ್‌ಷೋ ನಡೆಸಿದರು –ಪಿಟಿಐ ಚಿತ್ರ

ನನ್ನ ಹೇಳಿಕೆಯನ್ನು ತಿರುಚಲಾಗಿದೆ. ರಾಜ್ಯಕ್ಕಾಗಿ ರಕ್ತ, ಬೆವರು ಹರಿಸಿದವರಿಗೆ ನಮ್ಮ ಹೃದಯದಲ್ಲಿ ಸ್ಥಾನ ಇದೆ. ಹೊರಗಿನಿಂದ ಬಂದ ಎಎಪಿ ನಾಯಕರನ್ನು ಮಾತ್ರ ನಾನು ಟೀಕಿಸಿದ್ದೆ

ಚರಣ್‌ಜೀತ್ ಸಿಂಗ್ ಚನ್ನಿ, ಪಂಜಾಬ್ ಮುಖ್ಯಮಂತ್ರಿ

ಅವರ ಪಕ್ಷದ ನಾಯಕಿ ಅದನ್ನು ಪ್ರಶಂಸಿಸಿದ್ದನ್ನು ಇಡೀ ದೇಶ ನೋಡಿದೆ. ಇಂತಹ ಹೇಳಿಕೆಗಳ ಮೂಲಕ ಅವರು ಯಾರನ್ನು ಅಪಮಾನಿಸಲು ಹೊರಟಿದ್ದಾರೆ' ಎಂದು ಅವರು ಪ್ರಶ್ನಿಸಿದ್ದಾರೆ.

'ನಿನ್ನೆಯಷ್ಟೇ ಸಂತಗುರು ರವಿದಾಸರ ಜಯಂತಿ ಆಚರಿಸಲಾಯಿತು. ರವಿದಾಸರು ಜನಿಸಿದ್ದು ಎಲ್ಲಿ ಎಂದು ನಾನು ಈ ನಾಯಕರನ್ನು ಕೇಳಬಯಸುತ್ತೇನೆ. ಅವರು ಪಂಜಾಬ್‌ನಲ್ಲಿ ಜನಿಸಿದರೇ? ಅವರು ಹುಟ್ಟಿದ್ದು ಉತ್ತರ ಪ್ರದೇಶದ ವಾರಾಣಸಿಯಲ್ಲಿ. ಆದರೆ ಉತ್ತರ ಪ್ರದೇಶದ ಭಯ್ಯಾಗಳಿಗೆ ಪಂಜಾಬ್ ಪ್ರವೇಶ ನಿರ್ಬಂಧಿಸುವ ಮಾತನಾಡುತ್ತೀರಿ. ಹಾಗಾದರೆ ರವಿದಾಸರ ಅನುಯಾಯಿಗಳನ್ನು ಓಡಿಸುತ್ತೀರಾ. ಸಂತರ ಹೆಸರನ್ನು ಅಳಿಸಿಹಾಕುತ್ತೀರಾ. ನೀವು ಮಾತನಾಡುತ್ತಿರುವ ಭಾಷೆ ಯಾವುದು' ಎಂದು ಮೋದಿ ಅವರು ಟೀಕಾಪ್ರಹಾರ ಮಾಡಿದ್ದಾರೆ.

'ಗುರುಗೋವಿಂದ ದಾಸರು ಹುಟ್ಟಿದ್ದು ಬಿಹಾರದ ಪಟ್ನಾದಲ್ಲಿ. ಬಿಹಾರದ ಜನರನ್ನು ಪಂಜಾಬ್‌ಗೆ ಬರಬೇಡಿ ಎಂದು ನೀವು ಹೇಳುತ್ತಿದ್ದೀರಿ. ಹಾಗಾದರೆ ಗುರು ಗೋವಿಂದ ಸಿಂಗ್ ಅವರನ್ನೂ ನೀವು ಅಪಮಾನಿಸುತ್ತೀರಾ. ಗೋವಿಂದ ಸಿಂಗ್ ಅವರು ಹುಟ್ಟಿನ ನಾಡನ್ನು ಅಪಮಾನಿಸುತ್ತೀರಾ' ಎಂದು ಪ್ರಶ್ನಿಸಿದ್ದಾರೆ.

ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಇಂತಹ ಹೇಳಿಕೆ ನೀಡುವುದು ನಾಚಿಕೆಗೇಡು. ಯಾವುದೇ ರಾಜ್ಯ ಅಥವಾ ಜನಾಂಗದ ಕುರಿತು ಮಾತನಾಡುವುದು ಸರಿಯಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಚನ್ನಿ ಹೇಳಿಕೆ ನಾಚಿಕೆಗೇಡಿನದ್ದು. ಬಿಜೆಪಿಯು ದೇಶದ ಜನರನ್ನು ಒಗ್ಗೂಡಿಸಿದರೆ, ಕಾಂಗ್ರೆಸ್ ಒಡೆಯುತ್ತದೆ. ಪಂಜಾಬ್ ಅಭಿವೃದ್ಧಿಗೆ ಬಿಹಾರ, ಉತ್ತರ ಪ್ರದೇಶದ ಜನರೂ ಕೊಡುಗೆ ನೀಡುತ್ತಿದ್ದಾರೆ

ಸ್ಮೃತಿ ಇರಾನಿ, ಕೇಂದ್ರ ಸಚಿವೆ

ಚನ್ನಿ ಮಾತು ಮೂರ್ಖತನದ್ದು. ಬಿಹಾರದ ಎಷ್ಟು ಜನರು ಪಂಜಾಬ್‌ನಲ್ಲಿ ನೆಲೆಸಿದ್ದಾರೆ ಮತ್ತು ರಾಜ್ಯಕ್ಕೆ ಎಷ್ಟು ಸೇವೆ ಸಲ್ಲಿಸಿದ್ದಾರೆ ಎಂಬ ಬಗ್ಗೆ ಚನ್ನಿ ಅವರಿಗೆ ಅರಿವಿದೆಯೇ?

ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಚನ್ನಿ ವಿರುದ್ಧ ದೂರು

ಬಿಹಾರ ಹಾಗೂ ಉತ್ತರ ಪ್ರದೇಶದ ಜನರನ್ನು ಅವಮಾನಿಸಿದ ಆರೋಪದಲ್ಲಿ ಪಂಜಾಬ್ ಮುಖ್ಯಮಂತ್ರಿ ಚನ್ನಿ ವಿರುದ್ಧ ಬಿಹಾರದ ಮುಜಫ್ಫರ್‌ಪುರದಲ್ಲಿ ದೂರು ದಾಖಲಿಸಲಾಗಿದೆ. ಸಾಮಾಜಿಕ ಕಾರ್ಯಕರ್ತರಾದ ತಮನ್ನಾ ಹಶ್ಮಿ ಎಂಬುವರು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದೂರು ಸಲ್ಲಿಸಿದ್ದಾರೆ.

'ರೈತರಿಗೆ ದ್ರೋಹ'

'ಕಾಂಗ್ರೆಸ್ ಪಕ್ಷವು ರೈತರಿಗೆ ಸದಾ ದ್ರೋಹ ಎಸಗುತ್ತದೆ. ಸ್ವಾಮಿನಾಥನ್ ಸಮಿತಿ ಶಿಫಾರಸುಗಳನ್ನು ಜಾರಿಗೊಳಿಸುವಂತೆ ಹಲವು ವರ್ಷಗಳಿಂದ ಬೇಡಿಕೆ ಇತ್ತು. ಆದರೆ ಕಾಂಗ್ರೆಸ್ ಆ ವರದಿಯನ್ನು ದೂಳು ತಿನ್ನುವಂತೆ ಮಾಡಿತು. ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ಜಾರಿಗೊಳಿಸಿತು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

'ಎಸ್‌ಪಿ ಈಗಾಗಲೇ ಶತಕ ಬಾರಿಸಿದೆ'

ಫಿರೋಜಾಬಾದ್ (ಪಿಟಿಐ): 'ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಮೊದಲ ಎರಡು ಹಂತಗಳ ಮತದಾನದಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಶತಕ ಬಾರಿಸಿದೆ. ನಾಲ್ಕನೇ ಹಂತದ ಮತದಾನ ಮುಗಿಯುವ ವೇಳೆಗೆ ಸರ್ಕಾರ ರಚಿಸುವಷ್ಟು ಸದಸ್ಯರ ಬಲ ನಮಗೆ ಇರುತ್ತದೆ' ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಗುರುವಾರ ಹೇಳಿದ್ದಾರೆ.

ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಮತ್ತು ಅವರ ತಂದೆ, ಪಕ್ಷದ ಸ್ಥಾಪಕ ಮುಲಾಯಂ ಅವರು ಮೈನ್‌ಪುರಿಯಲ್ಲಿ ಗುರುವಾರ ಚುನಾವಣಾ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ಫಿರೋಜಾಬಾದ್‌ನ ನಾಸಿರ್‌ಪುರ ಪ್ರದೇಶದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು ಹೀಗೆ ಹೇಳಿದರು. 'ಪ್ರಜಾಪ್ರಭುತ್ವ ಉಳಿಸಲು, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಉಳಿಸಲು, ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಉಳಿಸಲು ಈ ಚುನಾವಣೆ ನಡೆಯುತ್ತಿದೆ. ಈ ಬಾರಿ ಫಿರೋಜಾಬಾದ್ ಜನರು ಬಿಜೆಪಿಯನ್ನು ಕಣ್ಣೆರೆಸುತ್ತಾರೆ' ಎಂದು ಹೇಳಿದರು.

'ಎಸ್‌ಪಿ ಸರ್ಕಾರ ರಚಿಸಿದರೆ ಜಾತಿ ಗಣತಿ ನಡೆಸುವುದು ಮತ್ತು ಎಲ್ಲ ಜಾತಿಗಳಿಗೆ ಸಮಾನ ಪ್ರಾತಿನಿಧ್ಯ ಮತ್ತು ಮನ್ನಣೆ ನೀಡುವುದಾಗಿ' ಅವರು ಭರವಸೆ ನೀಡಿದರು.

ಮೊದಲು ಭೂಗತ ಪಾತಕಿಯಾಗಿದ್ದು ಈಗ ರಾಜಕಾರಣಿಯಾಗಿ ಬದಲಾಗಿರುವ ವ್ಯಕ್ತಿಯೊಬ್ಬರು ಕ್ರಿಕೆಟ್ ಆಡುತ್ತಿರುವ ಚಿತ್ರವೊಂದು ಇತ್ತೀಚೆಗೆ ವೈರಲ್ ಆಗಿತ್ತು. ಆ ಚಿತ್ರವನ್ನು ಉಲ್ಲೇಖಿಸಿ ಮಾತನಾಡಿದ ಅವರು, 'ಮಾಫಿಯಾ ಡಾನ್‌ಗೆ ಕ್ರಿಕೆಟ್ ಆಡಲು ಅವಕಾಶ ನೀಡಿರುವ ಅಪರಾಧಿಗಳು' ಎಂದರು.

ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡ ಅವರು, 'ಬಿಜೆಪಿ ನಾಯಕರ ಭಾಷಣಗಳನ್ನು ಕೇಳಿ. ಚಿಕ್ಕ ಮುಖಂಡರು ಚಿಕ್ಕ ಸುಳ್ಳುಗಳನ್ನು ಹೇಳುತ್ತಿದ್ದಾರೆ. ದೊಡ್ಡ ನಾಯಕರು ದೊಡ್ಡ ಸುಳ್ಳುಗಳನ್ನು ಹೇಳುತ್ತಿದ್ದಾರೆ. ರೈತರ ಆದಾಯ ಹೆಚ್ಚಿಸುವ ಮತ್ತು ಯುವಕರಿಗೆ ಉದ್ಯೋಗ ಒದಗಿಸುವ ಭರವಸೆಯನ್ನು ಅವರು ಈಡೇರಿಸಿಲ್ಲ' ಎಂದರು. ವಿಮಾನ ನಿಲ್ದಾಣಗಳು, ರೈಲು ನಿಲ್ದಾಣಗಳು ಸೇರಿ ಎಲ್ಲವನ್ನೂ ಮೋದಿ ಸರ್ಕಾರವು ಮಾರಾಟ ಮಾಡುತ್ತಿದೆ. ಇದರಿಂದ ಉದ್ಯೋಗದಲ್ಲಿ ಮೀಸಲಾತಿ ಸಿಗುವುದಿಲ್ಲ ಎಂದರು.

ಮೊದಲ ಎರಡು ಹಂತಗಳ ಮತದಾನಲ್ಲಿ 113 ಕ್ಷೇತ್ರಗಳಿಗೆ ಮತದಾನ ನಡೆದಿದೆ.

ಚುನಾವಣಾ ರ‍್ಯಾಲಿಯಲ್ಲಿ ಮುಲಾಯಂ

ಕರ್ಹಾಲ್ (ಪಿಟಿಐ): ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರು ಉತ್ತರ ಪ್ರದೇಶ ಚುನಾವಣೆ ಪ್ರಚಾರ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿ ಮತ ಯಾಚಿಸಿದ್ದಾರೆ.

ತಮ್ಮ ಮಗ, ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಪರವಾಗಿ ಅವರು ಕರ್ಹಾಲ್ ಕ್ಷೇತ್ರದಲ್ಲಿ ಮತ ಯಾಚಿಸಿದರು. ಜನರ ಆಶೋತ್ತರಗಳನ್ನು ತಮ್ಮ ಪಕ್ಷ ಈಡೇರಿಸಲಿದೆ ಎಂದು ಹೇಳಿದ್ದಾರೆ.

'ಬಡತನ ಮತ್ತು ನಿರುದ್ಯೋಗದಂತಹ ಸಮಸ್ಯೆಗಳಿಗೆ ಪರಿಹಾರ ದೊರಕಲೇಬೇಕು ಎಂದು ಜನರು ಬಯಸುತ್ತಿದ್ದಾರೆ. ಈ ಸಮಸ್ಯೆಗಳ ಕುರಿತು ನಮ್ಮ ಪಕ್ಷವು ಸ್ಪಷ್ಟ ನೀತಿಗಳನ್ನು ಹೊಂದಿದೆ' ಎಂದರು. ಅಖಿಲೇಶ್ ಯಾದವ್ ಅವರನ್ನು ಗೆಲ್ಲಿಸುವಂತೆ ಅವರು ಮನವಿ ಮಾಡಿದರು.

ಕೇಂದ್ರ ಸಚಿವ ಎಸ್.ಪಿ. ಸಿಂಗ್ ಬಘೇಲ್ ಅವರು ಅಖಿಲೇಶ್ ಯಾದವ್ ವಿರುದ್ಧ ಬಿಜೆಪಿ ಟಿಕೆಟ್‌ನಿಂದ ಕಣಕ್ಕಿಳಿದಿದ್ದಾರೆ.

ಕಾಂಗ್ರೆಸ್ ಬಿಡುವುದಿಲ್ಲ: ಮನೀಷ್ ತಿವಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾಂಗ್ರೆಸ್ ಬಿಡುವ ಯಾವ ಯೋಚನೆಯೂ ನನಗಿಲ್ಲ' ಎಂದು ಪಕ್ಷದ ಮುಖಂಡ ಮತ್ತು ಸಂಸದ ಮನೀಷ್ ತಿವಾರಿ ಅವರು ಗುರುವಾರ ಹೇಳಿದ್ದಾರೆ.

ಮನೀಷ್

ಈಚೆಗಷ್ಟೇ ಕಾಂಗ್ರೆಸ್ ತೊರೆದಿದ್ದ ಹಿರಿಯ ನಾಯಕ ಅಶ್ವಿನಿ ಕುಮಾರ್ ಅವರ ನಡೆಗೆ ಪ್ರತಿಕ್ರಿಯೆ ನೀಡಿದ್ದ ಅವರು, 'ರಾಜ್ಯಸಭಾ ಸ್ಥಾನಕ್ಕಾಗಿ ಕೆಲವರು ಏನು ಬೇಕಾದರೂ ಮಾಡುತ್ತಾರೆ. ಎಲ್ಲರಿಗೂ ಅಂತಹ ಮಹತ್ವಾಕಾಂಕ್ಷೆ ಇರುತ್ತದೆ' ಎಂದು ಹೇಳಿದ್ದರು. ಮನೀಷ್ ಸಹ ಕಾಂಗ್ರೆಸ್ ತೊರೆಯುವ ಸಿದ್ಧತೆಯಲ್ಲಿದ್ದಾರೆ. ಹೀಗಾಗಿ ಈ ರೀತಿ ಟ್ವೀಟ್ ಮಾಡಿದ್ದಾರೆ ಎಂದು ವದಂತಿ ಹರಡಿತ್ತು.

ಈ ವದಂತಿಯನ್ನು ತಿವಾರಿ ಅವರು ಈಗ ತಿಳಿಗೊಳಿಸಿದ್ದಾರೆ. 'ಪಕ್ಷವನ್ನು ತೊರೆಯುವ ಯಾವ ಯೋಚನೆಯೂ ನನಗಿಲ್ಲ ಎಂದು ನಾನು ಈ ಹಿಂದೆಯೂ ಹೇಳಿದ್ದೇನೆ. ನಾನು ಈ ಪಕ್ಷದಲ್ಲಿ ಬಾಡಿಗೆದಾರನಲ್ಲ. ಬದಲಿಗೆ ಪಾಲುದಾರ. ಆದರೆ ಯಾರಾದರೂ ಮನೆಯಿಂದ ನನ್ನನ್ನು ಒದ್ದು ಹೊರಹಾಕಬೇಕು ಎಂದುಕೊಂಡರೆ, ಆಗ ಅದು ಬೇರೆ ವಿಚಾರ' ಎಂದು ಅವರು ಹೇಳಿದ್ದಾರೆ.

'ನಾನು ಪಕ್ಷಕ್ಕಾಗಿ ನನ್ನ ಜೀವನದ 40 ವರ್ಷಗಳನ್ನು ಸವೆಸಿದ್ದೇನೆ. ದೇಶದ ಏಕತೆಗಾಗಿ ನನ್ನ ಕುಟುಂಬ ರಕ್ತ ಹರಿಸಿದೆ. ನಾನು ಪಕ್ಷ ಬಿಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401

email: eemimandya@gmail.com

ಸಂ.ಕಾಇಂ/ಮಂಡ್ಯ/ತಾಂಶಾ/ನೋಟಿಫಿಕೇಶನ್/2021–22/1809 ದಿನಾಂಕ :16.02.2022

ಟೆಂಡರ್ ಮುಂದೂಡಿಕೆ ಪ್ರಕಟಣೆ–1 ದಿನಾಂಕ : 16–02–2022

ವಿಷಯ : ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ : 11/2021–22, ದಿನಾಂಕ : 22–12–2021

ಈ ಕಛೇರಿಯಿಂದ **ಟೆಂಡರ್ ಅಧಿಸೂಚನೆ ಸಂಖ್ಯೆ : 11/ 2021–22, ದಿನಾಂಕ:22–12–2021** ರಲ್ಲಿ ಹೊರಡಿಸಲಾಗಿರುವ **ಕ್ರಮ ಸಂಖ್ಯೆ: 01, 02, 09 ಮತ್ತು 10** ರಲ್ಲಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿದೆ.

ಕ್ರಮ ಸಂಖ್ಯೆ	ವಿಷಯ	ಈ ಹಿಂದೆ ನಮೂದಿಸಿದ್ದಂತೆ	ಮುಂದೂಡಿರುವ ದಿನಾಂಕ
1	ಟೆಂಡರಿಗೆ ಸಂಬಂಧಿಸಿದಂತೆ ಕಛೇರಿಯಲ್ಲಿ ಮಾಹಿತಿ ಪಡೆಯಬಹುದಾದ ದಿನಾಂಕ	30.12.2021 ಕಛೇರಿ ವೇಳೆಯಲ್ಲಿ	21.02.2022 ಕಛೇರಿ ವೇಳೆಯಲ್ಲಿ
2	ಅಂತರ್ಜಾಲದಲ್ಲಿ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	07.01.2022 17–00 ಗಂಟೆವರೆಗೆ	23.02.2022 18–00 ಗಂಟೆವರೆಗೆ
3	ತಾಂತ್ರಿಕ ಬಿಡ್ಡ್ ಹಾಗೂ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ	11.01.2022 11–00 ಗಂಟೆಗೆ	25.02.2022 11–00 ಗಂಟೆಗೆ

ಇನ್ನುಳಿದಂತೆ ಮೂಲ ಟೆಂಡರ್ ಅಧಿಸೂಚನೆಯ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಕಾಮಗಾರಿಗಳಿಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಅಂತರ್ಜಾಲ **"www.eproc.karnataka.gov.in"** ನಲ್ಲಿ ಪಡೆಯಬಹುದಾಗಿರುತ್ತದೆ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸ.ನೀ. ಮತ್ತು ಅಂ.ಅ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂಡ್ಯ/ಎಂಸಿಎ/25/2021–22

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/21-22 **NOTICE FOR PRIVATE SALE OF GOLD** 17/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br. Kinnigoli: C4 and C5, Pintos Golden Castle, Talipady Road, Next to BSNL office, Kinnigoli, Dakshin Kannad Dist- 574 150, Ph No-0824-2295690 :- 20076400017048,20076400014359,20076400018194,20076400019747,20076400019218,20076400015604,20076400015596,20076400018624,20076400015240,20076400017956,20076400020422,20076400020414,20076400020851,20076400018566,20076400018541,20076400015562,20076400013690,20076400017097,20076400020711,20076400020554,20076400018350,20076400018368,20076400019168,20076400019176,20076400016651,20076400016768,20076400014060,20076400018517,20076400013708,20076400018319,20076400020539,20076400020547,20076400019150,20076400019739,20076400019184.

Br. Kushalnagar: HRS Mansion, BM Road, Kushal Nagar, Kodagu District Karnataka- 571 234, Ph. NO. 08276 274084 :- 19316400020979,19316400039227,19316400044532,19316400027032,19316400032404,19316400031455,19316400041801,19316400024740,19316400033931,19316400047717,19316400032040,19316400042072,19316400020953,19316400034913,19316400030960,19316100160711,19316400037023,19316400026364,19316400035290,19316400046248,19316400046255,19316400046230,19316400033402,19316400041207,19316400023296,19316400034939,19316400035209,19316400041140,19316400033782.

Br. Koyyur : Survey No:184/6, First Floor, Koyyuru Milk Producers Co-operative Society, Nandagokula Building, Koyyuru Village, Belthangady Taluk, Dakshina Kannada District-574214 :- 23146400001776,23146400001602,23146400001735,23146400002089,23146400002055,23146400002071,23146400002352.

Br.Karkala: Opp Bundimatt Bus Stand, Karkala, Udupi, Karnataka- 574104:- 19636400021556,19636400017547,19636400023701,19636400019196,19636400018446,19636400017752,19636400017778,19636400017687,19636400017695,19636400018412,19636400018214,19636400021457,19636400019311,19636400017885,19636400023248,19636400021010,19636400017265,19636400021697,19636400018800,19636400022851,19636400019089,19636400021770.

Br.Moodabidri: Next to Hotel Pancharatna Buidling,Moodabidri, 574227, D. Kannada Dist., Karnataka- 574227:- 19626400032851,19626400015211,19626400039872,19626400030822,19626400038635,19626400029725,19626400033362,19626400040300,19626400039179,19626400039757,19626400040094,19626400032703,19626400039237,19626400039799,19626400035565,19626400040326,19626400039229,19626400023629,19626400040284,19626400031127,19626400029162,19626400039815,19626400030814,19626400040466,19626400029378,19626400030400,19626400030806.

Br.Mangalore: P B No. 775 ,Near PVS Circle, Manasa Towers, M G Road, Kodialbail, Mangalore, Dakshin Kannad- 575 003, Ph NO. 08242497883 :- 11756400022046,11756400023895,11756400023820,11756400019489,11756400021154,11756400023887,11756400022483,11756400019497,11756400021170,11756400023846,11756400021444,11756400019471,11756400023127,11756400023747,11756400023499,11756400012724,11756400023135,11756400018564,11756400021196,11756400023010,11756400023184,11756400018283,11756400022095,11756400022996,11756400023176,11756400018739,11756400012864,11756400023002,11756400023697,11756400022335,11756400022848,11756400018119,11756400020461,11756400023051,11756400022731,11756400019265,11756400023473,11756400021089,11756400022749,11756400016113,11756400023796,11756400022384,11756400023457,11756400023416,11756400023788,11756400022152,11756400023465.

Br.Mangalore/Kankanady: The Vintage, Kankanady, Dakshina Kannad, Mangalore, Dakshin Kannad- 575002,Ph No. 08242430152:- 17706400012848,17706400011881,17706400012640,17706100009722,17706400011808,17706400011584,17706400012798,17706400013572,17706400011766,17706400010008,17706400012830,17706400012111,17706400012822,17706400011774,17706400009125,17706400013143,17706400012624,17706400013184,17706400012145,17706400012053,17706400011683,17706400012632,17706400011782,17706400011519, 17706400013317,17706400013598,17706400011691,17706400012731,17706400011964,17706400009216.

Br.Narasimharajapura: Assessment No.794, Dayasagar Complex, Near IOC Petrol Pump, Nagalapura, B H Kaimara, Chikmagalur- 577134, Ph no. 08266-228055 :- 18956400014844,18956400014851,18956400017128.

Br.Nellyadi: Elite Plaza, Nh 48, Near St.George P U College, Nellyadi, Dakshin Kannad- 574 229,Ph No.08251-256100:- 16446400070626,16446400072606,16446400071624,16446400071434,16446400071269,16446400059892,16446400071616,16446400067242,16446400072085,16446400059512,16446400069719,16446400055676,16446400071160,16446400062656,16446400073174,16446400073216,16446400071681,16446400062029,16446400063639,16446400071541,16446400073166,16446400069156,16446400064900,16446400069917,16446400058357,16446400072713,16446400057698,16446400066509,16446400067150,16446400068943,16446400074883,16446400072804,16446400060700,16446400070444,16446400057417,16446400059397,16446400076763,16446400061518,16446400058225,16446400067663,16446400073687,16446400065824,16446400069909,16446400067473,16446400065287,16446400069107,16446400069925,16446400061120,16446400070840,16446400061567,16446400068133,16446400072044,16446400075732,16446400054026,16446400072564,16446400072283,16446400071764,16446400057060,16446400066731,16446400071285,16446400072796,16446400072572,16446400070212,16446400069362,16446400067226.

Br.Puttur: Meenar Complex, Main Road, Puttur, Dakshina Kannad, Karnataka, Dakshin Kannad- 574201,Ph No. 08251-233544:- 18946400048512,18946400049379,18946400048280,18946400051706,18946400051375,18946400038638,18946400047126,18946400048157,18946400049197,18946400052761,18946400052647,18946400054379,18946400051920,18946400049114,18946400052639,18946400053454,18946400051573,18946400054064,18946400051243,18946400049676,18946400051557,18946400053686,18946400049791,18946400048579,18946400051565,18946400054080,18946400036590,18946400047878,18946400047852,18946400050062,18946400052985,18946400049288,18946400053389,18946400050054,18946400047621,18946400049437,18946400053678,18946400049718,18946400051268,18946400051946,18946400047639,18946400049163,18946400038299,18946400037184,18946400038588,18946400053538,18946400052977,18946400038570,18946400053819,18946400039172,18946400049221.

Br. Shimoga : HARANAHALLI MANJAPPA COMPLEX, PARK EXTENSION ROAD, DURGIGUDI, SHIMOGA- 577 201, Ph No.08182-271998 :- 15906400048469,15906400039476,15906400030749,15906400048493,15906400041191,15906100025429,15906400052099,15906400040979,15906400049624,15906400039658,15906400052925,15906400035532,15906400050218,15906400046869,15906400056116,15906400037736,15906400051398,15906400049939,15906400040698,15906400035789,15906400038064,15906400051240,15906400040359,15906400044922,15906400051745,15906400041209,15906400042363,15906400047966,15906400051653,15906400043932,15906400050846,15906400053147,15906400053154,15906400041829,15906400038536,15906400052305,15906400055852,15906400046828,15906400041779,15906400052487,15906400040672,15906400048782,15906400035086,15906400022894,15906400038734,15906400042280,15906400049996,15906400054251,15906400031168,15906400027877,15906400039757,15906400040375,15906400031200,15906400038882,15906400052081,15906400040516,15906400041787,15906400039534,15906400052172,15906400044047,15906400040474,15906400039542,15906400052206,15906400043080,15906400048543,15906400040508,15906400054368,15906400039955,15906400052446.

Br. Sullia: Ganesh Complex, Main Road, Sullia, Dakshina Kannada- 574239, Ph no.08257 230818 :- 19006400019994,19006400019713,19006100024898,19006400013195,19006400017915,19006400015653,19006400019788,19006100026950,19006400021354,19006400015562,19006400006868,19006400015034,19006400017832,19006400016438,19006100027685,19006400021594,19006400013047,19006400016925,19006400017022,19006400016156,19006400022121,19006400020083,19006400010613,19006400022774,19006400017337,19006100018478,19006400020331,19006100028436,19006400015687,19006100028220,19006600000893,19006400019168,19006400008807,19006400017626,19006400010191,19006400015380,19006400018657,19006400022634,19006400016784,19006400016016,19006400014730,19006400017733,19006400019440,19006400019929,19006400022220,19006400012676,19006400020497,19006400019424,19006400020737,19006400020059,19006100027578,19006400014995,19006400017048,19006400020802,19006400003899,19006400017535,19006400015372,19006400018061,19006400018459,19006400019705,19006400020158,19006400018434,19006400009722,19006100024724,19006400011033,19006400015505,19006400021404.

Br. Thokottu : R E B Complex,Opp.Thokottu Bus stand,NH17, Permannur Po, Thokkottu Jn, Dakshin Kannada – 575017, Ph no.08242462013 :- 20136400046486,20136400051767,20136400037337,20136400047930,20136400040836,20136400048268,20136400049738,20136400053755,20136400042485,20136400038830,20136400038822,20136400037535,20136400037543,20136400045405,20136400046262,20136400045512,20136400045702,20136400052906,20136400052138,20136400051411,20136400039762,20136400042196,20136400036743,20136400053060,20136400053078,20136400053367,20136400052021,20136400053193,20136400040497,20136400045645,20136400039929,20136400045652,20136400045660,20136400052070,20136400049530,20136400044929,20136400039291,20136400044846,20136400044820,20136400045488,20136400052864,20136400052997,20136400052336,20136400052187,20136400054050,20136400039044,20136400051734,20136400043475,20136400051700.

Br. Udupi: Mahalasa Towers, Court Road, Udipi -576101, Ph no.08202521562 :-15746400032141,15746400029345,15746400032653,15746400033073,15746400033081,15746400034568,15746400036902,15746400023777,15746400026085,15746400032083,15746400032091,15746400026226,15746400028545,15746400032489,15746400032604,15746400035714,15746400035854,15746400033552,15746400034048,15746400034055,15746400034063,15746400034477,15746400034535,15746400035672,15746400036209,15746400036217,15746400023934,15746400024189,15746400022175,15746400026374,15746400027091,15746400033123,15746400033131,15746400033149,15746400013810,15746400033156,15746400033347,15746400033354,15746400028966,15746400028974,15746400028982,15746400029006,15746400029014,15746400031622,15746400031630,15746400027596,15746400033420,15746400028230,15746400033164,15746400017514,15746400026580,15746400026606,15746400026614,15746400033040,15746400033602,15746400034816,15746400031309,15746400031820,15746400033966,15746400025533,15746400018918,15746400022449,15746400034006,15746400035847,15746400036654,15746400030970,15746400033701,15746400033719,15746400018058,15746400018066,15746400034097,15746400021904,15746400021920,15746400022522,15746400033198,15746400035375,15746400035383,15746400023637,15746400027885,15746400027976,15746400027992,15746400031739,15746400034980,15746400034998,15746400035037,15746400035912,15746400032570,15746400032513, 15746400032323,15746400032315,15746400034402,15746400023264,15746400029477,15746400034519,15746400034618,15746400035896,15746400036910,15746400037116,15746400037488,15746400033859,15746400033786,15746400033875,15746400034576,15746400033883,15746400032828,15746400033578,15746400022308,15746400036928,15746400032968,15746400034345,15746400032901,15746400036167,15746400036837,15746400034410,15746400023397,15746400030038,15746400035292,15746400029329,15746400034337,15746400036332,15746400021573,15746400021581,15746400029022,15746400029030,15746400029048,15746400029055,15746400029063,15746400024726,15746400031143,15746400024098,15746400026051,15746400033297,15746400025244,15746400021821,15746400025186,15746400025194,15746400036993,15746400026440,15746400029600,15746400029618,15746400029634,15746400033362,15746400037181,15746400029899,15746400033537,15746400034022,15746400021698,15746400028834,15746400028842,15746400028859,15746400034113,15746400034675,15746400035490,15746400033511,15746400032117,15746400032216,15746400032232,15746400032299,15746400034238,15746400020856,15746400020864,15746400021847,15746400026929,15746400030053,15746400030061,15746400030343,15746400030731,15746400031440,15746400031051,15746400031077,15746400031127,15746400031168,15746400031176,15746400030285,15746400032976,15746400035623, 15746400035938,15746400037496,15746400023983,15746400033008,15746400028743,15746400031226,15746400028727,15746400031218,15746400032505,15746400032562,15746400033479,15746400024536,15746400024528,15746400024569,15746400023926,15746400027679,15746400029352,15746400020724,15746400022548,15746400031234,15746400027299,15746400027927,15746400034592,15746400024403,15746400032786,15746400018355,15746400026200,15746400032231,15746400032349,15746400032521,15746400034030,15746400031044,15746400037306,15746400031408,15746400018074.

Bangalore 17-02-2022 **Vice President & Zonal Head**

ಮೇಘನಾ ರಾಜ್

ಪತಿ, ನಟ ಚಿರಂಜೀವಿ ಸರ್ಜಾ ಅಗಲಿಕೆಯ ನಂತರ ಭರವಸೆಯನ್ನೇ ಕಳೆದುಕೊಂಡಂತಿದ್ದ ಮೇಘನಾ ರಾಜ್ ಈಗ ಬದುಕಿನಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ವೃತ್ತಿಯಲ್ಲಿ ಪುಟಿದೇಳುವ ಪ್ರಯತ್ನದಲ್ಲಿರುವ ಅವರು ಎರಡು ಸಿನಿಮಾ, ಜಾಹೀರಾತು, ರಿಯಾಲಿಟಿ ಷೋದಲ್ಲಿ ಬ್ಯುಸಿಯಾಗಿದ್ದಾರೆ. ಹೊಸ ಜವಾಬ್ದಾರಿಯೊಂದಿಗೆ ಮತ್ತೆ ಬಂದಿರುವ ಮೇಘನಾ ಜತೆಗಿನ ಮಾತುಕತೆ ಇಲ್ಲಿದೆ.

ಬದುಕು ಗಟ್ಟಿಗೊಳಿಸುವ ಸಂಕಷ್ಟ

ಶರತ್ ಹೆಗ್ಡೆ

• ಹೇಗಿದೆ ಜೀವನ?

ಸದ್ಯ ನಡೀತಾ ಇದೆ. ಕೆಲಸ ಶುರುವಾಗಿದೆ. ಒಂದು ಕಡೆ ಮಗುವಿನ ಜವಾಬ್ದಾರಿ ಇದೆ. ಇನ್ನೊಂದು ಕಡೆ ಏಕಕಾಲದಲ್ಲಿ ಎರಡು ಸಿನಿಮಾ, ಒಂದು ರಿಯಾಲಿಟಿ ಶೋ, ಒಂದು ಜಾಹೀರಾತಿನ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದೇನೆ.

• ವೃತ್ತಿ ಮತ್ತು ವೈಯಕ್ತಿಕ ಬದುಕನ್ನು ಹಿಂದಿರುಗಿ ನೋಡಿದಾಗ ಏನನ್ನಿಸುತ್ತದೆ?

ಜೀವನ ಯಾವತ್ತೂ ನಾವಂದುಕೊಂಡ ಹಾಗೆ ಇರುವುದಿಲ್ಲ. ಜೀವನದಲ್ಲಿ ಏನೇ ನಡೆದರೂ ಅದು ನಮ್ಮನ್ನು ಗಟ್ಟಿಗೊಳಿಸುತ್ತಾ ಹೋಗುತ್ತದೆ. ನನ್ನ ವೃತ್ತಿ ಬದುಕೂ ಹೀಗೇ ಇತ್ತು. ನನ್ನ ಮೊದಲ ಸಿನಿಮಾ ತಮಿಳಿನಲ್ಲಿ, ಆ ಬಳಿಕ ಕನ್ನಡಕ್ಕೆ ಬರುತ್ತೇನೆ ಎಂದುಕೊಂಡೇ ಇರಲಿಲ್ಲ. ಆದರೆ, ಹಾಗೆ ಆಯಿತು. ವೃತ್ತಿಬದುಕನ್ನು ಹಿಂದಿರುಗಿ ನೋಡಿದರೆ ಅಲ್ಲಿ ಯಾವುದೇ ವಿಷಾದವಿಲ್ಲ. ಇವತ್ತು ದಕ್ಷಿಣ ಭಾರತ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದೇನೆ. ಇದ್ಯಾವುದೂ ಸುಲಭದ ದಾರಿ ಆಗಿರಲಿಲ್ಲ. ಕಷ್ಟ ಇದ್ದರೂ ಎಲ್ಲವನ್ನೂ ಎದುರಿಸಿ ಒಳ್ಳೆಯ ನಿರ್ದೇಶಕರು, ನಾಯಕರ ಜೊತೆಗೆ ಕೆಲಸ ಮಾಡಿದ್ದೇನೆ. ನನ್ನ ಹೆಸರಿಂದಲೇ ಗುರುತಿಸಿಕೊಂಡು ಹೋಗುವ ಯಶಸ್ವೀ ಚಿತ್ರವೊಂದರಲ್ಲೂ ಅಭಿನಯಿಸಿದ್ದೇನೆ. ಇನ್ನೂ ಸಾಧಿಸಬೇಕಾದ್ದು ಸಾಕಷ್ಟು ಇದೆ.

• ಕನ್ನಡಕ್ಕಿಂತಲೂ ತಮಿಳು, ತೆಲುಗು, ಮಲಯಾಳಂನಲ್ಲಿ ಹೆಚ್ಚು ಯಶಸ್ವಿಯಾದಿರಿ. ಏನಿದರ ಗುಟ್ಟು?

ಇದರಲ್ಲಿ ಗುಟ್ಟು ಏನೂ ಇಲ್ಲ. 2009ರಲ್ಲಿ ಮಲಯಾಳಂ ಚಿತ್ರರಂಗಕ್ಕೆ ಪ್ರವೇಶಿಸಿದೆ. ಆಗ ನನಗೆ ಮಲಯಾಳಂ ಗೊತ್ತೇ ಇರಲಿಲ್ಲ. ನನ್ನ ಮೊದಲ ಸಿನಿಮಾ ನೋಡಿಯೇ ಅಲ್ಲಿನವರು ನನ್ನನ್ನು ಮಲಯಾಳಿ ಎಂದೇ ತಿಳಿದಿದ್ದರು. ಆ ನಂತರದ ಸಿನಿಮಾಗಳೂ ಯಶಸ್ವಿಯಾದವು. ಇದೆಲ್ಲಾ ಹೇಗೆ ಆಯಿತು ಅನ್ನುವುದು ನನಗೆ ಇನ್ನೂ ಗೊತ್ತಿಲ್ಲ. ಇವೆಲ್ಲಾ ಯಾವುದೇ ಯೋಜನೆ ಇಲ್ಲದ ಪ್ರಯಾಣ. ಅದೇನೇ ಇದ್ದರೂ ನನ್ನ ಮೊದಲ ಆದ್ಯತೆ ಕನ್ನಡಕ್ಕೆ.

• ಬದುಕಿನಲ್ಲಿ ಬಂದ ತೀವ್ರ ಸಂಕಷ್ಟವನ್ನು ಎದುರಿಸಿ ಮತ್ತೆ ಪುಟಿದೆದ್ದಿದ್ದೀರಿ. ಇಂಥ ಸನ್ನಿವೇಶ ಎದುರಿಸುತ್ತಿರುವವರಿಗೆ ನಿಮ್ಮ ಕಿವಿಮಾತು ಏನು?

ಸಲಹೆ ಕೊಡುವಷ್ಟರಮಟ್ಟಿಗೆ ನಾನಿನ್ನೂ ಚೇತರಿಸಿಕೊಂಡಿಲ್ಲ. ನಾನು ಎದುರಿಸುತ್ತಿರುವ ಎಲ್ಲವನ್ನು ಕೋಟ್ಯಂತರ ಜನ ನೋಡಿದ್ದಾರೆ. ಎಷ್ಟೋ ಹೆಣ್ಣುಮಕ್ಕಳಿಗೆ ಇದೇ ರೀತಿ ಆಗಿದೆ. ನನಗೆ ಅವರೆಲ್ಲರೂ ಸ್ಫೂರ್ತಿಯಾಗಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ತುಂಬಾ ಜನ ಬಂದು ಅವರ ಬದುಕಿನ ಇಂಥ ಘಟನೆಗಳನ್ನು ಉದಾಹರಿಸಿ ಹೇಳಿ, ಧೈರ್ಯ ತುಂಬುತ್ತಿದ್ದರು. ಸಾಕಷ್ಟು ಜನ ಇಮೇಲ್, ಸಂದೇಶ ಕಳುಹಿಸಿದ್ದಾರೆ. ಆಗ, ನಾನು ಒಂಟಿಯಲ್ಲ ಎನ್ನುವ ಭಾವನೆ ಮೂಡಿತು. ಏಟು ಪದೇ ಪದೇ ಬೀಳುತ್ತಿದ್ದರೆ ಆಗ ನೋವೇ ಅನಿಸುವುದಿಲ್ಲ ನೋಡಿ.

ಮುಂದೇನು ಮಾಡುವುದು ಎಂದು ಯೋಚನೆಯಲ್ಲಿದ್ದಾಗ ನಿರ್ದೇಶಕರಾದ ಪನ್ನಗ ಅವರು ಬಂದು 'ಮುಂದೇನು ಮಾಡುತ್ತಿ?' ಎಂದು ಕೇಳಿ ನನ್ನೊಳಗಿನ ಜವಾಬ್ದಾರಿಯನ್ನು ಬಡಿದೆಬ್ಬಿಸಿದರು. ಹೌದು ನನ್ನ ಮುಂದೆ ರಾಯನ್‌ನ (ಮಗ) ಜವಾಬ್ದಾರಿ ಇದೆ. ಚಿರುಗೆ (ಚಿರಂಜೀವಿ ಸರ್ಜಾ) ನನ್ನ ಮೇಲೆ ತುಂಬಾ ನಂಬಿಕೆ ಇತ್ತು. ಅವರಿಟ್ಟಿದ್ದ ನಂಬಿಕೆ ಹಾಗೂ ಜವಾಬ್ದಾರಿಯನ್ನು ನಿಭಾಯಿಸಲೇಬೇಕಿದೆ.

• ಸಂಕಷ್ಟದ ದಿನಗಳ ಒತ್ತಡ ನಿಭಾಯಿಸಿದ್ದು ಹೇಗೆ?

ಹೌದು, ಆ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು, ಯುಟ್ಯೂಬರ್‌ಗಳು ಅಂಕೆ ಮೀರಿ ವರ್ತಿಸಿದ್ದು, ನಮ್ಮ ಕುಟುಂಬದ ಖಾಸಗಿ ವಿಷಯಗಳನ್ನೂ ಬಿತ್ತರಿಸಿ ಆ ವೇದಿಕೆಯನ್ನು ದುರುಪಯೋಗ ಮಾಡಿಕೊಂಡ ಬಗ್ಗೆ ತುಂಬಾ ಬೇಸರವಿದೆ. ಅದು ನನ್ನ ಕುಟುಂಬದ ಮೇಲೆ ತುಂಬಾ ಪರಿಣಾಮ ಬೀರಿತು. ನಾನೇ ಮಾನಸಿಕವಾಗಿ ಅವುಗಳನ್ನೆಲ್ಲಾ ನಿರ್ಲಕ್ಷಿಸಿದೆ. ನನ್ನ ದುಃಖ ಮಾರಾಟ ಮಾಡಿದರು. ಇದೆಲ್ಲಾ ಅವರ ಪ್ರಜ್ಞೆಗೆ ಅನಿಸಬೇಕು ಅಷ್ಟೆ.

• ತಾಯಿ ಮೇಘನಾ? ರಾಯನ್ ಜೊತೆಗಿನ ಬದುಕು?

ನಮ್ಮದೇ ಮಗುವಾದಾಗ ಅದರ ಜವಾಬ್ದಾರಿ ಏನು ಎಂದು ಗೊತ್ತಾಗುತ್ತದೆ. ನಾನು ಮೊದಲಿನ ಮೇಘನಾ ಅಲ್ಲವೇ ಅಲ್ಲ. ತುಂಬಾ ತಾಳ್ಮೆ ಬಂದಿದೆ. ವರ್ತನೆ ಬದಲಾಗಿದೆ. ತುಂಬಾ ಬದಲಾಗಿದ್ದೇನೆ. ಮಗುವಿನ ಆಗಮನ ಗೊತ್ತಾಗುತ್ತಿದ್ದಂತೆಯೇ ಬದುಕಿನ ಲೆಕ್ಕಾಚಾರಗಳು, ಆದ್ಯತೆಗಳು ಬದಲಾಗುತ್ತಲೇ ಇರುತ್ತವೆ. ಈಗ ನನಗೆ ರಾಯನ್ ಒಬ್ಬನೇ ಆದ್ಯತೆ. ತಾಯ್ತನ ನಮ್ಮನ್ನು ತುಂಬಾ ಬದಲಾಯಿಸುತ್ತದೆ.

• ಟಿವಿ ಷೋಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ?

ಡ್ಯಾನ್ಸಿಂಗ್ ಚಾಂಪಿಯನ್ ಷೋಗೆ ಒಮ್ಮೆ ಮಾತ್ರ ಸೆಲೆಬ್ರಿಟಿ ಜಡ್ಜ್ ಆಗಿ ಅಷ್ಟೇ ಹೋಗಿದ್ದೆ. ಆದರೆ, ನನ್ನನ್ನು ಕಾಯಂ ತೀರ್ಪುಗಾರಳಾಗಿ ಮುಂದುವರಿಸುವಂತೆ ಪ್ರೇಕ್ಷಕರೇ ವಾಹಿನಿಗೆ ಬೇಡಿಕೆ ಇಟ್ಟರು. ಹಾಗಾಗಿ ವಾಹಿನಿಯವರು ಡ್ಯಾನ್ಸಿಂಗ್ ಚಾಂಪಿಯನ್‌ಗೆ ತೀರ್ಪುಗಾರಳನ್ನಾಗಿ ಮುಂದುವರಿಸಿದ್ದಾರೆ.

• ಮುಂದಿನ ಯೋಜನೆಯೇನು?

ಮುಂದಕ್ಕೆ ಯೋಚನೆ ಮಾಡುವುದಿಲ್ಲ. ಇವತ್ತಿನ ಯೋಚನೆ ಅಷ್ಟೇ. ಚಿರು ನನ್ನ ಬುನಾದಿ ಆಗಿದ್ದರು. ಆ ಬುನಾದಿಯೇ ಅಲ್ಲಾಡಿದ ಮೇಲೆ ಬದುಕಿನ ಮೇಲೆ ಭರವಸೆ ಇರಲಿಲ್ಲ. ನನ್ನ ಮಗನಿಗಾಗಿ ಬದುಕಲು ನನ್ನ ಅಪ್ಪ ಅಮ್ಮ, ಕುಟುಂಬದವರು ಬೆನ್ನೆಲುಬಾಗಿ ನಿಂತಿದ್ದಾರೆ. ಹಾಗಾಗಿ ಬದುಕು ಸಾಗಿದೆ. ❖

ಬಹುಕೃತ ವೇಷಂ
ಶಶಿಕಾಂತ್ ಹಾಗೂ ವೈಷ್ಣವಿ ಗೌಡ

ವಾರದ ಸಿನಿಮಾ ಸುಗ್ಗಿ

ಇಂದು ತೆರೆಗೆ

ಕೋವಿಡ್ ನಿರ್ಬಂಧಗಳಿಂದ ನಿಶ್ಶಬ್ದವಾಗಿದ್ದ ಚಿತ್ರಮಂದಿರಗಳಲ್ಲಿ ಇದೀಗ ಸಾಲು ಸಾಲು ಸಿನಿಮಾ ಸುಗ್ಗಿ. ಕಳೆದ ವಾರ ಬಿಡುಗಡೆಯಾಗಿದ್ದ ಕೆಲ ಚಿತ್ರಗಳು ಯಶಸ್ವಿ ಪ್ರದರ್ಶನ ಕಾಣುತ್ತಿರುವ ಬೆನ್ನಲ್ಲೇ ಮತ್ತಷ್ಟು ಚಿತ್ರಗಳು ತೆರೆ ಮೇಲೆ ಬರಲು ಸಜ್ಜಾಗಿವೆ. ಇಂದು 'ಬಹುಕೃತ ವೇಷಂ', 'ವರದ', 'ಬೈ ಟು ಲವ್', 'ಭಾವಚಿತ್ರ', 'ಗಿಲ್ಕಿ', 'ಮಹಾರೌದ್ರಂ' ಸಿನಿಮಾ ತೆರೆಕಾಣುತ್ತಿದ್ದು, ಗಾಂಧಿನಗರದ ಚಿತ್ರಮಂದಿರಗಳು ಸಿನಿಮಾಗಳಿಂದ ಹೌಸ್‌ಫುಲ್ ಆಗಲಿವೆ.

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆಯಿಟ್ಟ ನಟಿ ವೈಷ್ಣವಿ ಗೌಡ ಹಾಗೂ ಶಶಿಕಾಂತ್ ನಟನೆಯ 'ಬಹುಕೃತ ವೇಷಂ' ರಾಜ್ಯದ 70ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಹಾಗೂ ಅಮೆರಿಕದ 25 ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ. 'ಮನುಷ್ಯ ಹೊಟ್ಟೆಪಾಡಿಗಾಗಿ ನಾನಾ ವೇಷ ಹಾಕುತ್ತಾನೆ. ಇದೇ ಕಥೆಯ ಸಾರಾಂಶ' ಎಂದಿದ್ದಾರೆ ವೈಷ್ಣವಿ ಗೌಡ. 'ಗೌಡ್ರುಸೈಕಲ್' ಚಿತ್ರ ನಿರ್ದೇಶಿಸಿದ್ದ ಪ್ರಶಾಂತ್ ಕೆ. ಎಳ್ಳಂಪಳ್ಳಿ ಈ ಚಿತ್ರದ ನಿರ್ದೇಶಕ. ಅಧ್ಯಾಯ ತೇಜ್ ಚಿತ್ರಕಥೆ ಬರೆದಿದ್ದು, ಎಚ್. ನಂದ ಹಾಗೂ ಡಿ.ಕೆ.ರವಿ ಅವರು ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

'ಬಜಾರ್' ಹೀರೊ ಧನ್ವೀರ್ ಹಾಗೂ ಶ್ರೀಲೀಲಾ ನಟನೆಯ 'ಬೈ ಟು ಲವ್' ಸಿನಿಮಾ ಮೇಲೆ ಪ್ರೇಕ್ಷಕರ ನಿರೀಕ್ಷೆ ಹೆಚ್ಚಿದೆ. ಈ ಹಿಂದೆ ಮಾಸ್ ಲುಕ್‌ನಲ್ಲಿ ಮಿಂಚಿದ್ದ ಧನ್ವೀರ್, ಈ ಚಿತ್ರದಲ್ಲಿ ಲವರ್ ಬಾಯ್ ಪಾತ್ರ ಮಾಡಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಅಡಿ ನಿಶಾ ವೆಂಕಟ್ ಕೋಣಂಕಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮಹೇನ್ ಸಿಂಹ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ಹಾಗೂ ಯೋಗಾನಂದ್ ಸಂಭಾಷಣೆ ಈ ಚಿತ್ರಕ್ಕಿದೆ.

ವಿನೋದ್ ಪ್ರಭಾಕರ್ ನಟನೆಯ 'ವರದ' ಇಂದು ತೆರೆಕಾಣುತ್ತಿದೆ. ಉದಯ ಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರದ ಸಹ ನಿರ್ಮಾಪಕರು ಸುನಿತಾ ಪ್ರಕಾಶ್. ಆ್ಯಕ್ಷನ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ಅವರ ತಂದೆ ಪಾತ್ರದಲ್ಲಿ ನಟ ಚರಣ್ ರಾಜ್ ನಟಿಸಿದ್ದಾರೆ. ಅಮಿತ ಈ ಚಿತ್ರದ ನಾಯಕಿ. ಡಿಫರೆಂಟ್ ಡ್ಯಾನಿ, ವಿಕ್ರಂ ಮೋರ್(ಕೆ.ಜಿ.ಎಫ್.), ಅಶ್ರಫ್ ಗುರ್ಕಲ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

'ಮಗಳು ಜಾನಕಿ' ಧಾರಾವಾಹಿ ಖ್ಯಾತಿಯ ಗಾನವಿ ಲಕ್ಷ್ಮಣ್ ನಟಿಸಿರುವ 'ಭಾವಚಿತ್ರ' ಭಿನ್ನವಾದ ಕಥಾಹಂದರ ಹೊಂದಿದೆ. 'ಮೊಬೈಲ್ ಬಂದಾಗಿನಿಂದ ಎಲ್ಲರಿಗೂ ಭಾವಚಿತ್ರದ ಮೇಲೆ ಹೆಚ್ಚಿನ ಒಲವು. ಕ್ಯಾಮೆರಾ ಹಾಗೂ ಭಾವಚಿತ್ರದ ಮೇಲೆ ನಮ್ಮ ಚಿತ್ರದ ಕಥೆ ಸಾಗುತ್ತದೆ. ಇದನ್ನು ಟೆಕ್ನೋ ಥ್ರಿಲ್ಲರ್ ಅಂತಲೂ ಕರೆಯಬಹುದು' ಎನ್ನುತ್ತಾರೆ ನಿರ್ದೇಶಕ ಗಿರೀಶ್ ಕುಮಾರ್. ವುಡ್ ಕ್ರೀಪರ್ಸ್ ಸಂಸ್ಥೆ ಲಾಂಛನದ ಅಡಿ ಈ ಚಿತ್ರ ನಿರ್ಮಾಣವಾಗಿದೆ.

ಟ್ರೇಲರ್ ಮೂಲಕವೇ ಸದ್ದು ಮಾಡಿರುವ ವೈಕೆ ನಿರ್ದೇಶನದ ಸಿನಿಮಾ, 'ಗಿಲ್ಕಿ'. 'ಸಮಾಜದಿಂದ ವಿಮುಖರಾದ ಮೂರು ಪಾತ್ರಗಳ ಮೂಲಕ ನಮ್ಮ ಚಿತ್ರಕಥೆ ಸಾಗುತ್ತದೆ. ಅದು ಗಿಲ್ಕಿ, ನ್ಯಾನ್ಸಿ ಹಾಗೂ ಶೇಕ್ಸ್‌ಪಿಯರ್ ಪಾತ್ರಗಳು. ಗಿಲ್ಕಿ ನಾಯಕನ ಪಾತ್ರದ ಹೆಸರು. ನ್ಯಾನ್ಸಿ ನಾಯಕಿಯ ಪಾತ್ರ. ಈಕೆ ಚಿಕ್ಕ ವಯಸ್ಸಿನಲ್ಲೇ ಕಾಯಿಲೆಗೆ ತುತ್ತಾಗಿ ತನ್ನ ಕೈ- ಕಾಲುಗಳ ಸ್ವಾಧೀನ ಕಳೆದುಕೊಂಡಿರುತ್ತಾಳೆ. ಇವರಿಬ್ಬರ ನಡುವೆ ಪ್ರೀತಿ ಹುಟ್ಟುತ್ತದೆ. ನಂತರ ಏನಾಗುತ್ತದೆ ಎಂಬುವುದೇ ಸಿನಿಮಾ ಕಥೆ' ಎನ್ನುತ್ತಾರೆ ನಿರ್ದೇಶಕ ವೈಕೆ.

ಗೋಲ್ಡನ್ ಸ್ಟಾರ್ ಗಣೇಶ್ ತಮ್ಮ ಕೃಷ್ಣ ಮಹೇಶ್ ನಟನೆಯ 'ಮಹಾ ರೌದ್ರಂ' ಸಿನಿಮಾ ತೆರೆಕಾಣುತ್ತಿದ್ದು, ಇದೊಂದು ಆ್ಯಕ್ಷನ್ ಸಿನಿಮಾ ಎಂದಿದೆ ಚಿತ್ರತಂಡ. ಡಾ.ಆರ್.ಎಂ.ಸುನೀಲ್ ಕುಮಾರ್ ನಿರ್ದೇಶನದ 'ಮಹಾ ರೌದ್ರಂ' ಸಿನಿಮಾಗೆ ವಂಶಿ ಸುನೀಲ್ ಕುಮಾರ್ ಬಂಡವಾಳ ಹಾಕಿದ್ದು, ಪೂರ್ಣಿಮ ನಾಯಕಿ ಆಗಿ ನಟಿಸಿದ್ದಾರೆ. ❖

ಬೈ ಟು ಲವ್
ಧನ್ವೀರ್ ಹಾಗೂ ಶ್ರೀಲೀಲಾ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in



❦ ಸುಭಾಷಿತ ❦

ನಿಮ್ಮನ್ನು ನೀವು ಅರಿತುಕೊಳ್ಳುವವರೆಗೂ ನೆಮ್ಮದಿ ಸಿಗಲು ಸಾಧ್ಯವಿಲ್ಲ.

–ಜಿಡ್ಡು ಕೃಷ್ಣಮೂರ್ತಿ

ವಿಧಾನಮಂಡಲ ಕುಸ್ತಿ ಅಖಾಡವಲ್ಲ ಸದನದ ಗೌರವ ಉಳಿಸಿ

ರಾಷ್ಟ್ರಧ್ವಜಕ್ಕೆ ಸಂಬಂಧಿಸಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ನೀಡಿದ್ದ ಹೇಳಿಕೆ ವಿಧಾನ ಮಂಡಲದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಸಚಿವ ಈಶ್ವರಪ್ಪ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವೆ ಮಾತಿನ ಚಕಮಕಿ, ವೈಯಕ್ತಿಕ ನಿಂದನೆಯೂ ನಡೆಯಿತು. ಪರಸ್ಪರ ಏಕವಚನದಲ್ಲಿ ಬೈದಾಡಿಕೊಂಡ ಈ ಇಬ್ಬರು ತೋಳೇರಿಸಿಕೊಂಡು ಹೊಡೆದಾಡುವುದಕ್ಕೂ ಮುಂದಾಗಿದ್ದರು. ಇದೇ ವಿಷಯ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ವಾಗ್ವಾದಕ್ಕೂ ಕಾರಣವಾಗಿ ಉಭಯ ಸದನಗಳ ಕಲಾಪ ಬಲಿಯಾಗಿದೆ. ಈಶ್ವರಪ್ಪ ಮತ್ತು ಶಿವಕುಮಾರ್ ಇಬ್ಬರೂ ವಿಧಾನಸಭೆಯ ಹಿರಿಯ ಸದಸ್ಯರು. ಈಶ್ವರಪ್ಪ ಉಪಮುಖ್ಯಮಂತ್ರಿಯಾಗಿದ್ದವರು. ಸದನದ ಸದಸ್ಯರಾಗಿ ದಶಕಗಳ ಅನುಭವ ಹೊಂದಿದ್ದಾರೆ. ಶಿವಕುಮಾರ್ ಕೂಡ ಸಚಿವರಾಗಿ, ಶಾಸಕರಾಗಿ ದೀರ್ಘ ಕಾಲದಿಂದ ಕೆಲಸ ಮಾಡಿದವರು. ಈ ಇಬ್ಬರ ನಡವಳಿಕೆಯು ಯುವ ಶಾಸಕರಿಗೆ ಮಾದರಿಯಾಗುವಂತೆ ಇರಬೇಕು. ಆದರೆ ಬುಧವಾರ ಅವರು ನಡೆದುಕೊಂಡ ರೀತಿ ಉನ್ನತ ಸಂಸದೀಯ ಪರಂಪರೆ ಇರುವ ನಮ್ಮ ವಿಧಾನಮಂಡಲದ ಘನತೆಗೆ ತಕ್ಕುದಲ್ಲ. ಸಭ್ಯ ನಡವಳಿಕೆಯ ಮೂಲಕವೇ ಮುಂದಿನ ಪೀಳಿಗೆಗೆ ಮಾದರಿಯಾಗಬೇಕಾದ ಹಿರಿಯರಿಬ್ಬರು ಸದನವನ್ನು ಬೀದಿ ಕಾಳಗಕ್ಕೆ ವೇದಿಕೆ ಮಾಡಿಕೊಂಡಿದ್ದು ಪ್ರಜಾತಂತ್ರಕ್ಕೆ ತೋರಿದ ಅವಮಾನ. ಇಂತಹ ಸನ್ನಿವೇಶ ನಿರ್ಮಾಣವಾಗದಂತೆ ಎರಡೂ ಪಕ್ಷಗಳ ಹಿರಿಯ ಸದಸ್ಯರು ನೋಡಿಕೊಳ್ಳಬೇಕಿತ್ತು. ವಿಧಾನಸಭೆಯ ಕಲಾಪದಲ್ಲಿ ಅಹಿತಕರ ಮಾತು–ವರ್ತನೆಗಳಿಂದ ಸದನ ಹಾದಿ ತಪ್ಪುವ ಲಕ್ಷಣಗಳು ಕಂಡುಬಂದಾಗ, ಸದನವನ್ನು ಸರಿದಾರಿಗೆ ತರುವುದು ಸ್ಪೀಕರ್ ಹೊಣೆ. ಸದನ ನಿಭಾಯಿಸುವಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಎಡವಿದಂತೆ ಕಾಣುತ್ತದೆ. ಬುಧವಾರ ವಿಧಾನಸಭೆಯ ಕಲಾಪ ಯಾರ ಹಿಡಿತಕ್ಕೂ ಸಿಗದಂತಾಗಿತ್ತು. ಕೆಲವರು ತಾವು ವಿಧಾನಮಂಡಲದ ಸದಸ್ಯರು ಎನ್ನುವುದನ್ನೇ ಮರೆತಂತೆ ವರ್ತಿಸಿದರು. 'ಇದೇನು ನಿನ್ನ ಅಪ್ಪನ ಮನೆಯ ಆಸ್ತಿಯಾ?' 'ತಾಕತ್ತಿದ್ದರೆ ಮುಟ್ಟು' ಎಂಬ ಮಾತುಗಳು ಅನುರಣಿಸಿದವು. ಈ ಮಾತುಗಳು ಬೀದಿ ರಂಪಾಟದಲ್ಲಿ ಬಳಸುವ ಮಾತುಗಳನ್ನು ನೆನಪಿಸಿದವು. ವಿಧಾನಮಂಡಲದ ಘನತೆಗೆ ಚ್ಯುತಿ ತರುವ ಇಂತಹ ನಡವಳಿಕೆ ಅಕ್ಷಮ್ಯ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ಸಿನ ಕೆಲವು ಸದಸ್ಯರು ಈ ಇಬ್ಬರು ಮುಖಂಡರ ಹುಂಬತನಕ್ಕೆ ಬೆಂಬಲವಾಗಿ ನಿಂತು ವರ್ತಿಸಿದ್ದು ಕೂಡ ಸದನಕ್ಕೆ ಶೋಭೆ ತರವಂತಹ ನಡಾವಳಿಯಲ್ಲ. ವಿಧಾನಮಂಡಲದಲ್ಲಿ ಈ ಸದಸ್ಯರ ನಡವಳಿಕೆಯನ್ನು ನೋಡಿ ಅವರನ್ನು ಆರಿಸಿದ ಮತದಾರರು ಪಶ್ಚಾತ್ತಾಪ ಪಡಬೇಕಷ್ಟೆ. ಸಂವಿಧಾನದ ತತ್ತ್ವ, ನಂಬಿಕೆಗಳನ್ನು ಪಾಲಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಿದ ಸಚಿವ ಈಶ್ವರಪ್ಪ ಕೆಂಪುಕೋಟೆ ಮೇಲೆ ಕೇಸರಿಧ್ವಜ ಹಾರಬಹುದು ಎಂದು ಹೇಳಿದ್ದು ಸಂವಿಧಾನಕ್ಕೆ ಮಾಡಿದ ಅಪಮಾನ. ಅದನ್ನು ಖಂಡಿಸಲು ವಿರೋಧ ಪಕ್ಷಗಳ ಸದಸ್ಯರು ತೋಳೇರಿಸುವ ಅಗತ್ಯವಿಲ್ಲ. ವಿಷಯ ಮಂಡನೆ ಅಥವಾ ಖಂಡನೆಯು ಸಭ್ಯತೆಯ ಚೌಕಟ್ಟಿನಲ್ಲೇ ಆಗಬೇಕು. ಆಡಳಿತ ಪಕ್ಷದವರ ಸಮರ್ಥನೆಗೂ ಇದೇ ಮಾತು ಅನ್ವಯ ಆಗುತ್ತದೆ.

ವಿಧಾನಮಂಡಲವು ಜನಹಿತ ಕಾಯುವ ಶಾಸನಗಳನ್ನು ರೂಪಿಸುವ, ಆರೋಗ್ಯಪೂರ್ಣ ಚರ್ಚೆಯ ಮನೆಯಾಗಬೇಕೇ ವಿನಾ ಅಸಭ್ಯವಾಗಿ ಜಗಳವಾಡುವವರ ಜಾಗವಾಗಬಾರದು

ರಾಜ್ಯ ಹಲವಾರು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಕುಡಿಯುವ ನೀರಿನ ಸಮಸ್ಯೆ, ನಿರುದ್ಯೋಗ, ರೈತರ ಸಮಸ್ಯೆ, ಕೋವಿಡ್‌ನಿಂದ ಉಂಟಾದ ಆರ್ಥಿಕ ದುಃಸ್ಥಿತಿ ಮುಂತಾದ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಯಬೇಕಿದೆ. ಜನರು ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಪರಿಣಾಮಕಾರಿಯಾದ ಚರ್ಚೆ ನಡೆಸಿ ಸೂಕ್ತ ಪರಿಹಾರ ಕಂಡುಕೊಳ್ಳುವುದಕ್ಕಾಗಿಯೇ ವಿಧಾನಮಂಡಲದ ಅಧಿವೇಶನವನ್ನು ಕರೆಯುವುದು. ಅಧಿವೇಶನವನ್ನು ಎಲ್ಲ ಪಕ್ಷಗಳ ಸದಸ್ಯರೂ ಸದುಪಯೋಗಪಡಿಸಿಕೊಳ್ಳಬೇಕು. ಅದು ಬಿಟ್ಟು ಕೂಗಾಟ, ಹಾರಾಟ, ಕೋಲಾಹಲ ಸೃಷ್ಟಿಸುವುದು, ಕೈಕೈ ಮಿಲಾಯಿಸುವ ಹಂತಕ್ಕೆ ಹೋಗುವುದು ದುರದೃಷ್ಟಕರ. ವರ್ಷಕ್ಕೆ ಕನಿಷ್ಠ 100 ದಿನಗಳಾದರೂ ವಿಧಾನಮಂಡಲ ಅಧಿವೇಶನ ನಡೆದರೆ ಪ್ರಜಾತಂತ್ರದ ಸೌಂದರ್ಯ ಇನ್ನಷ್ಟು ಹೊಳಪು ಪಡೆಯಬಹುದು. ಆದರೆ ಈಗ ಅಧಿವೇಶನವು 50 ದಿನ ಕೂಡ ನಡೆಯುವುದಿಲ್ಲ. ನಡೆದಷ್ಟು ದಿನವೂ ಇಂತಹ ಯಾವುದೋ ಒಂದು ವಿಷಯವನ್ನು ಇಟ್ಟುಕೊಂಡು ಗದ್ದಲ ಎಬ್ಬಿಸುವುದು ಇತ್ತೀಚಿನ ವರ್ಷಗಳಲ್ಲಿ ಮಾಮೂಲು ಎನ್ನುವಂತಾಗಿದೆ. ಯಾವುದೇ ವಿಷಯದ ಬಗ್ಗೆ ಗಂಭೀರವಾದ ಚರ್ಚೆ ನಡೆದರೆ ಅಧಿವೇಶನಕ್ಕೆ ಒಂದು ಘನತೆ ಬರುತ್ತದೆ. ಅದು ಬಿಟ್ಟು ಕೋಲಾಹಲದಲ್ಲೇ ಕಲಾಪವನ್ನು ಮುಗಿಸಿದರೆ ಅದು ಮತದಾರರಿಗೆ ಮಾಡುವ ದ್ರೋಹ. ಹೇಗಾದರೂ ಮಾಡಿ ಪ್ರಚಾರದಲ್ಲಿ ಇರಬೇಕು ಎಂಬ ಹಂಬಲ ಕೆಲವು ಸದಸ್ಯರಲ್ಲಿ ಇರುವಂತಿದೆ. ಸದನದಲ್ಲಿ ಕೂಗಾಡಿದರೆ, ತೋಳ್ಬಲ ಪ್ರದರ್ಶಿಸಿದರೆ ಪ್ರಚಾರ ಸಿಗುತ್ತದೆ ಎಂದೂ ಕೆಲವರು ಭಾವಿಸಿರಬಹುದು. ಕೂಗುಮಾರಿತನ ಉತ್ತಮ ಸಂಸದೀಯ ಪಟುಗಳ ಲಕ್ಷಣವಲ್ಲ. ಯಾವುದೇ ವಿಷಯದ ಬಗ್ಗೆ ಸೂಕ್ತ ಅಧ್ಯಯನ ಮಾಡಿಕೊಂಡು ಬಂದು ಮಾತನಾಡಿದರೆ ಸದನಕ್ಕೂ ಸದಸ್ಯರಿಗೂ ಗೌರವ. ಮತ ಹಾಕಿ ಗೆಲ್ಲಿಸಿದ ಮತದಾರರ ಸದ್ಭಾವನೆಗೆ ಕೊಡುವ ಮಾನ್ಯತೆ. ಜನ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂಬ ಎಚ್ಚರಿಕೆ ಜನಪ್ರತಿನಿಧಿಗಳಿಗೆ ಬೇಕು. ವಿಧಾನಮಂಡಲವು ಜನ ಹಿತ ಕಾಯುವ ಶಾಸನಗಳನ್ನು ರೂಪಿಸುವ, ಆರೋಗ್ಯಪೂರ್ಣ ಚರ್ಚೆಯ ಮನೆಯಾಗಬೇಕೇ ವಿನಾ ಅಸಭ್ಯವಾಗಿ ಜಗಳವಾಡುವವರ ಜಾಗವಾಗಬಾರದು.

ದಿನದ ಟ್ವೀಟ್

ಸಂಪತ್ತು ಸೃಷ್ಟಿ ಸುಲಭವಲ್ಲ

ಒಂದು ಸೂಚ್ಯಂಕ ಅಥವಾ ಈಕ್ವಿಟಿ ಫಂಡ್ ಅಥವಾ ಒಂದಿಷ್ಟು ಷೇರುಗಳನ್ನು ಆಯ್ಕೆ ಮಾಡಿ. ಸುಮ್ಮನೆ ಕುಳಿತುಕೊಳ್ಳಿ. ಹೆಚ್ಚೇನೂ ಮಾಡಬೇಡಿ. ಅಪರೂಪಕ್ಕೆ ಒಮ್ಮೆ ಮಾರಾಟ ಮಾಡಿ. 20 ವರ್ಷ ಕಾಯಿರಿ. ಸಂಪತ್ತನ್ನು ಸೃಷ್ಟಿಸಿ. ಇದು ಬಹಳ ಸರಳ ತಂತ್ರ. ಆದರೆ, ಅನುಷ್ಠಾನಕ್ಕೆ ತರಲು ಬಹಳ ಕಷ್ಟ. ಸಂಪತ್ತು ಸೃಷ್ಟಿಸುವುದು ಸುಲಭ ಎಂದು ಹೇಳಿದ್ದು ಯಾರು?

ಡಿ. ಮುತ್ತುಕೃಷ್ಣನ್, ಹವ್ಯಾಸಿ ಹೂಡಿಕೆದಾರ

ಕಿಡಿನುಡಿ

ಪಂಜಾಬ್ ಮುಖ್ಯಮಂತ್ರಿ ಜೊತೆ ಕಳೆದ ಐದು ವರ್ಷಗಳಿಂದ ಮೈತ್ರಿ ಮಾಡಿಕೊಂಡಿದ್ದ ಮೋದಿ ಅವರು ಈಗ ಅದೇ ಪಂಜಾಬ್ ಸರ್ಕಾರದ ಕಳೆದ ಐದು ವರ್ಷಗಳ ಆಡಳಿತವನ್ನು ಟೀಕಿಸುತ್ತಾ ಮತ ಕೇಳುತ್ತಿದ್ದಾರೆ!



ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಮಂಗಳವಾರ, 18-2-1997

• **ಪಕ್ಷಪಾತದ ತನಿಖೆ ಬೇಡ: ಸಿಬಿಐಗೆ ಸುಪ್ರೀಂ ಕೋರ್ಟ್ ಸ್ಪಷ್ಟನೆ**

ನವದೆಹಲಿ, ಫೆ. 17 (ಪಿಟಿಐ, ಯುಎನ್‌ಐ)– ಸಚಿವರು, ಸಂಸತ್ ಸದಸ್ಯರು ಮತ್ತು ಶಾಸಕರು ಸಹಿತ ಎಲ್ಲಾ ಆರೋಪಿಗಳನ್ನು ಪಕ್ಷಪಾತವಿಲ್ಲದೆ ಒಂದೇ ರೀತಿಯಲ್ಲಿ ವಿಚಾರಣೆ ನಡೆಸುವಂತೆ ಇಂದು ಸುಪ್ರೀಂ ಕೋರ್ಟ್ ಸಿಬಿಐಗೆ ಸ್ಪಷ್ಟಪಡಿಸಿದೆ.

ಹವಾಲ, ಮೇವು ಹಗರಣ, ಜೆಎಂಎಂ ಲಂಚ ಪ್ರಕರಣಗಳ ತನಿಖೆಯ ಪ್ರಗತಿಗೆ ಅಡ್ಡಿ ಮಾಡಿ ಸರ್ಕಾರ ಸಾರ್ವಜನಿಕ ನಿರ್ದೇಶನಗಳನ್ನು ನೀಡಿದೆ ಎನ್ನಲಾದ ಆರೋಪಗಳನ್ನು ನಿರಾಕರಿಸಿ ಸಿಬಿಐ ಮತ್ತು ಕೇಂದ್ರ ಸಲ್ಲಿಸಿದ್ದ ಅರ್ಜಿಗಳನ್ನು ಇಂದು ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಹವಾಲ ಪ್ರಕರಣದಲ್ಲಿ ಆರೋಪ ಎದುರಿಸುತ್ತಿರುವ, ಅಧಿಕಾರದಲ್ಲಿರುವ ವ್ಯಕ್ತಿಗಳ ಪರವಾಗಿ ಯತ್ನಿಸಲಾದ 'ರಕ್ಷಣಾ ಕ್ರಮ'ಗಳ ಮರುಕಳಿಕೆ ತಪ್ಪಿಸಲು ಎಲ್ಲರನ್ನೂ ಒಂದೇ ವಿಭಾಗದ ಅಡಿ ತಂದು ವಿಚಾರಣೆ ನಡೆಸಬೇಕು ಎಂದು ನ್ಯಾಯಾಧೀಶರು ಸೂಚಿಸಿದರು.

• **ಪ್ರಿಯಾಂಕಾ ವಿವಾಹ**

ನವದೆಹಲಿ, ಫೆ. 17– ನಾಳೆ ಸಂಜೆ ನಡೆಯಲಿರುವ ಪ್ರಿಯಾಂಕಾ ಗಾಂಧಿ ಅವರ ವಿವಾಹಕ್ಕೆ ಅತಿಗಣ್ಯರ ಪೈಕಿ ಪ್ರಧಾನಿ, ರಾಷ್ಟ್ರಪತಿ. ಉಪರಾಷ್ಟ್ರಪತಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಕೇಸರಿ ಅವರನ್ನು ಮಾತ್ರ ಆಹ್ವಾನಿಸಲಾಗಿದೆ. ಮಾಜಿ ಪ್ರಧಾನಿ ನರಸಿಂಹರಾವ್ ಅವರು ಅಹ್ವಾನಿತರ ಪಟ್ಟಿಯಲ್ಲಿಲ್ಲ.

50 ವರ್ಷಗಳ ಹಿಂದೆ

ಶುಕ್ರವಾರ, 18-2-1972

• **ವಿಶೇಷ ನೆರವಿನ ಪೂರ್ಣ ಮೊತ್ತಕ್ಕೆ ರಾಜ್ಯದ ಆಗ್ರಹ**

ನವದೆಹಲಿ, ಫೆ. 18– ಮೈಸೂರಿಗೆ ವಾಗ್ದಾನ ಮಾಡಲಾಗಿದ್ದ ₹106 ಕೋಟಿ ವಿಶೇಷ ನೆರವನ್ನು ಸಂಪೂರ್ಣವಾಗಿ ರಾಜ್ಯಕ್ಕೆ ನೀಡಬೇಕೆಂದು ಕೇಂದ್ರ ಸರ್ಕಾರದ ಮನವೊಲಿಸಲು ರಾಜ್ಯಪಾಲ ಸುಖಾಡಿಯಾ ಅವರು ರಾಜ್ಯದ ಉನ್ನತಾಧಿಕಾರಿಗಳೊಡನೆ ಭಾನುವಾರ ದೆಹಲಿಗೆ ಬರಲಿದ್ದಾರೆ.

ಆದರೆ ಅವರ ಉದ್ದೇಶ ಸಾಧನೆಯಾಗಬೇಕಾದರೆ ಅವರಿಗೆ ತುಂಬಾ ಒತ್ತಾಯ ಪೂರ್ವಕ ಮನವಿ ಅಗತ್ಯವಿರುವಂತೆ ಕಾಣುತ್ತದೆ. ರಾಜ್ಯ ಎನ್‌ಜಿಓಗಳ ವೇತನ ಏರಿಕೆಯ ಯೋಜನೇತರ ವೆಚ್ಚ ಹಾಗೂ ಇನ್ನೂ ಕೇಂದ್ರ ಮಂಜೂರು ಮಾಡದಿರುವ ನೀರಾವರಿ ಯೋಜನೆಗಳಿಗೆ ಹೂಡಿರುವ ವೆಚ್ಚಗಳಿಂದ ಬಿದ್ದಿರುವ ಹಣಕಾಸು ಕೊರತೆ ತುಂಬಿಕೊಳ್ಳುವುದಕ್ಕಾಗಿಯೇ ರಾಜ್ಯ ಸರ್ಕಾರ ಕೇಂದ್ರದ ವಿಶೇಷ ನೆರವನ್ನು ಬಳಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವ ಶಾಖೆ ಹಾಗೂ ಯೋಜನಾ ಆಯೋಗಗಳು ವಾದಿಸುತ್ತಿವೆ.

• **ಪಾಕಿಸ್ತಾನ ಗೂಢಚಾರ ತಂಡ ಪತ್ತೆ**

ಚಂಡೀಗಢ, ಫೆ. 18– ಚಂಡೀಗಢ, ಉತ್ತರ ಪ್ರದೇಶ ಮತ್ತು ಆಂಧ್ರ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಪಾಕಿಸ್ತಾನಿ ಗೂಢಚಾರರ ತಂಡವೊಂದನ್ನು ಚಂಡೀಗಢದ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಎಲ್‌ಐಸಿ ಐಪಿಒ ಸಂದರ್ಭವನ್ನು ಹಣಕಾಸಿನ ಒಳಗೊಳ್ಳುವಿಕೆಗೆ ಬಳಸಿಕೊಳ್ಳಬಹುದು

ಸಣ್ಣ ಹೂಡಿಕೆದಾರರಿಗೆ ಸಿಗುವುದೇ ಆದ್ಯತೆ?

ವಿಶ್ಲೇಷಣೆ

ಹೇಮಂತ್ ಮಜಿಥಿಯಾ

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒಗೆ ಸಂಬಂಧಿಸಿದ ಮಾತುಗಳು ದಿನಕಳೆದಂತೆ ಜೋರಾಗುತ್ತಿವೆ. ಎಲ್ಲರ ಕಣ್ಣುಗಳು ಎಲ್‌ಐಸಿ ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಕಡೆ ನೆಟ್ಟಿವೆ. ಎಲ್‌ಐಸಿಯ ಮಾರುಕಟ್ಟೆ ಮೌಲ್ಯವು ₹ 15 ಲಕ್ಷ ಕೋಟಿ ಆಗಬಹುದು ಎಂಬ ವರದಿಗಳಿವೆ.

ಎಲ್‌ಐಸಿ ಐಪಿಒ ಸಂದರ್ಭದಲ್ಲಿ, ಕಂಪನಿಯ ಷೇರುಗಳಿಗೆ ಸಾಂಸ್ಥಿಕ ಹೂಡಿಕೆದಾರರಿಂದ ಮಾತ್ರವಲ್ಲದೆ ಸಣ್ಣ ಹೂಡಿಕೆದಾರರಿಂದಲೂ ಭಾರಿ ಪ್ರಮಾಣದ ಬೇಡಿಕೆ ಬರಬಹುದು ಎಂಬ ನಿರೀಕ್ಷೆ ಇದೆ. ಈಚಿನ ದಿನಗಳಲ್ಲಿ ಐಪಿಒ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಂದ ಬರುವ ಅರ್ಜಿಗಳ ಸಂಖ್ಯೆಯು ದೊಡ್ಡ ಮಟ್ಟದಲ್ಲಿಯೇ ಇದೆ. ಉದಾಹರಣೆಗೆ, ಲೇಟೆಂಟ್ ವ್ಯೂ ಅನಾಲಿಟಿಕ್ಸ್‌ನ ₹ 600 ಕೋಟಿ ಮೌಲ್ಯದ ಐಪಿಒ ವೇಳೆ ಸಣ್ಣ ಹೂಡಿಕೆದಾರರಿಗೆ ಮೀಸಲಿದ್ದ ಷೇರುಗಳಿಗೆ 120 ಪಟ್ಟು ಹೆಚ್ಚು ಬಿಡ್‌ಗಳು ಸಲ್ಲಿಕೆಯಾಗಿದ್ದವು. ಪಾರಸ್ ಡಿಫೆನ್ಸ್ ಆ್ಯಂಡ್ ಸ್ಪೇಸ್ ಟೆಕ್ನಾಲಜೀಸ್‌ನ ಐಪಿಒ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಗೆ ಮೀಸಲಿದ್ದ ಷೇರುಗಳಿಗೆ 113 ಪಟ್ಟು ಹೆಚ್ಚು ಅರ್ಜಿಗಳು ಬಂದಿದ್ದವು.

ದುರದೃಷ್ಟದ ಸಂಗತಿಯೆಂದರೆ, ಸಣ್ಣ ಹೂಡಿಕೆದಾರರಿಗೆ ಮೀಸಲಾದ ಕೋಟಾ ಅಡಿಯಲ್ಲಿ ಲಭ್ಯವಿರುವ ಷೇರುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಾಗ, ಸಣ್ಣ ಹೂಡಿಕೆದಾರರ ಪೈಕಿ ಹಲವರಿಗೆ ಒಂದು ಷೇರು ಕೂಡ ಸಿಗುವುದಿಲ್ಲ. ಇದರಿಂದ ಅವರಿಗೆ ಹಣಕಾಸಿನ ನಷ್ಟವೇನೂ ಆಗುವುದಿಲ್ಲವಾದರೂ, ಅವರ ಉತ್ಸಾಹವನ್ನು ಇದು ಕುಂದಿಸಬಹುದು. ಅದರಲ್ಲೂ ಮುಖ್ಯವಾಗಿ, ಈಕ್ವಿಟಿಗಳಲ್ಲಿ ಹೊಸದಾಗಿ ಹೂಡಿಕೆ ಮಾಡುತ್ತಿರುವವರ ಉತ್ಸಾಹವನ್ನು ಇದು ಕುಗ್ಗಿಸಬಹುದು.

ಹೀಗಾಗಿ, ಐಪಿಒ ಮೂಲಕ ಷೇರು ಹಂಚಿಕೆ ಸಂದರ್ಭದಲ್ಲಿ ಎಲ್‌ಐಸಿ ಹೊಸ ಮಾದರಿಯೊಂದನ್ನು ಕಟ್ಟಿಕೊಡಬೇಕು. ಅರ್ಜಿ ಸಲ್ಲಿಸುವ ಸಣ್ಣ ಹೂಡಿಕೆದಾರರಿಗೆಲ್ಲರಿಗೂ ಷೇರುಗಳು ಸಿಗಬಾರದೇಕೆ? ಹೀಗೆ ಮಾಡುವುದರಿಂದ ಷೇರು ಮಾರುಕಟ್ಟೆಗಳ ನೆಲೆ ವಿಸ್ತರಣೆ ಕಾಣುವುದಲ್ಲದೆ, ಇದು ಹೂಡಿಕೆದಾರರಿಗೆ ದೇಶದ ಬಲಿಷ್ಠ ಬ್ರ್ಯಾಂಡ್ ಒಂದರ ಮಾಲೀಕತ್ವ ಹೊಂದಲು ಅವಕಾಶ ಕಲ್ಪಿಸುತ್ತದೆ.

ಕಳವಳಕ್ಕೆ ಕಾರಣ ಆಗುವ ಇನ್ನೊಂದು ವಿಚಾರವೂ ಇಲ್ಲಿದೆ. ದೊಡ್ಡ ಕಂಪನಿಗಳ ಐಪಿಒಗಳ ಮೂಲಕ ಷೇರು ಖರೀದಿಸಲು ಸಣ್ಣ ಹೂಡಿಕೆದಾರರು ಸಾಲುಗಟ್ಟಿ ನಿಲ್ಲುತ್ತಾರೆ. ಆದರೆ, ಆ ಕಂಪನಿಗಳ ಷೇರು, ಷೇರುಪೇಟೆಯಲ್ಲಿ ನೋಂದಣಿ ಆದ ನಂತರದಲ್ಲಿ ನಿರೀಕ್ಷೆಗಳಿಗೆ ತಕ್ಕಂತೆ ಲಾಭ ಕೊಡದಿದ್ದರೆ ಸಣ್ಣ ಹೂಡಿಕೆದಾರರು ನಿರಾಶೆ ಅನುಭವಿಸುತ್ತಾರೆ. ಆದರೆ ಎಲ್‌ಐಸಿಯು ಹೂಡಿಕೆದಾರರಿಗೆ ದೊಡ್ಡ ಅವಕಾಶ ಎಂಬುದು ನಿಜ.

ವಿಮಾ ವಲಯದಲ್ಲಿ ಖಾಸಗಿಯವರಿಗೆ ಪ್ರವೇಶ ನೀಡಿದ ನಂತರದಲ್ಲಿಯೂ ಎಲ್‌ಐಸಿ ದೊಡ್ಡ ಮಾರುಕಟ್ಟೆ ಪಾಲನ್ನು ಉಳಿಸಿಕೊಂಡಿದೆ. ವಿಮಾ ವಲಯದಲ್ಲಿ ಖಾಸಗಿ ಕಂಪನಿಗಳ ಪ್ರವೇಶ ಆಗಿ 20 ವರ್ಷಗಳು ಪೂರ್ಣಗೊಂಡಿದ್ದರೂ ಎಲ್‌ಐಸಿ ಇಲ್ಲಿ ಅತ್ಯಂತ ಬಲಿಷ್ಠ ಕಂಪನಿಯಾಗಿ ಮುಂದುವರಿದಿದೆ. ದೂರಸಂಪರ್ಕ ಕ್ಷೇತ್ರದಿಂದ ಆರಂಭಿಸಿ ಬ್ಯಾಂಕಿಂಗ್ ಕ್ಷೇತ್ರದವರೆಗೆ, ಖಾಸಗಿ ಕಂಪನಿಗಳು ಆಯಾ ಕ್ಷೇತ್ರದ ಸರ್ಕಾರಿ ಕಂಪನಿಗಳ ನೆಲೆಯನ್ನು ಅಲುಗಾಡಿಸಿವೆ. ಆದರೆ, ವಿಮಾ ವಲಯದಲ್ಲಿ ಮಾತ್ರ ಖಾಸಗಿ ಕಂಪನಿಗಳು ಎಲ್‌ಐಸಿ ಸ್ಥಾನವನ್ನು ಅಲುಗಾಡಿಸಿಲ್ಲ. ಜಾಗತಿಕ ಮಟ್ಟದಲ್ಲಿ ಎಲ್‌ಐಸಿ ಮೂರನೆಯ ಅತ್ಯಂತ ಬಲಿಷ್ಠ ವಿಮಾ ಬ್ರ್ಯಾಂಡ್, 10ನೆಯ ಅತ್ಯಂತ ಮೌಲ್ಯಯುತ ವಿಮಾ ಬ್ರ್ಯಾಂಡ್. ಮೊದಲ ಬಾರಿಗೆ ಹೂಡಿಕೆ ಮಾಡುತ್ತಿರುವವರಿಗೆ ಎಲ್‌ಐಸಿಯಂತಹ ಕಂಪನಿಗಳಲ್ಲಿ ಹೂಡಿಕೆ ಮಾಡಲು ಅವಕಾಶ ದೊರೆತರೆ, ನೈಜ ಸಂಪತ್ತು ಸೃಷ್ಟಿಸುವ ಕಂಪನಿಯೊಂದರ ಮಾಲೀಕರಾಗುವ ಖುಷಿಯನ್ನು ಅವರು ಅನುಭವಿಸುತ್ತಾರೆ. ಮುಂದೆಯೂ ಅವರು ಈಕ್ವಿಟಿ ಹೂಡಿಕೆಗಳಲ್ಲಿ ಆಸಕ್ತಿ ಉಳಿಸಿಕೊಳ್ಳುತ್ತಾರೆ.

ಹಿಂದಿನ ಎರಡು ವರ್ಷಗಳಿಂದ ಸಣ್ಣ ಹೂಡಿಕೆದಾರರು ಭಾರಿ ಸಂಖ್ಯೆಯಲ್ಲಿ ಷೇರುಗಳಲ್ಲಿ ಹೂಡಿಕೆ ಮಾಡಲು ಆರಂಭಿಸಿದ್ದಾರೆ. ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಇನ್ನಷ್ಟು ಹೆಚ್ಚಿಸಲು ಅವಕಾಶಗಳು ಇವೆ.

ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಅರ್ಥಾತ್ ಸಿಡಿಎಸ್‌ಎಲ್) 5.26 ಕೋಟಿಗಿಂತ ಹೆಚ್ಚು ಡಿ–ಮ್ಯಾಟ್ ಖಾತೆಗಳನ್ನು ಹೊಂದಿದೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಸರಿಸುಮಾರು 2.45 ಕೋಟಿ ಡಿ–ಮ್ಯಾಟ್ ಖಾತೆಗಳನ್ನು ಹೊಂದಿದೆ. ಇದು 2021ರ ನವೆಂಬರ್‌ವರೆಗಿನ ಮಾಹಿತಿ. ಎಲ್‌ಐಸಿ ಬ್ರ್ಯಾಂಡ್‌ಗೆ ಇರುವ ಶಕ್ತಿಯ ಕಾರಣದಿಂದಾಗಿ ಇನ್ನಷ್ಟು ಹೊಸ ಹೂಡಿಕೆದಾರರು ಇದರತ್ತ ಆಕರ್ಷಿತರಾಗಬಹುದು. ಆದರೆ, ಹೀಗೊಂದು ಸಂದರ್ಭವನ್ನು ಊಹಿಸಿಕೊಳ್ಳಿ. ಸಣ್ಣ ಹೂಡಿಕೆದಾರರು ಎಲ್‌ಐಸಿ ಐಪಿಒ ಮೂಲಕ ಷೇರು ಖರೀದಿಸುವ ಉದ್ದೇಶದಿಂದ ಹೊಸದಾಗಿ ಡಿ–ಮ್ಯಾಟ್ ಖಾತೆ ಆರಂಭಿಸುತ್ತಾರೆ. ಆದರೆ, ಐಪಿಒ ವೇಳೆ ಷೇರುಗಳಿಗೆ ಭಾರಿ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗಿ ಹೊಸ ಸಣ್ಣ ಹೂಡಿಕೆದಾರರಿಗೆ ಷೇರುಗಳು ಸಿಗುವುದಿಲ್ಲ ಎಂದು ಭಾವಿಸಿ. ಈ ರೀತಿ ಆದಲ್ಲಿ, ಹೊಸ ಸಣ್ಣ ಹೂಡಿಕೆದಾರರು ತಮ್ಮ ಹೂಡಿಕೆ ಪಯಣವನ್ನು ಆರಂಭಕ್ಕೂ ಮೊದಲೇ ಕೊನೆಗೊಳಿಸಬಹುದು.

ಐಪಿಒ ನಿಯಮಗಳು ಸಣ್ಣ ಹೂಡಿಕೆದಾರರ ಪರವಾಗಿ ಇರುವಂತೆ ಮಾಡಬೇಕು. ಬಂಡವಾಳ ಮಾರುಕಟ್ಟೆಯನ್ನು ಸಣ್ಣ ಹೂಡಿಕೆದಾರರ ಮಟ್ಟದಲ್ಲಿ ಇನ್ನಷ್ಟು ವಿಸ್ತರಿಸುವ ಅವಕಾಶವನ್ನು ಎಲ್‌ಐಸಿ ಐಪಿಒ ಪ್ರಕ್ರಿಯೆಯು ಕೇಂದ್ರ ಸರ್ಕಾರಕ್ಕೆ ಒದಗಿಸುತ್ತಿದೆ. ಐಪಿಒ ವೇಳೆ ಸಾಂಸ್ಥಿಕ ಖರೀದಿದಾರರಿಗೂ ಮೊದಲು, ಸಣ್ಣ ಹೂಡಿಕೆದಾರರಿಗೆ ಎಲ್‌ಐಸಿ ಷೇರುಗಳು ಸಿಗುವಂತೆ ಮಾಡಬೇಕು. ಈಗಿರುವ ನಿಯಮಗಳ ಅನ್ವಯ, ಸಾಂಸ್ಥಿಕ ಖರೀದಿದಾರರಿಗೆ ಐಪಿಒ ಪೂರ್ವ ಹಂತದಲ್ಲಿ ಷೇರುಗಳ ಹಂಚಿಕೆ ಆಗುತ್ತದೆ. ಅದಾದ ನಂತರದಲ್ಲಿ ಅರ್ಹ ಸಾಂಸ್ಥಿಕ ಹೂಡಿಕೆದಾರರಿಗೆ ಷೇರುಗಳನ್ನು ಹಂಚಿಕೆ ಮಾಡಲಾಗುತ್ತದೆ. ಸಣ್ಣ ಹೂಡಿಕೆದಾರರು ಕನಿಷ್ಠ ಒಂದು ಲಾಟ್ ಷೇರುಗಳಿಗೆ ಬಿಡ್ ಸಲ್ಲಿಸಬೇಕು ಎಂಬ ನಿಯಮ ಇದೆ. ಒಂದು ಲಾಟ್ ಷೇರುಗಳನ್ನು ಖರೀದಿಸಲು ₹ 10 ಸಾವಿರದಿಂದ ₹ 15 ಸಾವಿರದವರೆಗೆ ಹಣ ತೆಗೆದಿರಿಸಬೇಕು. ಲಭ್ಯವಿರುವ ಷೇರುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಿಡ್ ಸಲ್ಲಿಕೆಯಾದರೆ, ಸಣ್ಣ ಹೂಡಿಕೆದಾರರಿಗೆಲ್ಲರಿಗೂ ಷೇರುಗಳು ಸಿಗುವುದಿಲ್ಲ. ಆಗ ಲಾಟರಿ ಆಧಾರದಲ್ಲಿ ಷೇರು ಹಂಚಿಕೆ ಆಗುತ್ತದೆ. ಅದೃಷ್ಟದ ಆಧಾರದಲ್ಲಿ ಷೇರುಗಳನ್ನು ಹಂಚಿಕೆ ಮಾಡುವ ಈ ಕ್ರಮವು ಸಣ್ಣ ಹೂಡಿಕೆದಾರರು ಐಪಿಒಗಳಿಂದ ಹಿಂದಕ್ಕೆ ಸರಿಯುವಂತೆ ಮಾಡಲಾರಂಭಿಸಿದೆ.

ಎಲ್‌ಐಸಿ ಷೇರುಗಳಿಗೆ ಸಣ್ಣ ಹೂಡಿಕೆದಾರರಿಂದ ಭಾರಿ ಪ್ರಮಾಣದಲ್ಲಿ ಬಿಡ್ ಸಲ್ಲಿಕೆಯಾಗುವ ಸಾಧ್ಯತೆ ಹೆಚ್ಚು. ಇತರ ಎಲ್ಲರಿಗಿಂತ ಹೆಚ್ಚಿನ ಆದ್ಯತೆಯು ಎಲ್‌ಐಸಿ ಐಪಿಒ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಗೆ ಸಿಗುತ್ತದೆ ಎಂಬುದನ್ನು ಖಾತರಿಪಡಿಸಲು ಸರ್ಕಾರಕ್ಕೆ ಸಾಧ್ಯವಾದರೆ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಹೂಡಿಕೆದಾರರು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ.

ಅದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸುವ ಹಣಕಾಸಿನ ಒಳಗೊಳ್ಳುವಿಕೆಗೆ ಪೂರಕವಾಗಿ ಇರುತ್ತದೆ. ಸರ್ಕಾರವು ತನ್ನ ಅತ್ಯುತ್ತಮ ಕಂಪನಿಯೊಂದರ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುತ್ತಿರುವುದು ಹಾಗೂ ದೊಡ್ಡ ಹೂಡಿಕೆದಾರರಿಗಿಂತ ಹೆಚ್ಚಿನ ಆದ್ಯತೆಯನ್ನು ಸಣ್ಣ ಹೂಡಿಕೆದಾರರಿಗೆ ನೀಡುವುದು ದೊಡ್ಡ ಸಂದೇಶವೊಂದನ್ನು ರವಾನಿಸುತ್ತದೆ. ಎಲ್‌ಐಸಿ ಬಹಳ ಬಲಿಷ್ಠವಾದ ಸರ್ಕಾರಿ ಕಂಪನಿ. ದೇಶದ ಹಲವು ಬ್ಲೂಚಿಪ್ ಕಂಪನಿಗಳಲ್ಲಿ ಎಲ್‌ಐಸಿ ಪಾಲು ಹೊಂದಿದೆ. ಎಲ್‌ಐಸಿಯ ಮಾಲೀಕರಾಗುವ ಮೊದಲ ಹಕ್ಕು ದೇಶದ ಸಣ್ಣ ಹೂಡಿಕೆದಾರರಿಗೆ ಸಿಗಬೇಕು.

ಎಲ್‌ಐಸಿ ಐಪಿಒದಲ್ಲಿ ಪಾಲಿಸಿದಾರರ ವರ್ಗ ಎಂಬ ವಿಭಾಗವೊಂದನ್ನು ಆರಂಭಿಸಿ ಮೇಲ್ಪಂಕ್ತಿಯನ್ನು ಸರ್ಕಾರ ಹಾಕಿದೆ. ಇದನ್ನು ಇನ್ನಷ್ಟು ವಿಸ್ತರಿಸಿ, ದೇಶದಲ್ಲಿ ಈಕ್ವಿಟಿ ಹೂಡಿಕೆಯ ಸಂಸ್ಕೃತಿಗೆ ಒಂದು ದೊಡ್ಡ ಪ್ರೋತ್ಸಾಹವನ್ನು ಸರ್ಕಾರ ನೀಡಬಹುದು. ಸಣ್ಣ ಹೂಡಿಕೆದಾರರ ನಡುವೆ ಈಕ್ವಿಟಿ ಹೂಡಿಕೆಯ ಪ್ರವೃತ್ತಿಗೆ ನೀರೆರೆಯಲು ಎಲ್‌ಐಸಿಯಂತಹ ಕಂಪನಿಗಳ ಷೇರುಗಳಲ್ಲಿ ಹೂಡಿಕೆಗೆ ಅವಕಾಶ ಕೊಡುವುದಕ್ಕಿಂತ ದೊಡ್ಡ ಅವಕಾಶ ಇನ್ನೊಂದು ಇರಲಾರದು.

ಲೇಖಕ: ನಿರ್ದೇಶಕ ಮತ್ತು ಸಿಇಒ,ವೆಂಚುರಾ ಸೆಕ್ಯುರಿಟೀಸ್

ಚುರುಮುರಿ

ಹೆಬ್ಬೆಟ್ಟು ವಿವಾದ!

• ಚಂದ್ರಕಾಂತ ವಡ್ಡು

'ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಪರಿಷತ್ತಿನ ಮತದಾರರ ಬಗ್ಗೆ ಸರಿಯಾದ ಮಾಹಿತಿಯಿಲ್ಲ!' ಬದ್ರಿಯ ಹೇಳಿಕೆ ತಿಂಗಳೇಶನ ಹುಬ್ಬೇರಿಸಿತು.

'ಅತ್ಯಧಿಕ ಮತ ಪಡೆದು ಆಯ್ಕೆಯಾದ ಅಧ್ಯಕ್ಷರಿಗೇ ಮಾಹಿತಿ ಇಲ್ಲ ಅಂದ್ರೆ ಹೇಗೆ?'

'ಅವರಿಗೆ ಅಧಿಕೃತ ಮಾಹಿತಿ ಇದ್ದಿದ್ದರೆ ಪರಿಷತ್ತಿನಲ್ಲಿ ಕೇವಲ ಮೂವತ್ತು ಸಾವಿರ ಹೆಬ್ಬೆಟ್ಟುಗಳು ಇದ್ದಾರೆಂದು ತಪ್ಪು ಮಾಹಿತಿ ನೀಡುತ್ತಿರಲಿಲ್ಲ'.

'ನಿನ್ನ ಪ್ರಕಾರ ಆ ಸಂಖ್ಯೆ ಎಷ್ಟು?'

'ಎಲ್ಲಾ ಕಸಾಪ ಸದಸ್ಯರೂ ಹೆಬ್ಬೆಟ್ಟುಗಳೇ!'

'ಇದೇನಪಾ... ಕೆಂಪುಕೋಟೆ ಮೇಲೆ ಧರ್ಮದ ಧ್ವಜ ಹಾರಿಸಿದಂತಿದೆ ನಿನ್ನ ಹೇಳಿಕೆ! ಈ ಸಂಖ್ಯೆಯನ್ನು ಮಾಹಿತಿ ಹಕ್ಕಿನಲ್ಲಿ ಅರ್ಜಿ ಹಾಕಿ ತೆಗೆದುಕೊಂಡೆಯಾ?'

'ಹಾಗೇ ಅಂದುಕೋ. ಆದರೆ ಅರ್ಜಿಗೆ ಸಹಿ ಹಾಕಿದ್ದೆನೋ ಹೆಬ್ಬೆಟ್ಟು ಒತ್ತಿದ್ದೆನೋ ಅಂತ ಕೆದಕಬೇಡ. ಪರಿಷತ್ತಿನ ಮಾಹಿತಿ ಸಾಹಿತಿಗಳ ಮೂಲಭೂತ ಹಕ್ಕು'.

'ಹಕ್ಕು ಹೌದು, ಆದರೆ ಅದು ಮೂಲಭೂತ ಹಕ್ಕೋ ಮೂಲಭೂತವಾದದ ಕುಮ್ಮಕ್ಕೋ?'

'ನೀನು ಮೂಲ ವಿಷಯ ಮರೆಮಾಚಬೇಡ. ಕಸಾಪ ಸದಸ್ಯರಷ್ಟೇ ಅಲ್ಲ, ಎಲ್ಲ ಚುನಾವಣೆಗಳ ಎಲ್ಲ ಮತದಾರರೂ ಹೆಬ್ಬೆಟ್ಟುಗಳೇ...'

'ಪ್ರಜಾಪ್ರತಿನಿಧಿಗಳ ಯೋಗ್ಯತೆ ನೋಡಿದರೆ ಹಾಗೇ ಅನ್ನಿಸುತ್ತದೆ, ನಿಜ. ಆದರೆ ನೀವು ಕವಿಗಳು ಏನೇನೋ ಅರ್ಥ ಅಂಟಿಸಿಬಿಡುತ್ತೀರಿ'.

'ನನ್ನ ಹೇಳಿಕೆಗೆ ಆಧಾರ್ ಕಾರ್ಡೇ ಆಧಾರ. ಅದರಲ್ಲಿ ಯಾರ ಸಹಿಯೂ ಇಲ್ಲ. ಹೆಬ್ಬೆಟ್ಟು ಮತ್ತದರ ನಾಲ್ವರು ಸೋದರ ಬೆಟ್ಟುಗಳನ್ನು ನಂಬಿ ಮತದಾರರಿಗೆ ಆಧಾರ ಕಲ್ಪಿಸಲಾಗಿದೆ'.

'ಹಾಗಾದರೆ ಇಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಉದ್ಭವಿಸುತ್ತದೆ. ಹೆಬ್ಬೆಟ್ಟುಗಳ ಮತ ಪಡೆದು ಆರಿಸಿಬಂದವರಿಗೆ ಅದೇ ಹೆಬ್ಬೆಟ್ಟುಗಳ ಬಗ್ಗೆ ಮಾತಾಡುವ ಹಕ್ಕು ಇದೆಯೇ? ಇದ್ದರೆ ಆ ಹಕ್ಕಿನ ರಕ್ಷಣೆ ಹೇಗೆ? ಇಲ್ಲದಿದ್ದರೆ ವಾಕ್ ಸ್ವಾತಂತ್ರ್ಯದ ಹರಣವಾಗುವುದಿಲ್ಲವೇ?'

'ಅಯ್ತು, ಹೆಬ್ಬೆಟ್ಟು ವಿವಾದವನ್ನು ಬಹುಸದಸ್ಯ ಸಂವಿಧಾನ ಪೀಠ ಬಗೆಹರಿಸುವವರೆಗೆ ನಾವೆಲ್ಲಾ ನಿಪ್ಪಟ್ಟು ತಿಂತಿರೋಣ!'

ಸಂಗತ

ಲಿಂಗಸಂವೇದಿ ಆಯವ್ಯಯ ಆದ್ಯತೆಯಾಗಲಿ

ಎಲ್ಲ ಕ್ಷೇತ್ರಗಳ ಮಹಿಳೆಯರ ಸಮಗ್ರ ಅಭಿವೃದ್ಧಿಯನ್ನು ಪರಿಗಣಿಸುವ ಆಯವ್ಯಯ ರೂಪಿಸಲು ಈಗಲಾದರೂ ಸಾಧ್ಯವಾಗಬೇಕು

• ರೂಪ ಹಾಸನ

ಕೇಂದ್ರ, ರಾಜ್ಯ ಸರ್ಕಾರಗಳ ವಾರ್ಷಿಕ ಬಜೆಟ್‌ನಲ್ಲಿ, ಮಹಿಳೆಯರ ಅಭಿವೃದ್ಧಿಗೆ ಎಷ್ಟು ಆದ್ಯತೆ ನೀಡಲಾಗುತ್ತಿದೆ ಎಂದು ಪರಿಶೀಲಿಸಹೊರಟರೆ, ನಿರಾಸೆಯಾಗುತ್ತದೆ. ಲಿಂಗಾಧಾರಿತ ಆಯವ್ಯಯ ವೆಂಬುದು ಹೆಸರಿಗಿದೆಯಷ್ಟೇ. ಪ್ರತಿವರ್ಷವೂ ಮಹಿಳೆಯರಿಗಾಗಿ ಹಿಂದಿನ ಯೋಜನೆಗಳ ಮುಂದುವರಿಕೆಯ ಜೊತೆಗೆ, ಕೆಲವು ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಕ್ಕಾಗಿ ಒಂದಷ್ಟು ಹಣ ಮೀಸಲಿಟ್ಟಿದ್ದನ್ನು ಘೋಷಿಸಿದರೆ ಮುಗಿಯಿತು! ಮಹಿಳೆಯರ ಬದುಕಿನ ಆಮೂಲಾಗ್ರ ಬದಲಾವಣೆಯ ದೃಷ್ಟಿಯಿಂದ ವಿಸ್ತೃತ ಚರ್ಚೆಯಾಗಲೀ ಅನುಷ್ಠಾನದ ಸಾಧ್ಯತೆಗಳ ಆಲೋಚನೆಯಾಗಲೀ ನಡೆಯುವುದೇ ಇಲ್ಲ.

ಮುಖ್ಯವಾಗಿ, ಎಲ್ಲ ರೀತಿಯ ಅಂಚಿಗೊತ್ತರಿಸಲ್ಪಟ್ಟ, ಗ್ರಾಮೀಣ ಮಹಿಳೆಯರನ್ನೂ ಒಳಗೊಳ್ಳುವ ಆಯವ್ಯಯ ಇದುವರೆಗೆ ರೂಪಿತವಾಗಿಯೇ ಇಲ್ಲ! ಸರ್ಕಾರವು ತನ್ನ ಪ್ರತೀ ಇಲಾಖೆಯ ಆಯವ್ಯಯದಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಹಣ ಮೀಸಲಿಟ್ಟು, ಪರಿಣಾಮಕಾರಿ ಯೋಜನೆಗಳನ್ನು ಜಾರಿಗೊಳಿಸಬೇಕಿರುವುದು ನಿಜವಾದ ಲಿಂಗಸಂವೇದಿ ಬಜೆಟ್‌ನ ಮುಖ್ಯ ಆಶಯವಾಗಬೇಕು.

ಹಳ್ಳಿಗಾಡಿನ ಹೆಣ್ಣುಮಕ್ಕಳು ಕುಡಿಯುವ ನೀರಿಗಾಗಿ, ಉರುವಲಿಗಾಗಿ ಮೈಲಿಗಟ್ಟಲೆ ನಡೆದುಕೊಂಡು ಹೋಗಬೇಕಾದ ಸಂಕಷ್ಟದ ಪರಿಸ್ಥಿತಿ ಇಂದಿಗೂ ಇರುವುದು ನಮಗೆ ನಾಚಿಕೆಗೇಡಿನ ಸಂಗತಿ ಎನಿಸದಿದ್ದರೆ ಹೇಗೆ? ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಶೇ 80ಕ್ಕಿಂತ ಹೆಚ್ಚು ಕೆಲಸ ಮಾಡುತ್ತಿರುವವರು ಸ್ಥಳೀಯ ಮಹಿಳೆಯರೇ. ಆದರೆ ಅದಕ್ಕೆ ಬಜೆಟ್‌ನಲ್ಲಿ ತೆಗೆದಿಡುವ ಹಣ ಕಡಿಮೆಯಾಗುತ್ತಲೇ ಸಾಗಿದೆ. ಕೇಳಿದಷ್ಟು ದಿನಗಳ ಕೆಲಸ, ದುಡಿಮೆಗೆ ಸಮರ್ಪಕ ಲೆಕ್ಕಾಚಾರದ ಕೂಲಿ ಸಿಗುವಂತಾದರೆ ಬಡ ಮಹಿಳೆಯರೇ ತಮ್ಮ ಕುಟುಂಬವನ್ನು ಬದುಕಿಸಿಕೊಳ್ಳುತ್ತಾರೆ.

ಕುಟುಂಬದ ನೆಮ್ಮದಿಗಾಗಿ ಮದ್ಯಪಾನ ನಿಷೇಧ ಆಗಲೇಬೇಕೆಂದು ಮಹಿಳೆಯರು ದಶಕದಾಚೆಯಿಂದ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ. ಆದರೆ ರಾಜ್ಯದಾದ್ಯಂತ ಸಮರ್ಪಕ ಕುಡಿಯುವ ನೀರನ್ನೇ ಒದಗಿಸಲು ಸಾಧ್ಯವಾಗಿಲ್ಲದ ಸರ್ಕಾರಕ್ಕೆ, ಹಳ್ಳಿ ಹಳ್ಳಿಗೂ ಮದ್ಯ ಪೂರೈಸಲು ಸಾಧ್ಯವಾಗಿರುವುದು, ಅದರ ಆದ್ಯತೆಯ ದ್ಯೋತಕ! ಹೀಗೆಂದೇ ಹಂತ ಹಂತದ ಮದ್ಯನಿಷೇಧದತ್ತ ಪ್ರಥಮ ಆದ್ಯತೆಯಾಗಿ ಗಮನಹರಿಸಬೇಕಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಕೌಶಲಾಭಿವೃದ್ಧಿ ತರಬೇತಿ ಪಡೆದು, ಕಿರು ಮತ್ತು ಗೃಹ ಉದ್ದಿಮೆಗಳನ್ನು ಸ್ಥಾಪಿಸಿರುವವರಿಗೆ ತಕ್ಕ ಮಾರುಕಟ್ಟೆ ವ್ಯವಸ್ಥೆ ರೂಪಿಸಬೇಕಾಗಿದೆ.

ಕರ್ನಾಟಕ ರಾಜ್ಯ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ಸಮಿತಿಯು 2017ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಲಕ್ಷದಷ್ಟು ಲೈಂಗಿಕ ದಮನಿತರಲ್ಲಿ ಶೇ 72ರಷ್ಟು ಮಹಿಳೆಯರು ವೇಶ್ಯಾವಾಟಿಕೆ ಬಿಟ್ಟು ಹೊರಬರಲು ಪರ್ಯಾಯ ಆರ್ಥಿಕ ಸ್ವಾವಲಂಬನೆಗೆ ಬೇಡಿಕೆ ಇಟ್ಟಿದ್ದಾರೆ. ಇವರ ಸಮಗ್ರ ಸಮೀಕ್ಷೆ ನಡೆಸಬೇಕು. ಈ ಜಾಲದಲ್ಲಿ ಬಿದ್ದಿರುವ ಚಿಕ್ಕವಯಸಿನ ಸಾವಿರಾರು ಹೆಣ್ಣುಮಕ್ಕಳು, ಅಂಗವಿಕಲರು, ಎಚ್‌ಐವಿ ಪೀಡಿತರಾಗಿದ್ದೂ ದಂಧೆಯೊಳಗಿರುವ ಸೋಂಕಿತ ದಮನಿತರನ್ನು ತಕ್ಷಣವೇ ವೇಶ್ಯಾವಾಟಿಕೆಯಿಂದ ಹೊರತಂದು ಪುನರ್ವಸತಿ ಕಲ್ಪಿಸಲು ಪ್ರಬಲ ಕೋಶವೊಂದನ್ನು ರೂಪಿಸಬೇಕು.

ಗ್ರಾಮ ಪಂಚಾಯಿತಿಗೆ ಒಂದರಂತಾದರೂ ಗುಡಿ ಕೈಗಾರಿಕೆಯ ಕಿರು ಉತ್ಪನ್ನಗಳ ಘಟಕವನ್ನು ಸ್ಥಾಪಿಸಬೇಕು. ಸರ್ಕಾರಿ ಕೆಲಸದಲ್ಲಿ ಶೇ 50ರಷ್ಟನ್ನು ಕಡ್ಡಾಯವಾಗಿ ಮಹಿಳೆಯರಿಗೆ ಮೀಸಲಿಡಬೇಕು. ಅಸಂಘಟಿತ ಮಹಿಳಾ ಕಾರ್ಮಿಕರಿಗೆ ಸಶಕ್ತವಾದ ಕಲ್ಯಾಣ ಯೋಜನೆಗಳನ್ನು ರೂಪಿಸಬೇಕು.

ಬಹುತೇಕ ಉದ್ದಿಮೆಗಳಲ್ಲಿ ಮಹಿಳಾ ಕಾರ್ಮಿಕರಿಗೆ ನಿಗದಿಪಡಿಸಿರುವ ವೇತನವು ಕನಿಷ್ಠ ಮಟ್ಟದಲ್ಲಿದೆ. ಹೀಗಾಗಿ ಐ.ಎಲ್.ಒ. (ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್) ನಿಗದಿತ ಮಾನದಂಡದ ಅನ್ವಯ ವೇತನ ಪರಿಷ್ಕರಿಸಬೇಕು. ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ನೌಕರರಿಗೆ ನೀಡಲಾಗುತ್ತಿರುವ ಅಲ್ಪ ಗೌರವಧನದ ಬದಲಿಗೆ ಸೂಕ್ತವಾದ ಮಾಸಿಕ ವೇತನ ನಿಗದಿಪಡಿಸಬೇಕು. ಮನೆಕೆಲಸದ ಮಹಿಳಾ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ತಮಿಳುನಾಡು ಸರ್ಕಾರದ ಮಾದರಿಯಲ್ಲಿ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಬೇಕು.

ಹೆಣ್ಣುಭ್ರೂಣ ಹತ್ಯೆ ತಡೆಗಾಗಿ ಒಂದು ಪ್ರತ್ಯೇಕ, ವಿಕೇಂದ್ರೀಕೃತ ಆಯೋಗ ರಚನೆಯಾಗಬೇಕು. ಬಾಲ್ಯವಿವಾಹ ವಿರುದ್ಧದ ಅರಿವಿನ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ರೂಪಿಸಬೇಕು. ಪಡಿತರಚೀಟಿಯನ್ನು ಕಡ್ಡಾಯವಾಗಿ ಮಹಿಳೆಯರ ಹೆಸರಲ್ಲಿ ಮರುನೋಂದಣಿ ಮಾಡಿಸಬೇಕು. ಶಾಲೆಯ ಬಿಸಿಯೂಟ ತಯಾರಿ ಜವಾಬ್ದಾರಿಯನ್ನು ಕಡ್ಡಾಯವಾಗಿ ಸ್ಥಳೀಯ ಮಹಿಳೆಯರಿಗೆ ಕೊಡಬೇಕು.

ಮಾರಾಟ ಜಾಲಕ್ಕೆ ಸಿಕ್ಕಿ ವಾಪಸಾದವರು, ಅತ್ಯಾಚಾರಕ್ಕೆ ಒಳಗಾದವರು ಹಾಗೂ ನಿರ್ಗತಿಕ, ಪರಿತ್ಯಕ್ತ ಮಹಿಳೆಯರ ಪುನರುಜ್ಜೀವನಕ್ಕಾಗಿ ತುರ್ತು ಪರಿಹಾರ ನಿಧಿಯನ್ನು ಸ್ಥಾಪಿಸಬೇಕು. ರಾಜ್ಯದಾದ್ಯಂತ ಈ ವಿಷಯದಲ್ಲಿ ಗುರುತರ ಲೋಪಗಳಾಗುತ್ತಿದ್ದು ಸಶಕ್ತ ಯೋಜನೆಯೊಂದನ್ನು ರೂಪಿಸಬೇಕು. ಪ್ರತೀ ಜಿಲ್ಲೆಯಲ್ಲಿ ಪ್ರತ್ಯೇಕ ಮಹಿಳಾ ಪೊಲೀಸ್ ಠಾಣೆಗಳು, ತ್ವರಿತಗತಿಯ ನ್ಯಾಯಾಲಯಗಳು ಸ್ಥಾಪನೆಯಾಗಬೇಕು.

ಈ ತುರ್ತು ಆದ್ಯತೆಯ ವಿಷಯಗಳಿಗೆ ಸರ್ಕಾರ ಆಯವ್ಯಯದಲ್ಲಿ ಅವಶ್ಯಕ ಹಣವನ್ನು ತೆಗೆದಿಡುವ ಮೂಲಕ ಸಮರ್ಥ ಲಿಂಗಸಂವೇದಿ ಆಯವ್ಯಯಕ್ಕೆ ಇನ್ನಾದರೂ ಮುನ್ನುಡಿ ಹಾಡಬೇಕು.

ವಾಚಕರ ವಾಣಿ

ಹಣದ ಅಭಾವ ಮತ್ತು ಋಣಮುಕ್ತಿ

ತಿರುಮಲ ತಿರುಪತಿ ದೇವಸ್ಥಾನಂನಿಂದ (ಟಿಟಿಡಿ) ಉದಯಾಸ್ತಮಾನ ಸೇವಾ ಟಿಕೆಟ್ ಮಾರಾಟ ಆರಂಭವಾಗಿದೆ (ಪ್ರ.ವಾ., ಫೆ. 17). ಭಕ್ತ: ತಿಮ್ಮಪ್ಪನೇ ನನ್ನನ್ನು ಈ ಭವದಿಂದ ಮುಕ್ತನನ್ನಾಗಿ ಮಾಡಯ್ಯಾ... ನನ್ನ ಪ್ರಾಣವನ್ನೇ ನಿನಗರ್ಪಿಸುವೆನು! ತಿಮ್ಮಪ್ಪ: ನಿನ್ನ ಭವದ ಮಾತಂತಿರಲಿ ಭಕ್ತನೇ, ಮೊದಲು ನನ್ನ ಹಣದ ಅಭಾವ ನೀಗಲು 'ಉದಯಾಸ್ತಮಾನ'ದ ಟಿಕೆಟ್ ಪಡೆದುಬಂದು ನನ್ನನ್ನು ಕುಬೇರನ ಸಾಲದಿಂದ ಋಣಮುಕ್ತನಾಗಲು ಸಹಕರಿಸು.

ಜೆ.ಬಿ.ಮಂಜುನಾಥ, ಪಾಂಡವಪುರ

ಎರಡು ಅವಧಿಯ ಅಂಕಿ ಅಂಶ ಪರಿಗಣಿಸಿ

ಆರು ರಾಜ್ಯಗಳ ಅಭಿವೃದ್ಧಿ ಮಾದರಿಯ ತಾಳೆ ಕುರಿತ ವರದಿಯಲ್ಲಿನ (ಪ್ರ.ವಾ., ಫೆ.16) ಮಾಹಿತಿಯನ್ನು ಪ್ರಸ್ತಾಪಿಸುತ್ತಾ ಟಿ.ಆರ್.ಚಂದ್ರಶೇಖರ ಅವರು ವಿವಿಧ ರಾಜ್ಯಗಳ ತಲಾ ವರಮಾನ, ಜಿಡಿಪಿಯನ್ನು ಹೋಲಿಸಿದ್ದಾರೆ (ವಾ.ವಾ., ಫೆ. 17). ಕರ್ನಾಟಕವು ಬೇರೆ ರಾಜ್ಯಗಳ ಮಾದರಿಯಿಂದ ಪಾಠ ಕಲಿಯಬೇಕು ಎಂದಿದ್ದಾರೆ. ಯಾವುದೇ ಪ್ರದೇಶದ ವಿವಿಧ ಅಭಿವೃದ್ಧಿ ಸೂಚಿಗಳನ್ನು ತುಲನೆ ಮಾಡುವಾಗ ಎರಡು ಅವಧಿಯ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದುದು ಅತ್ಯಂತ ಅವಶ್ಯಕ.

ಒಂದು ಅವಧಿಯ ಅಂಕಿ ಅಂಶಗಳನ್ನಷ್ಟೇ ಇಟ್ಟುಕೊಂಡು ತುಲನೆ ಮಾಡುವುದರಿಂದ ಸರಿಯಾದ ಚಿತ್ರಣವನ್ನು ನೀಡಲು ಸಾಧ್ಯವಿಲ್ಲ. ಉದಾಹರಣೆಗೆ, ಸಾಕ್ಷರತೆ ಕುರಿತಂತೆ ಯಾವುದೇ ರಾಜ್ಯದ ಪ್ರಮಾಣ ಹಿಂದಿನ ಅವಧಿಯಲ್ಲಿ ಶೇ 90ರಷ್ಟು ಇದ್ದು ಈಗ ಶೇ 94 ಆಗಿದ್ದಲ್ಲಿ ಶೇ 4 ಪ್ರಗತಿಯಾಗಿದೆ ಎನ್ನಬಹುದು. ಅದೇ ಇನ್ನೊಂದು ರಾಜ್ಯದ ಪ್ರಮಾಣ ಹಿಂದಿನ ಅವಧಿಯಲ್ಲಿ ಶೇ 72 ಇದ್ದು ಈಗ ಶೇ 81 ಆಗಿದ್ದಲ್ಲಿ ಶೇ 9 ಪ್ರಗತಿಯಾಗಿರುತ್ತದೆ. ಅಂದರೆ ಸಾಕ್ಷರತೆ ಪ್ರಮಾಣ ಶೇ 9ರಷ್ಟು ಏರಿಕೆಯಾಗಿರುವ ರಾಜ್ಯವು ಹೆಚ್ಚು ಅಭಿವೃದ್ಧಿ ಕಡೆ ಸಾಗುತ್ತಿರುವುದನ್ನು ಕಾಣಬಹುದು. ಹೀಗಾಗಿ ಎರಡು ಅವಧಿಯ ಅಂಕಿ ಅಂಶಗಳನ್ನು ಪರಿಗಣಿಸಿ ವಿಶ್ಲೇಷಿಸಿ ತುಲನೆ ಮಾಡುವುದು ಸೂಕ್ತ. ಇಲ್ಲದಿದ್ದಲ್ಲಿ ಓದುಗರಿಗೆ ಪೂರ್ಣ ಚಿತ್ರಣ ಸಿಗದಂತಾಗುತ್ತದೆ.

ಕೆ.ಪ್ರಭಾಕರ, ಬೆಂಗಳೂರು

ತಿನಿಸಿನ ದರ ಕೈಸುಡುತ್ತಿದೆ

ಬಹುತೇಕ ಹೋಟೆಲ್, ಬೇಕರಿಗಳು ಸದ್ದು, ಸೂಚನೆ ಇಲ್ಲದೆ ತಿನಿಸು, ಪಾನೀಯಗಳ ದರ ಹೆಚ್ಚಿಸಿಕೊಂಡಿವೆ. ಮಾತ್ರವಲ್ಲ ಅವುಗಳ ಗಾತ್ರ ಕೂಡ ಕಡಿಮೆಯಾಗಿದೆ. ಅಗಿಯುವ, ನುಂಗುವ ಶ್ರಮ ಶೇಕಡ ಇಪ್ಪತ್ತರಷ್ಟಾದರೂ ಈಗ ಕಡಿಮೆ! ಕೋವಿಡ್ ನಿಯಂತ್ರಣ ನಿಮಿತ್ತದ ಲಾಕ್‌ಡೌನ್ ಬಿಸಿ ಯಾರನ್ನು ತಾನೇ ಬಿಟ್ಟಿದೆ? ಎಲ್ಲರೂ ಕಷ್ಟ, ನಷ್ಟ ಅನುಭವಿಸಿದವರೇ. ಹಾಗಾಗಿ ಗ್ರಾಹಕರ ಹಿತಾಸಕ್ತಿ ಕಡೆಗಣಿಸಬಾರದು. ಆಗ ಅಷ್ಟು ಕಳೆದುಕೊಂಡೆವು, ಈಗ ಸರಿದೂಗಿಸಿಕೊಳ್ಳುತ್ತೇವೆ ಎನ್ನುವ ಧೋರಣೆ ತಕ್ಕುದಲ್ಲ. 1979ರ ಸುಮಾರು. ರಾಜ್ಯದಲ್ಲಿ ಆಗ ಅಧಿಕಾರದಲ್ಲಿದ್ದ ಸರ್ಕಾರ ಎಲ್ಲಾ ಹೋಟೆಲ್, ಬೇಕರಿಗಳು ತಿನಿಸುಗಳ ದರ ಪಟ್ಟಿಯನ್ನು (ತೂಕ ನಮೂದು ಕಡ್ಡಾಯ!) ಪ್ರದರ್ಶಿಸಿರಬೇಕೆಂದು ಆದೇಶಿಸಿತ್ತು. ಹಿಂದೆ ಸಂದ ಸರ್ಕಾರಗಳ ಮಾದರಿಗಳು ಪಕ್ಷಾತೀತವಾಗಿ ಪ್ರಸ್ತುತ ಆಳ್ವಿಕೆಯನ್ನು ಸಕಾರಾತ್ಮಕವಾಗಿ ಪ್ರಭಾವಿಸುವಲ್ಲಿ ಪ್ರಜಾಸತ್ತೆಯ ಸೊಗಡಿದೆ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಮುಜುಗರ ತರುವ ನೌಕರರ ಹೇಳಿಕೆ

'ಎಎವೈ, ಬಿಪಿಎಲ್ ಕಾರ್ಡ್‌ನಲ್ಲಿ ಹೆಸರಿರುವವರು ಅದನ್ನು ರದ್ದುಪಡಿಸಿಕೊಳ್ಳಬೇಕೆಂಬ ಸರ್ಕಾರದ ಆದೇಶ ಶೇ 95ರಷ್ಟು ನೌಕರರಿಗೆ ಗೊತ್ತಿಲ್ಲ, ಹೀಗಾಗಿ ಈ ಕೆಲಸಕ್ಕಾಗಿ ತಮಗೆ 6 ತಿಂಗಳ ಕಾಲಾವಕಾಶ ನೀಡಿ, ದಂಡ ವಸೂಲಿಯಿಂದ ಮುಕ್ತಗೊಳಿಸಬೇಕು' ಎಂದು ಕೆಲವು ಸರ್ಕಾರಿ ನೌಕರರು ಆಗ್ರಹಿಸಿರುವುದು (ಪ್ರ.ವಾ., ಫೆ. 15) ಕೇಳಿದವರಲ್ಲಿ ಮುಜುಗರ ಉಂಟುಮಾಡುವಂತಹದ್ದು. ಇದು, ಕಾನೂನಿನಿಂದ ನುಣುಚಿಕೊಳ್ಳುವ ಉದ್ದೇಶಪೂರ್ವಕ ಆಗ್ರಹವೋ ಅಥವಾ ಸರ್ಕಾರದ ಆದೇಶ ತಿಳಿಯದಂತಹ ದಡ್ಡತನವೋ ತಿಳಿಯುತ್ತಿಲ್ಲ.

ಸರ್ಕಾರಿ ಸಂಬಳ ಮತ್ತು ಎಲ್ಲಾ ಭತ್ಯೆಗಳನ್ನು ಪಡೆದು, ಕಡು ಬಡವರಿಗಾಗಿ ಇಟ್ಟ ಯೋಜನೆಗಳ ಫಲವನ್ನು ಲಪಟಾಯಿಸುವ ಸಿಬ್ಬಂದಿ ಸರ್ವೇ ಸಾಮಾನ್ಯವಾಗಿ ಎಲ್ಲ ಇಲಾಖೆಗಳಲ್ಲಿ ಇದ್ದಾರೆ. ಪಡಿತರ ಚೀಟಿಯನ್ನು ಪರಿಶೀಲಿಸದೇ ಕೊಟ್ಟ ಇಲಾಖೆಯವರನ್ನು ಮತ್ತು ಪಡೆದ ನೌಕರರನ್ನು ನಿರ್ದಾಕ್ಷಿಣ್ಯವಾಗಿ ಕಾನೂನಿನ ಚೌಕಟ್ಟಿಗೆ ಒಳಪಡಿಸಬೇಕು. ಇದರಿಂದ, ನಿಜವಾದ ಬಡವರು ಸರ್ಕಾರದ ಯೋಜನೆಗಳ ಫಲ ಅನುಭವಿಸುವಂತೆ ಆಗುತ್ತದೆ

ರಾ.ಬಾ.ವರದರಾಜನ್, ಬೆಂಗಳೂರು

ಬಡಬಡಿಸಲು ಇದೆಯೇ ಪರವಾನಗಿ?

'ಗೋಷಾ ಮತ್ತು ಪರದಾ ಪದ್ಧತಿ ಅನುಸರಿಸದಿರುವುದೇ ದೇಶದಲ್ಲಿ ಅತ್ಯಾಚಾರ ಪ್ರಕರಣಗಳ ಹೆಚ್ಚಳಕ್ಕೆ ಕಾರಣ' ಎನ್ನುವರು ಜನಪ್ರತಿನಿಧಿಯೊಬ್ಬರು. ಎಂತಹ ಅಪ್ರಬುದ್ಧ ಹೇಳಿಕೆ! ತಾವು ತಪ್ಪೇನೂ ಹೇಳಿಲ್ಲವೆಂದೇ ವಾದಿಸುತ್ತಿದ್ದ ಅವರು, ಹೈಕಮಾಂಡಿನ ತಪರಾಕಿಯಿಂದಾಗಿ ತಮ್ಮ ಹೇಳಿಕೆಗೆ ಕ್ಷಮೆ ಯಾಚಿಸಬೇಕಾಗಿ ಬಂತು. ಕೆಂಪುಕೋಟೆಯಲ್ಲಿ ಕೇಸರಿ ಧ್ವಜವನ್ನು ಹಾರಿಸುತ್ತೇವೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹೇಳಿದ್ದಾರೆ ಎನ್ನಲಾದ ವಿಷಯ ಕುರಿತ ನಿಲುವಳಿ ಸೂಚನೆಯ ಬಗ್ಗೆ ಸದನದಲ್ಲಿ ಕಾವೇರಿದ ಚರ್ಚೆ ನಡೆಯುವ ಸಂದರ್ಭದಲ್ಲಿ, ಕೆಪಿಸಿಸಿ ಅಧ್ಯಕ್ಷರನ್ನುದ್ದೇಶಿಸಿ ಸಚಿವರು, 'ನಿಮ್ಮಪ್ಪ ದೇಶದ್ರೋಹಿ' ಎಂದದ್ದು, ಅವರಿಬ್ಬರನ್ನೂ ಕೈ ಕೈ ಮಿಲಾಯಿಸುವ ಹಂತಕ್ಕೇ ಕೊಂಡೊಯ್ಯುತ್ತದೆ! ಕೆಪಿಸಿಸಿ ಅಧ್ಯಕ್ಷರ ತಂದೆಯ ಬಗ್ಗೆ ತಮಗೆ ಗೌರವವಿರುವುದಾಗಿಯೂ, 'ನಿಮ್ಮಪ್ಪ ದೇಶದ್ರೋಹಿ' ಎಂದು ಆಡುಭಾಷೆಯಲ್ಲಿ ನುಡಿದದ್ದಾಗಿಯೂ ಸಚಿವರು ಸಮಜಾಯಿಷಿ ನೀಡಲು ಮರೆಯುವುದಿಲ್ಲ! ಆಡುಭಾಷೆಯಲ್ಲಾದರೂ, ಆಡಬಾರದ ಮಾತನ್ನು ಆಡಬಹುದೇ?

ಜನರಿಂದ ಆಯ್ಕೆಯಾಗಿರುವುದರಿಂದ, ಬಾಯಿಗೆ ಬಂದದ್ದನ್ನೆಲ್ಲಾ ಬಡಬಡಿಸಲು ತಮಗೆ ಪರವಾನಗಿ ಇದೆಯೆಂಬ ಭಾವನೆ ನಮ್ಮ ನಾಯಕರಲ್ಲಿ ಮನೆ ಮಾಡಿದಂತಿದೆ. 2012ರಿಂದ 2021ರ ಅವಧಿಯಲ್ಲಿ, ವಾರ್ಷಿಕ ಸರಾಸರಿ ಅಧಿವೇಶನ ನಡೆದಿರುವುದೇ ಸುಮಾರು 39 ದಿನಗಳು. ಅಷ್ಟು ದಿನಗಳನ್ನಾದರೂ ರಾಜ್ಯದ ಅಭಿವೃದ್ಧಿ ಮತ್ತು ಜನರ ಕುಂದುಕೊರತೆ ನಿವಾರಿಸುವ ಕುರಿತ ಗುಣಮಟ್ಟದ ಚರ್ಚೆಗೆ ಬಳಸಿಕೊಳ್ಳದಿದ್ದರೆ ಹೇಗೆ? ಬರಬರುತ್ತಾ, ಸದನ ನಡೆಸುವುದೇ ವೈಯಕ್ತಿಕ ಆರೋಪ-ಪ್ರತ್ಯಾರೋಪಗಳಿಗಾಗಿ, ಧರಣಿ ಮತ್ತು ಸಭಾತ್ಯಾಗ ನಡೆಸುವುದಕ್ಕಾಗಿ ಎಂಬಂತಾಗಿ ಬಿಟ್ಟಿದೆ. 'ಮತಿಗೆಟ್ಟವರಂತಾಡುವ ನಮ್ಮನ್ನಾಳುವವರಿಗೆ ಸನ್ಮತಿ ನೀಡು, ದೇವಾ' ಎಂದು ಮತದಾರರಾದ ನಾವು ಭಗವಂತನಲ್ಲಿ ಮೊರೆಯಿಡೋಣ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭದ್ರಾ ಜಲಾಶಯ

‘ಭದ್ರಾ ಮೇಲ್ದಂಡೆ’ಗೆ ರಾಷ್ಟ್ರೀಯ ಮಾನ್ಯತೆ ಗರಿ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಮಧ್ಯಕರ್ನಾಟಕಕ್ಕೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ಸಿಗಲು ಇನ್ನೊಂದು ಮೆಟ್ಟಿಲು ಬಾಕಿ ಇದೆ. ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಮಾತ್ರ ಬಾಕಿ ಇದೆ. ರಾಷ್ಟ್ರೀಯ ಮಾನ್ಯತೆ ಪಡೆದ ರಾಜ್ಯದ ಮೊದಲ ನೀರಾವರಿ ಯೋಜನೆ ಎಂಬ ಹಿರಿಮೆಗೆ ‘ಭದ್ರಾ ಮೇಲ್ದಂಡೆ’ ಪಾತ್ರವಾಗಲಿದೆ. ಹನಿ ನೀರಾವರಿ ಮೂಲಕ ಸೌಲಭ್ಯ ಕಲ್ಪಿಸುವ ಬೃಹತ್ ಗಾತ್ರದ ನೀರಾವರಿ ಯೋಜನೆ ಇದಾಗಿದೆ. ಇತರ ರಾಜ್ಯಗಳ ನೀರಾವರಿ ಯೋಜನೆಗಳಿಗೂ ಇದು ಮಾದರಿಯಾಗಲಿದೆ.

ವಾಣಿವಿಲಾಸ (ವಿ.ವಿ.) ಸಾಗರ ಜಲಾಶಯ ಶತಮಾನದ ಹಿಂದೆ ನಿರ್ಮಾಣವಾದರೂ ಚಿತ್ರದುರ್ಗ ಜಿಲ್ಲೆ ಬರದ ಹಣೆಪಟ್ಟಿಯಿಂದ ಹೊರಬರಲು ಸಾಧ್ಯವಾಗಿಲ್ಲ. ಬದಲಾದ ಹವಾಮಾನ, ಕಾಲಕಾಲಕ್ಕೆ ಸರಿಯಾಗಿ ಮಳೆ ಆಗದಿರುವುದರಿಂದ ವಿ.ವಿ.ಸಾಗರ ಜಲಾಶಯ ಭರ್ತಿಯಾಗಿದ್ದು ವಿರಳ. ಮಳೆಯಾಶ್ರಿತ ಕೃಷಿಯನ್ನೇ ನಂಬಿಕೊಂಡ ರೈತರ ಬದುಕು ತೀರ ದುರ್ಬರವೆಂಬುದು ಸರ್ಕಾರಕ್ಕೆ ಮನವರಿಕೆಯಾದ ಬಳಿಕ ರೂಪುಗೊಂಡ ಯೋಜನೆಯೇ ‘ಭದ್ರಾ ಮೇಲ್ದಂಡೆ’.

ಏನಿದು ಯೋಜನೆ?: ಚಿಕ್ಕಮಗಳೂರು–ಶಿವಮೊಗ್ಗ ಜಿಲ್ಲೆಯಲ್ಲಿರುವ ಭದ್ರಾ ಜಲಾಶಯದಿಂದ ಮಧ್ಯಕರ್ನಾಟಕಕ್ಕೆ ನೀರುಣಿಸುವುದೇ ‘ಭದ್ರಾ ಮೇಲ್ದಂಡೆ’ ಉದ್ದೇಶ. ವರ್ಷಕ್ಕೆ 29.9 ಟಿಎಂಸಿ ಅಡಿ ನೀರನ್ನು ಮೇಲ್ದಂಡೆಗೆ ಮೀಸಲಿಟ್ಟು ಯೋಜನೆ ರೂಪಿಸಲಾಗಿದೆ. ಹೆಸರು ಭದ್ರಾ ಮೇಲ್ದಂಡೆ ಎಂದಿದ್ದರೂ ತುಂಗಾ ನದಿಯ ಪಾಲು ಹೆಚ್ಚಿದೆ.

ಶಿವಮೊಗ್ಗ ಜಿಲ್ಲೆಯ ಗಾಜನೂರು ಸಮೀಪದ ತುಂಗಾ ಜಲಾಶಯದ ನೀರನ್ನು ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಸಮೀಪದ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ. ಪ್ರತಿ ವರ್ಷ ಜೂನ್‌ನಿಂದ ಅಕ್ಟೋಬರ್‌ವರೆಗೆ ತುಂಗಾ ಜಲಾಶಯದಿಂದ 17.4 ಟಿಎಂಸಿ ಅಡಿ ನೀರನ್ನು ಮೇಲೆತ್ತಿ ಭದ್ರಾ ಜಲಾಶಯಕ್ಕೆ ತರುವ ಸಾಹಸಮಯ ಕೆಲಸ ಯೋಜನೆಯ ಭಾಗವಾಗಿದೆ. ಭದ್ರಾ ಜಲಾಶಯದಿಂದ 12.5 ಟಿಎಂಸಿ ಅಡಿ ನೀರನ್ನು ‘ಭದ್ರಾ ಮೇಲ್ದಂಡೆ’ಗೆ ಹರಿಸಲಾಗುತ್ತದೆ.

ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು ಇದರ ಉದ್ದೇಶ. ವಿ.ವಿ. ಸಾಗರ ಜಲಾಶಯಕ್ಕೂ 2.5 ಟಿಎಂಸಿ ಅಡಿ ನೀರನ್ನು ಒದಗಿಸಲಾಗುತ್ತದೆ. ನಾಲ್ಕು ಜಿಲ್ಲೆಯ 5.57 ಲಕ್ಷ ಎಕರೆಗೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವ ಬಹುದೊಡ್ಡ ಯೋಜನೆ ಇದಾಗಿದೆ. 2,25,515 ಹೆಕ್ಟೇರ್ ಪ್ರದೇಶ ಹಸನಾಗಲಿದ್ದು, 367 ಕೆರೆಗಳಿಗೆ ಶೇ 50ರಷ್ಟು ನೀರು ತುಂಬಿಸಲಾಗುತ್ತದೆ.

ಯೋಜನೆ ರೂಪುಗೊಂಡಿದ್ದು ಹೀಗೆ...: 2003ರಲ್ಲಿ ರೂಪುಗೊಂಡ ಯೋಜನೆಗೆ ₹2 ಸಾವಿರ ಕೋಟಿ ಮೀಸಲಿಡಲಾಯಿತು. ನೀರಾವರಿ ತಜ್ಞ ಕೆ.ಸಿ.ರೆಡ್ಡಿ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಮಿತಿ ಅಧ್ಯಯನ ನಡೆಸಿ 2004ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತು. ಪರಿಷ್ಕೃತ ಯೋಜನೆಗೆ ಒಪ್ಪಿಗೆ ಸೂಚಿಸಿದ ರಾಜ್ಯ ಸರ್ಕಾರ, 2008ರಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆ ನೀಡಿತು. 2015ರಲ್ಲಿ ಮತ್ತೆ ಪರಿಷ್ಕರಣೆ ಮಾಡಿ ₹12,340 ಕೋಟಿ ಅಂದಾಜು ವೆಚ್ಚ ತಯಾರಿಸಲಾಯಿತು. ರಾಷ್ಟ್ರೀಯ ಮಾನ್ಯತೆ ಪಡೆಯುವ ಹೊಸ್ತಿಲಲ್ಲಿ ಯೋಜನಾ ವೆಚ್ಚವನ್ನು ₹21 ಸಾವಿರ ಕೋಟಿಗೆ ಏರಿಕೆ ಮಾಡಲಾಯಿತು. ಯೋಜನೆ ಆರಂಭವಾದಾಗಿನಿಂದ ಈವರೆಗೆ ₹4,866 ಕೋಟಿ ವೆಚ್ಚವಾಗಿದೆ.

ಬೃಹತ್ ನೀರಾವರಿ ಯೋಜನೆ: ಹೊಸ ಜಲಾಶಯ ನಿರ್ಮಿಸದೇ ಇಷ್ಟೊಂದು ಪ್ರಮಾಣದ ನೀರು ಸದ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ತುಂಗಾದಿಂದ ಭದ್ರಾ ಜಲಾಶಯಕ್ಕೆ ನೀರು ಹರಿಸುವ ಕಾಲುವೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲ್ಲೂಕಿನಲ್ಲಿ ಹಾದು ಹೋಗುತ್ತದೆ. ಕಣಬೂರು, ಕುಸಬೂರು ಗ್ರಾಮಗಳ ಬಳಿ ಎರಡು ಹಂತದಲ್ಲಿ ನೀರು ಲಿಫ್ಟ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.

ಭದ್ರಾ ಜಲಾಶಯದಿಂದ ಮೇಲ್ದಂಡೆ ನಾಲೆಯ ಮೂಲಕ ಹರಿಯುವ ನೀರನ್ನು ಮತ್ತೆ ಎರಡು ಸ್ಥಳಗಳಲ್ಲಿ ಲಿಫ್ಟ್ ಮಾಡುವ ಅಗತ್ಯವಿದೆ. ತರೀಕೆರೆ ತಾಲ್ಲೂಕಿನ ಶಾಂತಿಪುರ ಹಾಗೂ ಬೆಟ್ಟದತಾವರೆಕೆರೆ ಗ್ರಾಮಗಳ ಬಳಿ ಪಂಪ್‌ಹೌಸ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಎರಡೂ ಕಡೆ ನೀರನ್ನು 45 ಮೀಟರ್ ಮೇಲೆತ್ತಿ ನಾಲೆಗೆ ಹರಿಸಲಾಗುತ್ತದೆ. ಪ್ರತಿ ಪಂಪ್‌ಹೌಸ್‌ನಲ್ಲಿ ನಾಲ್ಕು ಮೋಟರುಗಳಿದ್ದು, ಪ್ರತಿ ಮೋಟರು 750 ಕ್ಯುಸೆಕ್ ನೀರು ಮೇಲೆತ್ತುವ ಸಾಮರ್ಥ್ಯ ಹೊಂದಿದೆ. ಉಳಿದಂತೆ ಗುರುತ್ವಾಕರ್ಷಣ ಶಕ್ತಿಯ ಬಲದಿಂದ ನೀರು ಹರಿದು ಹೋಗುವಂತೆ ಯೋಜನೆ ಸಿದ್ಧಪಡಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ಸಮೀಪ ತುಮಕೂರು ಹಾಗೂ ಚಿತ್ರದುರ್ಗ ಶಾಖಾ ಕಾಲುವೆಗಳು ಕವಲೊಡೆಯುತ್ತವೆ. ಚಿತ್ರದುರ್ಗ ಶಾಖಾ ಕಾಲುವೆಗೆ 11.96 ಟಿಎಂಸಿ ಅಡಿ ನೀರು ಹಾಗೂ ತುಮಕೂರು ಶಾಖಾ ಕಾಲುವೆಗೆ 9.4 ಟಿಎಂಸಿ ಅಡಿ ನೀರು ಹಂಚಿಕೆಯಾಗಿದೆ. ಹಿರಿಯೂರು ತಾಲ್ಲೂಕಿನ ವಿ.ವಿ.ಸಾಗರ ಜಲಾಶಯಕ್ಕೆ ತುಮಕೂರು ಶಾಖಾ ಕಾಲುವೆ ಮೂಲಕ ನೀರು ಹರಿಸಲಾಗುವುದು. 159 ಕಿ.ಮೀ ಉದ್ದದ ತುಮಕೂರು ಶಾಖಾ ಕಾಲುವೆ ನಿರ್ಮಾಣ ಕಾಮಗಾರಿ ತೀರಾ ನಿಧಾನಗತಿಯಲ್ಲಿ ಸಾಗುತ್ತಿದೆ. ಹಾಗಾಗಿ, ಪರ್ಯಾಯ ಮಾರ್ಗದ ಮೂಲಕ ವಿ.ವಿ. ಸಾಗರಕ್ಕೆ ಭದ್ರಾ ನೀರು ಹರಿಸಲಾಗುತ್ತಿದೆ. ಹಲವು ದಶಕಗಳ ಬಳಿಕ ವಿ.ವಿ.ಸಾಗರ ಭರ್ತಿಯಾಗಿದೆ.

ಅಜ್ಜಂಪುರದ ಬಳಿ ಏಳು ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಿಸಲಾಗಿದೆ. ಹೇಮಾವತಿ ನಾಲೆ ಬಳಿಕ ಅತಿ ಉದ್ದದ ಸುರಂಗ ನಿರ್ಮಿಸಿದ್ದು ಭದ್ರಾ ಮೇಲ್ದಂಡೆಗೆ. ಇದು ರಾಜ್ಯದ ಎರಡನೇ ಅತಿ ದೊಡ್ಡ ನೀರಾವರಿ ಸುರಂಗ ಮಾರ್ಗವಾಗಿದೆ. 8 ಮೀಟರ್ ಅಗಲದ ಸುರಂಗ ನಾಲೆ ಭೂಮಿಯಿಂದ 150 ಅಡಿ ಆಳದಲ್ಲಿದೆ. ಸುರಂಗ ನಿರ್ಮಾಣ ಕಾಮಗಾರಿ ಎರಡೂವರೆ ವರ್ಷ ನಡೆದಿದೆ.

ಭದ್ರಾ ಜಲಾಶಯದಿಂದ ತರೀಕೆರೆ ತಾಲ್ಲೂಕುವರೆಗಿನ 46 ಕಿ.ಮೀ. ಉದ್ದದ ನಾಲೆ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 134 ಕಿ.ಮೀ. ಉದ್ದದ ಚಿತ್ರದುರ್ಗ ಶಾಖಾ ಕಾಲುವೆ ಕಾಮಗಾರಿ ನಡೆಯುತ್ತಿದೆ. ಇದರಲ್ಲಿ 61 ಕಿ.ಮೀ. ಕಾಲುವೆ ನಿರ್ಮಾಣ ಬಹುತೇಕ ಪೂರ್ಣಗೊಂಡಿದೆ. ಒಂದೆಡೆ 1.9 ಕಿ.ಮೀ. ಹಾಗೂ ಮತ್ತೊಂದೆಡೆ 400 ಮೀಟರ್ ನಾಲೆ ಮಾತ್ರ ಬಾಕಿ ಇದೆ. ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ತಾಲ್ಲೂಕಿನ ಉಪ ಕಾಲುವೆ ನಿರ್ಮಾಣ ಕಾಮಗಾರಿಯೂ ಪ್ರಗತಿಯಲ್ಲಿದೆ. ಚಳ್ಳಕೆರೆ, ಪಾವಗಡ, ಶಿರಾ, ಜಗಳೂರು, ಮೊಳಕಾಲ್ಮುರು ತಾಲ್ಲೂಕು ವ್ಯಾಪ್ತಿಯಲ್ಲಿ ಭೂಸ್ವಾಧೀನ ನಡೆಯಬೇಕಿದೆ.

13 ವರ್ಷ ಶೇ 40 ಕಾಮಗಾರಿ: ಕಾಮಗಾರಿಗೆ ಚಾಲನೆ ನೀಡಿ 13 ವರ್ಷ ಕಳೆದರೂ ಅರ್ಧದಷ್ಟು ಕಾಮಗಾರಿ ಕೂಡ ಪೂರ್ಣಗೊಂಡಿಲ್ಲ. 2008ರಿಂದ ಈವರೆಗೆ ಶೇ 40ರಷ್ಟು ಕಾಮಗಾರಿ ಮಾತ್ರ ಮುಗಿದಿದೆ. ಇನ್ನೂ ಶೇ 60ರಷ್ಟು ಕಾಮಗಾರಿ ನಡೆಯಬೇಕಿದೆ. ಅನುದಾನ ಹಂಚಿಕೆ ಹಾಗೂ ತಾಂತ್ರಿಕ ಕಾರಣಕ್ಕೆ ಯೋಜನೆ ತ್ವರಿತಗತಿ ಪಡೆಯಲು ಸಾಧ್ಯವಾಗಿಲ್ಲ.

ಈ ಯೋಜನೆಗೆ ಒಟ್ಟು 7,012 ಎಕರೆ ಭೂಸ್ವಾಧೀನ ಮಾಡಿಕೊಳ್ಳಬೇಕಿದೆ. ಇದರಲ್ಲಿ 3,500 ಎಕರೆ ಭೂಸ್ವಾಧೀನವಾಗಿದ್ದು, ಇನ್ನೂ 3,512 ಎಕರೆ ಭೂಸ್ವಾಧೀನ ಬಾಕಿ ಇದೆ. ಈ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬದಿಂದ ಇಡೀ ಯೋಜನೆ ಕುಂಟುತ್ತ ಸಾಗುತ್ತಿದೆ. ಅರಣ್ಯ ಭೂಮಿ, ಅಮೃತ್ ಮಹಲ್ ಕಾವಲು ಹಾಗೂ ರೈತರ ಜಮೀನು ವಶಕ್ಕೆ ಸಂಬಂಧಿಸಿದ ಹಲವು ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ.

ತುಂಗಾ ಜಲಾಶಯ ಮತ್ತು ಭದ್ರಾ ಜಲಾಶಯದ ನಡುವೆ 11 ಕಿ.ಮೀ. ಉದ್ದದ ಕಾಲುವೆ ನಿರ್ಮಾಣಕ್ಕೆ 2008ರಲ್ಲೇ ಗುತ್ತಿಗೆ ನೀಡಲಾಗಿದೆ. ಪಶ್ಚಿಮಘಟ್ಟದ ಅರಣ್ಯ ಪ್ರದೇಶದಲ್ಲಿ ಕಾಮಗಾರಿ ಕೈಗೊಳ್ಳಬೇಕಿದೆ. ಪರಿಸರ ಸೂಕ್ಷ್ಮ ಪ್ರದೇಶವಾಗಿರುವ ಕಾರಣಕ್ಕೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಅನುಮತಿ ಕಡ್ಡಾಯ. ಈ ಅನುಮತಿ ಪಡೆಯಲು ಎಂಟು ವರ್ಷ ಹಿಡಿದಿದೆ. 2016ರಿಂದ ಕಾಮಗಾರಿ ಆರಂಭವಾದರೂ ಇನ್ನೂ ಪೂರ್ಣಗೊಂಡಿಲ್ಲ.

ತಾಂತ್ರಿಕ ತೊಡಕುಗಳು ನಿವಾರಣೆಯಾಗಿವೆ. ಕೆಲವೇ ದಿನಗಳಲ್ಲಿ ಕೇಂದ್ರ ಸಚಿವ ಸಂಪುಟದ ಎದುರು ಚರ್ಚೆಗೆ ಬರಲಿದೆ. ಇದೇ ಮೊದಲ ಬಾರಿಗೆ ರಾಜ್ಯದ ನೀರಾವರಿ ಯೋಜನೆಯೊಂದು ರಾಷ್ಟ್ರೀಯ ಮಾನ್ಯತೆಗೆ ಭಾಜನವಾಗುತ್ತಿದೆ

ಎ.ನಾರಾಯಣಸ್ವಾಮಿ, ಕೇಂದ್ರ ಸಚಿವ

ಬೃಹತ್ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವಷ್ಟು ಆರ್ಥಿಕ ಸುಸ್ಥಿತಿಯಲ್ಲಿ ರಾಜ್ಯವಿಲ್ಲ. ರಾಷ್ಟ್ರೀಯ ಮಾನ್ಯತೆಗೆ ಎದುರು ನೋಡುತ್ತಿದ್ದ ದಿನ ಸಮೀಪಿಸಿರುವುದು ಸಂತಸದ ಸಂಗತಿ. ಯೋಜನೆ ಅನುಷ್ಠಾನ ತ್ವರಿತಗೊಳಿಸಬೇಕು

ಪಿ.ಕೋದಂಡರಾಮಯ್ಯ

ಅಧ್ಯಕ್ಷ, ನೀರಾವರಿ ಹೋರಾಟ ಸಮಿತಿ

ಆಂಧ್ರ ಪ್ರದೇಶದ ಆಕ್ಷೇಪ ಏನು?

ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ಪಡೆದುಕೊಳ್ಳುವ ಪ್ರಯತ್ನ ನಡೆದಿದ್ದು ತೀರಾ ಇತ್ತೀಚೆಗೆ. 2020ರ ಡಿಸೆಂಬರ್‌ನಲ್ಲಿ ಕೇಂದ್ರ ಜಲಶಕ್ತಿ ಆಯೋಗದ ತಾಂತ್ರಿಕ ಸಮಿತಿ ಸಕಾರಾತ್ಮಕವಾಗಿ ಸ್ಪಂದಿಸಿತು. ಕೇಂದ್ರ ಜಲಶಕ್ತಿ ಆಯೋಗ ಉನ್ನತಾಧಿಕಾರ ಸಮಿತಿ ಎದುರು ಯೋಜನೆ ಚರ್ಚೆಗೆ ಬಂದಾಗ ಆಂಧ್ರಪ್ರದೇಶ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತು.

‘ಭದ್ರಾ ಮೇಲ್ದಂಡೆ ಯೋಜನೆ ಸಂಪೂರ್ಣವಾಗಿ ಅನುಷ್ಠಾನಗೊಂಡರೆ ಹೊಸಪೇಟೆಯ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ಕಡಿಮೆಯಾಗಲಿದೆ. ಆಂಧ್ರಪ್ರದೇಶದ ರಾಜೋಳಿಬಂಡಾ ತಿರುವು ಯೋಜನೆ, ಕರ್ನೂಲ್–ಕಡಪಾ ಕಾಲುವೆ, ಶ್ರೀಶೈಲಂ ಯೋಜನೆಯ ಮೇಲೆ ಪರಿಣಾಮ ಉಂಟಾಗಲಿದೆ. ನೀರಿನ ಹಂಚಿಕೆಯೇ ಇಲ್ಲದ ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ಹೇಗೆ ನೀಡುತ್ತೀರಿ?’ ಎಂಬುದು ಆಂಧ್ರಪ್ರದೇಶದ ತಕರಾರು. ಈ ಆಕ್ಷೇಪಕ್ಕೆ ಕೇಂದ್ರ ಜಲಶಕ್ತಿ ಆಯೋಗ ಉನ್ನತಾಧಿಕಾರ ಸಮಿತಿ ಮನ್ನಣೆ ನೀಡಿಲ್ಲ.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ಸಮೀಪ ಸುರಂಗದ ಹೊರಗೆ ನಿರ್ಮಾಣವಾಗಿರುವ ಭದ್ರಾ ಮೇಲ್ದಂಡೆ ನಾಲೆ

ರಾಷ್ಟ್ರೀಯ ಮಾನ್ಯತೆಯ ಪ್ರಯೋಜನಗಳೇನು?

- ಭದ್ರಾ ಮೇಲ್ದಂಡೆಗೆ ಸಂಬಂಧಿಸಿದ ಅಂತರರಾಜ್ಯ ನೀರು ಹಂಚಿಕೆಯ ವಿವಾದಕ್ಕೆ ತೆರೆಬಿದ್ದಿದೆ
- ನೀರಾವರಿ ಯೋಜನೆಯ ಒಟ್ಟು ವೆಚ್ಚದ ಶೇ 60ರಷ್ಟನ್ನು ಕೇಂದ್ರ ಸರ್ಕಾರ ಭರಿಸುತ್ತದೆ
- ಯೋಜನಾ ವೆಚ್ಚದ ₹ 21,000 ಕೋಟಿಯಲ್ಲಿ ಕೇಂದ್ರ ಸರ್ಕಾರ ₹ 12,500 ಕೋಟಿ ಅನುದಾನ ನೀಡಲಿದೆ
- ಯೋಜನೆಯ ಅನುಷ್ಠಾನಕ್ಕೆ ಕಾಲಮಿತಿ ನಿಗದಿಯಾಗಲಿದ್ದು, ಕಾಮಗಾರಿ ವೇಗ ಪಡೆಯಲಿದೆ
- ರಾಜ್ಯ ಸರ್ಕಾರದ ಮೇಲಿನ ಆರ್ಥಿಕ ಹೊರೆ ಕಡಿಮೆ ಆಗಲಿದೆ. ಕಾಮಗಾರಿಯ ವೇಗಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಿದೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 48

ಓಂಕಾರ ಮತ್ತು ಲಿಂಗಗಳ ಮಹಾತ್ಮೆ

ಈಗ ಸೂತಮಹಾಮುನಿಯು ಓಂಕಾರ ಮತ್ತದರ ಆರು ಲಿಂಗಗಳ ಮಹಾತ್ಮೆ ಮತ್ತು ಶಿವಭಕ್ತರು ಮಾಡಬೇಕಾದ ಪೂಜಾಕ್ರಮ ಹೇಳುತ್ತಾನೆ.

ಓಂಕಾರದ ಮತ್ತೊಂದು ಅರ್ಥವಾದ ‘ಪ್ರಣವ’ದಲ್ಲಿ ’ಪ್ರ’ ಎಂದರೆ ಪ್ರಕೃತಿ ಅಥವ ಸಂಸಾರವೆಂದು ಅರ್ಥ. ‘ಣವ’ ಎಂದರೆ ಆ ಸಂಸಾರ ಸಮುದ್ರವನ್ನು ದಾಟಿಸುವಂತಹ ಹೊಸ ನೌಕೆಯೆಂದು ಅರ್ಥ. ಒಟ್ಟಿನಲ್ಲಿ ಸಂಸಾರಸಾಗರವನ್ನು ದಾಟಿಸುವುದು ಎಂದು ಪ್ರಣವದ ಅರ್ಥ. ಹಾಗೇ, ‘ಪ್ರ’ ಎಂದರೆ ಪ್ರಪಂಚ. ‘ನ’ ಎಂದರೆ ಇಲ್ಲ. ‘ವಃ’ ಎಂದರೆ ಬ್ರಹ್ಮಸ್ವರೂಪವಾದ ಜೀವನಿಗೆ ಎಂದು ಅರ್ಥ. ಅಂದರೆ ನಮ್ಮ ಸ್ವರೂಪವಾದ ಬ್ರಹ್ಮವೊಂದೇ ಇರುವುದು. ಅದು ಸತ್ಯವಾದುದು. ಈ ಪ್ರಪಂಚವು ನಿಜವಾಗಿ ಇಲ್ಲ, ಅದು ಶೂನ್ಯಾವಸ್ಥೆ. ಅದು ನಮ್ಮ ಅಜ್ಞಾನದಿಂದ ಕಾಣಿಸುತ್ತಲಿರುವ ಭ್ರಮೆ. ಈ ಭ್ರಾಮಕ ಪ್ರಪಂಚದಿಂದ ಮುಕ್ತಿ ಪಡೆಯುವುದು ಪ್ರಣವದ ಅರ್ಥ. ಅಂದರೆ, ನಾವು ಭ್ರಮೆಯ ಪ್ರಪಂಚದಿಂದ ಹೊರಬರುವುದೇ ಮುಕ್ತಿ. ಇದನ್ನೇ ‘ಪ್ರಣವ’ ಎಂದು ಹೇಳಲಾಗುತ್ತದೆ.

ಪ್ರಣವ ಅಂದರೆ ಓಂಕಾರ. ಪ್ರಣವಮಂತ್ರವನ್ನು ಜಪಿಸುವ ಮತ್ತು ಸ್ವಸ್ವರೂಪವನ್ನು ಪೂಜಿಸುವ ಯೋಗಿಗಳಿಗೆ ಸಕಲ ಕರ್ಮಗಳೂ ನಾಶವಾಗುವುದು. ಇಂಥ ಶಿವಭಕ್ತರಿಗೆ ಹೊಸದಾಗಿ ದಿವ್ಯ ಬ್ರಹ್ಮಜ್ಞಾನ ಸಿಗುತ್ತದೆ. ಅಲ್ಲದೆ, ಮಾಯೆಯ ಸಂಬಂಧವಿಲ್ಲದ ನಿರ್ವಿಕಾರವಾದ, ವ್ಯಾಪಕವಾದ ಮತ್ತು ಶುದ್ಧವಾದ ಸ್ವರೂಪವುಳ್ಳಂತಹ ಬ್ರಹ್ಮವಸ್ತುವನ್ನು ಸೃಷ್ಟಿಸುತ್ತದೆ ಎಂದು ಪ್ರಣವದ ಅರ್ಥವನ್ನು ವಿವರಿಸಲಾಗಿದೆ. ಪ್ರಣವದಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಎಂಬ ಎರಡು ವಿಧವಿದೆ. ಸೂಕ್ಷ್ಮಪ್ರಣವ ಎಂದರೆ ಒಂದೇ ಓಂಕಾರವೆಂಬ ಅಕ್ಷರವುಳ್ಳದ್ದು. ಸ್ಥೂಲಪ್ರಣವ ಎಂದರೆ ಐದು ಅಕ್ಷರಗಳುಳ್ಳದ್ದು. ಸೂಕ್ಷ್ಮಪ್ರಣವದಲ್ಲಿ ಅವ್ಯಕ್ತವಾದ ಐದು ಅಕ್ಷರಗಳಿದ್ದರೆ, ಸ್ಥೂಲದಲ್ಲಿ ವ್ಯಕ್ತವಾದ ಐದು ಅಕ್ಷರಗಳಿವೆ. ಜೀವನ್ಮುಕ್ತಿ ಬಯಸುವವನಿಗೆ ಸರ್ವಶ್ರೇಷ್ಠವಾದ ಸೂಕ್ಷ್ಮಪ್ರಣವ ಪ್ರಶಸ್ತವಾದುದು. ಆತ ಮರಣಪರ್ಯಂತವಾಗಿ ಪ್ರಣವವನ್ನು ಉಚ್ಚರಿಸುತ್ತಾ ಅದರರ್ಥವನ್ನು ಅನುಸಂಧಾನ (ಸ್ಮರಣೆ) ಮಾಡಿದರೆ ಶಿವನನ್ನು ಸೇರುವನು. ಕೇವಲ ಅರ್ಥವನ್ನು ಸ್ಮರಿಸದೆ, ಮಂತ್ರವನ್ನು ಜಪಿಸಿದರೆ ಯೋಗವು ಲಭಿಸುವುದು.

ಸೂಕ್ಷ್ಮಪ್ರಣವದಲ್ಲಿ ಹ್ರಸ್ವ ಮತ್ತು ದೀರ್ಘವೆಂದು ಎರಡು ವಿಧವಿದೆ. ಅಕಾರ ಉಕಾರ ಮಕಾರಗಳೊಡನೆ ಬಿಂದು–ನಾದಗಳು ಕೂಡಿದ ಓಂಕಾರವು ದೀರ್ಘಪ್ರಣವ. ಇದನ್ನು ಯೋಗಿಗಳು ಸದಾ ಹೃದಯದಲ್ಲಿ ಧ್ಯಾನಿಸುವರು. ಶಿವ, ಶಕ್ತಿ ಮತ್ತು ಶಿವಶಕ್ತಿ–ಐಕ್ಯ ಎಂಬ ಮೂರು ವಸ್ತುಗಳ ಸ್ವರೂಪವುಳ್ಳ ಮಕಾರವು ಹ್ರಸ್ವಪ್ರಣವ. ಸಕಲ ಪಾಪವು ಕ್ಷಯವಾಗಬೇಕೆಂದು ಅಪೇಕ್ಷಿಸುವವರು ಮೂರು ವಸ್ತುಸ್ವರೂಪವಾದ ಹ್ರಸ್ವಪ್ರಣವವನ್ನು ಜಪಿಸಬೇಕು.

ಭೂಮಿ, ವಾಯು, ಸುವರ್ಣ, ಸಾಲ, ಸ್ವರ್ಗ, ಶಬ್ದ ಮೊದಲಾದ ಹತ್ತು ಇಂದ್ರಿಯ ವಿಷಯಗಳು ಹತ್ತು ದಿಕ್ಕುಗಳು. ಇವುಗಳಿಗೆ ಪ್ರವೃತ್ತಗಳೆಂದು ಹೆಸರು. ಗೃಹಸ್ಥರು ಹ್ರಸ್ವಪ್ರಣವವನ್ನೇ ಪಠಿಸಬೇಕು. ವಿರಕ್ತರಾದ ಸನ್ಯಾಸಿಗಳು ದೀರ್ಘಪ್ರಣವವನ್ನು ಉಚ್ಚರಿಸಬೇಕು. ವ್ಯಾಹೃತಿಯೇ ಮುಂತಾದ ಮಂತ್ರಗಳಲ್ಲಿ ಶಬ್ದಕಲೆಗಳಿಂದ ಕೂಡಿರುವ ಪ್ರಣವವನ್ನು ಉಚ್ಚರಿಸಬೇಕು. ವೇದಪಾರಾಯಣದ ಆದಿಯಲ್ಲೂ ಸಂಧ್ಯಾವಂದನೆಗಳಲ್ಲಿಯೂ ದೀರ್ಘಪ್ರಣವವನ್ನು ಉಚ್ಚರಿಸಬೇಕು. ಒಂಬತ್ತು ಕೋಟಿ ಪ್ರಣವಜಪಗಳನ್ನು ಮಾಡಿದ ಪುರುಷನು ಶುದ್ಧನಾಗುವನು. ಮತ್ತೆ ಒಂಬತ್ತು ಕೋಟಿ ಜಪವನ್ನು ಮಾಡಿದರೆ ಪೃಥ್ವಿಯನ್ನು ಜಯಿಸಬಹುದು. ಮತ್ತೊಮ್ಮೆ ಒಂಬತ್ತು ಕೋಟಿ ಜಪಗಳಿಂದ ವಾಯುಜಯವನ್ನು ಪಡೆಯುವನು. ಈ ರೀತಿ ನೂರೆಂಟು ಕೋಟಿ ಪ್ರಣವಜಪಗಳನ್ನು ಮಾಡಿದರೆ, ಶುದ್ಧ ಯೋಗವನ್ನು ಪಡೆಯುವನು. ಶುದ್ಧಯೋಗವನ್ನು ಪಡೆದವನು ಜೀವನ್ಮುಕ್ತನಾಗುವನು.

ಓಂಕಾರರೂಪಿಯಾದ ಶಿವನನ್ನು ಸದಾ ಜಪಿಸುತ್ತಾ ಮತ್ತು ಧ್ಯಾನಿಸುತ್ತಾ ಸಮಾಧಿನಿಷ್ಠನಾಗುವ ಮಹಾಯೋಗಿಯು ಶಿವನೇ ಆಗುವನು ಋಷಿ, ಛಂದಸ್ಸು ಮತ್ತು ದೇವತೆಗಳನ್ನು ದೇಹದಲ್ಲಿ ವಿನ್ಯಾಸಮಾಡಿ ಪುನಃ ಜಪಿಸಬೇಕು. ಮಾತೃಕಾಕ್ಷರಗಳಿಂದ ಕೂಡಿದ ಅಂಗನ್ಯಾಸ, ಕರನ್ಯಾಸಗಳೊಡನೆ ಪ್ರಣವವನ್ನು ದೇಹದಲ್ಲಿ ವಿನ್ಯಾಸ ಮಾಡಿದರೆ ಋಷಿಯಾಗುವನು. ಹದಿನಾರು ಉಪಚಾರಗಳಿಂದ ಶಿವಯೋಗಿಗಳನ್ನು ಪೂಜಿಸಿದ ಶುದ್ಧವಾದ ನರನು ಸಾಲೋಕ್ಯ ಸೇರಿ ಮುಕ್ತಿಯನ್ನು ಪಡೆಯುವನು ಎಂದು ಸೂತಮುನಿಯು ಪ್ರಯಾಗದ ಋಷಿಗಳಿಗೆ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹುಡುಗನೊಬ್ಬ ಹುಡುಗಿಯ ಕತ್ತನ್ನು ಸೀಳಿ ಸಾಯಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇಸ್ಲಾಂ ಧರ್ಮಕ್ಕೆ ಮತಾಂತರ ಆಗಲು ಒಪ್ಪದ ಹುಡುಗಿಯನ್ನು ಸಾಯಿಸಲಾಗಿದೆ ಎಂದು ವಿಡಿಯೊ ಹಂಚಿಕೊಂಡ ಕೆಲವರು ಉಲ್ಲೇಖಿಸಿದ್ದಾರೆ. ಸೂರತ್‌ನಲ್ಲಿ ಈ ಘಟನೆ ನಡೆದಿದ್ದು, ಲವ್ ಜಿಹಾದ್‌ಗೆ ತಾಜಾ ಉದಾಹರಣೆ ಎಂದು ಕೆಲವರು ಹೇಳಿದ್ದಾರೆ. ಹಿಂದೂಗಳೇ ಎಚ್ಚೆತ್ತುಕೊಳ್ಳಿ ಎಂದು ಜಾಲತಾಣ ಬಳಕೆದಾರರು ಹೇಳಿದ್ದಾರೆ.

ಈ ಘಟನೆ ಸೂರತ್‌ನಲ್ಲಿ ನಡೆದಿದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಉಲ್ಲೇಖವಾಗಿರುವಂತೆ ಮತಾಂತರಕ್ಕೆ ಸಂಬಂಧಪಟ್ಟಿಲ್ಲ ಎಂದು ಆಲ್ಟ್‌ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿವೆ. ಹುಡುಗಿಯ ಜೊತೆಯಲ್ಲಿರಲು ಆಕೆಯ ಮನೆಯವರು ವಿರೋಧಿಸಿದ್ದರಿಂದ ಸಿಟ್ಟಿಗೆದ್ದ ಹುಡುಗ, ಯುವತಿಯ ಕತ್ತುಸೀಳಿ ತಾನೂ ವಿಷ ಕುಡಿದಿದ್ದಾನೆ ಎಂದು ಪೊಲೀಸ್ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ. ಈ ಇಬ್ಬರಲ್ಲಿ ಯಾರೂ ಮುಸ್ಲಿಮರಲ್ಲ ಎಂದು ವೆಬ್‌ಸೈಟ್ ಸ್ಪಷ್ಟಪಡಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಧನ್ಯರು

ಮನದ ಭಾವಗಳ ಪೂರ್ಣದಿನೊರೆಯಲರಿತ ಕವಿ |
ಇನಿತನುಂ ಬಿಡದೆ ರೂಪಿಸಲರಿತ ಶಿಲ್ಪಿ ||
ಅನುರೂಪದಿಂದ ವಾಸ್ತವಗೊಳಿಪ ಕೃತಿ ಚತುರ |
ಧನಿಯರಿವರೆಲ್ಲಿಹರೊ? – ಮಂಕುತಿಮ್ಮ || 567 ||

ಪದ-ಅರ್ಥ: ಪೂರ್ಣದಿನೊರೆಯಲರಿತ = ಪೂರ್ಣದಿ(ಪೂರ್ಣವಾಗಿ) + ಒರೆಯಲು = (ತಿಳಿಸಲು, ವ್ಯಕ್ತಪಡಿಸಲು) + ಅರಿತ, ಇನಿತನುಂ = ಸ್ವಲ್ಪವಾದರೂ, ರೂಪಿಸಲರಿತ = ರೂಪಿಸಲು + ಅರಿತ, ಅನುರೂಪದಿಂದ = ಬಯಸಿದಂತೆಯೆ, ವಾಸ್ತವಗೊಳಿಪ = ವಾಸ್ತವಕ್ಕೆ ತರುವ, ಧನಿಯರಿವರೆಲ್ಲಿಹರೊ- = ಧನಿಯರು(ಧನ್ಯರು) + ಇವರು + ಎಲ್ಲಿಹರೊ.

ವಾಚ್ಯಾರ್ಥ: ಮನಸ್ಸಿನಲ್ಲಿ ಉದಿಸಿದ ಭಾವನೆಗಳನ್ನು ಸಂಪೂರ್ಣವಾಗಿ ವರ್ಣಿಸಬಲ್ಲ ಕವಿ, ಮನದಲ್ಲಿ ರೂಪಿತವಾದ ಚಿತ್ರವನ್ನು ಒಂದು ಚೂರೂ ವ್ಯತ್ಯಾಸವಾಗದಂತೆ ರೂಪಿಸಬಲ್ಲ ಶಿಲ್ಪಿ, ಬಯಸಿದ್ದನ್ನು ಅದೇ ರೀತಿ ವಾಸ್ತವಕ್ಕೆ ತರಬಲ್ಲ ಕಾರ್ಯಚತುರ, ಇಂತಹ ಧನ್ಯರು ಎಲ್ಲಿದ್ದಾರೋ?

ವಿವರಣೆ: ತಲ್ಲೀನತೆ ಎನ್ನುವ ಮನೋವಿಕಾರ ಮೊದಲು ಕವಿಯ ಮನಸ್ಸಿನಲ್ಲಾಗುತ್ತದೆ. ಈ ಮಾಯೆಯನ್ನೇ ‘ರಸ’ ಎಂದು ಕರೆಯುತ್ತಾರೆ. ಅದು ಮುಂದೆ ಕಾವ್ಯರೂಪದಲ್ಲಿ ಉಕ್ಕಿ, ಹರಿದು, ವಾಚಕನ ಹೃದಯವನ್ನು ಪ್ರವೇಶಿಸಿ, ಇಂಥದೇ ರಸವನ್ನು ಅಲ್ಲಿ ಹುಟ್ಟಿಸುತ್ತದೆ. ಹೀಗೆ ರಸೋತ್ಪಾದನೆಯನ್ನು ಮಾಡುವವನೇ ಕವಿ. ಆದರೆ ಅದು ತುಂಬ ಕಷ್ಟದ ಕೆಲಸ. ಮನುಷ್ಯನ ಮನೋವ್ಯಾಪಾರಗಳು ಅಳತೆಗೂ, ತೂಕಕ್ಕೆ ಸಿಕ್ಕುವವಲ್ಲ. ಅದರಲ್ಲಿಯೂ ಕವಿಯ ಅಂತರಂಗವು ಅತ್ಯಂತ ಸೂಕ್ಷ್ಮವಾದದ್ದು. ಅದರ ರಹಸ್ಯವನ್ನು ಬಾಹ್ಯಕ್ಕೆ ತಿಳಿಸಲು ಬಹುವಾದ ಪ್ರಯತ್ನ ಬೇಕು. ಅಷ್ಟಾದರೂ ಮೂಲಭಾವನೆ ನಿಖರವಾಗಿ ಪ್ರಕಟವಾದೀತೆಂದು ಹೇಳುವುದು ಕಷ್ಟ. ಭಾವನೆಗಳ ಪ್ರಕಟಣೆಗೆ ಭಾಷೆಯೊಂದೇ ವಾಹಕ. ಆದರೆ ಭಾಷೆ ಒಂದು ಒರಟು ಯಾನ. ಕವಿಯ ಎಷ್ಟೋ ಭಾವನೆಗಳು ಪ್ರಕಾಶಕ್ಕೆ ಬಾರದೆ ಒಳಗೇ ಉಳಿದುಬಿಡುತ್ತವೆ. ಸಮರ್ಥವಾಗಿ ಭಾವನೆಗಳನ್ನು ಹೊರಗೆ ತರುವ ಕವಿ ಧನ್ಯ.

ಇದೇ ರೀತಿ ಒಬ್ಬ ಶಿಲ್ಪ ಅಥವಾ ವರ್ಣಚಿತ್ರ ಕಲಾವಿದನಿಗೂ ಆಗುತ್ತದೆ. ಮನಸ್ಸಿನಲ್ಲಿ ಹೊಳೆದ ಆಕೃತಿ ಅಥವಾ ಚಿತ್ರವನ್ನು ಶಿಲ್ಪಕ್ಕೋ, ಕ್ಯಾನವಾಸ್‌ಗೋ ಇಳಿಸುವಾಗ ಕೆಲವು ಬದಲಾವಣೆಗಳಾಗುತ್ತವೆ. ಅದು ಕಲ್ಲಿನ ಗುಣದಿಂದಾಗಬಹುದು, ಆ ಕ್ಷಣದ ಆವೇಶದಿಂದಾಗಬಹುದು. ಮನದ ಚಿತ್ರವನ್ನೇ ಇರುವಂತೆಯೇ ಇಳಿಸಬಲ್ಲ ಶಿಲ್ಪಿ ಕೂಡ ಧನ್ಯ.

ಮೂಲಚಿಂತನೆಗೂ, ಅದರ ಪುನರ್ ನಿರ್ಮಾಣದಲ್ಲೂ ಆಗುವ ವ್ಯತ್ಯಾಸ ಕೇವಲ ಕಲೆ ಮತ್ತು ಸಾಹಿತ್ಯದಲ್ಲಲ್ಲ. ಸಮಾಜಕಾರ್ಯದಲ್ಲೂ ಅದೇ ಸಮಸ್ಯೆ ಬರುತ್ತದೆ. ಇದೇ ಸಂಕಲ್ಪಕ್ಕೂ ಕಾರ್ಯಸಿದ್ಧಿಗೂ ಇರುವ ವ್ಯತ್ಯಾಸ. ಮನುಷ್ಯ ಯಾವುದೋ ಕಾರ್ಯವನ್ನು ಮಾಡಲು ಸಂಕಲ್ಪ ಮಾಡುತ್ತಾನೆ. ನಂತರ ಸಂಕಲ್ಪವನ್ನು ಪೂರ್ತಿಮಾಡಲು ಶ್ರಮಿಸುತ್ತಾನೆ. ಬಹಳಷ್ಟು ಜನರಿಗೆ ಅದು ಸಾಧ್ಯವಾಗುವುದಿಲ್ಲ.

ಮೈಸೂರು ಮಹಾರಾಜರು ಮತ್ತು ಕೋಲಾರದ ಬಂಗಾರದ ಗಣಿಯ ಮಾಲಿಕರಾದ ಜಾನ್ ಟೇಲರ್ ನಡುವೆ ಒಂದು ಒಪ್ಪಂದವಾಯಿತು. ಒಂದು ನಿಗದಿಯಾದ ದಿನದಂದು ಟೇಲರ್ ಕಂಪನಿಗೆ ವಿದ್ಯುತ್ ಪೂರೈಸಬೇಕಿತ್ತು. ಆದರೆ ಮಡಿಕೇರಿಯಲ್ಲಿ ಭಾರೀ ಮಳೆಯಾಗಿ ಕಾವೇರಿಗೆ ಪ್ರವಾಹ ಬಂದು, ದಂಡೆ ಒಡೆದು ನೀರು ಶಿವಸಮುದ್ರದ ಕಡೆಗೆ ಹೋಗುವುದು ಕಷ್ಟವಾಯಿತು. ಆದರೆ ಸರ್. ವಿಶ್ವೇಶ್ವರಯ್ಯ ಹಗಲು ರಾತ್ರಿ ದುಡಿದು, 5000 ಜನರನ್ನು ನೇಮಿಸಿಕೊಂಡು, ನದಿಗೆ ದಂಡೆ ಕಟ್ಟಿ, ನೀರನ್ನು ತಿರುಗಿಸಿ ಅದೇ ದಿನ ವಿದ್ಯುತ್‌ನ್ನು ಪೂರೈಸಿ ಮಹಾರಾಜರ ಮಾತು ನಡೆಸಿದರು. ಸಂಕಲ್ಪವನ್ನು ಸಂಪೂರ್ಣವಾಗಿ ಸಾಕಾರಗೊಳಿಸಿದರು.

ಕಗ್ಗ ಹೇಳುತ್ತದೆ, ಮನದ ಭಾವನೆಗಳನ್ನೆಲ್ಲ ಅಕ್ಷರಕ್ಕಿಳಿಸುವ ಕವಿ, ಅಂತರ್ಯದ ಚಿತ್ರಗಳನ್ನು ಸಾಕಾರಗೊಳಿಸಿದ ಶಿಲ್ಪಿ, ಸಂಕಲ್ಪಗಳನ್ನೆಲ್ಲ ಈಡೇರಿಸಿದ ಕಾರ್ಯಚತುರ ಇವರೆಲ್ಲ ಧನ್ಯರು. ಅಂಥವರು ಎಲ್ಲಿದ್ದಾರೆ? ಎಷ್ಟಿದ್ದಾರೆ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಫೆಬ್ರುವರಿ 18, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 06 ನೇ ದಿನ
ತಿಥಿ: (ಮಾಘ ಕೃಷ್ಣ) ದ್ವಿತೀಯ ಗಂ. 22-30 ನಕ್ಷತ್ರ: ಪೂರ್ವಫಲ್ಗುನಿ ಗಂ. 16-42
ಯೋಗ: ಸುಕರ್ಮ ಗಂ. 18-30, ಕರಣ: ತೈತಿಲ ಗಂ. 10-38. ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-56 ಸೂರ್ಯಾಸ್ತ : 06-33
ಮುಸ್ಲಿಂ ದಿನಾಂಕ : 16 ರಜಬ್ ಅದೃಷ್ಟ ಸಂಖ್ಯೆ: 6, 7

ಮೇಷ: ಪ್ರವಾಸೋದ್ಯಮ ಮತ್ತು ಸಾರಿಗೆ ಸಂಸ್ಥೆಯವರಿಗೆ ಉತ್ತಮವಾದ ವ್ಯವಹಾರ ಪ್ರಾಪ್ತಿಯಾಗುವುದು. ತಾಂತ್ರಿಕ ಕ್ಷೇತ್ರದಲ್ಲಿ ನೂತನ ಉದ್ಯೋಗ ಸಂಪಾದನೆಗೆ ಹೊರಟಂತಹ ವ್ಯಕ್ತಿಗಳಿಗೆ ಈ ದಿನ ಅಭಿವೃದ್ಧಿದಾಯಕ ಅನಿಸಲಿದೆ.

ವೃಷಭ: ಅಧಿಕಾರಿ ವರ್ಗದವರಿಗೆ ಮುಂಬಡ್ತಿಯಂತಹ ಕನಸುಗಳು ನೆರವೇರುವುದು. ವೈವಾಹಿಕ ಜೀವನದ ಹೆಜ್ಜೆಯನ್ನು ಇಡುವಂತಾಗುವುದು. ಫೈನಾನ್ಸ್‌ನಲ್ಲಿ ಹಣ ಹೂಡಿಕೆ ಮಾಡುವವರು ಜಾಗರೂಕತೆಯಿಂದ ವರ್ತಿಸಿ.

ಮಿಥುನ: ಐಷಾರಾಮಿ ಜೀವನದ ಬಗ್ಗೆ ಜಿಗುಪ್ಸೆ ಹುಟ್ಟುವುದು. ಸಾಮಾಜಿಕ ಸೇವಾ ಕಾರ್ಯದಲ್ಲಿ ಸಮಯವು ವ್ಯರ್ಥವಾಗದಂತೆ ಜಾಗರೂಕತೆ ವಹಿಸಿ. ನಿರುದ್ಯೋಗಿಗಳಿಗೆ ತಾತ್ಕಾಲಿಕ ಉದ್ಯೋಗದಿಂದ ತುಸು ಸಮಾಧಾನ ಸಿಗುವುದು.

ಕರ್ಕಾಟಕ: ನೀವು ಬಹಳ ದಿನಗಳಿಂದ ಅಪೇಕ್ಷಿಸಿದ ಯಾತ್ರೆಗೆ ಶುಭ ಮುಹೂರ್ತ ಸಿಗುವುದು. ವೃತ್ತಿರಂಗದಲ್ಲಿ ನಿಮ್ಮ ಅದೃಷ್ಟವು ಈ ದಿನ ಹೆಚ್ಚೇನು ಪ್ರಯೋಜಕಾರಿಯಾಗುವುದಿಲ್ಲ ಆದ್ದರಿಂದ ದೇವರ ಮೊರೆ ಹೋಗುವುದು ಉತ್ತಮ.

ಸಿಂಹ: ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು. ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಮ್ಮ ನಿರ್ಧಾರವು ಬಹಳ ಅನುಕೂಲಕರ. ಅವರು ಕೊಡುವ ಸಲಹೆಯಿಂದ ನಿಮಗೆ ಅನುಕೂಲ.

ಕನ್ಯಾ: ತಿಳಿವಳಿಕೆಯನ್ನು ಹೊಂದಿದ ವ್ಯಕ್ತಿಯಾದ ನೀವು ಅಪರಾಧ ಮಾಡಬೇಕಾದ ಸ್ಥಿತಿ ಬರಬಹುದು. ಅದಕ್ಕೆ ಅವಕಾಶ ನೀಡಬೇಡಿ. ಸಂಗೀತ ಶಿಕ್ಷಕರಿಗೆ ತಮ್ಮ ಶಿಷ್ಯರ ಅಭ್ಯಾಸವು ಆನಂದವನ್ನು, ಹಿರಿಮೆಯನ್ನು ನೀಡುತ್ತದೆ.

ತುಲಾ: ಸರ್ಕಾರಿ ನೌಕರರಿಗೆ ಈ ದಿನ ಸುಯೋಗವೆಂದು ಹೇಳಬಹುದು. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಮಕ್ಕಳ ಮಾತುಗಳು ಮನಸ್ಸಿಗೆ ಚುಚ್ಚಿ ನೋವಾಗುವಂತೆ ಆಗಬಹುದು.

ವೃಶ್ಚಿಕ: ಉದ್ಯಮಿಗಳಿಗೆ ಕಾರ್ಮಿಕರ ಕೊರತೆ ಎದ್ದು ಕಾಣಲಿದೆ. ಅದರಿಂದಾಗಿ ನಷ್ಟ ಸಂಭವಿಸಬಹುದು. ಧಾರ್ಮಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ದೇವರ ರಕ್ಷಣೆ ಸಿಗುವುದು. ದೈನಂದಿನ ಆಗುಹೋಗುವ ಬಗ್ಗೆ ಹೆಚ್ಚಿನ ಗಮನಹರಿಸಿ.

ಧನು: ಆಕಸ್ಮಿಕವಾಗಿ ಹೊಸ ವ್ಯಕ್ತಿಯ ಪರಿಚಯ. ಅವಿವಾಹಿತರಿಗೆ ಒಳ್ಳೆಯ ಕಡೆ ಸಂಬಂಧ ಬರುವುದು. ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ಯತ್ನಿಸಿ. ವಾಹನದ ರಿಪೇರಿಯಂತಹ ವಿಚಾರದಲ್ಲಿ ಅಧಿಕವಾದ ಖರ್ಚು ಸಂಭವಿಸಲಿದೆ.

ಮಕರ: ಗೃಹಕ್ಕೆ ಅನಿರೀಕ್ಷಿತವಾಗಿ ಅಪುರೂಪದ ವ್ಯಕ್ತಿಯ ಆಗಮನ. ಗುರಿ ಸಾಧಿಸುವ ಬಗ್ಗೆ ಗಮನವಿರಲಿ. ಒಳ್ಳೆಯ ಪಾಲುದಾರರು ದೊರೆಯಲಿದ್ದಾರೆ. ಸಾಲ ಮರುಪಾವತಿ ಮಾಡುವ ಬಗ್ಗೆ ತಲೆಬಿಸಿ ವಾತಾವರಣವಿರುವುದು.

ಕುಂಭ: ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಲಭಿಸುತ್ತದೆ. ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ದಿನ ನಿತ್ಯದಲ್ಲಿ ರೂಢಿಸಿಕೊಳ್ಳಿ. ಯಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಾಣುವ ಸಾಧ್ಯತೆ ಹೆಚ್ಚು.

ಮೀನ: ಮಾತು ಅತಿರೇಕ ತಲುಪದಂತೆ ಎಚ್ಚರ ವಹಿಸುವಿರಿ. ಪರೀಕ್ಷಾರ್ಥಿಗಳಿಗೆ ಆತ್ಮವಿಶ್ವಾಸ ವೃದ್ಧಿಯಾಗುವುದು. ಕುಟುಂಬದ ವತಿಯಿಂದ ನಡೆಸಬೇಕಾದ ಸತ್ಕಾರ್ಯಗಳನ್ನು ಕುರಿತು ಸಮಾಲೋಚನೆ ನಡೆಸಿ.

ಪದಬಂಧ 4873

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ತರದವನು ಹಿಡಿದಿರುವ ಸೋಪು (4)
3.ಈತ ಸುದ್ದಿ ಸಂಗ್ರಹಕಾರ (4)
5.ಬೆಳಗಿನ ಜಾವ ಎಂದು ಹೀಗೆನ್ನಿ (3)
7.ವಿರೋಧದ ವಿರುದ್ಧ ಪದ ಉಲ್ಟಾ ಆಗಿದೆ (2)
9.ಮಾವನ ಮರ್ಯಾದೆ! (2)
10.ವಿಷ್ಣುವಿನ ದಶಾವತಾರಗಳಲ್ಲಿ ಐದನೆಯದು (3)
11.ಯೌವ್ವನದಲ್ಲಿ ನೋಡಿದ ಕಾಡು! (2)
12.ಸುಗಮವಾಗಿ ಕಿತ್ತಿರುವ ಹೂವು (2)
14.ವನದ ಕೊನೆಗೆ ಮಾಡಿರುವ ಯಜ್ಞ (3)
16.ಹೊಸದಾಗಿ ಅಭಿನಯಿಸುತ್ತಿರುವವನು (4)
17.ಅಪರಾಧಿಗಳ ಕೊಲ್ಲಲು ನಿಯುಕ್ತನಾದವ (4)

ಮೇಲಿಂದ ಕೆಳಕ್ಕೆ
1.ಮರದ ಹತ್ತಿರ ನಡೆದ ಯುದ್ಧ (3)
2.ಉಲ್ಟಾ ನಿಂತಿರುವ ಮನುಷ್ಯ (2)
3.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)
4.ರಸ ಒಸರುವ ನಾಲಿಗೆ (3)
6.ಚಿನ್ನದ ಹಬ್ಬವನ್ನು ಹೀಗೆನ್ನಿ (7)
8.ವಿದ್ಯಾರ್ಹತೆಯ ಪ್ರಶಸ್ತಿ ಕೊಡುವುದು (5)
9.ಈ ರೀತಿ ಆಪಾದನೆ ಮಾಡು (5)
11.ವನದಲ್ಲಿ ಆದ ಬೆಳವಣಿಗೆ (3)
13.ಸಿಹಿಯಾದುದು ಇಲ್ಲಿದೆ (3)
14.ಹಗ್ಗಾಟದಲ್ಲಿ ಕಾಣುತ್ತಿರುವ ಮೊಂಡುತನ! (2)
15.ಒಂಬತ್ತಾದರೂ ಇದು ಹೊಸದು !(2)



4872ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಾಸಿ 3.ಸಂತಸ
5.ಸರ 6.ಕರ್ಪೂರ
7.ತಿಸ 9.ನಗ 11.ಹೂದಾನಿ
13.ಜನ 14.ತಲ್ಲಣ 15.ನವೀನ

ಮೇಲಿಂದ ಕೆಳಕ್ಕೆ:
1.ಅಕ್ಷರ 2.ಸಿಡುಕ 3.ಸಂಸಾರ
4.ಸವತಿ 5.ಸಮಕಾಲೀನ
8.ಸಮುದ್ರಯಾನ 10.ಗಣಿತ
11.ಹೂಬಾಣ 12.ನಿಧಾನ
13.ಜವಾನ

ಸುಡೊಕು 5259

	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5258 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಚಿನ್ನದ ದರ ₹ 513, ಬೆಳ್ಳಿ ₹ 190ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 513ರಷ್ಟು ಹೆಚ್ಚಾಗಿ ₹ 49,738ಕ್ಕೆ ತಲುಪಿತು.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 190ರಷ್ಟು ಹೆಚ್ಚಾಗಿ ₹ 63,222ರಂತೆ ಮಾರಾಟವಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಕಂಡಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪ್ರಭಾವ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	515

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-53000

ಕಾರ್ಕಳ

ಹೊಸತು	40000-44500
ಹಳತು	46000-53000

ಕುಮಟ

ಚಿಪ್ಪು	24109-31988
ಕೋಕ	14699-29488
ಹಳೆಚಾಲಿ	46599-48556
ಹೊಸಚಾಲಿ	33299-41079

ಪುತ್ತೂರು

ಕೋಕ	11000-26000
ಹೊಸತು	27500-45000

ಸಿದ್ದಾಪುರ

ಬಿಳಿಗೋಟು	22699-28899
ಕೋಕ	17199-28499
ಹೊಸಚಾಲಿ	34299-40939
ಕೆಂಪುಗೋಟು	26899-32469
ರಾಶಿ	43299-46799
ತಟ್ಟಿಬೆಟ್ಟೆ	32689-40699

ಶಿರಸಿ

ಬೆಟ್ಟೆ	34299-43699
ಬಿಳಿಗೋಟು	23199-33813
ಚಾಲಿ	32899-41508
ರಾಶಿ	43068-46781

ಯಲ್ಲಾಪುರ

ಬಿಳಿಗೋಟು	24899-30895
ಕೋಕ	18969-29100
ಹಳೆಚಾಲಿ	43089-46291
ಹೊಸಚಾಲಿ	32699-41160
ಕೆಂಪುಗೋಟು	28611-35199
ರಾಶಿ	45860-51590
ತಟ್ಟಿಬೆಟ್ಟೆ	38109-44279

ಶಿವಮೊಗ್ಗ

ಬೆಟ್ಟೆ	47589-50699
ಗೊರಬಲು	17120-34810
ರಾಶಿ	43069-46036
ಸರಕು	51069-75099

ಸಾಗರ

ಬಿಳಿಗೋಟು	14310-27499
ಚಾಲಿ	31510-37100
ಕೋಕ	14510-32809
ಕೆಂಪುಗೋಟು	16510-39819
ರಾಶಿ	33300-46267
ಸಿಪ್ಪೆಗೋಟು	7869-18999

ರಾಮನಗರ ರೇಷ್ಮೆ

ಮಿಶ್ರತಳಿ	400-762
ದ್ವಿತಳಿ	700-999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16100	16150	252.25 ಸೆಂಟ್ಸ್
ಎಸಿ	7810	7400	7800	
ಆರ್‌ಪಿ	8000	7600	8000	ಲಂಡನ್
ಆರ್‌ಸಿ	4130	3950	4050	2290 ಡಾಲರ್ಸ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,322
ಇಂದಿನ ಅಂತ್ಯ	17,305
▼	17
ದಿನದ ಕನಿಷ್ಠ	17,235

ವಿನಿಮಯ ದರ

$ ಡಾಲರ್	75.11
£ ಪೌಂಡ್	102
€ ಯುರೊ	85.28
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1355 (1355)
ಸೋಯಾ (ರಿಫೈನ್ಡ್)	₹1325 (1318)
ಸೂರ್ಯಕಾಂತಿ (ರಿಫೈನ್ಡ್)	₹1340 (1330)
ಪಾಮೋಲಿನ್	₹1280 (1275)

ಮುಂಬೈ ಧಾರಣೆ

ಶೇಂಗಾ

17-2-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	9150-2000
ದಪ್ಪ ಗುಜರಾತ್(ಹೊಸ)	8400-8450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಸೋಯಾ ಕಚ್ಚಾ	1290 (1277)
ಪಾಮ್ ವಾರದ ಡೆಲಿವರಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	50,000 (49,250)
ಬೆಳ್ಳಿ ಕೆ.ಜಿ	64,000 (63,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಶ್ವದ ಮೂರನೆಯ ಅತಿದೊಡ್ಡ ವಿಮಾ ಐಪಿಒ ಆಗುವ ಸಾಧ್ಯತೆ

ಎಲ್‌ಐಸಿ ಐಪಿಒ: ಇತರರಿಗೆ ಚಿಂತೆ

ಮುಂಬೈ (ರಾಯಿಟರ್ಸ್): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಮಾರ್ಚ್‌ನಲ್ಲಿ ಷೇರು ಮಾರುಕಟ್ಟೆಯನ್ನು ಪ್ರವೇಶಿಸುವ ನಿರೀಕ್ಷೆ ಇದ್ದು, ಅದರಲ್ಲಿ ಹೂಡಿಕೆ ಮಾಡುವ ಉದ್ದೇಶದಿಂದ ಹೂಡಿಕೆದಾರರು ಬೇರೆ ವಿಮಾ ಕಂಪನಿಗಳಲ್ಲಿನ ಹೂಡಿಕೆ ಮೊತ್ತವನ್ನು ತಗ್ಗಿಸುತ್ತಿದ್ದಾರೆ!

ಈ ಐಪಿಒ ಮೂಲಕ ಎಲ್‌ಐಸಿ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆ ಇದೆ. ಎಲ್‌ಐಸಿ ಷೇರುಗಳು, ಷೇರು ಮಾರುಕಟ್ಟೆ ಪ್ರವೇಶಿಸಿದ ನಂತರದಲ್ಲಿ ಪ್ರತಿಸ್ಪರ್ಧಿ ಕಂಪನಿಗಳ ಮೇಲೆ ಒಂದು ವರ್ಷದವರೆಗೂ ಪರಿಣಾಮ ಉಂಟಾಗಬಹುದು ಎಂದು ಫಂಡ್ ನಿರ್ವಾಹಕರು ಹಾಗೂ ಮಾರುಕಟ್ಟೆ ಪರಿಣತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಲ್‌ಐಸಿಯ ಶೇಕಡ 5ರಷ್ಟು ಷೇರುಗಳ ಮಾರಾಟಕ್ಕೆ ಪ್ರಾಥಮಿಕ ಅರ್ಜಿಯನ್ನು ಕೇಂದ್ರ ಸರ್ಕಾರವು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಭಾನುವಾರ ಸಲ್ಲಿಸಿದೆ. ಎಲ್‌ಐಸಿ ಐಪಿಒ, ಇಡೀ ವಿಶ್ವದಲ್ಲಿ ಮೂರನೆಯ ಅತಿದೊಡ್ಡ ವಿಮಾ ಐಪಿಒ ಆಗುವ ಸಾಧ್ಯತೆ ಇದೆ. 'ವಿಮಾ ಮಾರುಕಟ್ಟೆಯ ಶೇ 10 ಅಥವಾ ಶೇ 11ರಷ್ಟು ಪಾಲು ಹೊಂದಿರುವ ಕಂಪನಿಗಳಿಗಿಂತ, ಶೇಕಡ 60ರಷ್ಟು ಪಾಲನ್ನು ಹೊಂದಿರುವ ಕಂಪನಿಯ ಷೇರು ಖರೀದಿಸುವುದು ಹೂಡಿಕೆಗಳನ್ನು ನಿರ್ವಹಿಸುವ ಯಾವುದೇ ವ್ಯಕ್ತಿಯ ಸಹಜ ಬಯಕೆ' ಎಂದು ಷೇರುಗಳು ಹಾಗೂ ಮ್ಯೂಚುವಲ್ ಫಂಡ್ ಸಂಶೋಧನಾ ಸಂಸ್ಥೆ ಪ್ರೈಮ್‌ಇನ್ವೆಸ್ಟರ್‌ನ ಸಹ ಸಂಸ್ಥಾಪಕಿ ವಿದ್ಯಾ ಬಾಲಾ ಹೇಳಿದರು.

ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಇತರ ಖಾಸಗಿ ಜೀವ ವಿಮಾ ಕಂಪನಿಗಳಲ್ಲಿನ ಹೂಡಿಕೆ ತಗ್ಗಿಸಲು ಫಂಡ್ ನಿರ್ವಾಹಕರು ಈಗಾಗಲೇ ಮುಂದಾಗಿದ್ದಾರೆ ಎಂದು ವಿದ್ಯಾ ತಿಳಿಸಿದರು.

ಎಲ್‌ಐಸಿಯ ಮೌಲ್ಯ ನಿಗದಿಯು ಆಕರ್ಷಕವಾಗಿ ಇದ್ದರೆ, ಎಲ್‌ಐಸಿ ಷೇರು ಮಾರುಕಟ್ಟೆ ಪ್ರವೇಶಿಸಿದ ನಂತರದಲ್ಲಿ ಅದರ ಪರಿಣಾಮವು ವಿಮಾ ವಲಯದ ಖಾಸಗಿ ಕಂಪನಿಗಳ ಮೇಲೆ ಮಾತ್ರವೇ ಅಲ್ಲದೆ, ಇತರ ವಲಯಗಳ ಕಂಪನಿಗಳ ಮೇಲೆಯೂ ಆಗಬಹುದು ಎಂದು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಇಬ್ಬರು ಫಂಡ್ ನಿರ್ವಾಹಕರು ಹೇಳಿದರು.

'ಎಲ್‌ಐಸಿಯಷ್ಟು ದೊಡ್ಡದಾದ ಕಂಪನಿ ಐಪಿಒಗೆ ಮುಂದಾದಾಗ, ವ್ಯವಸ್ಥೆಯಲ್ಲಿನ ನಗದು ಲಭ್ಯತೆಯನ್ನು ಅದು ತನ್ನತ್ತ ಸೆಳೆದುಕೊಳ್ಳುತ್ತದೆ' ಎಂದು ಫಂಡ್ ನಿರ್ವಾಹಕರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಮಾರುಕಟ್ಟೆಯಲ್ಲಿನ ನಗದನ್ನು ಸೆಳೆಯಲಿದೆ ಎಲ್‌ಐಸಿ
- ಬೇರೆಡೆಗಳಲ್ಲಿನ ಹೂಡಿಕೆ ತಗ್ಗಿಸುತ್ತಿರುವ ಫಂಡ್ ನಿರ್ವಾಹಕರು

ಎನ್‌ಎಸ್‌ಇ ಮಾಜಿ ಎಂ.ಡಿ. ಚಿತ್ರಾಗೆ ಸೇರಿದ ಸ್ಥಳಗಳಲ್ಲಿ ಐ.ಟಿ. ದಾಳಿ

ನವದೆಹಲಿ/ಮುಂಬೈ (ಪಿಟಿಐ): ತೆರಿಗೆ ವಂಚನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಚಿತ್ರಾ ರಾಮಕೃಷ್ಣ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಆನಂದ ಸುಬ್ರಮಣಿಯನ್ ಅವರಿಗೆ ಸೇರಿದ ಮುಂಬೈನ ವಿವಿಧ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆಯು ಗುರುವಾರ ದಾಳಿ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಣಕಾಸಿನ ಅಕ್ರಮ ಮತ್ತು ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲು ಮತ್ತು ದಾಖಲೆಗಳನ್ನು ಕಲೆಹಾಕಲು ಇಲಾಖೆಯ ಮುಂಬೈನ ತನಿಖಾ ತಂಡವು ಬೆಳಗ್ಗೆ ಈ ದಾಳಿ ನಡೆಸಿದೆ ಎಂದು ಗೊತ್ತಾಗಿದೆ.

ಸುಬ್ರಮಣಿಯನ್ ಅವರನ್ನು ಮುಖ್ಯ ಯೋಜನಾ ಸಲಹೆಗಾರ ಮತ್ತು ಸಮೂಹದ ಕಾರ್ಯನಿರ್ವಾಹಕ ಅಧಿಕಾರಿ ಆಗಿ ಮರುನೇಮಕ ಮಾಡಿರುವಲ್ಲಿ ಆಡಳಿತಾತ್ಮಕ ವೈಫಲ್ಯ ಆಗಿದೆ ಎಂದು ಆರೋಪಿಸಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಚಿತ್ರಾ ಮತ್ತು ಇತರರಿಗೆ ದಂಡ ವಿಧಿಸಿತ್ತು. ರಾಮಕೃಷ್ಣನ್ ಅವರಿಗೆ ₹ 3 ಕೋಟಿ ದಂಡ, ಎನ್‌ಎಸ್‌ಇ ಮತ್ತು ಸುಬ್ರಮಣಿಯನ್, ಮಾಜಿ ಸಿಇಒ ರವಿ ನರೇನ್ ಅವರಿಗೆ ತಲಾ ₹ 2 ಕೋಟಿ ಹಾಗೂ ಮುಖ್ಯ ನಿಯಂತ್ರಣ ಅಧಿಕಾರಿ ವಿ.ಆರ್. ನರಸಿಂಹನ್ ಅವರಿಗೆ ₹ 6 ಲಕ್ಷ ದಂಡ ವಿಧಿಸಿದೆ.

ಚಿತ್ರಾ ಅವರು 'ಎನ್‌ಎಸ್‌ಇ'ನ ಕೆಲವು ಗೋಪ್ಯ ಮಾಹಿತಿಗಳನ್ನು ಹಿಮಾಲಯದಲ್ಲಿ ಇರುವ ಯೋಗಿ ಒಬ್ಬರೊಂದಿಗೆ ಹಂಚಿಕೊಂಡಿದ್ದಾರೆ. ಮಾತ್ರವಲ್ಲ, ಷೇರುಪೇಟೆಯ ಸಿಬ್ಬಂದಿಯ ಕಾರ್ಯಕ್ಷಮತೆಯ ಮೌಲ್ಯಮಾಪನ ಮಾಡುವ ಕುರಿತಾಗಿಯೂ ಯೋಗಿಯ ಸಲಹೆ ಪಡೆದಿದ್ದಾರೆ ಎಂದು ಸೆಬಿ ಆದೇಶದಲ್ಲಿ ತಿಳಿಸಲಾಗಿದೆ. ಚಿತ್ರಾ ಅವರು 2013ರ ಏಪ್ರಿಲ್‌ನಿಂದ 2016ರ ಡಿಸೆಂಬರ್‌ವರೆಗೆ ಎನ್‌ಎಸ್‌ಇ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಆಗಿದ್ದರು.

ಮುಖ್ಯಾಂಶಗಳು
- ತೆರಿಗೆ ವಂಚನೆ ಪ್ರಕರಣ
- ಮುಂಬೈನ ವಿವಿಧ ಕಡೆಗಳಲ್ಲಿ ಶೋಧ

ಬ್ಯಾಂಕಿಂಗ್ ವಂಚನೆ: ಇ.ಡಿ.ಯಿಂದ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಬ್ಯಾಂಕ್‌ಗಳ ಒಕ್ಕೂಟಕ್ಕೆ ₹ 22,842 ಕೋಟಿ ಮೊತ್ತದ ವಂಚನೆ ಎಸಗಿರುವ ಆರೋಪದ ಅಡಿ ಜಾರಿ ನಿರ್ದೇಶನಾಲಯವು (ಇ.ಡಿ.) ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್ ವಿರುದ್ಧ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿದೆ.

ದೇಶದ ಅತಿದೊಡ್ಡ ಬ್ಯಾಂಕಿಂಗ್ ವಂಚನೆ ಪ್ರಕರಣದ ಸಂಬಂಧ ಸಿಬಿಐ ಪ್ರಕರಣ ದಾಖಲಿಸಿದ ಬಳಿಕ ಇ.ಡಿ. ಈ ಕ್ರಮ ಕೈಗೊಂಡಿದೆ.

ಸಿಬಿಐ ಸಲ್ಲಿಕೆಯಾದ ದೂರು ಮತ್ತು ಲೆಕ್ಕಪತ್ರ ವರದಿಯನ್ನು ಪರಿಶೀಲಿಸಿದ ಬಳಿಕ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಂಚನೆಗೆ ಸಂಬಂಧಿಸಿದಂತೆ ಕಂಪನಿಯ ಮಾಜಿ ಅಧ್ಯಕ್ಷ ರಿಶಿ ಕಮಲೇಶ್ ಅಗರ್ವಾಲ್ ಮತ್ತು ಮಾಜಿ ಕಾರ್ಯನಿರ್ವಾಹಕ ನಿರ್ದೇಶಕರಾದ ಸಂತಾನಂ ಮುತ್ತಸ್ವಾಮಿ, ನಿರ್ದೇಶಕ ಅಶ್ವನಿ ಕುಮಾರ್, ಸುಶಿಲ್ ಕುಮಾರ್ ಅಗರ್ವಾಲ್, ರವಿ ವಿಮಲ್ ನವೇಟಿಯಾ ಹಾಗೂ ಎಬಿಜಿ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ವಿಚಾರಣೆ: ಪ್ರಕರಣಕ್ಕೆ ಸಂಬಂಧಿಸಿದಂತೆ ರಿಶಿ ಕಮಲೇಶ್ ಅವರನ್ನು ಸಿಬಿಐ ಈಚೆಗಷ್ಟೇ ವಿಚಾರಣೆಗೆ ಒಳಪಡಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುಪಿಐ ವ್ಯವಸ್ಥೆ ಬಳಸಲಿರುವ ನೇಪಾಳ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪಾವತಿ ನಿಗಮ ಅಭಿವೃದ್ಧಿಪಡಿಸಿದ ಏಕೀಕೃತ ಪಾವತಿ ವ್ಯವಸ್ಥೆಯನ್ನು (ಯುಪಿಐ) ನೇಪಾಳವು ಅಳವಡಿಸಿಕೊಳ್ಳಲಿದೆ.

ಭಾರತದ ನಂತರ ಯುಪಿಐ ಅಳವಡಿಕೆ ಮಾಡಿಕೊಳ್ಳಲಿರುವ ಮೊದಲ ದೇಶ ನೇಪಾಳ.

ಈ ವಿಚಾರವಾಗಿ, ಎನ್‌ಪಿಸಿಐನ ಅಂತರರಾಷ್ಟ್ರೀಯ ವಿಭಾಗವಾಗಿರುವ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿ. (ಎನ್‌ಐಪಿಎಲ್), ಗೇಟ್‌ವೇ ಪೇಮೆಂಟ್ಸ್ ಸರ್ವಿಸ್ (ಜಿಪಿಎಸ್) ಮತ್ತು ಮನಮ್ ಇನ್ಫೊಟೆಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಜಿಪಿಎಸ್ ಕಂಪನಿಯು ನೇಪಾಳದಲ್ಲಿ ಪರವಾನಗಿ ಹೊಂದಿರುವ ಪಾವತಿ ಸೇವಾ ಸಂಸ್ಥೆ. ನೇಪಾಳದ ಜನಸಂಖ್ಯೆ ಸುಮಾರು 3 ಕೋಟಿ. ಅಲ್ಲಿ ಶೇಕಡ 45ರಷ್ಟು ಜನ ಬ್ಯಾಂಕ್ ಖಾತೆ ಹೊಂದಿದ್ದಾರೆ. ಜನಸಂಖ್ಯೆಯಲ್ಲಿ ಶೇ 65ರಷ್ಟು ಮಂದಿ ಸ್ಮಾರ್ಟ್‌ಫೋನ್ ಬಳಸುತ್ತಾರೆ. ಇದು ನೇಪಾಳದಲ್ಲಿ ಕೂಡ ಡಿಜಿಟಲ್ ಕ್ರಾಂತಿಯನ್ನು ಸಾಧ್ಯವಾಗಿಲು ನೆಲೆ ಒದಗಿಸುತ್ತದೆ ಎಂದು ಎನ್‌ಪಿಸಿಐ ಹೇಳಿದೆ.

ಸಕ್ಕರೆ ಉತ್ಪಾದನೆ ಶೇ 6ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಸಕ್ಕರೆ ಉತ್ಪಾದನೆಯು 2021–22ರ ಮಾರುಕಟ್ಟೆ ವರ್ಷದ ಅಕ್ಟೋಬರ್ 1ರಿಂದ ಫೆಬ್ರುವರಿ 15ರ ಅವಧಿಯಲ್ಲಿ 220.91 ಲಕ್ಷ ಟನ್ ಆಗಿದೆ.

ಹಿಂದಿನ ಮಾರುಕಟ್ಟೆ ವರ್ಷದ ಇದೇ ಅವಧಿಯಲ್ಲಿ 209.11 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 6ರಷ್ಟು ಹೆಚ್ಚಳ ಆಗಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಒಕ್ಕೂಟ (ಐಎಸ್‌ಎಂಎ) ಗುರುವಾರ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಸಕ್ಕರೆ ಉತ್ಪಾದನೆಯು 75.46 ಲಕ್ಷ ಟನ್‌ನಿಂದ 86.15 ಲಕ್ಷ ಟನ್‌ಗೆ ಏರಿಕೆ ಆಗಿದೆ. ಕರ್ನಾಟಕದಲ್ಲಿ 39.07 ಲಕ್ಷ ಟನ್‌ನಿಂದ 44.85 ಲಕ್ಷ ಟನ್‌ಗೆ ಏರಿಕೆ ಕಂಡಿದೆ. ಆದರೆ, ಉತ್ತರ ಪ್ರದೇಶದಲ್ಲಿ 65.13 ಲಕ್ಷ ಟನ್‌ನಿಂದ 59.32 ಲಕ್ಷ ಟನ್‌ಗೆ ಇಳಿಕೆ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE
My client entered in sale agreement to purchase the Schedule property from Sri. B.N. RAJKUMAR S/o Late B.R. Narayanaswamy Naidu, Residing at No. J51, 1st Cross, Anjaneya Block, Opp Mahila Vidyalaya School, Sheshadripuram, Bangalore - 560020. This notice is hereby given for the information of General public that any persons or banks or financial institutions or any statutory authorities having any right, title, interest or claim against the schedule property may contact with documentary proof in support of his / her/ their claim if no claim is so lodged with us within the said period of 15 Days from this date of publication, it shall be presumed by my client that no one has any claim against the schedule property.
SCHEDULE PROPERTY
All that piece and parcel of immovable property of agricultural dry land bearing survey No. 25, Presently assigned as new Survey No. 25/2, Situated at Guyalahalli Village, Manchenahalli Hobli, Gowribidanur Taluk, Chikkaballapura District, Measuring 5 Acres 4 Guntas and 4 Guntas of adjacent karab land and 15 feet width of access road to survey No. 25/2 from Southern side in survey No.26,27 & 28.
Bounded on :-**East By** : Survey No. 25/1 and Survey No. 30 **West By** : Survey No. 24 **North By:** Government Naala **South by** : Survey No. 26 & Survey No. 28.
Sd/-
P. Narasimhaiah, Advocate
No.1, 18th Cross,
Malleshwaram,
Bangalore - 560055
Email : p.narasimhaiah@yahoo.co.in
Phone : 08023343461 & 08023343467
Place : Bangalore,
Date : 18-02-2022

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

ಉದ್ಯೋಗಾವಕಾಶ

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

✓ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

Marketing & Sales

LALSWEETS PVT Ltd Urgently require sales Representative for immediate joining Male candidates with 2 wheeler Salary up to 21K+ Conveyance+ Incentives Please contact 8660499891/ 8884564876

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 8950259135

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
Om Durga Anjanam Astro & Vastu Centre

ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೇವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವಾನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ, ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾ ವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ಚಾಟನೆ ಮತ್ತು ಶತ್ರು ಸಂಬಂದಿತ ಮಾಟ ದೃಷ್ಟಿಶಾಪಗಳಿಗೆ ಇಚಿದೇ ಪರಿಹಾರಕ್ಕೆ ಸಂಪರ್ಕಿಸಿ.
ನಿಮ್ಮ ಇಚ್ಛೆಗೆ 24 ಘಂಟೆ ಮಾತ್ರ.
8217437023 / 9845005009

ಕಂಪ್ಯೂಟರ್

Printer

EPSON EXCEED YOUR VISION
ಹೊಚ್ಚಹೊಸ A3 ಮೊನೋ ಎಕೋಟ್ಯಾಂಕ್ ಪ್ರಿಂಟರ್ SMART MFP ಫೋಟೋಕಾಪಿ ಮತ್ತು ಸ್ಟೇಷನರಿ ಶಾಪ್‌ಗಳಿಗೆ
12 ಪೈಸೆ ಪ್ರತಿ ಪ್ರಿಂಟ್‌ಗೆ*
ವಿದ್ಯುತ್ ಬಳಕೆ 19w* ನಷ್ಟುಕಡಿಮೆ

ಮೊನೋಕ್ರೋಮ್ ಎಕೋಟ್ಯಾಂಕ್ M15140
*Conditions apply.
CALL 88700 00768 FOR MORE INFO

★॥ನಂ.1 ಸ್ತ್ರೀಪುರುಷ॥★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಪಾಂಡುರಂಗ ಗುರೂಜಿ. 9972033162

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

1-5-2022 ಓಂಕಾರೇಶ್ವರ, ಮಹಾಕಾಳೇಶ್ವರ, ಜ್ಯೋತಿರ್ಲಿಂಗ 9-5-2022 ಕಾಶಿ, ಗಯಾ, ಅಯೋದ್ಯಾ, ಚಿತ್ರಕೂಟ, ಪ್ರಯಾಗರಾಜ್.5-5-2022 ವಿಮಾನ ಮತ್ತು ರೈಲಿನಲ್ಲಿ ರಾಮಾನುಜಾಚಾರ್ಯ ಪ್ರತಿಮೆ, ರಾಮೋಜಿ ಸಿಟಿ 6500 ಅನುಗ್ರಹಯಾತ್ರಾ: 9880079351

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್,ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಫೆಬ್ರವರಿ, ಮಾರ್ಚ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

06.04.2022, 10 ದಿನಗಳು ದೆಹಲಿ, ಅಮೃತ್ಸರ್, ವೈಷ್ಣೋದೇವಿ, ಕುಲುಮನಾಲಿ/ 25.04.2022, 8 ದಿನಗಳು ಕಾಶಿ,ಗಯಾ,ಕಲ್ಕತ್ತಾ, ಭುವನೇಶ್ವರ್ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

ಆರ್. ಗಾಂಧಿ ಟೂರ್ಸ್: 3.3.2022 4ದಿನಗಳು ಅಹೋಬಿಲ, ಶ್ರೀಶೈಲ. ಮಂತ್ರಾಲಯ, 13.5.2022 17ದಿನಗಳು ವೈಷ್ಣೋದೇವಿ, ಕುಲುಮನಾಲಿ ಸಪ್ತಶಕ್ತಿಪೀಠ. 9902433500/ 9945445809

ಭವಿಷ್ಯ

Astrology

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

ಮಾನಸಿಕ ವಶೀಕರಣವಿಧಿ ಕಲಿಯಲಿಚ್ಛಿಸುವವರು: ಮನೆಯಲ್ಲಿನ ಅಶಾಂತಿ, ರೋಗಮುಕ್ತವಾಗಲು, ಪ್ರೇಮಸಂಬಂದವಾಗಲು, ಗ್ರಾಹಕರಿಂದ ವ್ಯಾಪಾರವಾಗಲು, ನೌಕರಿಗಾಗಿ, ಸ್ತ್ರೀಪುರುಷರನ್ನು, ಜನಸಾಮಾನ್ಯರನ್ನು ಸೆಳೆಯುವ ಶಕ್ತಿಯಾಗಲಿಚ್ಛಿಸುವವರು. 8884826120

★॥ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm		Single Col	Double Col	Multi Col
		430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE

Sri. V. Veerappa
2/1/1929 - 17/2/2022
#51, Mountain road
Jayanagar, Bangaluru – 560 011
Regret to inform, that he passed away on 17-02-2022 at 1.30 noon.
Deeply mourned by the family :
Padma Veerappa, Vasundara Raja
Raja Bagmane, Aditya Bagmane
Zeenat Singh Bagmane
Shashank Bagmane and
other family and friends

ಶ್ರದ್ಧಾಂಜಲಿ

ಶ್ರೀ.ಜೆ.ಟಿ.ಪುಟ್ಟಸ್ವಾಮಿಗೌಡ
(ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕರು)
ಇವರು ದಿನಾಂಕ 17.02.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲೆಂದು ಕೋರುವ
ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು ಮತ್ತು ಬಂಧುಗಳು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಣಜಿ ಟ್ರೋಫಿ ಕ್ರಿಕೆಟ್: 10 ಸಿಕ್ಸರ್ ಸಿಡಿಸಿ ಮೂರಂಕಿ ದಾಟಿದ ಮನೀಷ್; ಸಿದ್ಧಾರ್ಥ್ ಶತಕ

ರೈಲ್ವೇಸ್ ಮೇಲೆ ಕರ್ನಾಟಕ ಆಧಿಪತ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ಆರಂಭಿಕ ಬ್ಯಾಟರ್‌ಗಳು ವೈಫಲ್ಯ ಕಂಡರೂ ನಾಯಕ ಮನೀಷ್ ಪಾಂಡೆ ಮತ್ತು ಮಧ್ಯಮ ಕ್ರಮಾಂಕದ ಕೆ.ವಿ. ಸಿದ್ಧಾರ್ಥ್ ಅವರು ಕರ್ನಾಟಕ ತಂಡಕ್ಕೆ ಆಸರೆಯಾದರು

ಇಲ್ಲಿನ ಗುರುನಾನಕ್ ಕಾಲೇಜು ಮೈದಾನದಲ್ಲಿ ಆರಂಭಗೊಂಡ ರಣಜಿ ಟೂರ್ನಿಯ ಎಲೀಟ್ 'ಸಿ' ಗುಂಪಿನ ಪಂದ್ಯದಲ್ಲಿ ಸಿದ್ಧಾರ್ಥ್ (140; 221 ಎಸೆತ, 17 ಬೌಂಡರಿ, 2 ಸಿಕ್ಸರ್) ಮತ್ತು ಮನೀಷ್ (156; 121 ಎ, 12 ಬೌಂ, 10 ಸಿ) ಭರ್ಜರಿ ಶತಕಗಳನ್ನು ಸಿಡಿಸಿದರು. 267 ರನ್‌ಗಳ ಜೊತೆಯಾಟವಾಡಿ ರೈಲ್ವೇಸ್ ಬೌಲರ್‌ಗಳನ್ನು ಕಾಡಿದರು.

ಇವರಿಬ್ಬರ ಅಬ್ಬರದ ಬ್ಯಾಟಿಂಗ್ ಪರಿಣಾಮ ಮೊದಲ ದಿನದಾಟದ ಮುಕ್ತಾಯಕ್ಕೆ ಕರ್ನಾಟಕ 90 ಓವರ್‌ಗಳಲ್ಲಿ 5ಕ್ಕೆ 392 ರನ್ ಕಲೆ ಹಾಕಿದೆ.

ಟಾಸ್ ಗೆದ್ದ ರೈಲ್ವೇಸ್ ತಂಡ ಕರ್ನಾಟಕವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. 12ನೇ ಓವರ್‌ನಲ್ಲಿ ಮಯಂಕ್ ಅಗರವಾಲ್ ರನೌಟ್ ಆಗಿ ಮರಳಿದರು. 20ನೇ ಓವರ್‌ನಲ್ಲಿ ದೇವದತ್ತ ಪಡಿಕ್ಕಲ್ ಅವರು ಯುವರಾಜ್ ಸಿಂಗ್ ಎಸೆತದಲ್ಲಿ ಔಟಾದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಆರ್.ಸಮರ್ಥ್ ಅರ್ಧಶತಕದ ಅಂಚಿನಲ್ಲಿ ಎಡವಿದರು.

ಈ ಸಂದರ್ಭದಲ್ಲಿ ಜೊತೆಗೂಡಿದ ಸಿದ್ಧಾರ್ಥ್ ಮತ್ತು ಮನೀಷ್ ಜೋಡಿ ಮನಮೋಹಕ ಆಟವಾಡಿದರು. ಬೌಲರ್‌ಗಳನ್ನು ಲೀಲಾಜಾಲವಾಗಿ ಎದುರಿಸಿದ ಇವರಿಬ್ಬರು ರನ್‌ಗಳ ಹೊಳೆ ಹರಿಸಿದರು. ದಿನದಾಟದ ಮುಕ್ತಾಯಕ್ಕೆ ಆರು ಓವರ್ ಬಾಕಿ ಇರುವ ವರೆಗೂ ಇವರ ಜೊತೆಯಾಟ ಮುಂದುವರಿಯಿತು. 10 ಸಿಕ್ಸರ್ ಮತ್ತು 12 ಬೌಂಡರಿ ಸಿಡಿಸಿದ ಮನೀಷ್ ಟ್ವೆಂಟಿ20 ಮಾದರಿಯಲ್ಲಿ ಬ್ಯಾಟ್ ಬೀಸಿ ಕೇವಲ 121 ಎಸೆತಗಳಲ್ಲಿ 156 ರನ್ ಸಿಡಿಸಿದರು. ಅವರ ವಿಕೆಟ್ ಪಡೆದ ಶಿವಂ ಚೌಧರಿ ಸಂಜೆ ವೇಳೆ ರೈಲ್ವೇಸ್ ಪಾಳಯದಲ್ಲಿ ಕೊಂಚ ಸಮಾಧಾನ ಮೂಡಿಸಿದರು. ಆದರೆ ಅಷ್ಟರಲ್ಲಿ ಕರ್ನಾಟಕದ ಸ್ಕೋರ್ ಬೋರ್ಡ್‌ನಲ್ಲಿ ಧಾರಾಳ ರನ್ ಸೇರಿತ್ತು.

ಎಸ್.ಶರತ್ ವಿಕೆಟ್ ಪಡೆದು ಚೌಧರಿ ಮತ್ತೊಂದು ಪೆಟ್ಟು ನೀಡಿದರು. ಆದರೆ ಶ್ರೇಯಸ್ ಗೋಪಾಲ್ 17 ಎಸೆತ ಎದುರಿಸಿ ವಿಕೆಟ್ ಉರುಳದಂತೆ ನೋಡಿಕೊಂಡರು.

ಮನೀಷ್ ಪಾಂಡೆ ಬ್ಯಾಟಿಂಗ್ ವೈಭವ – ಟ್ವಿಟರ್ ಚಿತ್ರ

ಕೆ.ವಿ.ಸಿದ್ಧಾರ್ಥ್ – ಪ್ರಜಾವಾಣಿ ಸಂಗ್ರಹ ಚಿತ್ರಗಳು

ಯಶ್ ಧೂಳ್ ಶತಕದ ವೈಭವ

ಈ ತಿಂಗಳ ಮೊದಲ ವಾರದಲ್ಲಿ ಮುಕ್ತಾಯಗೊಂಡ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಪ್ರಶಸ್ತಿ ಗೆದ್ದುಕೊಟ್ಟ ಯಶ್ ಧೂಳ್ ರಣಜಿ ಟೂರ್ನಿಯ ಪಂದ್ಯದಲ್ಲಿ ಅಮೋಘ ಶತಕ ಸಿಡಿಸಿ ಮಿಂಚಿದರು. ಇದು ಅವರಿಗೆ ಮೊದಲ ಪ್ರಥಮ ದರ್ಜೆ ಪಂದ್ಯ.

ಗುವಾಹಟಿಯಲ್ಲಿ ನಡೆಯುತ್ತಿರುವ ತಮಿಳುನಾಡು ಎದುರಿನ ಎಲೀಟ್ 'ಎಚ್' ಗುಂಪಿನ ಪಂದ್ಯದಲ್ಲಿ ದೆಹಲಿ ತಂಡದ ಪರ ಆರಂಭಿಕ ಬ್ಯಾಟರ್ ಆಗಿ ಕಣಕ್ಕೆ ಇಳಿದ ಯಶ್ 113 ರನ್ ಗಳಿಸಿ ಔಟಾದರು. 150 ಎಸೆತ ಎದುರಿಸಿದ ಅವರು 18 ಬೌಂಡರಿ ಗಳಿಸಿದ್ದರು. ಜಾಂಟಿ ಸಿಧು (71; 179 ಎ, 8 ಬೌಂ, 2 ಸಿ) ಅರ್ಧಶತಕ ಗಳಿಸಿದರು. ದಿನದಾಟದ ಮುಕ್ತಾಯಕ್ಕೆ ದೆಹಲಿ 90 ಓವರ್‌ಗಳಲ್ಲಿ 7ಕ್ಕೆ 291 ರನ್ ಗಳಿಸಿದೆ. 45 ರನ್ ಗಳಿಸಿದ ಲಲಿತ್ ಯಾದವ್ ಮತ್ತು 16 ರನ್‌ಗಳೊಂದಿಗೆ ಸಮರ್‌ಜೀತ್ ಸಿಂಗ್ ಕಣದಲ್ಲಿದ್ದಾರೆ.

ಸ್ಕೋರ್ ಕಾರ್ಡ್

ಕರ್ನಾಟಕ 5ಕ್ಕೆ 392 (90 ಓವರ್)
ಮಯಂಕ್ ರನೌಟ್ (ದೇವ್‌ಧರ್) 16 (38 ಎ, 4x3), ದೇವದತ್ತ ಸಿ ಯಾದವ್ ಬಿ ಯುವರಾಜ್ 21 (56 ಎ, 4x3), ಸಮರ್ಥ್ ಸಿ ಚೌಧರಿ ಬಿ ಅವಿನಾಶ್ 47 (79 ಎ, 4x8), ಸಿದ್ಧಾರ್ಥ್ ಬ್ಯಾಟಿಂಗ್ 140 (221 ಎ, 4x17, 6x2), ಮನೀಷ್ ಸಿ ಯುವರಾಜ್ ಬಿ ಚೌಧರಿ 156 (121 ಎ, 4x12, 6x10), ಶರತ್ ಸ್ಟಂಪ್ಡ್ ಯಾದವ್ ಬಿ ಚೌಧರಿ 5 (9 ಎ 4x1), ಶ್ರೇಯಸ್ ಬ್ಯಾಟಿಂಗ್ 1 (17 ಎ)
ಇತರೆ (ಲೆಗ್‌ಬೈ 4, ನೋಬಾಲ್ 1, ವೈಡ್ 1) 6
ವಿಕೆಟ್ ಪತನ: 1-27 (ಮಯಂಕ್ ಅಗರವಾಲ್, 11.4), 2-50 (ದೇವದತ್ತ ಪಡಿಕ್ಕಲ್, 19.1), 3-110 (ಆರ್. ಸಮರ್ಥ್, 36.2), 4-377 (ಮನೀಷ್ ಪಾಂಡೆ, 83.2), 5-384 (ಶ್ರೀನಿವಾಸ್ ಶರತ್, 85.1)
ಬೌಲಿಂಗ್: ಅಮಿತ್ ಮಿಶ್ರಾ 19–4–74–0, ಹಿಮಾಂಶು ಸಾಂಗ್ವಾನ್ 2.1–0–7–0, ಯುವರಾಜ್ ಸಿಂಗ್ 18–4–52–1, ಅವಿನಾಶ್ ಯಾದವ್ 25.5–2–132–1, ಕರ್ಣ ಶರ್ಮಾ 14–1–75–0, ಶಿವಂ ಚೌಧರಿ 6.5–1–22–2, ಮೊಹಮ್ಮದ್ ಸೈಫ್ 4.1–0–26–0

ಸರಣಿ ಗೆಲುವಿನ ನಿರೀಕ್ಷೆಯಲ್ಲಿ

ರೋಹಿತ್ ಶರ್ಮಾ ಬಳಗ

ವೆಸ್ಟ್ ಇಂಡೀಸ್ ಎದುರಿನ 2ನೇ ಟಿ–20 ಪಂದ್ಯ ಇಂದು

ಕೋಲ್ಕತ್ತ (ಪಿಟಿಐ): ಮೊದಲ ಪಂದ್ಯದಲ್ಲಿ ಎಲ್ಲ ವಿಭಾಗಗಳಲ್ಲೂ ಪ್ರಾಬಲ್ಯ ಮೆರೆದು ಅಧಿಕಾರಯುತ ಜಯ ಸಾಧಿಸಿರುವ ಭಾರತ ತಂಡ ವೆಸ್ಟ್ ಇಂಡೀಸ್ ಎದುರು ಶುಕ್ರವಾರ ನಡೆಯುವ ಟ್ವೆಂಟಿ20 ಕ್ರಿಕೆಟ್ ಸರಣಿಯ 2ನೇ ಪಂದ್ಯದಲ್ಲಿ ಜಯದ ಭರವಸೆಯಲ್ಲಿದೆ.

ಬುಧವಾರ ನಡೆದ ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗ ಆರು ವಿಕೆಟ್‌ಗಳ ಜಯ ಸಾಧಿಸಿತ್ತು. ಬೌಲಿಂಗ್‌ನಲ್ಲಿ ಯುವ ಸ್ಪಿನ್ನರ್ ರವಿ ಬಿಷ್ಣೋಯಿ ಗಮನಾರ್ಹ ಸಾಧನೆ ಮಾಡಿದ್ದರೆ ಬ್ಯಾಟಿಂಗ್‌ನಲ್ಲಿ ನಾಯಕ ರೋಹಿತ್ ಶರ್ಮಾ ಮತ್ತು ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ ಮಿಂಚಿದ್ದರು. ಆದರೆ ವಿರಾಟ್ ಕೊಹ್ಲಿ ನಿರೀಕ್ಷೆ ಹುಸಿಗೊಳಿಸಿದ್ದರು. ಆದ್ದರಿಂದ ಎರಡನೇ ಪಂದ್ಯದಲ್ಲಿ ಎಲ್ಲರ ಚಿತ್ತ ಅವರತ್ತ ನೆಟ್ಟಿದೆ. ಅಹಮದಾಬಾದ್‌ನಲ್ಲಿ ನಡೆದ ಏಕದಿನ ಸರಣಿಯನ್ನು 0–3ರಲ್ಲಿ ಕಳೆದುಕೊಂಡಿರುವ ಕೀರನ್ ಪೊಲಾರ್ಡ್ ಬಳಗ ತಮ್ಮ ನೆಚ್ಚಿನ ಟ್ವೆಂಟಿ20 ಕ್ರಿಕೆಟ್‌ನಲ್ಲಿ ತಿರುಗೇಟು ನೀಡುವ ಉತ್ಸಾಹದಲ್ಲಿ ಇಲ್ಲಿಗೆ ಬಂದಿಳಿದಿತ್ತು. ಆದರೆ ಪಂದ್ಯದ ಯಾವ ಹಂತದಲ್ಲೂ ಭಾರತಕ್ಕೆ ಸವಾಲೊಡ್ಡಲು ಆ ತಂಡಕ್ಕೆ ಸಾಧ್ಯವಾಗಲಿಲ್ಲ.

ಎರಡನೇ ಪಂದ್ಯದಲ್ಲಿ ಗೆದ್ದರೆ ಭಾರತ ಸರಣಿ ತನ್ನದಾಗಿಸಿಕೊಳ್ಳಲಿದೆ. ಇದು ಸಾಧ್ಯವಾದರೆ, ಪೂರ್ಣಪ್ರಮಾಣದ ನಾಯಕನಾದ ಬಳಿಕ ರೋಹಿತ್ ಶರ್ಮಾ ಗೆದ್ದ ಸತತ ಮೂರನೇ ಸರಣಿ ಇದಾಗಲಿದೆ. ಬೌಲಿಂಗ್ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರಿಗೆ ಅವಕಾಶ ಕೊಟ್ಟು ಮೊದಲ ಪಂದ್ಯದಲ್ಲಿ ಆರು ಮಂದಿ ಬೌಲರ್‌ಗಳೊಂದಿಗೆ ಕಣಕ್ಕೆ ಇಳಿದ ಭಾರತ ಶ್ರೇಯಸ್ ಅಯ್ಯರ್ ಅವರನ್ನು ಕೈಬಿಟ್ಟಿತ್ತು. ಇದೇ ತಂತ್ರದೊಂದಿಗೆ ಎರಡನೇ ಪಂದ್ಯದಲ್ಲೂ ಕಣಕ್ಕೆ ಇಳಿದರೆ ಶ್ರೇಯಸ್ ಮತ್ತೊಮ್ಮೆ ಬೆಂಚು ಕಾಯಬೇಕಾದೀತು.

ದೀಪಕ್ ಚಾಹರ್ ಆಡುವುದು ಸಂದೇಹ: ಮೊದಲ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುತ್ತಿದ್ದಾಗ ಬಲಗೈಗೆ ಗಾಯಗೊಂಡಿರುವ ವೇಗದ ಬೌಲರ್ ದೀಪಕ್ ಚಾಹರ್ ಈ ಪಂದ್ಯದಲ್ಲಿ ಆಡುತ್ತಾರೆಯೋ ಇಲ್ಲವೋ ಎಂಬುದು ಸಂದೇಹ.ಈ ಬಾರಿಯ ಭಾರತ ಪ್ರವಾಸದಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿರುವ ವೆಸ್ಟ್ ಇಂಡೀಸ್ ಗಾಯದ ಸಮಸ್ಯೆಯಿಂದಾಗಿ ಮೊದಲ ಪಂದ್ಯದಲ್ಲಿ ಜೇಸನ್ ಹೋಲ್ಡರ್ ಅವರಿಗೆ ವಿಶ್ರಾಂತಿ ನೀಡಿತ್ತು. ಮುಂದಿನ ಪಂದ್ಯಕ್ಕೆ ಲಭ್ಯ ಇರುವ ನಿರೀಕ್ಷೆ ಇದೆ ಎಂದು ತಂಡದ ಆಡಳಿತ ತಿಳಿಸಿದೆ.

ನಿಕೋಲಸ್ ಪೂರನ್ ಫಾರ್ಮ್ ಕಂಡುಕೊಂಡಿರುವುದು ವೆಸ್ಟ್ ಇಂಡೀಸ್ ತಂಡದಲ್ಲಿ ಭರವಸೆ ಮೂಡಿಸಿದೆ. ಅರಂಭಿಕ ಬ್ಯಾಟರ್ ಕೈಲ್ ಮೇಯರ್ಸ್ ಮತ್ತು ಮಧ್ಯಮ ಕ್ರಮಾಂಕದ ಕೀರನ್ ಪೊಲಾರ್ಡ್ ತಂಡಕ್ಕೆ ತಮ್ಮಿಂದಾದ ಕಾಣಿಕೆ ನೀಡಿದ್ದಾರೆ. ಹೀಗಾಗಿ ಅವರ ಮೇಲೆಯೂ ನಿರೀಕ್ಷೆ ಇದೆ.

ಆರಂಭ: ಸಂಜೆ 7.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರೋಹಿತ್ ಶರ್ಮಾ –ಪಿಟಿಐ ಚಿತ್ರ

ಪ್ರಶಸ್ತಿ ವಿಜೇತ ವಿಜಯಾ ಕ್ರಿಕೆಟ್ ಕ್ಲಬ್ ತಂಡ: (ಎಡದಿಂದ) ನಿಂತವರು: ಧ್ರುವ ಪ್ರಭಾಕರ್, ವಿಜಯರಾಜ್, ತಿಪ್ಪಾರೆಡ್ಡಿ, ಯಶ್ ನೇರಲ್ಕರ್, ಮಿಥುಲ್ ಭಟ್, ಅರ್ನವ್ ಪಿಲ್ಲುಟ್ಲಾ, ಯಶೋವರ್ಧನ್ ಪರಂತಾಪ್, ಅರ್ಜುನ್ ನಾಯರ್, ಮಾನ್ ದಕ್ಷೇಶ್ ಪಟ್ವಾ, ಮನುವೀರ್. ಮಂಡಿಯೂರಿದವರು: ಮಿತ್ ದಕ್ಷೇಶ್ ಪಟ್ವಾ, ಅಥ್ರಾವ್ ಶುಕ್ಲಾ, ವಿಶಾಲ್ ಕುಮಾರ್, ದೃಶ್ಯ ಪಾಂಡೆ, ಅಕ್ಷತ್ ಪ್ರಭಾಕರ್

ಕಬಡ್ಡಿ: ಪವನ್ 'ಸೂಪರ್–20'; ಬುಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಲಯದಲ್ಲಿರುವ ಪವನ್ ಶೆರಾವತ್ ಮತ್ತೊಮ್ಮೆ 'ಸೂಪರ್–20' ಸಾಧನೆಯೊಂದಿಗೆ ಮಿಂಚಿದರು. ಅವರ ಭರ್ಜರಿ ಆಲ್‌ರೌಂಡ್ ಆಟಕ್ಕೆ ಭರತ್ ಉತ್ತಮ ಸಹಕಾರ ನೀಡಿದರು. ಇದರಿಂದಾಗಿ ಬೆಂಗಳೂರು ಬುಲ್ಸ್ ತಂಡ ಗೆಲುವಿನ ನಗೆ ಸೂಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್ ಆವರಣದಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಬುಲ್ಸ್ 46-24ರಲ್ಲಿ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯ ಗಳಿಸಿತು.

ಪವನ್ ಶೆರಾವತ್ 7 ಟ್ಯಾಕಲ್ ಮತ್ತು 2 ಬೋನಸ್ ಪಾಯಿಂಟ್‌ಗಳೊಂದಿಗೆ 20 ಪಾಯಿಂಟ್‌ಗಳನ್ನು ಕಲೆ ಹಾಕಿದರು. ಭರತ್ 3 ಟ್ಯಾಕಲ್ ಮತ್ತು 1 ಬೋನಸ್ ಸೇರಿದಂತೆ 8 ಪಾಯಿಂಟ್ ಕಲೆ ಹಾಕಿದರು. ಅಮನ್ 4, ಚಂದ್ರನ್ ರಂಜಿತ್ ಮತ್ತು ಸೌರಭ್ ನಂದಾಲ್ ತಲಾ 3 ಪಾಯಿಂಟ್ ಗಳಿಸಿದರು.

ಹರಿಯಾಣ ಸ್ಟೀಲರ್ಸ್ ಪರ ನಾಯಕ ವಿಕಾಸ್ ಖಂಡೋಲ ಅವರೊಂದಿಗೆ ಆಶಿಶ್ ಮತ್ತು ಸುರೇಂದರ್ ನಾಡಾ ತಲಾ 4 ಪಾಯಿಂಟ್ ಗಳಿಸಿದರು. ಬೇರೆ ಯಾರಿಗೂ ಮಿಂಚಲು ಸಾಧ್ಯವಾಗಲಿಲ್ಲ.

ಯೋಧಾಗೆ ಮಣಿದ ಮುಂಬಾ

ರಾತ್ರಿ ನಡೆದ ಮೊದಲ ಪಂದ್ಯದಲ್ಲಿ ಯು ಮುಂಬಾ ತಂಡ ಯು.ಪಿ ಯೋಧಾ ಎದುರು ಸೋಲುಂಡಿತು. ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿದ ಯೋಧಾ ಮೊದಲಾರ್ಧದ ಮುಕ್ತಾಯದ ವೇಳೆ 18–12ರ ಮುನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲಿ ಇನ್ನಷ್ಟು ಪ್ರಾಬಲ್ಯ ಮೆರೆಯಿತು.

ಸುರೇಂದರ್ ಗಿಲ್ ಎಂಟು ಪಾಯಿಂಟ್‌ಗಳೊಂದಿಗೆ ಮಿಂಚಿದರೆ ಪ್ರದೀಪ್ ನರ್ವಾಲ್ ಆರು ಪಾಯಿಂಟ್ ಗಳಿಸಿದರು. ಆಶು ಸಿಂಗ್, ಶುಭಂ ಕುಮಾರ್, ಸುಮಿತ್ ಮತ್ತು ಶ್ರೀಕಾಂತ್ ತಲಾ ಮೂರು ಪಾಯಿಂಟ್‌ಗಳೊಂದಿಗೆ ತಂಡಕ್ಕೆ ಕಾಣಿಕೆ ನೀಡಿದರು.

ಯು ಮುಂಬಾ ತಂಡದ ಪರ ಅಜಿತ್ ಕುಮಾರ್ ಮತ್ತು ರಿಂಕು ಮಾತ್ರ ಸ್ವಲ್ಪ ಮಿಂಚಿದರು. ಅವರು ತಲಾ ಐದು ಪಾಯಿಂಟ್ ಗಳಿಸಿದರೆ ಅಭಿಷೇಕ್ ಸಿಂಗ್ ಮತ್ತು ಹರೇಂದ್ರ ಕುಮಾರ್ ತಲಾ ನಾಲ್ಕುಯ ಪಾಯಿಂಟ್ ಗಳಿಸಿದರು.

ದಿನದ ಮೂರನೇ ಪಂದ್ಯದಲ್ಲಿ ದಬಂಗ್ ಡೆಲ್ಲಿ 26-23ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು. ಸದ್ಯ ಪಟ್ನಾ, ಯುಪಿ ಯೋಧಾ ಮತ್ತು ದಬಂಗ್ ಡೆಲ್ಲಿ ತಂಡಗಳು ಪ್ಲೇ ಆಫ್‌ಗೆ ಅರ್ಹತೆ ಗಳಿಸಿವೆ.

ಶುಕ್ರವಾರ ನಡೆಯುವ ಮೊದಲ ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ಬೆಂಗಾಲ್ ವಾರಿಯರ್ಸ್ ಸೆಣಸಲಿವೆ. ಬಳಿಕ ತೆಲುಗು ಟೈಟನ್ಸ್– ದಬಂಗ್ ಡೆಲ್ಲಿ ಮತ್ತು ಮೂರನೇ ಹಣಾಹಣಿಯಲ್ಲಿ ತಮಿಳ್ ತಲೈವಾಸ್ ಮತ್ತು ಗುಜರಾತ್ ಜೈಂಟ್ಸ್ ಮುಖಾಮುಖಿಯಾಗಲಿವೆ.

ಯು.ಪಿ ಯೋಧಾ ಆವರಣದಿಂದ ತಪ್ಪಿಸಿಕೊಂಡ ಯು ಮುಂಬಾ ತಂಡದ ಅಜಿತ್ ಕುಮಾರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	21	15	5	1	81
ದಬಂಗ್ ಡೆಲ್ಲಿ	21	11	6	4	70
ಯು ಪಿ ಯೋಧಾ	22	10	9	3	68
ಬೆಂಗಳೂರು ಬುಲ್ಸ್	22	11	9	2	66
ಹರಿಯಾಣ ಸ್ಟೀಲರ್ಸ್	21	10	8	3	63
ಜೈಪುರ ಪಿಂಕ್ ಪ್ಯಾಂಥರ್ಸ್	21	10	9	2	62
ಪುಣೇರಿ ಪಲ್ಟನ್	20	11	8	1	60
ಗುಜರಾತ್ ಜೈಂಟ್ಸ್	20	8	8	4	57
ಯು ಮುಂಬಾ	21	7	9	5	54
ಬೆಂಗಾಲ್ ವಾರಿಯರ್ಸ್	21	8	10	3	52
ತಮಿಳ್ ತಲೈವಾಸ್	21	5	10	6	47
ತೆಲುಗು ಟೈಟನ್ಸ್	21	1	16	4	27

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

ವಿಜಯಾ ಕ್ರಿಕೆಟ್ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶಾಲ್ ಕುಮಾರ್ (29ಕ್ಕೆ 3), ಅರ್ಜುನ್ ನಾಯರ್ (21ಕ್ಕೆ 3) ಮತ್ತು ಮಾನ್ ದಕ್ಷೇಶ್ ಪಟ್ವಾ (5ಕ್ಕೆ 2) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ವಿಜಯಾ ಕ್ರಿಕೆಟ್ ಕ್ಲಬ್ ತಂಡವು ಕೆಎಸ್‌ಸಿಎ ಗುಂಪು 1, 2 ಮತ್ತು ಮೂರರ ಅಂತರ ಕ್ಲಬ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಗುರುವಾರ ನಡೆದ ಫೈನಲ್ ಪಂದ್ಯದಲ್ಲಿ 85 ರನ್‌ಗಳಿಂದ ಜವಾಹರ್ ಸ್ಪೋರ್ಟ್ಸ್ ಕ್ಲಬ್ (1) ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ವಿಜಯಾ ಕ್ರಿಕೆಟ್ ಕ್ಲಬ್: 46.4 ಓವರ್‌ಗಳಲ್ಲಿ 198 (ತಿಪ್ಪಾರೆಡ್ಡಿ 39, ಧ್ರುವ ಪಿ 57, ಯಶೋವರ್ಧನ್ ಪರಂತಾಪ್ 28; ಅದ್ವೈತ್ ಶೆಟ್ಟಿ 50ಕ್ಕೆ 2, ನಿರಂಜನ್ ಎನ್ 34ಕ್ಕೆ 4, ಕೈವಲ್ಯ ಮಿಶ್ರಾ 14ಕ್ಕೆ 2). ಜವಾಹರ್ ಸ್ಪೋರ್ಟ್ಸ್ ಕ್ಲಬ್ (1): 37.1 ಓವರ್‌ಗಳಲ್ಲಿ 113 (ವಿಶಾಲ್ ಕುಮಾರ್ 29ಕ್ಕೆ 3, ಅರ್ಜುನ್ ನಾಯರ್ 21ಕ್ಕೆ 3, ಮಾನ್ ದಕ್ಷೇಶ್ ಪಟ್ವಾ 5ಕ್ಕೆ 2). ಫಲಿತಾಂಶ: ವಿಜಯಾ ಕ್ರಿಕೆಟ್ ಕ್ಲಬ್‌ಗೆ 85 ರನ್‌ಗಳ ಜಯ.

ಬ್ಯಾಡ್ಮಿಂಟನ್: ಭಾರತ ತಂಡದ ಜಯಭೇರಿ

ಷಾ ಆಲಂ, ಮಲೇಷ್ಯಾ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ ನೇತೃತ್ವದ ಭಾರತ ಪುರುಷರ ತಂಡವು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಹಾಂಗ್‌ಕಾಂಗ್ ಎದುರು ಜಯಿಸಿತು. ಇದರೊಂದಿಗೆ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ತಂಡದ ಆಸೆ ಜೀವಂತವಾಗುಳಿಯಿತು.

ಗುರುವಾರ ಭಾರತ ತಂಡವು 3-2ರಿಂದ ಗೆಲುವು ಸಾಧಿಸಿತು. ಮೊದಲ ಪಂದ್ಯದಲ್ಲಿ ಕೊರಿಯಾ ಎದುರು ಮುಗ್ಗರಿಸಿದ್ದ ಭಾರತ ಸಂಕಷ್ಟಕ್ಕೆ ಸಿಲುಕಿತ್ತು. 'ಎ' ಗುಂಪಿನಲ್ಲಿ ಭಾರತ ಸದ್ಯ 3ನೇ ಸ್ಥಾನದಲ್ಲಿದೆ.

ರಾಜಭವನಕ್ಕೆ ಬಂದು ಮಾಹಿತಿ ಕೊಡಿ ಮಮತಾಗೆ ರಾಜ್ಯಪಾಲರ ಸೂಚನೆ

ಕೋಲ್ಕತ್ತ (ಪಿಟಿಐ): ತಾವು ಪ್ರಶ್ನಿಸಿರುವ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಲು ರಾಜಭವನಕ್ಕೆ ಬರುವಂತೆ ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಸೂಚಿಸಿದ್ದಾರೆ.

ಟಿಎಂಸಿ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವ ಜಗದೀಪ್ ಧನಕರ್ ಅವರು ತಮ್ಮ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಇದುವರೆಗೆ ಸಕರಾತ್ಮಕವಾಗಿ ಪ್ರತಿಕ್ರಿಯಿಸಿಲ್ಲ ಹೇಳಿದ್ದಾರೆ.

'ಸಾಂವಿಧಾನಿಕ ಅಸ್ಥಿರತೆ' ತಪ್ಪಿಸುವ ಸಲುವಾಗಿ ಹಲವು ವಿಷಯಗಳ ಬಗ್ಗೆ ಚರ್ಚಿಸಲು ವಾರದಲ್ಲಿ ರಾಜಭವನಕ್ಕೆ ಭೇಟಿ ನೀಡುವಂತೆ ಮಮತಾ ಬ್ಯಾನರ್ಜಿ ಅವರಿಗೆ ಫೆಬ್ರುವರಿ 15ರಂದು ಬರೆದ ಪತ್ರದಲ್ಲಿ ರಾಜ್ಯಪಾಲರು ಒತ್ತಾಯಿಸಿದ್ದರು.

'ಪಟ್ಟಿ ಮಾಡಿರುವ ವಿಷಯಗಳಿಗೆ ಮಮತಾ ಅವರಿಂದ ಪ್ರತಿಕ್ರಿಯೆ ಬಂದಿಲ್ಲ. ಸಂವಿಧಾನದ 167ನೇ ವಿಧಿಯಡಿ ರಾಜ್ಯಪಾಲರಿಗೆ ಮಾಹಿತಿ ನೀಡುವುದು ಮುಖ್ಯಮಂತ್ರಿಗಳ ಸಾಂವಿಧಾನಿಕ ಕರ್ತವ್ಯವಾಗಿದೆ' ಎಂದು ಅವರು ತಿಳಿಸಿದ್ದಾರೆ.

'ವಾರದಲ್ಲಿ, ಯಾವುದೇ ಸಮಯದಲ್ಲಿ ರಾಜಭವನದಲ್ಲಿ ಸಂವಾದ ನಡೆಸಲು ಗೌರವಾನ್ವಿತ ಮುಖ್ಯಮಂತ್ರಿಯವರಿಗೆ ಒತ್ತಾಯಿಸಲಾಗಿದೆ. ಪ್ರತಿಕ್ರಿಯಿಸದಿದ್ದರೆ ಸಾಂವಿಧಾನಿಕ ಅಸ್ಥಿರತೆಗೆ ಕಾರಣವಾಗುವ ಸಾಧ್ಯತೆ ಇರುತ್ತದೆ. 'ಮುಖ್ಯಮಂತ್ರಿ, ರಾಜ್ಯಪಾಲರಂತಹ ಸಾಂವಿಧಾನಿಕ ಹುದ್ದೆಯಲ್ಲಿರುವವರ ನಡುವೆ ಸಂವಾದಅತ್ಯಗತ್ಯ' ಎಂದೂ ಗುರುವಾರ ಸರಣಿ ಟ್ವೀಟ್‌ಗಳಲ್ಲಿ ತಿಳಿಸಿದ್ದಾರೆ.

ಜಗದೀಪ್ ಧನಕರ್

ಮಮತಾ ಬ್ಯಾನರ್ಜಿ

ಉಕ್ರೇನ್: ಯಾವುದೇ ಸಮಯದಲ್ಲಿ ರಷ್ಯಾದಿಂದ ದಾಳಿ– ಶ್ವೇತಭವನ

ವಾಷಿಂಗ್ಟನ್ (ಪಿಟಿಐ): ಯಾವುದೇ ಸಮಯದಲ್ಲಿ ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವ ಸಾಧ್ಯತೆ ಇದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಭದ್ರತೆಗೆ ಸಂಬಂಧಿಸಿದ ಜರ್ಮನಿಯ ಮ್ಯೂನಿಚ್‌ನಲ್ಲಿ ಫೆ.18ರಿಂದ ಮೂರು ದಿನಗಳ ಸಮಾವೇಶ ನಡೆಯಲಿದೆ. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಈ ಸಮಾವೇಶದಲ್ಲಿ ಭಾಗವಹಿಸುವರು. ಜಾಗತಿಕ ನಾಯಕರೊಂದಿಗೆ ಚರ್ಚಿಸಿ, ರಷ್ಯಾ ವಿರುದ್ಧ ಒಗ್ಗಟ್ಟು ಸಾಧಿಸಲು ಅವರು ಪ್ರಯತ್ನಿಸುವರು ಎಂದು ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಜೆನ್ ಸಾಕಿ

ರಷ್ಯಾ–ಉಕ್ರೇನ್ ವಿದ್ಯಮಾನಗಳಿಗೆ ಸಂಬಂಧಿಸಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ, 'ಉಕ್ರೇನ್ ಮೇಲೆ ದಾಳಿ ನಡೆಸಲಿರುವ ರಷ್ಯಾ, ತನ್ನ ನಡೆಯನ್ನು ಸಮರ್ಥಿಸಲು ಸುಳ್ಳು ನೆಪಗಳನ್ನು ಹೇಳುತ್ತದೆ. ಈ ಹಿಂದೆಯೂ ಇಂಥ ನಿದರ್ಶನಗಳನ್ನು ನಾವು ನೋಡಿದ್ದೇವೆ' ಎಂದು ಅವರು ತಿಳಿಸಿದರು.

ಭಾರತ ಬೆಂಬಲದ ವಿಶ್ವಾಸ: ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವುದು ಸನ್ನಿಹಿತವಾಗಿದೆ ಎಂದಿರುವ ಅಮೆರಿಕ, ಅಂಥ ಸನ್ನಿವೇಶ ಸೃಷ್ಟಿಯಾದಲ್ಲಿ ಭಾರತವು ತನ್ನ ಪರ ನಿಲ್ಲುವ ವಿಶ್ವಾಸ ಇದೆ ಎಂದು ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ನೆಡ್ ಪ್ರೈಸ್, 'ನಿಯಮಗಳ ಅನುಸಾರ ಜಾಗತಿಕ ಸುವ್ಯವಸ್ಥೆ ಇರಬೇಕು ಎಂದು ಭಾರತ ಪ್ರತಿಪಾದಿಸುತ್ತದೆ. ಹೀಗಾಗಿ, ಅದು ತನ್ನ ಪರ ನಿಲ್ಲುವ ವಿಶ್ವಾಸ ಇದೆ' ಎಂದರು. ರಷ್ಯಾ ಪಡೆಗಳು ಉಕ್ರೇನ್‌ನಿಂದ ಹೊರಹೋಗುತ್ತಿವೆ ಎನ್ನುವುದು ಸುಳ್ಳು ಎಂದು ಅಮೆರಿಕ ಹೇಳಿದೆ. ಉಕ್ರೇನ್‌ನಿಂದ ಭದ್ರತಾ ಪಡೆಯನ್ನು ಹಿಂದಕ್ಕೆ ಕರೆಯಿಸಿಕೊಳ್ಳುತ್ತಿದ್ದೇವೆ ಎನ್ನುವ ರಷ್ಯಾದ ಹೇಳಿಕೆಗೆ ಪ್ರತಿಯಾಗಿ ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಬುಧವಾರ ಸುದ್ದಿಗಾರರ ಜತೆ ಮಾತನಾಡುತ್ತಾ ಈ ವಿಚಾರ ಬಹಿರಂಗಪಡಿಸಿದ್ದಾರೆ.

'ಸದ್ಯಕ್ಕೆ ಭಾರತೀಯರ ಸ್ಥಳಾಂತರ ಇಲ್ಲ'

ನವದೆಹಲಿ: ಉಕ್ರೇನ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸುವ ಯಾವುದೇ ಯೋಜನೆಯನ್ನು ಸರ್ಕಾರ ತಕ್ಷಣಕ್ಕೆ ಹೊಂದಿಲ್ಲ. ಭಾರತೀಯ ಪ್ರಜೆಗಳ ಸುರಕ್ಷತೆಯೇ ನಮ್ಮ ಪ್ರಮುಖ ಆದ್ಯತೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಂಇಎ ವಕ್ತಾರ ಅರಿಂದಮ್ ಬಾಗ್ಚಿ ಅವರು,' ಉಕ್ರೇನ್ ಉದ್ವಿಗ್ನತೆಯನ್ನು ನಿರಂತರ ರಾಜತಾಂತ್ರಿಕ ಮಾತುಕತೆ ಮೂಲಕ ನಿವಾರಿಸಬೇಕು. ಈ ಬಿಕ್ಕಟ್ಟು ನಿವಾರಣೆಗೆ ಭಾರತದ ಬೆಂಬಲವಿದೆ' ಎಂದು ಹೇಳಿದ್ದಾರೆ.

ಅರಿಂದಮ್ ಬಾಗ್ಚಿ

ಸಂಸದರ ಬಗ್ಗೆ ಸಿಂಗಪುರ ಪ್ರಧಾನಿ ಹೇಳಿಕೆ: ಭಾರತದ ತೀವ್ರ ಆಕ್ಷೇಪ

ನವದೆಹಲಿ (ಪಿಟಿಐ): ಭಾರತದ ಸಂಸದರು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕುರಿತು ಸಿಂಗಪುರದ ಪ್ರಧಾನಿ ಲೀ ಸೀನ್ ಲೂಂಗ್ ಅವರು ಅಲ್ಲಿನ ಸಂಸತ್ತಿನಲ್ಲಿ ನೀಡಿರುವ ಹೇಳಿಕೆಗೆ ಕೇಂದ್ರ ಸರ್ಕಾರ ತೀವ್ರ ಆಕ್ಷೇಪವನ್ನು ದಾಖಲಿಸಿದೆ.

'ಲೂಂಗ್ ಅವರ ಹೇಳಿಕೆ ಅನಪೇಕ್ಷಿತ. ಆಕ್ಷೇಪವನ್ನು ಸಿಂಗಪುರ ಸರ್ಕಾರಕ್ಕೆ ತಿಳಿಸಲಾಗಿದೆ' ಎಂದು ಹೇಳಿದೆ. ಸಿಂಗಪುರದ ಹೈಕಮಿಷನರ್ ಅವರನ್ನು ಕರೆಸಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತನ್ನ ಆಕ್ಷೇಪ ವ್ಯಕ್ತಪಡಿಸಿತು ಎಂದು ಗೊತ್ತಾಗಿದೆ.

'ಪ್ರಜಾಪ್ರಭುತ್ವವು ರಾಷ್ಟ್ರದಲ್ಲಿ ಹೇಗೆ ಕೆಲಸ ಮಾಡಬೇಕು?' ಕುರಿತು ಮಾತನಾಡಿದ ಲೂಂಗ್ ಅವರು, ಭಾರತದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂ ಅವರ ಹೆಸರು ಉಲ್ಲೇಖಿಸಿದ್ದರು. 'ಆದರೆ ಭಾರತದಲ್ಲಿ ಈಗ ರಾಜಕೀಯ ವ್ಯವಸ್ಥೆ ಬದಲಾಗಿದೆ. ನೆಹರೂ ಅವರ ಭಾರತವು ಬದಲಾಗಿದೆ. ಮಾಧ್ಯಮದ ವರದಿಗಳ ಪ್ರಕಾರ, ಲೋಕಸಭೆಯಲ್ಲಿ ಸದ್ಯ ಅತ್ಯಾಚಾರ ಮತ್ತು ಕೊಲೆ ಆರೋಪಗಳು ಸೇರಿದಂತೆ ಕ್ರಿಮಿನಲ್ ಆರೋಪವುಳ್ಳವರು ಇದ್ದಾರೆ. ಈ ಆರೋಪಗಳು ರಾಜಕೀಯ ಪ್ರೇರಿತ ಎಂಬ ಮಾತೂ ಇದೆ' ಎಂದಿದ್ದರು.

'ಉನ್ನತ ಚಿಂತನೆಗಳು ಮತ್ತು ಶ್ರೇಷ್ಠ ಮೌಲ್ಯಗಳ ಆಧಾರದಲ್ಲಿ ಹೆಚ್ಚಿನ ರಾಷ್ಟ್ರಗಳು ನಿರ್ಮಾಣಗೊಂಡಿರುತ್ತವೆ. ಆದರೆ ಸಮಯ ಸರಿದಂತೆ ಹಾಗೆಯೇ ಉಳಿಯುವುದಿಲ್ಲ. ದಶಕಗಳು ಮತ್ತು ತಲೆಮಾರು ಕಳೆದಂತೆ ಸ್ಥಾಪಕ ನಾಯಕರನ್ನು ಮತ್ತು ಆರಂಭದ ತಲೆಮಾರು ಮೀರಿ ವಿಚಾರಗಳು ಬದಲಾಗುತ್ತವೆ. ಹೊಸ ಪೀಳಿಗೆಯು ಉನ್ನತ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಬೇಕು. ಅದರ ಆಧಾರದಲ್ಲಿಯೇ ದೇಶವನ್ನು ಕಟ್ಟಬೇಕು' ಎಂದು ಸಿಂಗಪುರದ ಅಭಿವೃದ್ಧಿ ಕುರಿತು 70 ವರ್ಷದ ಲೂಂಗ್ ಅವರು ಸಲಹೆ ಮಾಡಿದ್ದರು.

ಕಾಂಗ್ರೆಸ್ ಪ್ರತಿಕ್ರಿಯೆ: ದೇಶದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂ ಅವರು ಇಂದಿಗೂ ವಿಶ್ವದ ನಾಯಕರಿಗೆ ಸ್ಫೂರ್ತಿದಾಯಕರಾಗಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಒಳಗೆ ಮತ್ತು ಹೊರಗೆ ಅವಹೇಳನ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷವು ಟ್ವೀಟ್ ಮಾಡಿದೆ.

ಬ್ರೆಜಿಲ್ ಪೆಟ್ರೋಪೊಲಿಸ್ ನಗರದಲ್ಲಿ ಭೂ ಕುಸಿತದಿಂದ ಕೆಸರಿನಲ್ಲಿ ಸಿಲುಕಿರುವ ಮೃತ ದೇಹವನ್ನು ಹೊರ ತೆಗೆಯುವ ಕಾರ್ಯಾಚರಣೆಯಲ್ಲಿ ತೊಡಗಿರುವ ಅಲ್ಲಿನ ಸಿಬ್ಬಂದಿ –ಎಪಿ/ಪಿಟಿಐ ಚಿತ್ರ

ಬ್ರೆಜಿಲ್: ಭೂ ಕುಸಿತಕ್ಕೆ 94 ಸಾವು

ಪೆಟ್ರೋಪೊಲಿಸ್(ಬ್ರೆಜಿಲ್): ಇಲ್ಲಿ ಭೀಕರ ಮಳೆಯಿಂದ ಸಂಭವಿಸಿದ ಭೂ ಕುಸಿತ ಮತ್ತು ಪ್ರವಾಹದಿಂದಾಗಿ 94 ಮಂದಿ ಮೃತಪಟ್ಟಿದ್ದು, 12 ಮಂದಿ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ದುರ್ಘಟನೆಯಲ್ಲಿ ಎಷ್ಟೋ ಮನೆ ಮತ್ತು ವಾಹನಗಳು ಕೊಚ್ಚಿ ಹೋಗಿವೆ. 400ಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ. ಎಷ್ಟು ಮೃತ ದೇಹಗಳು ಸಿಲುಕಿಕೊಂಡಿವೆ ಎಂಬುದೂ ಸ್ಪಷ್ಟವಾಗಿಲ್ಲ.

ಪ್ರಗತಿಪರ ಚಿಂತಕರ 'ಸೌಹಾರ್ದತೆಗಾಗಿ ಕರ್ನಾಟಕ' ವೇದಿಕೆ ಪ್ರತಿಪಾದನೆ

'ರಾಜಕಾರಣಕ್ಕೆ ಮಕ್ಕಳು ದಾಳವಾಗಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ವಿಷಯವು ಎರಡೂ ಕಡೆಯ ಮತೀಯ ಶಕ್ತಿಗಳ ರಾಜಕೀಯ ದುರುಪಯೋಗದ ಅಸ್ತ್ರವಾಗುತ್ತಿದ್ದು, ಮಕ್ಕಳು ಮತೀಯ ರಾಜಕಾರಣದ ದಾಳವಾಗಬಾರದು' ಎಂದು 'ಸೌಹಾರ್ದತೆಗಾಗಿ ಕರ್ನಾಟಕ' ಪ್ರತಿಪಾದಿಸಿದೆ.

ಈ ಸಂಬಂಧ ಚಿಂತಕರಾದ ಕೆ. ಮರುಳಸಿದ್ದಪ್ಪ, ಬರಗೂರು ರಾಮಚಂದ್ರಪ್ಪ ಮತ್ತು ಜಿ.ರಾಮಕೃಷ್ಣ, ಎಸ್.ಜಿ.ಸಿದ್ಧರಾಮಯ್ಯ, ಪುರುಷೋತ್ತಮ ಬಿಳಿಮಲೆ, ಬಂಜಗೆರೆ ಜಯಪ್ರಕಾಶ್, ವಿಜಯಾ, ಎಚ್.ಎಸ್. ಅನುಪಮಾ, ಕೆ.ಶರೀಫಾ, ಕೆ.ನೀಲಾ, ಮಾವಳ್ಳಿ ಶಂಕರ್, ಲಕ್ಷ್ಮಿ ನಾರಾಯಣ ನಾಗವಾರ, ಕೆ.ಎಸ್.ವಿಮಲಾ ಸೇರಿ ಪ್ರಗತಿಪರ ಚಿಂತಕರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಶಿರವಸ್ತ್ರ ಧರಿಸಿ ತರಗತಿಗಳಿಗೆ ಹಾಜರಾಗುವ ವಿಷಯವು ದೊಡ್ಡ ವಿವಾದವಾಗಿ ಬೆಳೆದು ಶಾಂತಿ, ಸೌಹಾರ್ದತೆ, ಒಗ್ಗಟ್ಟು ಮತ್ತು ಶೈಕ್ಷಣಿಕ ಶಾಂತಿಯನ್ನು ಕದಡುವ ಮಟ್ಟಕ್ಕೆ ಹೋಗಿರುವುದು ಆತಂಕದ ವಿಷಯ. ಈ ವಿವಾದ ಹೇಗೆ ಆರಂಭಗೊಂಡಿದ್ದರೂ ಅದೀಗ ಹೆಣ್ಣುಮಕ್ಕಳ, ಅದರಲ್ಲೂ ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕುತ್ತಾಗಿ ಪರಿಣಮಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಮಕ್ಕಳು ಮತೀಯತೆಯ ರಾಜಕಾರಣಕ್ಕೆ ದಾಳಗಳಾಗುತ್ತಿರುವುದು ವಿಷಾದನೀಯ ಮತ್ತು ಖಂಡನೀಯ. ಇಂತಹ ಶಕ್ತಿಗಳ ಆಟಕ್ಕೆ ಪೋಷಕರು, ಮಕ್ಕಳು, ಪ್ರಜ್ಞಾವಂತ ನಾಗರಿಕರು ಅವಕಾಶ ನೀಡಬಾರದು' ಎಂದು ವಿನಂತಿಸಿದ್ದಾರೆ.

'ವಸ್ತ್ರ ಸಂಹಿತೆಯ ಹೆಸರಿನಲ್ಲಿ ಶಿಕ್ಷಣದ ಹಕ್ಕಿಗೆ ಎಂದೂ ವಂಚನೆ ಮಾಡಬಾರದು. ಸಮವಸ್ತ್ರವನ್ನು ಉಳಿಸಿಕೊಂಡು ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ ಕೊಂಡು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವಂತಾಗಬೇಕು. ಇದು ಸಂವಿಧಾನಾತ್ಮಕ ಹಕ್ಕಾಗಿದೆ, ಅದನ್ನು ಉಳಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ಸನ್ನಿವೇಶವನ್ನು ರಾಜಕೀಯ ಶಕ್ತಿಗಳು ದುರುಪಯೋಗಪಡಿಸಿಕೊಳ್ಳದಂತೆ ತಡೆಯಲು ಎಚ್ಚರವಹಿಸಬೇಕು. ಶೈಕ್ಷಣಿಕ ಶಾಂತಿ ನಮಗೆ ಬೇಕು. ಶಿಕ್ಷಣದ ಹಕ್ಕು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯತೆಯಾಗಬೇಕು. ಇದರ ದೀರ್ಘಾವಧಿ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸಿ ಸೌಹಾರ್ದವಾಗಿ ಬಗೆಹರಿಸಲು ಎಲ್ಲಾ ಪಕ್ಷಗಳು, ನಾಗರಿಕರು ಮುಂದಾಗಬೇಕು' ಎಂದು ವಿನಂತಿಸಿದ್ದಾರೆ.

ಮುಖ್ಯಾಂಶಗಳು
- ಶಾಂತಿ ಕದಡಲು ಮತೀಯ ಶಕ್ತಿಗಳಿಗೆ ಅವಕಾಶ ನೀಡಬಾರದು
- ಶಿಕ್ಷಣದ ಹಕ್ಕು ಸಂರಕ್ಷಣೆ ನಮ್ಮೆಲ್ಲರ ಆದ್ಯತೆ ಆಗಬೇಕು
- ಸಮಸ್ಯೆ ಬಗೆಹರಿಸಲು ಎಲ್ಲಾ ಪಕ್ಷಗಳು ಮತ್ತು ನಾಗರಿಕರು ಮುಂದಾಗಬೇಕು

ಹರಿಯಾಣ: ಖಾಸಗಿ ವಲಯದಲ್ಲಿ ಮೀಸಲು ತಡೆಯಾಜ್ಞೆ ತೆರವುಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಶೇ 75ರಷ್ಟು ಮೀಸಲು ಕುರಿತ ಹರಿಯಾಣ ಸರ್ಕಾರದ ಕಾಯ್ದೆಯ ಜಾರಿಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಮತ್ತು ಪಮಿಡಿಘಟಂ ಶ್ರೀ ನರಸಿಂಹ ಅವರಿದ್ದ ಪೀಠವು, ಇದೇ ಸಂದರ್ಭದಲ್ಲಿ 'ರಾಜ್ಯದಲ್ಲಿ ಉದ್ಯೋಗದಾತರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬಾರದು' ಎಂದೂ ಹರಿಯಾಣ ಸರ್ಕಾರಕ್ಕೆ ನಿರ್ದೇಶಿಸಿತು.

'ವಿಷಯದ ಮಹತ್ವ ಕುರಿತು ನಾವು ಚರ್ಚಿಸುವುದಿಲ್ಲ. ಆದರೆ, ನಾಲ್ಕು ವಾರಗಳಲ್ಲಿ ತೀರ್ಮಾನಿಸಬೇಕು ಎಂದು ಹೈಕೋರ್ಟ್‌ಗೆ ಕೋರುತ್ತೇವೆ. ಸಂಬಂಧಿಸಿದವರು ವಿಚಾರಣೆಗೆ ದಿನ ಗೊತ್ತುಪಡಿಸುವ ವೇಳೆ ಕೋರ್ಟ್‌ನಲ್ಲಿ ಹಾಜರಿರಬೇಕು' ಎಂದು ತಿಳಿಸಿತು.

'ಮಧ್ಯಂತರ ತಡೆಯಾಜ್ಞೆ ನೀಡಲು ಸೂಕ್ತ ಕಾರಣವನ್ನು ಹೈಕೋರ್ಟ್ ನೀಡಿಲ್ಲ. ಹೀಗಾಗಿ, ತಡೆಯಾಜ್ಞೆ ತೆರವುಗೊಳಿಸುತ್ತಿದ್ದೇವೆ' ಎಂದು ತಿಳಿಸಿತು. ಹರಿಯಾಣ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಇಂಥದೇ ಸ್ವರೂಪದ ಕಾಯ್ದೆಗಳನ್ನು ಆಂಧ್ರಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರದಲ್ಲಿಯೂ ತರಲಾಗಿದೆ' ಎಂಬುದನ್ನು ಪೀಠದ ಗಮನಕ್ಕೆ ತಂದರು.

ಬೆಂಗಳೂರು ಓಪನ್ 2 ಟೆನಿಸ್: ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯ

ಸೆಮಿಗೆ ರಾಮ್– ಸಾಕೇತ್ ಜೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ರಾಮ್‌ಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಜೋಡಿಯು ಬೆಂಗಳೂರು ಓಪನ್ 2 ಟೆನಿಸ್ ಎಟಿಪಿ ಚಾಲೆಂಜರ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪುವ ಮೂಲಕ ಪ್ರಶಸ್ತಿ ಗೆಲುವಿನತ್ತ ಮತ್ತೊಂದು ಹೆಜ್ಜೆಯಿಟ್ಟರು. ಎನ್. ಶ್ರೀರಾಮ್ ಬಾಲಾಜಿ ಮತ್ತು ವಿಷ್ಣುವರ್ಧನ್ ಜೋಡಿಯೂ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಅರ್ಜುನ್ ಖಾಡೆ ಮತ್ತು ಸಿದ್ಧಾರ್ಥ್ ರಾವತ್ ವೀರೋಚಿತ ಹೋರಾಟದಲ್ಲಿ ಸೋಲು ಕಾಣುವುದರೊಂದಿಗೆ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯವಾಯಿತು.

ಭಾರತದ ಸಾಕೇತ್ ಮೈನೇನಿ (ಬಲ) ಹಾಗೂ ರಾಮ್‌ಕುಮಾರ್ ರಾಮನಾಥನ್ ಆಟದ ಪರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಡಬಲ್ಸ್ ವಿಭಾಗದ ಎಂಟರ ಘಟ್ಟದ ಹಣಾಹಣಿಯಲ್ಲಿ ರಾಮ್‌ಕುಮಾರ್– ಸಾಕೇತ್ 6-4, 7-6 (3)ರಿಂದ ವ್ಲಾಡಿಸ್ಲಾವ್ ಒರ್ಲೋವ್ ಮತ್ತು ಕಾಯ್ ವೆನೆಲ್ಟ್ ಅವರನ್ನು ಪರಾಭವಗೊಳಿಸಿದರು.

ತೀವ್ರ ಪೈಪೋಟಿ ನಡೆದ ಪಂದ್ಯವು ಟೈಬ್ರೇಕ್‌ವರೆಗೆ ಸಾಗಿತು. ಆದರೆ ಮನಮೋಹಕ ಆಟವಾಡಿದ ಭಾರತದ ಆಟಗಾರರು ಉಕ್ರೇನ್– ಜರ್ಮನಿಯ ಜೋಡಿಯ ಸವಾಲು ಮೀರುವಲ್ಲಿ ಯಶಸ್ವಿಯಾದರು.

ಬೆಂಗಳೂರು ಓಪನ್ 1 ಟೂರ್ನಿಯ ಡಬಲ್ಸ್‌ನಲ್ಲಿ ರಾಮ್‌ಕುಮಾರ್ ಮತ್ತು ಸಾಕೇತ್ ಜೋಡಿಗೆ ಪ್ರಶಸ್ತಿ ಒಲಿದಿತ್ತು.

ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನ ಮತ್ತೊಂದು ಜಿದ್ದಾಜಿದ್ದಿನ ಸೆಣಸಾಟದಲ್ಲಿ ಶ್ರೀರಾಮ್ ಮತ್ತು ವಿಷ್ಣುವರ್ಧನ್ 6-3, 4-6, 11-9ರಿಂದ ಗ್ರೇಟ್ ಬ್ರಿಟನ್‌ನ ಮಾರ್ಕೊಸ್ ಕಲೊವೆಲೊನಿಸ್ ಮತ್ತು ಜಪಾನ್‌ನ ತೋಶಿದೆ ಮತ್ಸುಯಿ ಅವರನ್ನು ಸೋಲಿಸಿದರು. ಸಿಂಗಲ್ಸ್‌ನಲ್ಲಿ ಅನುಭವಿಸಿದ ಸೋಲಿನಿಂದ ಕಳೆದುಕೊಂಡ ಖುಷಿಯನ್ನು ಅರ್ಜುನ್ ಖಾಡೆ ಡಬಲ್ಸ್‌ನಲ್ಲಿ ಮರಳಿ ಪಡೆದರು. ಅಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ಜೊತೆಗೂಡಿದ ಅವರು ಭಾರತದವರೇ ಆದ ಎಸ್‌.ಡಿ. ಪ್ರಜ್ವಲ್ ದೇವ್ ಮತ್ತು ನಿಕಿ ಕೆ. ಪೂಣಚ್ಚ ಅವರನ್ನು 6-1, 3-6, 10-6ರಿಂದ ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಮತ್ತೊಂದು ಪಂದ್ಯದಲ್ಲಿ ಭಾರತದ ಜೀವನ್ ನೆಡುಂಚೆರಿಯನ್ ಮತ್ತು ಪೂರವ್ ರಾಜ ಅವರು ಫ್ರಾನ್ಸ್‌ನ ಎಂಜೊ ಕೌಸಾಡ್– ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹ್ಯಾರಿಸ್ ಎದುರು 6-3, 2-6, 11-13ರಿಂದ ಮಣಿದರು.

ಸಿಂಗಲ್ಸ್‌ನಲ್ಲಿ ಕೊನೆಗೊಂಡ ಭಾರತದ ಅಭಿಯಾನ: ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಜಯಿಸುವ ಭಾರತದ ಆಟಗಾರರ ಕನಸು ಈ ಟೂರ್ನಿಯಲ್ಲೂ ಕೈಗೂಡಲಿಲ್ಲ. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಅರ್ಜುನ್ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 6-7 (7), 5-7ರಿಂದ ಎಂಜೊ ಕೌಸಾಡ್ ಎದುರು ಎಡವಿದರೆ, ಸಿದ್ಧಾರ್ಥ್ 4-6, 6-2, 4-6ರಿಂದ ಸ್ವಿಟ್ಜರ್ಲೆಂಡ್‌ನ ಅಂಟೋನಿ ಬೆಲ್ಲಿಯರ್ ಎದುರು ಸೋತರು.

ಸ್ವಿಟ್ಜರ್ಲೆಂಡ್‌ನ ಜೊಹಾನ್ ನಿಕಲ್ಸ್ ಮತ್ತು ಕ್ರೊವೇಷ್ಯಾದ ಬೋರ್ನಾ ಗೊಜೊ ಕೂಡ ಎಂಟರಘಟ್ಟ ತಲುಪಿದರು.

ಸೆಮಿಗೆ ಸಾನಿಯಾ

ದುಬೈ (ಪಿಟಿಐ): ಭಾರತದ ಸಾನಿಯಾ ಮಿರ್ಜಾ ಮತ್ತು ಜೆಕ್ ಗಣರಾಜ್ಯದ ಲೂಸಿ ಹ್ರದೆಕಾ ಜೋಡಿಯು ದುಬೈ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್‌ಗೆ ಮುನ್ನಡೆದಿದ್ದಾರೆ. ಎಂಟರಘಟ್ಟದ ಹಣಾಹಣಿಯಲ್ಲಿ ಗುರುವಾರ 7-5, 6-3ರಿಂದ ಜಪಾನ್‌ನ ಶುಕೊ ಓಯಮಾ ಮತ್ತು ಸರ್ಬಿಯಾದ ಅಲೆಕ್ಸಾಂಡ್ರಾ ಕ್ರುನಿಚ್ ಸವಾಲು ಮೀರಿದರು.

ನಾಲ್ಕರಘಟ್ಟದ ಪಂದ್ಯದಲ್ಲಿ ಭಾರತ– ಜೆಕ್ ಜೋಡಿಯು, ಜಪಾನ್‌ನ ಎನಾ ಶಿಬಹರಾ– ಚೀನಾದ ಶುಯಿ ಜಾಂಗ್ ಮತ್ತು ಲುಡ್ಮಿಲಾ ಕಿಚೆನೊಕ್ – ಎಲೆನಾ ಒಸ್ತಾಪೆಂಕೊ ನಡುವಣ ಪಂದ್ಯದ ವಿಜೇತರನ್ನು ಎದುರಿಸುವರು.

ಸೈಕಲ್ ಪೋಲೊ: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಆತಿಥೇಯ ಕರ್ನಾಟಕ ತಂಡದವರು, ಮೈಸೂರು ವಿಶ್ವವಿದ್ಯಾಲಯದ ವಿಲೇಜ್ ಹಾಸ್ಟೆಲ್ ಮೈದಾನದಲ್ಲಿ ಗುರುವಾರ ಆರಂಭವಾದ ರಾಷ್ಟ್ರಮಟ್ಟದ ಸೈಕಲ್ ಪೋಲೊ ಸ್ಪರ್ಧೆಯಲ್ಲಿ ಶುಭಾರಂಭ ಮಾಡಿದರು.

ಕರ್ನಾಟಕ ಸೈಕಲ್ ಪೋಲೊ ಸಂಸ್ಥೆ, ಮೈಸೂರು ವಿ.ವಿ ಮತ್ತು ಕೆಎಸ್‌ಒಯು ಸಹಯೋಗದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಕರ್ನಾಟಕ 8-1 ಗೋಲುಗಳಿಂದ ಪುದುಚೇರಿ ತಂಡವನ್ನು ಮಣಿಸಿತು. ಐದು ಗೋಲು ಗಳಿಸಿದ ಮಹಾ ದೇವ್, ರಾಜ್ಯ ತಂಡದ ಭರ್ಜರಿ ಗೆಲುವಿಗೆ ಕಾರಣರಾದರು. ತೇಜಸ್ 2, ರಕ್ಷಿತ್ 1 ಗೋಲು ತಂದಿತ್ತರು.

ಗೋಲು ಗಳಿಸಲು ಮುನ್ನುಗ್ಗಿದ ಆಟಗಾರರು –ಪ್ರಜಾವಾಣಿ ಚಿತ್ರ/ಸವಿತಾ ಬಿ.ಆರ್‌.

ಪುದುಚೇರಿ ತಂಡದ ಏಕೈಕ ಗೋಲನ್ನು ಮಣಿಪಾಲನ್ ಗಳಿಸಿದರು. ಮೊದಲಾರ್ಧದಲ್ಲಿ ಕರ್ನಾಟಕ 2–1ರ ಮುನ್ನಡೆಯಲ್ಲಿತ್ತು.

ಇತರ ಪಂದ್ಯಗಳಲ್ಲಿ ಜಮ್ಮು ಮತ್ತು ಕಾಶ್ಮೀರ 3–1 ರಲ್ಲಿ ತೆಲಂಗಾಣ ವಿರುದ್ಧ; ಇಂಡಿಯನ್ ಆರ್ಮಿ 8–1 ರಲ್ಲಿ ಉತ್ತರ ಪ್ರದೇಶ ವಿರುದ್ಧ; ಟೆರಿಟೋರಿಯಲ್ ಆರ್ಮಿ 16–1 ರಲ್ಲಿ ಕೇರಳ ವಿರುದ್ಧ; ರಾಜಸ್ತಾನ 9–2 ರಲ್ಲಿ ತಮಿಳುನಾಡು ವಿರುದ್ಧ; ಇಂಡಿಯನ್ ಏರ್‌ಫೋರ್ಸ್ 15–0ಯಿಂದ ಪುದುಚೇರಿ ವಿರುದ್ಧ; ಮಧ್ಯಪ್ರದೇಶ 4–0ಯಿಂದ ಆಂಧ್ರಪ್ರದೇಶ ವಿರುದ್ಧ ಜಯ ಗಳಿಸಿತು.

ಬೆಂಗಳೂರು ರೇಸ್

ಅಶ್ವ ಮಗಧೀರ ಗೆಲ್ಲುವ ನಿರೀಕ್ಷೆ

ಸರ್ಬ್‌–ಕ್ಲಾ ಪ್ಲೇಟ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಮಗಧೀರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶೋಡಶಿ 3, ವಾರ್ ಟ್ರಯಲ್ 2, ಬೈ ದಿ ಬುಕ್ 1
2ನೇ ರೇಸ್: ಕೇಪ್ರಿಗರ್ಲ್ 11, ಟ್ವಿಲೈಟ್ ಫೇಮ್ 3, ಬೆಲ್ವೆಡೀರ್ 2
3ನೇ ರೇಸ್: ಅಲ್ಮನಾಕ್ 1, ಎಲೆಕ್ಟ್ರಿಕ್ ಬ್ಲೂ 4, ಮಿಸ್ಟಿಕ್ ಮೌಂಟೇನ್ 6
4ನೇ ರೇಸ್: ಅಶ್ವ ಮಗಧೀರ 1, ಫಿಲಾಸಫಿ 6, ಕ್ವೀನ್ ಸ್ಪಿರಿಟ್ 7
5ನೇ ರೇಸ್: ಗೋಲ್ಡನ್ ವಿಂಗ್ಸ್ 5, ಡಿಫೈನಿಂಗ್ ಪವರ್ 10, ಥೌಸಂಡ್ ವರ್ಡ್ಸ್ 2
6ನೇ ರೇಸ್: ಏರ್ಕ್ರಾಫ್ಟ್ 1, ಮೆಷರ್ ಆಫ್ ಟೈಮ್ 4, ಫನ್ ಅಂಡ್ ಲಾಫ್ಟರ್ 2

ಉತ್ತಮ ಬೆಟ್: ಅಲ್ಮನಾಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ರೇಸ್: ರಾಜೇಂದ್ರ ಚಾಂಪಿಯನ್

ರಾಜೇಂದ್ರ ಆರ್‌.ಇ

ಬೆಂಗಳೂರು: ಟಿವಿಎಸ್ ರೇಸಿಂಗ್ ಫ್ಯಾಕ್ಟರಿಯ ರೈಡರ್ ರಾಜೇಂದ್ರ ಆರ್‌.ಇ ಅವರು ಮೋಟರ್ ಸ್ಪೋರ್ಟ್ ಐಎನ್‌ಸಿ 12ನೇ ಆವೃತ್ತಿಯ ದಕ್ಷಿಣ ಡೇರ್ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡರು.

ಭಾರತ ಫೆಡರೇಷನ್ ಆಫ್ ಮೋಟರ್ ಸ್ಪೋರ್ಟ್ಸ್ ಕ್ಲಬ್ಸ್ ಆಶ್ರಯದಲ್ಲಿ ನಡೆಯುತ್ತಿರುವ ರೇಸ್‌ನ ಬುಧವಾರದ ಸ್ಪರ್ಧೆಯಲ್ಲಿ 35 ವರ್ಷದ ರಾಜೇಂದ್ರ ಪ್ರತಿಸ್ಪರ್ಧಿಗಳ ಪ್ರಬಲ ಪೈಪೋಟಿಯನ್ನು ದಿಟ್ಟವಾಗಿ ಎದುರಿಸಿದರು. ಕೇರಳದ ಮಲಪ್ಪುರಂನ ಅಸುರ ಗ್ಯಾರೇಜ್‌ನ ಶರತ್‌ಮೋಹನ್ 2ನೇ ಸ್ಥಾನ ಗಳಿಸಿದರು.

ಐಎಸ್‌ಎಲ್: ಚೆಟ್ರಿ ಬಳಗಕ್ಕೆ ಸೆಮಿಫೈನಲ್ ನಿರೀಕ್ಷೆ

ಫತೋರ್ಡ, ಗೋವಾ (ಪಿಟಿಐ): ಸೆಮಿಫೈನಲ್ ಪ್ರವೇಶಿಸುವ ನಿರೀಕ್ಷೆಯೊಂದಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ನಾರ್ತ್‌ ಈಸ್ಟ್ ಯುನೈಟೆಡ್ ತಂಡವನ್ನು ಎದುರಿಸಲಿದೆ.

ಆರಂಭದಲ್ಲಿ ಕೆಲವು ಪಂದ್ಯಗಳಲ್ಲಿ ನೀರಸ ಆಟವಾಡಿದ್ದ ಬಿಎಫ್‌ಸಿ ನಂತರ ಚೇತರಿಸಿಕೊಂಡಿತ್ತು. ಇತ್ತೀಚಿನ ಕೆಲವು ಪಂದ್ಯಗಳಲ್ಲಿ ಅಮೋಘ ಆಟವಾಡಿ ಅಗ್ರ ನಾಲ್ಕರ ಘಟ್ಟ ಪ್ರವೇಶಿಸಿತ್ತು. ನಂತರ ಕೆಳಗೆ ಇಳಿದಿತ್ತು. ಇದೀಗ ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ತಂಡವನ್ನು ಎದುರಿಸಲು ಸಜ್ಜಾಗಿದೆ. ಈ ಪಂದ್ಯವನ್ನು ಗೆದ್ದು ಮತ್ತೊಮ್ಮೆ ಅಗ್ರ ನಾಲ್ಕರ ಘಟ್ಟಕ್ಕೇರುವ ನಿರೀಕ್ಷೆಯಲ್ಲಿದೆ. ಸತತ ಮೂರು ಪಂದ್ಯಗಳಲ್ಲಿ ಗೆದ್ದಿದ್ದ ಬಿಎಫ್‌ಸಿ ಹಿಂದಿನ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ವಿರುದ್ಧ ಸೋತಿದೆ. 17 ಪಂದ್ಯಗಳಲ್ಲಿ ಎರಡನ್ನು ಮಾತ್ರ ಗೆದ್ದುಕೊಂಡಿರುವ ನಾರ್ತ್ ಈಸ್ಟ್ ಯುನೈಟೆಡ್ ಎದುರು ಗೆಲುವು ಸಾಧಿಸುವುದು ತಂಡಕ್ಕೆ ಸವಾಲಾಗಲಾರದು ಎಂಬುದು ಕೋಚ್ ಮಾರ್ಕೊ ಪೆಜೊವೊಲಿ ಅಭಿಪ್ರಾಯ.

ಸುನಿಲ್ ಚೆಟ್ರಿ

ಬಿಎಫ್‌ಸಿಗೆ ಲೀಗ್ ಹಂತದಲ್ಲಿ ಇನ್ನು ನಾಲ್ಕು ಪಂದ್ಯಗಳು ಉಳಿದಿವೆ. ಈ ಎಲ್ಲ ಪಂದ್ಯಗಳನ್ನು ಗೆದ್ದರೆ ಮಾತ್ರ ನಾಕೌಟ್ ಹಂತಕ್ಕೇರುವ ಹಾದಿ ಸುಲಭವಾಗಲಿದೆ.

ಮೂರನೇ ಸ್ಥಾನಕ್ಕೆ ಜಮ್ಶೆಡ್‌ಪುರ: ಜಮ್ಶೆಡ್‌ಪುರ ತಂಡವು ಗುರುವಾರ 3–2ರಿಂದ ಮುಂಬೈಯನ್ನು ಸೋಲಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಭಾರತ ತಂಡದ ಮಾಜಿ ಆಟಗಾರ ಸುರಜಿತ್ ಸೇನ್ ಗುಪ್ತ ಇನ್ನಿಲ್ಲ

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಿಡ್‌ಫೀಲ್ಡರ್ ಆಗಿದ್ದ ಸುರಜಿತ್ ಸೇನ್‌ಗುಪ್ತ (71) ಅವರು ಕೋವಿಡ್‌ನಿಂದಾಗಿ ನಗರದ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು. 1970ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿ ಸುರಜಿತ್ ಆಡಿದ್ದರು.

ಅವರಿಗೆ ಕೋವಿಡ್ ಕಾಣಿಸಿಕೊಂಡಿದ್ದು, ಜನವರಿ 23ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ವಾರದಿಂದ ವೆಂಟಿಲೇಟರ್‌ನಲ್ಲಿದ್ದರು.

ಈಸ್ಟ್ ಬೆಂಗಾಲ್ ತಂಡದ ವೈಭವದ ದಿನಗಳಲ್ಲಿ ಅವರು ಪ್ರಮುಖ ಆಟಗಾರರಾಗಿ ಗುರುತಿಸಿಕೊಂಡಿದ್ದರು. ಅವರು ಆಡಿದ್ದ ಅವಧಿಯಲ್ಲಿ ಈಸ್ಟ್ ಬೆಂಗಾಲ್ ಸತತ ಆರು ಬಾರಿ (1970–76) ಕೋಲ್ಕತ್ತ ಫುಟ್‌ಬಾಲ್ ಲೀಗ್‌ನಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಆರು ಬಾರಿ ಐಎಫ್‌ಎ ಶೀಲ್ಡ್ ಹಾಗೂ ಮೂರು ಬಾರಿ ಡ್ಯುರಾಂಡ್ ಕಪ್‌ನಲ್ಲಿ ಈಸ್ಟ್ ಬೆಂಗಾಲ್ ವಿಜೇತರ ಕಿರೀಟ ಧರಿಸಿತ್ತು. ಸುರಜಿತ್ ಎರಡು ವರ್ಷ ಮೋಹನ್ ಬಾಗನ್ ತಂಡಕ್ಕೆ (1972–74) ತಂಡದಲ್ಲಿ ಆಡಿದ್ದರು. 1980ರಲ್ಲಿ ಮಹಮಡನ್ ಸ್ಪೋರ್ಟಿಂಗ್ ಪರ ಆಡಿದ್ದರು. ನಂತರ ಮೋಹನ್ ಬಾಗನ್ ತಂಡಕ್ಕೆ ಮರಳಿದ್ದರು.

ಸುರಜಿತ್

‘ಇಂದು ತಾರಾ ವರ್ಚಸ್ಸಿನ ಆಟಗಾರನನ್ನು ಕಳೆದುಕೊಂಡಿದ್ದೇವೆ. ಅಭಿಮಾನಿಗಳ ನೆಚ್ಚಿನ ಆಟಗಾರರಾಗಿದ್ದ ಅವರು ಎಂದೆಂದೂ ನಮ್ಮ ಹೃದಯದಲ್ಲಿರುತ್ತಾರೆ. ಸಂತಾಪಗಳು’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟ್ವೀಟ್ ಮಾಡಿದ್ದಾರೆ.

ವಿಶೇಷ್‌ಗೆ ನಾಯಕತ್ವ

ಬೆಂಗಳೂರು: ವಿಶೇಷ್ ಭೃಗುವಂಶಿ ಅವರು 2023ರ ಫಿಬಾ ವಿಶ್ವಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಏಷ್ಯನ್ ಅರ್ಹತಾ ಟೂರ್ನಿಗೆ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ.

ಅರ್ಹತಾ ಟೂರ್ನಿಯು ಇದೇ 24ರಿಂದ 28ರವರೆಗೆ ಫಿಲಿಪ್ಪೀನ್ಸ್‌ನ ಮನಿಲಾದಲ್ಲಿ ನಡೆಯಲಿದೆ.

ತಂಡ ಇಂತಿದೆ: ವಿಶೇಷ ಭೃಗುವಂಶಿ(ನಾಯಕ), ಮುಯಿನ್ ಬೆಕ್ ಹಫೀಜ್, ಎಂ. ಅರವಿಂದ್ ಕುಮಾರ್, ಅರವಿಂದ್ ಅಣ್ಣಾದೊರೈ, ಸಹೈಜ್ ಪ್ರತಾಪ್ ಸಿಂಗ್ ಸೆಖೋನ್, ಮನೋಜ್ ಬೇಲೂರು ಮಂಜುನಾಥ, ಪ್ರಣವ್ ಪ್ರಿನ್ಸ್, ರಾಜೀವ್ ಕುಮಾರ್, ಪ್ರಶಾಂತ್ ಸಿಂಗ್ ರಾವತ್, ಪ್ರಿನ್ಸ್ ಪಾಲ್ ಸಿಂಗ್, ಅಮೃತ ಪಾಲ್ ಸಿಂಗ್, ಪಾಲ್‌ಪ್ರೀತ್ ಸಿಂಗ್ ಬ್ರಾರ್. ಮುಖ್ಯ ತರಬೇತುದಾರ: ವೆಸೆಲಿನ್ ಮ್ಯಾಟಿಕ್. ಕೋಚ್: ಪ್ರದೀಪ್ ತೋಮರ್, ಮ್ಯಾನೇಜರ್: ಮನೋಹರ ಕುಮಾರ್ ಕರುಮುತ್ತಿಲ್.